కస్తూరి

ఏప్రిల్ - ౧౯౭౮



"ನನ್ನ ಮಗಳಿಗೆ ಸಂಪೂರ್ಣ ಆರೋಗ್ಯದಾಯಕ ಪೇಯಕ್ಕಿಂತ ಕಡಿಮೆ ಸಲ್ಲದು!"

ಕೇವಲ

ಕೋಂಪ್ಲಾನ್

ಪ್ರತಿ ದೇಹಕ್ಕೆ ಅತ್ಯವಶ್ಯಕವಾಗಿರುವ 23 ಪೋಷಕಾಂಶಗಳನ್ನು ಒಳಗೊಂಡಿರುವ ಸಂಪೂರ್ಣ ಆರೋಗ್ಯದಾಯಕ ಪೇಯ.



ಸ್ವಾಸ್ಥ್ಯ ಮತ್ತು ಶಕ್ತಿಗಾಗಿ, ಪ್ರತಿಯೊಬ್ಬರ ದೇಹಕ್ಕೆ ಪ್ರತಿ ದಿನ ಅತ್ಯವಶ್ಯಕವಾಗಿರುವ, ಪ್ರೋಟೀನ್‌ಗಳು, ವಿಟಮಿನ್‌ಗಳು, ಖನಿಜದ್ರವ್ಯಗಳು, ಕಾರ್ಬೋಹೈಡ್ರೇಟ್‌ಗಳು ಮತ್ತು ಇತರ ಪೋಷಕಾಂಶಗಳು, ಕೇವಲ ಕೋಂಪ್ಲಾನ್‌ನಲ್ಲಿ ವೈಜ್ಞಾನಿಕವಾಗಿ ನಿಯೋಜಿತ ಪ್ರಮಾಣದಲ್ಲಿವೆ. ಪ್ರತಿ ಸಲ ಹೆಚ್ಚಿನ ಪೋಷಕಾಹಾರದ ಅಗತ್ಯವಿರುವಾಗ ಮಕ್ಕಳಿಗೆ ಹೇಳಿಸಿದ್ದು. ಹೆಚ್ಚಾಗಿ ಊಟಕ್ಕೂ ಬಿಡುವಿಲ್ಲದ ಅವಸರದ ಪತಿಗಳಿಗೆ ಆದರ್ಶವಾಗಿದೆ. ಆರೋಗ್ಯ ಚೆನ್ನಾಗಿರದೆ ಊಟ ಒಗ್ಗದ ಕುಟುಂಬದ ಹಿರಿಯರಿಗೆ ಉತ್ತಮ. ಆಯಾಸದಿಂದ ಊಟವೇ ಬೇಡವೆನಿಸುವ ನಿಮಗೆ ಮತ್ತೂ ಉತ್ತಮ.

ನೆನಪಿಡಿರಿ, ಡಾಕ್ಟರರು ಸಂಪೂರ್ಣ ಪೋಷಕಾಹಾರವಾಗಿ ಹೆಚ್ಚಾಗಿ ಕೋಂಪ್ಲಾನ್‌ನ್ನು ಶಿಫಾರಸು ಮಾಡುತ್ತಾರೆ.

ಕೋಂಪ್ಲಾನ್ ಪ್ಲೇನ್ ಮತ್ತು ಸ್ವಾದಿಷ್ಟವಾದ ಚಾಕ್‌ಲೇಟ್, ಏಲಕ್ಕಿ-ಕೇಸರಿ ಮಾತ್ರವಲ್ಲದೆ ಮಕ್ಕಳು ಮೆಚ್ಚುವ ಹೊಸ ಸ್ಟ್ರಾಬೆರಿ ಸ್ವಾದಗಳಲ್ಲಿಯೂ ದೊರೆಯುತ್ತದೆ!



ಹಾಲನ್ನು ಬೆರಸಬೇಕಾಗಿಲ್ಲ



ಸಂಪೂರ್ಣವಾದುದು

ಕೋಂಪ್ಲಾನ್ ಸಂಪೂರ್ಣ ಆರೋಗ್ಯದಾಯಕ ಪೇಯ.

ಕಸ್ತೂರಿ

ವ್ಯವಸ್ಥಾಪಕ ಸಂಪಾದಕ:
ಎಚ್. ಆರ್. ಬಸವರಾಜ್

ಸಂಪಾದಕ :
ಪ. ಸು. ಭಟ್ಟ

ಕಲೆ :
ಕೆ. ಬಿ. ಕುಲಕರ್ಣಿ

ಮುಖಪುಟ :
ಗಣಪತಿ

ಚಿತ್ರ:
ಆರ್ಯ

ಚಂದಾದರ

೩ ವರ್ಷಕ್ಕೆ (ಅಂಚೆ ಸೇರಿ)		ರೂ. ೩೫-೦೦
೨ ವರ್ಷ	,,	ರೂ. ೨೫-೦೦
೧ ವರ್ಷ	,,	ರೂ. ೧೪-೦೦
ಅರ್ಧವರ್ಷ	,,	ರೂ. ೭-೫೦

KASTURI April 1979

ಬೆಳಕಿಂಡಿ

ತಾಪತ್ರಯಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಷ್ಟೂ ಅವು ಏಕೆ ಬೆಳೆಯುತ್ತಾ ಹೋಗುತ್ತವೆಂಬುದು ಅನೇಕರಿಗೆ ಗೊತ್ತಾಗುವುದೇ ಇಲ್ಲ. ನಿಜ ಹೇಳಬೇಕೆಂದರೆ ತಾಪತ್ರಯವನ್ನು ಹೇಗೆ ಅನುಭವಿಸಬೇಕೆಂಬ ಭಯದ ಪ್ರಮಾಣ ನಿಮ್ಮಲ್ಲಿ ಹೆಚ್ಚಾದಷ್ಟೂ ತಾಪತ್ರಯದ ತಾಪವೂ ಬೆಳೆಯುತ್ತಾ ಹೋಗುತ್ತದೆ.

-ಥಾಮಸ್ ಮರ್ಟನ್

ಮಕ್ಕಳನ್ನು ಖುಷಿಯಾಗಿಸುವದರಿಂದ ಅವರನ್ನು ಒಳ್ಳೆಯವರನ್ನಾಗಿ ಮಾಡಲು ಸಾಧ್ಯವಿಲ್ಲ. ಆದರೆ ಅವರನ್ನು ಒಳ್ಳೆಯವರನ್ನಾಗಿ ಮಾಡುವ ಮೂಲಕ ಸದಾಕಾಲವೂ ಅವರು ಖುಷಿಯಾಗಿರುವಂತೆ ಮಾಡಲು ಖಂಡಿತವಾಗಿಯೂ ಸಾಧ್ಯವಿದೆ.

-ಇ. ಜೆ. ಕೈಫರ್

ಇತರರು ನಮ್ಮ ಬಗೆಗೆ ಒಳ್ಳೆಯದಾಗಿ ಯೋಚಿಸುವುದೇ ಕೀರ್ತಿ. ಆದರೆ ಪರಮಾತ್ಮನ ದೃಷ್ಟಿಯಲ್ಲಿ ನಾವು ಹೇಗೆ ಕಾಣುತ್ತೇವೆನ್ನುವುದೇ ಚಾರಿತ್ರ್ಯ.

-ಥಾಮಸ್ ಪೇನ್

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಐನ್‌ಸ್ಟೈನ್

ಐನ್‌ಸ್ಟೈನ್ ಜನ್ಮಶತಮಾನವೀಗ ಎಂಬು-ದನ್ನು ಮೊಟ್ಟಮೊದಲು ಬೆಳಕಿಗೆ ತಂದದ್ದು ಕಸ್ತೂರಿ, ಧನ್ಯವಾದಗಳು.

ಮೈಸೂರು —ಓರ್ವ ಓದುಗ

ತಮ್ಮ ಮಾರ್ಚ್ ತಿಂಗಳ ಕಸ್ತೂರಿ ಪುಸ್ತಕ ವಿಭಾಗದಲ್ಲಿ ಬಂದ ಜಿ. ಟಿ. ನಾರಾಯಣರಾವ್ ಅವರ ಆಲ್ಬರ್ಟ್ ಐನ್‌ಸ್ಟೈನ್ ತುಂಬಾ ಹಿಡಿಸಿತು. ವಿಜ್ಞಾನದ ಗಂಧ ಗಾಳಿಯೂ ತಿಳಿಯದ ನನ್ನಂತಹ ಓದುಗನಿಗೂ ಸ್ಪಷ್ಟವಾಗುವಂತೆ ಆತನ ಜೀವನ ಚರಿತ್ರೆ ಮತ್ತು ಸಾಧನೆಗಳನ್ನು ವಿವರಿಸಿದ್ದಾನೆ.

ಭೈರುಣಗಿ —ರಾಜಶೇಖರ

'ಪುಸ್ತಕ ವಿಭಾಗ'ದಲ್ಲಿ ಆಲ್ಬರ್ಟ್ ಐನ್‌ಸ್ಟೈನ್ ಬಗ್ಗೆ ಪರಿಚಯಿಸಿ ದೊಡ್ಡ ಉಪಕಾರ ಮಾಡಿದ್ದೀರಿ. ನನ್ನನ್ನು ಕೆಣಕುತ್ತಿರುವ ಪ್ರಶ್ನೆ: ಆರೋಪಿತ ವೇಗದ (v) ಪರಿಣಾಮವಾಗಿ ವಸ್ತುವಿನ ಉದ್ದ ಸಂಕೋಚಿಸಲ್ಪಡುತ್ತದೆ.......ವೇಗ v ಯ ಬೆಲೆ ಬೆಳಕಿನ ವೇಗ c ಯನ್ನು ಸಮೀಪಿಸಿದಂತೆ m ನ ಬೆಲೆ ಹೆಚ್ಚು ಹೆಚ್ಚು ಆಗಿ ಅದೇ ವೇಳೆ ಉದ್ದ l ನ ಬೆಲೆ ಕಡಿಮೆ ಆಗಿ v ಯು c ಯೇ ಆಗುವಾಗ m ಅನಂತವಾಗುತ್ತದೆ l ಶೂನ್ಯವಾಗುತ್ತದೆ, ಎಂದಿದೆ.

ವಸ್ತು ಬೆಳಕಿನ ವೇಗ ತಲುಪಿದಾಗ ಹೀಗಾಗುತ್ತದೆ. ಈ ಆರೋಪಿತ ವೇಗವನ್ನು ಮನುಷ್ಯನ ಮೇಲೆ ಪ್ರಯೋಗಿಸಿದಾಗ ಬೆಳಕಿನ ವೇಗ ತಲುಪಿದರೆ ಇದೇ ರೀತಿಯ ಪರಿಣಾಮ ಉಂಟಾಗುತ್ತದೆಯೇ? ಏಕೆಂದರೆ ಮನುಷ್ಯ ಬೆಳಕಿನ ವೇಗವನ್ನು ಸಾಧಿಸುವ ಛಲ ಹೊತ್ತಿದ್ದಾನೆ. "ಭೌತ ವಿಶ್ವದಲ್ಲಿ ಇಂಥ ವಿಪರ್ಯಾಸ ಅಸಾಧ್ಯ"ವೆಂದು ಹೇಳಿದೀರಿ. (ಅದೂ ಸ್ಪಷ್ಟವಾಗಿ) ಬೆಳಕಿನ ವೇಗ ಸಾಧಿಸುವಲ್ಲಿ ವಿಜ್ಞಾನಿಯ ಶ್ರಮ ವ್ಯರ್ಥವೇ?

ರಬಕವಿ —ಶಿ. ಬಾ. ಪೂಜಾರಿ

[ಭೌತವಿಶ್ವದ ನಿಯಮಗಳಿಗೆ ಮನುಷ್ಯ ಕೂಡ ಅಪವಾದವಾಗಲಾರ. ಆದ್ದರಿಂದ, ತಾತ್ವಿಕವಾಗಿ ಬೆಳಕಿನ ವೇಗದಲ್ಲಿ ಮನುಷ್ಯ ಧಾವಿಸಿದ್ದಾದರೆ ಅವನ ಗಾತ್ರ ಶೂನ್ಯಕ್ಕೆ ಕುಸಿದಿರುತ್ತದೆ. ರಾಶಿ ಅನಂತಕ್ಕೆ ನೆಗೆದಿರುತ್ತದೆ. ಅಂದ ಹಾಗೆ "ಮನುಷ್ಯ ಬೆಳಕಿನ ವೇಗವನ್ನು ಸಾಧಿಸುವ ಛಲ ಹೊತ್ತಿದ್ದಾನೆ" ಇದು ಸರಿಯಲ್ಲ ಅವನು ಸಾಧಿಸಿರುವ ಹಿರಿ ವೇಗ ಸೆಕೆಂಡಿಗೆ ೧೦–೧೫ ಕಿ.ಮಿ. (ಆಕಾಶ ವೇಗ) ಬೆಳಕಿನ ವೇಗವಾದರೂ ಸೆಕೆಂಡಿಗೆ ಸುಮಾರು ೩ ಲಕ್ಷ ಕಿ. ಮಿ. ಇದು ಮನುಷ್ಯ ಏರಲಾರದ ಎತ್ತರ.

ಮೈಸೂರು —ಜಿ. ಟಿ. ನಾರಾಯಣರಾವ್]

ಅಭಿನಂದನೀಯ ಕೊಡುಗೆ

ಕಸ್ತೂರಿಯಲ್ಲಿ ಫೆಬ್ರುವರಿ ತಿಂಗಳಿಂದ ತಾವು ಪ್ರಾರಂಭಿಸಿದ ಹೊಸ ಶೀರ್ಷಿಕೆ 'ಪದಾರ್ಥ ಚಿಂತಾಮಣಿ' ಅತ್ಯಂತ ಗಮನಾರ್ಹವಾದುದು, ಸ್ವಾಗತಾರ್ಹವಾದುದು. ಶಬ್ದಗಳೆಷ್ಟೊ ನಿಜವಾದ ಅರ್ಥಗಳ ಕಲ್ಪನೆಯಿಲ್ಲದೆ ಅಸಂಬದ್ಧವಾಗಿ ಅರ್ಥ ವಿಕಲ್ಪಗೊಳ್ಳುತ್ತಿರುವುದು ಇಂದು ಸರ್ವೇಸಾಮಾನ್ಯ. ಶಬ್ದಗಳ ಉತ್ಪತ್ತಿ ಮತ್ತು ಸರಿಯಾದ ಅರ್ಥಗಳ ಪರಿಚಯವನ್ನು ಕಸ್ತೂರಿಯ ಓದುಗರಿಗೆ ಮೂಡಿಸುವ ತಮ್ಮ ಪ್ರಯತ್ನ ಶ್ಲಾಘನೀಯ. 'ನಿಮ್ಮ ಶಬ್ದ ಭಂಡಾರ ಬೆಳೆಯಲಿ' ಎಂಬ ಶೀರ್ಷಿಕೆಯಂತೆ ಈ ಹೊಸ ಶೀರ್ಷಿಕೆಯೂ ಅನೇಕರ ಹಸಿವೆಗೆ ಉತ್ತಮ ಆಹಾರವಾಗುವದರಲ್ಲಿ ಸಂಶಯವಿಲ್ಲ. ಈ ಕೊಡುಗೆಗೆ ವಂದನೆಗಳು.

ಬಾಳಿಲ —ಕೆ. ಪರಮೇಶ್ವರ ಭಟ್

ಅಚ್ಚಳಿಯದ ಪ್ರತೀಕ

ಮಾರ್ಚ್ ತಿಂಗಳ 'ಕಸ್ತೂರಿ' ಒಂದು ಸುಂದರ ಸಂಚಿಕೆ. ಮುಖಪುಟದ ಮುಲ್ಕಿಯ ಮಾನಸ್ತಂಭ ಚೆನ್ನಾಗಿತ್ತು. ದ. ಕನ್ನಡದ ಪಡು ಕರಾವಳಿಯ ಮುಲ್ಕಿಯಲ್ಲಿರುವ ಈ ಶಿಲ್ಪ ಈ ಭಾಗದ ಜನರಿಗೇ ತಿಳಿದಿರಲಿಕ್ಕಿಲ್ಲ. ಮುಲ್ಕಿಯ ವಿಜಯ ಕಾಲೇಜಿನ ಬಳಿಯಲ್ಲಿರುವ ಈ ಶಿಲ್ಪ ತುಳು ನಾಡನ್ನು ಆಳಿ, ಅಳಿದ ಜೈನ ಅರಸರ ಶಿಲ್ಪಕಲಾ ಪ್ರೇಮಕ್ಕೊಂದು ಅಚ್ಚಳಿಯದ ಪ್ರತೀಕ. 'ಕರ್ಮವೀರದ ಭಿಡೆ ಶಾಸ್ತ್ರಿ'ಗಳ ಪರಿಚಯ ಲೇಖನ ಚೆನ್ನಾಗಿ ಮೂಡಿಬಂದಿದೆ. ಪಾ. ವೆಂ. ಆಚಾರ್ಯರ 'ಅತಿಥಿಗಳು ಅತಿಯಾದಾಗ' ಅನುಭವಪೂರ್ಣ ಲೇಖನ. ಲಲಿತಾ ಕಿನ್ನಾಳರ 'ದ್ರೌಪದಿ'ಯ ಚಿತ್ರ ಸಾರವತ್ತಾಗಿದೆ.

ಮೂಲ್ಪೆ (ದ. ಕ.) —ವಿಲ್‌ಹೆಲ್ಮಿನಾ ರೋಸಿ

ಏಕೆ?

ಮಾರ್ಚ್ ೧೯೭೫ ರ ಕಸ್ತೂರಿ ಸಂಚಿಕೆಯಲ್ಲಿ 'ಕರ್ಮವೀರರದ ಭಿಡೆ ಶಾಸ್ತ್ರಿಗಳು' ಎಂಬ ಶಿರೋನಾಮೆಯಲ್ಲಿ ಅವರ ಮಗಳೇ ಆದ ಸೌ. ಗೀತಾ ಉದಗಾಂವಕರ ಎಂಬವರು ಬರೆದ ಲೇಖನವನ್ನೋದಿದೆ. ಎಲ್ಲರ ಭವಿಷ್ಯವನ್ನು ಬರೆಯುವ ಶ್ರೀ ಶಾಸ್ತ್ರಿಗಳಿಗೆ, ಅವರ ಸ್ವಂತ ಭವಿಷ್ಯವನ್ನು ತಿಳಿಯುವ ಅರಿವು ಇರಲಿಲ್ಲವೇ ? ಮುಳುಗಿ ಹೋಗುವ ನಾಟಕ ಕಂಪನಿಯನ್ನು ಪ್ರಾರಂಭಿಸುವ, ಹಾಗೂ ಪ್ರಾರಂಭೋತ್ಸವದ ಮರುದಿನವೇ ಕಳ್ಳತನವಾಗುವ ಬಟ್ಟೆ ಅಂಗಡಿಯನ್ನು ತೆರೆಯುವ ಸಾಹಸವನ್ನೇಕೆ ಮಾಡಿದರು ?

ಉಮಚಗಿ (ಉ. ಕ.) ಗಣಪತಿ ಶೆಟ್ಟಿ

ಹೆಂಡತಿಯ ಗುಲಾಮ

ಮಾರ್ಚ್ ತಿಂಗಳಿಂದ ಕಸ್ತೂರಿಯಲ್ಲಿ ಮೂಡಿಬಂದ 'ಹೆಂಡತಿಯ ಗುಲಾಮ' ಓದಿ ಮನಸ್ಸಿಗೆ ತುಂಬಾ ಬೇಜಾರಾಯ್ತು. ಕೆ. ಚಂದ್ರಮೌಳಿ ಅವರ ಅನುಭವ ಇತರ ಸಂಗ್ರಹಣೆಯಲ್ಲಿ ಎಲ್ಲೂ ಲೋಪವಿಲ್ಲದೆ ಓದಿಸಿಕೊಂಡು ಹೋಗುತ್ತದೆ. ಆದರೆ ಲೇಖಕರಿಗೊಂದು ಮಾತನ್ನು ಹೇಳಬಯಸುತ್ತೇನೆ. ಜೀವನದಲ್ಲಿ ಗಂಡು – ಹೆಣ್ಣು, ಕಷ್ಟ–ಸುಖ, ನಗು–ಅಳುವೆ? ಎಲ್ಲದರಲ್ಲೂ ಒಟ್ಟಿಗೆ ಭಾಗಿಯಾಗಿ ಸವಿದರೇ ಚೆನ್ನ ಅಲ್ಲದೇ ಗಂಡು ಯಾವಾಗಲೂ ಹೆಣ್ಣು ತನ್ನ ಅಡಿಯಾಳಾಗಿ ಇರಬೇಕೆಂದು ಆಶಿಸಿದರೆ, ಅದು ಅವನ ಅಹಂಕಾರದ ಪರಮಾವಧಿ ಎಂದೆನಿಸುತ್ತದೆ. ಇರೋ ಮೂರು ದಿನ, ಜೀವನ ನೌಕೆಯನ್ನು ನಗನಗ್ತಾ ಸಾಗಿಸ್ಬೇಕು. ಇದರಲ್ಲಿ ಇಬ್ಬರೂ ಸರಿಸಮಾನವಾಗಿ ನಡೆದರೆ ಜೀವನ ಹೂವಿನಂತೆ, ಇಲ್ಲದೇ ಹೋದ್ರೆ, ಬಾಳು ನುಚ್ಚುನೂರಾಗಿ ಒಡೆದು ಹೋಗಬಹುದು, ಅಲ್ಲವೇ? ಪ್ರೇಮ ತ್ಯಾಗ ದಂಪತಿಗಳಲ್ಲಿ ಹೆಚ್ಚಿದಷ್ಟೂ ಅನುಬಂಧದ ಸಂಕೋಲೆ ಅವರನ್ನು ಬೇರ್ಪಡಿಸದಂತೆ ಬಿಗಿಯುತ್ತದೆ.

ಆಗ ಜೀವನ ಎಷ್ಟೊಂದು ಸುಖಮಯ!

ಬೆಂಗಳೂರು – ಕುಮಾರಿ ಶಶಿಕಿರಣ ಶಾಸ್ತ್ರಿ

ಮಾರ್ಚ್ ತಿಂಗಳ ಕಸ್ತೂರಿಯಲ್ಲಿನ 'ಹೆಂಡತಿಯ ಗುಲಾಮ' ಲೇಖನ ಓದಿ ನನಗೆ ದುಃಖವೂ, ರೋಷವೂ ಒಮ್ಮೆಲೇ ಉಂಟಾಯಿತು.

ನಮ್ಮ ಹಿಂದೂ ಸಂಸ್ಕೃತಿಯಲ್ಲಿ 'ಯತ್ರ ನಾರ್ಯಾ ಪೂಜ್ಯಂತೆ ದೇವಾಃ' ಎಂದು ಸ್ತ್ರೀಯರು ಹೇಗೆ ಗೌರವಕ್ಕೆ ಅರ್ಹರೆಂಬುದನ್ನು ಸ್ಪಷ್ಟವಾಗಿ ತಿಳಿಸಿ ಹೇಳಿದ್ದಾರೆ, ಆದರೂ. ಕೆ. ಚಂದ್ರಮೌಳಿಯವರು ತಮ್ಮ ಲೇಖನದಲ್ಲಿ ಸ್ತ್ರೀಯರನ್ನು ಹೇಗೆ ಕಡೆಗಣಿಸಿ, ಅವರನ್ನು ಕೆಲಸದಾಳುಗಳಂತೆ ನಡೆಸಿಕೊಳ್ಳಬೇಕೆಂಬುದನ್ನು ಓದುಗರಿಗೆ ಚೆನ್ನಾಗಿ ಕಲಿಸುತ್ತಾಗೆ. ಅದರಲ್ಲೂ ಪತ್ನಿಯು ಹೇಳಿದ ಸಣ್ಣ ಕಾರ್ಯವನ್ನೂ ಪತಿ ಮಾಡಬಾರದೆಂದು ಬರೆದಿದ್ದಾರೆ. ಗಂಡಸರು ಹೇಗೆ ಹೊರಗೆ ದುಡಿದು ದಣಿಯುತ್ತಾರೋ ಹಾಗೆಯೇ ಪತ್ನಿಯೂ (ಗೃಹಿಣಿ) ಮನೆಗೆಲಸದಲ್ಲಿ ದಣಿದಿರುತ್ತಾಳೆ. ಸಣ್ಣಪುಟ್ಟ ಸ್ವಂತ ಕೆಲಸಗಳನ್ನು ಪತ್ನಿಯಿಂದ ಅಧಿಕಾರಯುತವಾಗಿ ಹೇಳಿ ಮಾಡಿಸುವುದೊಂದು ಘನತೆಯೆ ? ಸ್ತ್ರೀ ಎಂದರೆ ಯಂತ್ರವೇನು ? ಮನೆಯನ್ನು ಬೇಕು ಬೇಕಂತಲೇ ಅಸ್ತವ್ಯಸ್ತಪಡಿಸಿ, ಅದನ್ನು ಪತ್ನಿಯಿಂದ ಸರಿಪಡಿಸಬೇಕೆಂಬ ಲೇಖಕರಿಗೆ ಮನುಷ್ಯನಿಗೆ ಸಹಜವಾದ ಮಾನವೀತೆಯ ದೃಷ್ಟಿಯೂ ಇಲ್ಲವೆ ? ಸ್ತ್ರೀಯರು ದೈಹಿಕವಾಗಿ ಪುರುಷರಿಗಿಂತ ದುರ್ಬಲರು. ಅಲ್ಲದೆ ಅವರು ಮಕ್ಕಳನ್ನು ಬೆಳೆಸುವ, ನೋಡಿಕೊಳ್ಳುವ ಕಷ್ಟಕರವಾದ ಕೆಲಸಗಳನ್ನು ಮಾಡುತ್ತಾರೆ. ಇದ್ಯಾವ ತೊಂದರೆಗಳೂ ಇರದ ಪುರುಷರು ಒಂದು ವೇಳೆ ಸಣ್ಣಪುಟ್ಟ ಮನೆಗೆಲಸಗಳನ್ನು ಮಾಡಿದರೆ ಅದು ಅವರ ಗುಲಾಮತನವನ್ನು ತೋರಿಸುತ್ತದೆಯೆ ?

ಸ್ತ್ರೀತ್ವವನ್ನೇ ಆಧಾರವಾಗಿಟ್ಟು ಸ್ತ್ರೀಯರ ದುರ್ಬಲತೆಯ ಪ್ರಯೋಜನ ಪಡೆದು ಬರೆದಂತಹ ಈ ಲೇಖನಕ್ಕೆ ಧಿಕ್ಕಾರ

ಮಂಜೇಶ್ವರ –ವಿ. ಲ.

[ಲಘುಬರಹವನ್ನು ಇಷ್ಟು ಗಂಭೀರವಾಗಿ ಓದಿ ಭಾವನಾಪರವಶರಾದರೇನು ಬಂತು? -ಸಂ.]

ಕಸ್ತೂರಿ

ಸಂಚಿಕೆ: ೮ ಕಸ್ತೂರಿ, ಎಪ್ರಿಲ್ ೧೯೭೯ ವರ್ಷ: ೨೩

ಮುಕ್ತಿ

ರಾಮದಾಸ ಕಾಸರಗೋಡು

ಕಪ್ಪಗಿನ ಇದ್ದಿಲು ಒಂದನ್ನು ಹಿಡಿದು ಬಿಳಿಯಾಗಿಸಲು ಒಬ್ಬ ಯೋಚಿಸಿದ. ಎಷ್ಟೇ ಪ್ರಯತ್ನದಿಂದ ನೋಡಿದ; ಇದ್ದಿಲು ಕಪ್ಪು ಬಣ್ಣವನ್ನು ಬಿಟ್ಟು ಕೊಡಲಿಲ್ಲ. ಆದರೆ ಈತ ಹಿಡಿದ ಹಟ ಮಾತ್ರ ಬಿಡಲಿಲ್ಲ. ಒಬ್ಬಾತ ಆ ದಾರಿಯಾಗಿ ಹೋಗುತ್ತಿದ್ದ. ಈತ ಕರೆದು ಕೇಳಿದ: "ಇದ್ದಿಲನ್ನು ಬಿಳಿ ಮಾಡಲು ಏನು ಮಾಡಬೇಕು?" ಆತನಿಗೆ ತಿಳಿಯಲಿಲ್ಲ, ಇದರ ವಿಧಾನ. ಪ್ರಶ್ನೆಗೆ ಉತ್ತರವಾಗಿ, "ಬಿಳಿಯ ಬಟ್ಟೆಯಲ್ಲಿ ಇದ್ದಿಲನ್ನು ತಿಕ್ಕು" ಎಂದ. ಅಂತೆಯೇ ಈತ ಮಾಡಿದ. ಬಟ್ಟೆ ಕಪ್ಪಾಯಿತೆ ವಿನಾ ಇದ್ದಿಲು ಬಿಳಿಯಾಗಲಿಲ್ಲ.

ಮತ್ತೊಬ್ಬನಲ್ಲಿ ಇದೇ ಬಗ್ಗೆ ವಿಚಾರಿಸಿದ. ಆತನೆಂದ, "ಸ್ವಚ್ಛ ಹಾಲಿನಲ್ಲಿ ಒಂದೆರಡು ದಿನ ನೆನೆ ಇಡು" ಎಂದು. ಅಂತೆ ಬಿಳಿ ಹಾಲಿನಲ್ಲೂ ನೆನೆ ಇಟ್ಟ. ಹಾಲು ಹಾಳಾಯಿತು. ಇದ್ದಿಲು ಕಪ್ಪಾಗಿಯೇ ಇತ್ತು. ಹಲವರಲ್ಲಿ ಈ ಬಗ್ಗೆ ಪ್ರಶ್ನಿಸಿದ. ಎಲ್ಲರೂ ತಮಗೆ ತೋಚಿದ ವಿಧಾನ ಹೇಳುತ್ತಲೇ ಇದ್ದರು. ಈತ ಅದನ್ನು ಮಾಡುತ್ತಲೇ ಇದ್ದ. ಎಷ್ಟಾದರೂ ಕಾರ್ಯ ಸಾಧಿಸಲಿಲ್ಲ. ಅಷ್ಟರಲ್ಲಿ ಒಬ್ಬಾತ ಆತನಲ್ಲಿ ಹೇಳಿದ, "ಇಲ್ಲೇ ಹತ್ತಿರದಲ್ಲಿ ಸಂತನೊಬ್ಬ ಇದ್ದಾನೆ. ಆತ ಎಲ್ಲಾ ವಿಷಯ ತಿಳಿದವ. ಆತನಲ್ಲಿ ವಿಚಾರಿಸು," ಎಂದು. ಈತ ಸಾಧು ಇದ್ದೆಡೆ ನಡೆದ. ತನ್ನ ಸಾಹಸವನ್ನೆಲ್ಲಾ ತಿಳಿಸಿದ. ಆ ಸಾಧು ಈತನಲ್ಲಿ ಕೇಳಿದರು: "ಈ ಇದ್ದಲು ಹೇಗೆ ಉಂಟಾಯಿತೆಂದು ಗೊತ್ತಿದೆಯಲ್ಲಾ ?" "ಓಹೋ ಕಟ್ಟಿಗೆಯ ಬೆಂಕಿಯಿಂದ ಉಂಟಾಯಿತು." "ಸರಿ ಹಾಗಾದರೆ ಪುನಃ ಈ ಇದ್ದಲನ್ನು ಆ ಬೆಂಕಿಗೆ ಹಾಕು. ಅಲ್ಲಿ ಅದು ಬಿಳಿಯಾಗುತ್ತದೆ," ಎಂದರು. ಈತ ಹೇಳಿದಂತೆ ಮಾಡಿದ. ಇದ್ದಲಿನ ರೂಪ ಇದೀಗ ಕಪ್ಪು ಕಳೆದು ಬಿಳುಪಾಗಿದೆ. ತನ್ನ ಮಂಕುತನಕ್ಕೆ ತಾನೇ ನಾಚಿದ.

ಇದನ್ನೇ ಉದಾಹರಿಸಿ ಸ್ವಾಮಿ ರಾಮಕೃಷ್ಣ ಪರಮಹಂಸರು ಹೇಳಿದ್ದು, "ಮನುಷ್ಯರಿಗೆ ಮುಕ್ತಿ ಪಡೆಯುವ ಆಸೆ ಬಹಳಷ್ಟಿದೆ. ಅದಕ್ಕಾಗಿ ಇಲ್ಲದ ಸಲ್ಲದ ಕಾರ್ಯ ನಡೆಸುತ್ತಾನೆ. ಎಲ್ಲವೂ ವ್ಯರ್ಥ. ಆಧ್ಯಾತ್ಮಿಕ ಜೀವನವೇ ಇದಕ್ಕೆ ಸುಲಭ ಮಾರ್ಗ."

ಘಟಪ್ರಭೆಯ 'ವೈದ್ಯ'ರು

ಡಾ. ವಾಮನಮೂರ್ತಿ ಕುಲಕರ್ಣಿ

ಈ ಸಂಸ್ಥೆಯಲ್ಲಿ ನಾನೊಬ್ಬನೇ ಇಪ್ಪತ್ತೈದು ವರ್ಷ ಸೇವೆ ಮಾಡಿಲ್ಲ. ನನ್ನೊಂದಿಗೆ ದುಡಿದವರು ಬಹಳ ಜನ. ಅವರೆಲ್ಲರಿಗೂ ಸನ್ಮಾನ ಮಾಡುವುದಾದರೆ ಮಾತ್ರ ನಾನು ಈ ಸತ್ಕಾರಕ್ಕೆ ಒಪ್ಪಿಕೊಳ್ಳುತ್ತೇನೆ. ಇಲ್ಲವಾದರೆ ನನಗೊಬ್ಬನಿಗೇ ಸತ್ಕಾರ ಮಾಡುವ ಅವಶ್ಯಕತೆಯಿಲ್ಲ..." ಎಂದರು ಆ ವ್ಯಕ್ತಿ. ಸತ್ಕರಿಸಬೇಕೆಂದು ಇವರ ಅನುಮತಿ ಪಡೆಯಲು ಬಂದಿದ್ದ ಸತ್ಕಾರ ಸಮಿತಿಯವರಿಗೆ ಇದು ಆಕಸ್ಮಿಕ. ತಮ್ಮೊಡನೆ ಕೆಲಸ ಮಾಡಿದ ಎಲ್ಲರಿಗೂ ಸನ್ಮಾನದಲ್ಲಿ ಪಾಲು ಸಿಗಬೇಕೆಂಬ ಈ ಹೇಳಿಕೆ ನ್ಯಾಯಸಮ್ಮತ ಎನ್ನಿಸಿತು. ಕೆಲವೇ ದಿನಗಳ ನಂತರ ಆ ಅಪೂರ್ವ ಸತ್ಕಾರ ಸಮಾರಂಭ ನಡೆದಾಗ ಹೆಚ್ಚು ಕೃತಾರ್ಥಭಾವದಿಂದ ಆನಂದಿಸಿದವರು ಆ ವ್ಯಕ್ತಿ.

ತಮ್ಮೊಂದಿಗೆ ತಮ್ಮ ಕೈಕೆಳಗಿನವರೂ ಸತ್ಕಾರ ಗೊಳ್ಳುವಂತೆ ಮಾಡಿದ ಆ ವ್ಯಕ್ತಿ, ಶಿಸ್ತಿನ ಸೇನಾನಿ ಡಾ. ನಾ. ಸು. ಹರ್ಡೀಕರರ ಕರ್ಮ ಭೂಮಿ ಘಟಪ್ರಭಾದ ಕರ್ನಾಟಕ ಆರೋಗ್ಯ ಧಾಮದಲ್ಲಿ ಮುಖ್ಯ ಆರೋಗ್ಯಾಧಿಕಾರಿಗಳಾಗಿ ಕೆಲಸ ಮಾಡುತ್ತಿರುವ ಡಾ. ಮಾಧವ ಕೃಷ್ಣ ವೈದ್ಯ ಅವರು. ಡಾ. ಎಂ. ಕೆ. ವೈದ್ಯ ಎಂದೇ ಪರಿಚಿತರಾಗಿರುವ ಅವರು ಇದೀಗ ಅರುವತ್ತೆರಡರ ಹೊಸಿಲನ್ನು ದಾಟಿ ಅರುವತ್ತೂರಕ್ಕೆ ಕಾಲಿರಿಸಿದ್ದಾರೆ.


ಯಾವನೇ ಒಬ್ಬ ವ್ಯಕ್ತಿ ಒಂದು ಸಂಸ್ಥೆಯಲ್ಲಿ ದೀರ್ಘಕಾಲ ಇರುವುದು ಮುಖ್ಯವಲ್ಲ, ಆತ ಮಾಡುವ ಕಾರ್ಯ ಮಹತ್ವದ್ದು. ಡಾ. ವೈದ್ಯ ಅಂಥ ಮಹತ್ವದ ಕೆಲಸ ಮಾಡಿದವರು. ಗೋವಾದಲ್ಲಿ ಹುಟ್ಟಿ, ಮಹಾರಾಷ್ಟ್ರದಲ್ಲಿ ಶಿಕ್ಷಣ ಪಡೆದು, ಕರ್ನಾಟಕದಲ್ಲಿ ನೆಲೆನಿಂತ ಡಾ. ವೈದ್ಯರು ಕನ್ನಡದಲ್ಲಿ ಹಳ್ಳಿಗರೊಂದಿಗೆ ಕೂಡ ಸರಾಗವಾಗಿ ವ್ಯವಹರಿಸಬಲ್ಲಷ್ಟು ಮಾತಾಡಲು ರೂಢಿ ಮಾಡಿಕೊಂಡಿದ್ದಾರೆ. ತಕ್ಕ ಮಟ್ಟಿಗೆ ಓದುವ, ಬರೆಯುವ ಅಭ್ಯಾಸವೂ ಇದೆ.

ಕರ್ನಾಟಕ ಆರೋಗ್ಯಧಾಮದ ಚೇತನವಾಗಿರುವ ಡಾ. ವೈದ್ಯ ಮುಂಬೈಯಲ್ಲಿ ಎಂ. ಎಸ್. ಪದವಿ ಪಡೆದಾಗ ಬಿಸಿ ರಕ್ತದ ತರುಣ. ಡಾ. ಹರ್ಡೀಕರರ ಪ್ರಭಾವ ಅವರನ್ನು ಸೇವಾದೀಕ್ಷಿತರನ್ನಾಗಿಸಿತು. ಸೇವಾದಲದ ಸೇನಾನಿಯ ಸಾನಿಧ್ಯದಲ್ಲಿ ಡಾ. ವೈದ್ಯ 'ಜನಸೇವಕ'ರಾಗಿ ರೂಪುಗೊಂಡರು.

ಗೋವಾದ ವೈದ್ಯಕೀಯ ಮನೆತನದಲ್ಲಿ ಹುಟ್ಟಿದ ಇವರು ವೈದ್ಯಕೀಯ ರಂಗದಲ್ಲೇ ಮುಂದೊರೆಯ ಬಯಸಿದ್ದು ಜನತೆಯ ಪುಣ್ಯವಿಶೇಷ. ಕರ್ನಾಟಕ ಆರೋಗ್ಯಧಾಮದಲ್ಲಿ ದಿನದ ಇಪ್ಪತ್ನಾಲ್ಕು ಗಂಟೆಗಳಲ್ಲಿ ಯಾವಾಗಂದರಾವಾಗ ಸೇವೆ-ಶುಶ್ರೂಷೆ-ರೋಗ ಪರೀಕ್ಷೆಗೆ ತಯಾರು ಡಾ. ವೈದ್ಯ. ರೋಗಿಗಳ ಬಗ್ಗೆ ಅನುಕಂಪವುಳ್ಳ ದಯಾವಂಯಿಯಾಗಿರುವಂತೆಯೇ ತರುಣ ಡಾಕ್ಟರುಗಳ ಮಾರ್ಗದರ್ಶಕರೂ ಹೌದು. ಕೆಲ ಡಾಕ್ಟರುಗಳ ಮಾತುಗಳಿಂದಲೇ ಅರ್ಧ ರೋಗ ವಾಸಿಯಾಗುವುದಂತೆ. ಡಾ. ವೈದ್ಯ ಅಂಥ ಜಾತಿಗೆ ಸೇರಿದವರು.

ಡಾ. ವೈದ್ಯ ಕ್ಷಯರೋಗದ ವಿಶೇಷ ಅಧ್ಯಯನಕ್ಕಾಗಿ ಒಮ್ಮೆ ಕ್ಯಾನಡಾ ದೇಶಕ್ಕೆ ಹೋಗಿದ್ದರು. ಆಗ ಕೆಲ ಸ್ನೇಹಿತರು, "ನಿಮ್ಮದು ಯಾವ ಜಾತಿ?" ಎಂದು ಕೇಳಿದರಂತೆ. "ನನ್ನದು ವೈದ್ಯ ಜಾತಿ" ಎಂದು ತಟ್ಟನೇ ಹೇಳಿದರಂತೆ ಡಾ. ವೈದ್ಯ. ಎಷ್ಟು ಅರ್ಥಪೂರ್ಣ ಮಾತು! ಅಲ್ಲಿನ ಅವರ ಅಧ್ಯಯನ ಘಟಪ್ರಭಾದ ಆರೋಗ್ಯಧಾಮಕ್ಕೆ ಅನುಕೂಲಕರವಾಯಿತು. ವೈದ್ಯಕೀಯದ ಜತೆಗೆ ಸಾಮಾಜಿಕ, ಆರ್ಥಿಕ, ತಾಂತ್ರಿಕ, ಸಾಹಿತ್ಯಿಕ ಹಾಗೂ ವ್ಯಾವಹಾರಿಕ ರಂಗಗಳಲ್ಲೂ ಇವರು ಆಸಕ್ತರು. ಬಿಡುವಾದಾಗಲೆಲ್ಲ ಆ ಕುರಿತೇ ಅವರ ಚಿಂತನೆ. ಹಾಗೆ ಬಿಡುವಾಗುವುದೂ ಅಪರೂಪವೇ. ಯಾಕಂದರೆ ಬೆಳಿಗ್ಗೆ ೭ ಕ್ಕೆ ಸುರುವಾದ ಕೆಲಸ ಮುಗಿಯುವುದು ರಾತ್ರಿ ೧೧ ಕ್ಕೆ. ಏತನ್ಮಧ್ಯೆ ರೋಗಿಗಳ ಪರೀಕ್ಷೆ, ರೌಂಡುಗಳು, ಅತಿಥಿಗಳೆಡೆ ಗಮನ, ಪತ್ರವ್ಯವಹಾರ, ಯಂತ್ರಗಳ ರಿಪೇರಿ ಕಾರ್ಯ, ಸಂಸ್ಥೆಯ ಸದಸ್ಯರೊಂದಿಗೆ ವಿಚಾರ ವಿನಿಮಯ.

ಗ್ರಾಮಾಂತರ ಜನರ ಅಭ್ಯುದಯ ಇವರ ಮತ್ತೊಂದು ಆಸಕ್ತಿ. ಗ್ರಾಮೀಣ ಬಡ ಜನರ ಅಸಹಾಯಕತೆ, ಅನಾರೋಗ್ಯ, ಅಜ್ಞಾನಗಳನ್ನು ಕಂಡು ಮರುಗಿದ ಡಾ. ವೈದ್ಯ ೧೯೫೫ ರಲ್ಲಿ ಗ್ರಾಮೀಣ ಆರೋಗ್ಯ ಸೇವಾ ವಿಭಾಗವನ್ನು ಪ್ರತ್ಯೇಕವಾಗಿ ಸ್ಥಾಪಿಸಿದರು. ಹಳ್ಳಿಗಾಡಿನ ಜನರ ಮನೆಮನೆಗೆ ಔಷಧೋಪಚಾರ, ಆರೋಗ್ಯ ಸಲಹೆ, ಆರೋಗ್ಯ ಶಿಕ್ಷಣ ಕೊಡುವ ಏರ್ಪಾಟು ಮಾಡಿದ್ದಾರೆ. ಆಗಾಗ ಹಳ್ಳಿಗರೊಂದಿಗೆ ಮಾತನಾಡಿ ಅವರಲ್ಲಿ ಸಾಮಾಜಿಕ, ಆರ್ಥಿಕ, ನೈತಿಕ ಹಾಗೂ ಸಾಂಸ್ಕೃತಿಕ ಪ್ರಜ್ಞೆ ಜಾಗೃತವಾಗುವಂತೆ ಮಾಡಿದ್ದಾರೆ. ಇವರ ಈ ಕಾರ್ಯದಲ್ಲಿ ಮಡದಿ ಸೌ. ವತ್ಸಲಾಬಾಯಿಯವರ ಸಹಕಾರವೂ ಇದೆ.



ಮಾತು ಕಡಿಮೆಯಾಡುವ ಡಾ. ವೈದ್ಯ ಮಾಡಿ ತೋರಿಸುವುದರಲ್ಲಿ ಹೆಚ್ಚು ಆಸಕ್ತರು. ಅಗತ್ಯಕ್ಕಿಂತ ಹೆಚ್ಚು ಮಾತಿಲ್ಲ. ಆದರೆ ಆಡಿದ ಮಾತು ಮಾತಿನಲ್ಲೂ ಆತ್ಮೀಯತೆ ತುಂಬಿರುವುದುಂಟು. ಗಡಸುತನ ಇವರ ಸಮೀಪ ಸುಳಿದಿಲ್ಲ. ಮರಾಠಿ, ಕೊಂಕಣಿ, ಹಿಂದಿ, ಇಂಗ್ಲೀಷು, ಕನ್ನಡ ಹಾಗೂ ಪೋರ್ಚುಗೀಜ್ ಭಾಷೆಗಳನ್ನು ಸರಾಗವಾಗಿ ಮಾತಾಡುವ ಇವರಿಗೆ ಸಂಸ್ಕೃತ ಅತ್ಯಂತ ಪ್ರಿಯವಾದ ಭಾಷೆ. ರೋಗಿ ಯಾವ ಭಾಷೆಯವನೋ ಅದೇ ಭಾಷೆಯಲ್ಲಿ ಅವನನ್ನು ಮಾತಾಡಿಸಿ ಅವನಲ್ಲಿ

ಧೈರ್ಯ ತುಂಬುವ ಮೋಡಿಗಾರ ಅವರು.

ರಾಷ್ಟ್ರಭಕ್ತಿ ಡಾ. ವೈದ್ಯರಿಗೆ ಹರ್ಡೀಕರರಿಂದ ಬಂದ ಮತ್ತೊಂದು ಬಳುವಳಿ. ಆರೋಗ್ಯಧಾಮ ದಲ್ಲಿ ಶಿಸ್ತು ಸ್ವಚ್ಛತೆಯ ಜತೆಗೆ ರಾಷ್ಟ್ರಭಕ್ತಿಯನ್ನು ಬೆಳೆಸಿದ್ದಾರೆ ಡಾ. ವೈದ್ಯ. ಹರ್ಡೀಕರರ ನಿಧನಾ ನಂತರ ಆರೋಗ್ಯಧಾಮದ ಕೆಲಸ ಅಷ್ಟು ಸಮ ರ್ಪಕವಾಗಿ ನಡೆಯಲಾರದು ಎಂದು ಗೊಣಗಿದ ಕೆಲವರಿಗೆ ತಾವು ಹೀಗೆ ಅಂದುಕೊಂಡದ್ದು ತಪ್ಪು ಎಂದುಕೊಳ್ಳುವಂತೆ ಮೊದಲಿನ ರೀತಿಯಲ್ಲಿಯೇ ಕೆಲಸ ನಿರ್ವಹಿಸುತ್ತ ಹೊರಟಿದ್ದಾರೆ.

ಅವರ ಕರ್ತವ್ಯಬುದ್ಧಿಯ ಬಗೆಗೆ ನನ್ನ ಅನುಭ ವಕ್ಕೆ ಬಂದ ಒಂದು ಸಂಗತಿ.

೧೯೭೭ ರಲ್ಲಿ ನನ್ನ ನೂತನ ದವಾಖಾನೆಯ ಕಟ್ಟ ಡದ ಉದ್ಘಾಟನಾ ಸಮಾರಂಭ. ಡಾ. ವೈದ್ಯರು ಉದ್ಘಾಟಕರು. ಅವರ ಪತ್ನಿ ಸೌ. ವತ್ಸಲಾಬಾಯಿ ವೈದ್ಯ ಅವರು ದಿ. ಡಾ. ಹರ್ಡೀಕರರರ ಭಾವಚಿತ್ರದ ಅನಾವರಣ ಮಾಡುವ ಕಾರ್ಯಕ್ರಮ. ಮಧ್ಯಾಹ್ನ ೪ ಗಂಟೆಗೆ ಸಮಾರಂಭ. ಘಟಪ್ರಭಾದಿಂದ ನಮ್ಮ ಊರಿಗೆ ೨೫ ಮೈಲುಗಳ ಅಂತರ. ಅಂದು ಅಲ್ಲಿಂದ ಅವರು ಮಧ್ಯಾಹ್ನ ೩ ಗಂಟೆಗೆ ಹೊರ ಡುವ ಸಿದ್ಧತೆ ಮಾಡಿದರು. ಹೊರಡಲು ಕಾರು ತಯಾರಾಗಿತ್ತು. ಅಷ್ಟರಲ್ಲಿಯೇ ಒಬ್ಬ ರೋಗಿಯು ಹೊಟ್ಟೆ ನೋವಿನಿಂದ ಅಸ್ಪತ್ರೆಗೆ ಸೇರಿದ ಫೋನಿನ ಕರೆ ಬಂತು. ಡಾಕ್ಟರರು ರೋಗಿಯ ಕಡೆಗೇ ಧಾವಿಸಿದರು. ಪರೀಕ್ಷಿಸಿದರು. ಈಗಲೇ ಆಪರೇ ಶನ್ ಆಗಲೇಬೇಕೆಂದರು. ಅದರಲ್ಲಿಯೇ ನಿರತ ರಾದರು. ಆದರೆ ಉದ್ಘಾಟನೆಯ ಕಾರ್ಯಕ್ರಮ! ಮೊದಲು ರೋಗಿಯ ಜೀವ ಉಳಿಸಬೇಕಾದುದು ತಮ್ಮ ಕರ್ತವ್ಯವೆಂದು ತಿಳಿದು ತಮ್ಮ ಧರ್ಮಪತ್ನಿ ಸೌ. ವತ್ಸಲಾಬಾಯಿ ಅವರನ್ನಷ್ಟೇ ಮುಂದೆ ಕಳಿಸಿ ನನಗೆ ಪತ್ರ ಮುಖಾಂತರ ಹೀಗೆ ತಿಳಿಸಿದರು: "ಕೂಡಿದ ಜನರನ್ನು ಕಾಯಿಸಬೇಡಿರಿ. ಕಾರ್ಯ ಕ್ರಮ ಮುಂದೆ ಸಾಗಲಿ. ನನಗೆ ಬರುವದು ತುಂಬ ತಡವಾಗಬಹುದು." ಅವರು ಬರಲಿಲ್ಲ ವೆಂದು ನನಗೆ ಸ್ವಲ್ಪ ನಿರಾಶೆಯಾಯಿತು. ಅವರ ನಿರ್ದೇಶನದಂತೆ ಕಾರ್ಯಕ್ರಮ ಆರಂಭಿಸಿದೆ. ಆದರೆ ತುಸು ಹೊತ್ತಿನಲ್ಲಿಯೇ ಶಸ್ತ್ರಕ್ರಿಯೆ ಯಶಸ್ವಿಯಾಗಿಸಿ ಡಾ. ವೈದ್ಯರು ನನ್ನ ಕಾರ್ಯಕ್ರಮಕ್ಕೆ ಹಾಜರಾಗಿದ್ದರು. ಅತ್ತ ಆ ಬಡ ಜೀವಿಯ ಪ್ರಾಣ ವನ್ನು ಉಳಿಸಿದ್ದರು. ಇತ್ತ ನನ್ನ ಕಾರ್ಯಕ್ರಮಕ್ಕೂ ಉಪಸ್ಥಿತರಿದ್ದರು.

ಡಾ. ವೈದ್ಯ ತುಂಬ ಸುಸಂಸ್ಕೃತ ವ್ಯಕ್ತಿ-ಯೆಂಬುದನ್ನು ಅವರನ್ನೊಮ್ಮೆ ನೋಡಿದ ಯಾರೂ ಗುರುತಿಸಬಹುದು. ಅವರಾಡಿದ ಎರಡು ಮಾತು ಗಳು ಇದನ್ನು ಇನ್ನಷ್ಟು ಪುಷ್ಟೀಕರಿಸಬಹುದು. ಆದರೆ ಅವರ ವರ್ತನೆ ಈ ಭಾವನೆಯನ್ನು ಯಾರ ಮನಸ್ಸಿನಲ್ಲೂ ಪೂರ್ತಿ ಅಚ್ಚೊತ್ತಿಬಿಡಬಹುದು.

ಖ್ಯಾತ ಉದ್ದಿಮೆದಾರ ಶ್ರೀ ಅರವಿಂದ ಮಫತ-ಲಾಲರು ಒಮ್ಮೆ ಅತಿಥಿಯಾಗಿ ಕರ್ನಾಟಕ ಆರೋಗ್ಯಧಾಮಕ್ಕೆ ಬಂದಾಗ ಅವರನ್ನು ಗೌರ ವಿಸಲು ಒಂದು ಸಭೆ ಸೇರಿತ್ತು. ಈ ಕೋಟ್ಯಾ ಧೀಶರಿಂದ ಆರೋಗ್ಯಧಾಮಕ್ಕಾಗಿ ಹಣದ ಸಹಾ ಯವನ್ನೂ ಡಾ. ವೈದ್ಯರು ಯಾಚಿಸುವರೆಂಬುದು ನೆರೆದ ಎಲ್ಲರ ಭಾವನೆಯಾಗಿತ್ತು. ವೈದ್ಯರು ಗಂಭೀರ ವದನದಿಂದ ಎದ್ದು ನಿಂತು, ಮಫತಲಾಲ ರಂಥ ಗಣ್ಯ ವ್ಯಕ್ತಿ ಆರೋಗ್ಯಧಾಮವನ್ನು ಸಂದರ್ಶಿಸಿದ್ದರಿಂದ ತಮಗಾದ ಸಂತೋಷ ವ್ಯಕ್ತ ಪಡಿಸಿ ಅದಕ್ಕಾಗಿ ಕೃತಜ್ಞತೆ ಸೂಚಿಸಿದರು. ನೆರೆ ದವರ ನಿರೀಕ್ಷೆ ಹುಸಿಯಾಯಿತು. ಅವರು ಪ್ರೇಮಾಂತಃಕರಣ ಕೊಟ್ಟು ಜನರ ಹೃದಯ ಗೆಲ್ಲುತ್ತಾರೆ.

ಡಾಕ್ಟರು ಮಿತಭಾಷಿ ಎಂಬುದು ಬಹಿರಂಗದಲ್ಲಿ ತೋರುವ ಅವರ ಸಾರ್ವಜನಿಕ ಜೀವನಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಒಮ್ಮೆ ಅವರ ಕೊನೆಯ ಮಗ ಘನಶ್ಯಾಮ ಶಾಲೆಯಲ್ಲಿ ಓದುತ್ತಿರುವಾಗ ಅಭ್ಯಾಸಕ್ಕಿಂತ ಅವನ ಗಮನ ಆಟ-ಪಾಟಗಳಲ್ಲೇ ಹೆಚ್ಚಾಗಿರುವುದನ್ನು ಕಂಡ ಅವರು ಒಮ್ಮೆ ಅವ-ನಿಗೆ, "ಓದಿನಲ್ಲಿ ನಿನಗಷ್ಟು ಅಭಿರುಚಿ ಕಾಣುವುದಿಲ್ಲ. ಆಟದಲ್ಲೇ ನಿನಗೆ ಒಲವಿದ್ದರೆ ಅದರಲ್ಲೇ ಪೂರ್ಣ ಲಕ್ಷ್ಯ ಹಾಕಿ ಪರಿಣತನಾಗು. ಒಟ್ಟಿನಲ್ಲಿ ಅಲ್ಲೂ ಶ್ರೇಷ್ಠ ಮಟ್ಟವನ್ನು ನೀನು ತಲಪಬೇಕು," ಎಂದು ಹೇಳಿದ್ದರು. ಅವನಿಗೆ ಅಷ್ಟು ಸಾಕಾ-ಯಿತು. ಅವನು ಒಳ್ಳೇ ರ್‍ಯಾಂಕ್ ವಿದ್ಯಾರ್ಥಿಯೆನಿಸಿ ಈಗ ತಾನೂ ಡಾಕ್ಟರ್ ಆಗುವುದರಲ್ಲಿದ್ದಾನೆ. ✡

ಎಸ್ಕಿಮೋ ಕಲೆ

ವೈಶಿಷ್ಟ್ಯಕ್ಕೆ—ವೈವಿಧ್ಯಕ್ಕೆ ಹೆಸರಾಗಿರುವ ಎಸ್ಕಿಮೋ ಜನಾಂಗ ಕಲಾರಂಗದಲ್ಲೂ ತನ್ನ ವೈಶಿಷ್ಟ್ಯ ಮೆರೆದಿದೆ. ಈ ಪರಂಪರಾಗತ ಕಲೆಗೀಗ ನವ್ಯದ ಸೋಂಕು ತಟ್ಟಿದೆ. ಆದರೆ ನವ್ಯ ಅಂದಾಕ್ಷಣ ಮೂಗು ಮುರಿಯಬೇಕಿಲ್ಲ. ನವ್ಯತೆಯಲ್ಲೂ ಭವ್ಯತೆಯಿದೆ.

ಕಲ್ಲು, ಹಲ್ಲುದಂತ, ಕಟ್ಟಿಗೆ, ಚರ್ಮ, ಕೊಂಬು-ಮುಂತಾದುವುಗಳಲ್ಲಿ ಕಲೆಯನ್ನರಳಿಸುತ್ತ ಬಂದ ಎಸ್ಕಿಮೋ ಕಲಾಕಾರರು ಈಗ ಅದರಲ್ಲೇ ಹೊಸ ಆಯಾಮ ಕಂಡುಕೊಂಡಿದ್ದಾರೆ. ಹಲ್ಲುದಂತಖಚಿತ ಕಲ್ಲಿನ ಮೂರ್ತಿಗಳು, ಲೋಹಖಚಿತ ಮೂರ್ತಿಗಳನ್ನಲ್ಲದೇ ಇನ್ನೂ ಅನೇಕ ಸುಳುಹುಗಳನ್ನು ಕೆತ್ತುತ್ತ ಬಂದ ಎಸ್ಕಿಮೋ ಕಲಾಕಾರರು ಕಳೆದ ಇಪ್ಪತ್ತು ವರ್ಷಗಳಿಂದೀಚೆಗೆ ಅಭಿವ್ಯಕ್ತಿಮಾಧ್ಯಮದಲ್ಲಿ ತಂತ್ರ, ವಸ್ತುಗಳ ಬಳಕೆಯ ದೃಷ್ಟಿಯಿಂದ ಗಮನಾರ್ಹ ಬದಲಾವಣೆ ಸಾಧಿಸಿದ್ದಾರೆ. ಈಗ ಎಸ್ಕಿಮೋ ಕಲೆಯದೊಂದು ಹೊಸ ಪರಂಪರೆ ಪ್ರಾರಂಭವಾಗಿಬಿಟ್ಟಿದೆ.

ಅಲ್ಲಿ ಸಿಕ್ಕುವ ಬಿಂದುಕಲ್ಲು ಅಥವಾ Soap-Stone ಕಲಾಕಾರರಿಗೆ ಹೊಸ ಹೊಸ ಕಲ್ಪನೆಗಳನ್ನು ತರುತ್ತಲಿದೆ. ಈ ಕಲ್ಲು ನಾಲ್ಕಾರು ಬಣ್ಣಗಳಲ್ಲಿ ದೊರೆಯುವಂಥದು. ಬೇಟೆಯೇ ಇವರ ಮುಖ್ಯ ಕಸುಬಾದ್ದರಿಂದ ಇವರ ಕಲೆಯಲ್ಲಿ ಪ್ರಾಣಿಗಳ ಪ್ರತಿರೂಪಗಳು ಕಂಡುಬರುವುದು ಹೆಚ್ಚು.

೧೯೪೮ರಲ್ಲಿ ಸಮಕಾಲೀನ ಎಸ್ಕಿಮೋ ಕಲೆ ಆವಿರ್ಭಾವಗೊಂಡಿತು. ಅದುವರೆಗೆ ಕೇವಲ ಕಣ್ಣಿಗೆ ಪಟ್ಟಿ ಕಟ್ಟಿದ ಕುದುರೆಯಂತೆ, ಬಾವಿಯೇ ಜಗತ್ತು ಎಂದುಕೊಂಡ ಕಪ್ಪೆಯಂತೆ ಇತ್ತು ಇವರ ಸ್ಥಿತಿ. ತದನಂತರ ಹೊರ ಜಗತ್ತಿನೊಂದಿಗಿನ ಹೆಚ್ಚಿದ ಸಂಪರ್ಕ ಇವರ ಕಲೆಯ ಮೇಲೆ ಸಾಕಷ್ಟು ಪರಿಣಾಮವನ್ನುಂಟುಮಾಡಿತು. ಪಾಶ್ಚಾತ್ಯ ರಾಷ್ಟ್ರಗಳ ಕಲೆಯಿಂದ ಪ್ರಭಾವಿತರಾದ ಕೆಲವು ಎಸ್ಕಿಮೋ ಕಲಾಕಾರರ ಕೃತಿಗಳ ಬಗ್ಗೆ ಅವರಲ್ಲಿಯೇ ಅಭಿಪ್ರಾಯಭೇದವುಂಟಾಯಿತು. ಇದು 'ಎಸ್ಕಿಮೋಯೇತರ ಕಲೆ' ಅಥವಾ 'ಬೆರಕೆ ಕಲೆ' ಎಂಬ ಟೀಕೆ ಬರಲಾಯಿತು. ಈ 'ಕಲಾಬೆರಕೆ'ಯಿಂದುಂಟಾದ ಗೊಂದಲ ಹೊಸ ದೃಷ್ಟಿಯ ಎಸ್ಕಿಮೋ ಕಲಾಕಾರರಿಗೆ ಛಲ ಹುಟ್ಟಿಸಿತು. ಅದರ ಫಲವೇ ಈಗಿನ ಎಸ್ಕಿಮೋ ಕಲೆ.

ಸಂಚಾರಿ ಎಸ್ಕಿಮೋ ಕಲಾವಿದರು ಮೇಲಿಂದ ಮೇಲೆ ತಮ್ಮ ಪಾಳೆಯವನ್ನು ಬದಲಾಯಿಸುತ್ತಿದ್ದುದರಿಂದ ಅದಕ್ಕನುಕೂಲವಾಗಲಿ ಎಂಬ ಉದ್ದೇಶದಿಂದ ಚಿಕ್ಕ ಚಿಕ್ಕ ಕೃತಿಗಳನ್ನು ಶಿಲೆ, ದಂತ, ಕಟ್ಟಿಗೆಗಳಲ್ಲಿ ರಚಿಸುತ್ತಿದ್ದರು. ಆದರೆ ಕಲಾವಸ್ತುಸಂಗ್ರಹಾಲಯದ ಕಲ್ಪನೆ ಮೂಡಿದಾಗ ಇವುಗಳ ಗಾತ್ರವೂ ದೊಡ್ಡದಾಯಿತು. ಈಗ ಎಸ್ಕಿಮೋ ಕಲಾಕೃತಿಗಳಿಗೆ ಬೇಡಿಕೆ ಬಹಳ. ಹೀಗಾಗಿ ಇದನ್ನೇ ವೃತ್ತಿಯನ್ನಾಗಿ ಮಾಡಿಕೊಂಡ ಕಲಾವಿದರ ಸಂಖ್ಯೆ ಅಲ್ಲಿ ಬೆಳೆಯುತ್ತಿದೆ.

ಇಂದು ಎಸ್ಕಿಮೋಗಳು ಬಹಳ ಬದಲಾಗಿದ್ದಾರೆ. ಕಲೆಯಲ್ಲೂ ಈ ಬದಲಾವಣೆಯ ಛಾಯೆ ಕಾಣುತ್ತದೆ. 'ಕಲೆಯೇ ಸೌಂದರ್ಯ – ಸೌಂದರ್ಯವೇ ಕಲೆ' ಎಂಬ ಅವರ ತಿಳುವಳಿಕೆ ಈಗ ಬದಲಾಗಿದೆ. ಕಿಯಾಪಾಕ್, ಮಿಕೋಶಿಯಾಲುಕ್, ಎಲಿಸ್ಸಾಪಿ ಕನಾನಾ, ಓಸೂವಿತೂಕ್‌ಬಿ, ಜೋಹಾನಿ ಇವೂಕ್‌ತ್ಸಾಕ್ ಮುಂತಾದವರು ಎಸ್ಕಿಮೋ ಜನಾಂಗದ ಪ್ರಾತಿನಿಧಿಕ ಕಲಾವಿದರು.

✡

೧ ಎಮಿಕೋಶಿಯಾಲುಕ್‌ರ ಶಿಲ್ಪಕೃತಿ ಸೀಲ್. ೨ ಓಸೂವಿತೂಕ್‌ಬಿಯರ ಶಿಲ್ಪಕೃತಿ ಜಾಂಬುವಂತ. ೩ ಎಲಿಸ್ಯಾಪಿಕನಾನಾ ತಿಮಿಂಗಲದ ಮೂಳೆಯಿಂದ ರಚಿಸಿದ ಹಿಮಕರಡಿ. ೪ ಕಿಯಾಪಾಕ್‌ರ ಶಿಲ್ಪಕೃತಿ ಕರಡಿ ಕುಣಿತ.


a
b

ಎಸ್ಕಿಮೊ ಕಲೆ



3



೪

ಪದಾರ್ಥ ಚಿಂತಾಮಣಿ-೩

ದೇವ ಮತ್ತು ಅಸುರ ಶಬ್ದಗಳು ನಮಗೆಲ್ಲ ತಿಳಿದಂತೆ ಕ್ರಮವಾಗಿ ಒಳ್ಳೆ ಮತ್ತು ಕೆಟ್ಟ, ಅಲೌಕಿಕ ಮತ್ತು ಅತಿಮಾನುಷ ಶಕ್ತಿಗಳನ್ನು ಪ್ರತಿನಿಧಿಸುತ್ತವೆ. ಸಂಸ್ಕೃತದ ಸೋದರಿ ಭಾಷೆಗಳಾದ ಗ್ರೀಕ್ ಲ್ಯಾಟಿನ್ ಭಾಷೆಗಳಲ್ಲಿಯೂ ಸತ್ ಶಕ್ತಿಗಳಿಗೆ ದೇವದ ಜ್ಞಾತಿ ಶಬ್ದಗಳೇ ಸಲ್ಲುತ್ತವೆ: ಗ್ರೀಕಿನಲ್ಲಿ ಥಿಯೋಸ್ (Theos), ಲ್ಯಾಟಿನ್ನಿನಲ್ಲಿ ದೀವಸ್ (Deus) ಪದಗಳು ದೇವತಾರ್ಥವಾಗಿವೆ. ಇದು ಆಶ್ಚರ್ಯವಲ್ಲ. ದೇವ, ದೀವಸ್ ಇತ್ಯಾದಿಗಳು ಪ್ರಕಾಶಾರ್ಥಕಗಳಾಗಿವೆ.

ಆದರೆ, ಆಶ್ಚರ್ಯ ಇದು: ನಮ್ಮ ನೆರೆಯ ನಿಕಟತಮ ಆರ್ಯಬಂಧುಗಳಾದ ಇರಾಣಿಗಳಿಗೆ ದೇವ ಅಥವಾ ದಏವ ಎಂಬ ಶಬ್ದ ನಮ್ಮ ದೈತ್ಯ ಅಥವಾ ಅಸುರ ಶಬ್ದದಂತೆ ದುಷ್ಟ ಶಕ್ತಿಗಳ ಪ್ರತೀಕವಾಗಿದೆ. ಮತ್ತು ನಮ್ಮ ಅಸುರ ಶಬ್ದದ ಜ್ಞಾತಿಯಾದ ಅಹುರ ಎಂಬುದು ಒಳ್ಳೇ ದಿವ್ಯ ಶಕ್ತಿಗಳನ್ನು ಪ್ರತಿನಿಧಿಸುತ್ತದೆ. (ಇರಾಣದ ಜೆಂದ್ ಭಾಷೆಯಲ್ಲಿ ಸಂಸ್ಕೃತದ ಸಕಾರ 'ಹ'ಕಾರ ವಾಗುತ್ತದೆ.) ಈ ಪ್ರಕಾರ ಪುರಾತನ ಇರಾಣದ ಅವೆಸ್ತಾ ಧರ್ಮದ ಅನುಯಾಯಿಗಳಾದ ನಮ್ಮ ದೇಶದ ಪಾರ್ಸಿಗಳಿಗೆ ಅಹುರ ಮಜ್ದಾ ಸತ್ ಶಕ್ತಿಗಳಲ್ಲಿ ಸರ್ವಶ್ರೇಷ್ಠನಾದವನು. ಅವನ ಶತ್ರು ಅಹ್ರಿಮನ್ ದುಷ್ಟ ಶಕ್ತಿಗಳಲ್ಲಿ ಸೈತಾನಸಂಥವನು. ಇವನೇ ಭಾರತೀಯಾರ್ಯರ ಆರ್ಯಮನ್. ಆರ್ಯಮನಿಗೆ ನಮ್ಮಲ್ಲಿ ಸೂರ್ಯನೆಂದೂ ಪಿತೃದೇವತೆಗಳ ಅಧಿಪತಿಯೆಂದೂ ಅರ್ಥವಿದೆ.

ಹೀಗೆ ಎರಡು ಸೋದರ ಭಾಷೆ-ಜನಾಂಗಳಲ್ಲಿ ಈ ಶಬ್ದಗಳಿಗೆ ಪರಸ್ಪರ ವಿಪರೀತಾರ್ಥ ಹೇಗೆ ಉಂಟಾಯಿತು? ಈ ರಹಸ್ಯವನ್ನು ಇನ್ನೂ ಜಟಿಲಗೊಳಿಸುವ ಇನ್ನೊಂದು ಅಂಶವಿದೆ. ಅದೆಂದರೆ ಋಗ್ವೇದದ ಪುರಾತನ ಭಾಗಗಳಲ್ಲಿ ಅಸುರ ಶಬ್ದಕ್ಕೆ ದುಷ್ಟ ಅರ್ಥವಿಲ್ಲ; ಬಲಿಷ್ಠ, ಆತ್ಮಶಕ್ತಿಯ ಪ್ರತೀಕ ಎಂದು ಅರ್ಥವಿದೆ. 'ಮಹದ್ದೇವಾನಾಂ ಅಸುರತ್ವಂ ಏಕಂ' ಎಂಬ ವೇದವಾಕ್ಯವನ್ನು ಉದಾಹರಿಸಬಹುದು.

ಈ ವೈಪರೀತ್ಯಕ್ಕೆ ಕಾರಣವನ್ನು ಊಹಿಸುವುದಾದರೆ, ಹಿಂದೊಂದು ಕಾಲದಲ್ಲಿ ಒಟ್ಟಾಗಿ ಜೀವಿಸುತ್ತಿದ್ದ ಭಾರತೀಯ ಮತ್ತು ಇರಾಣಿ ಆರ್ಯ ಪಂಗಡಗಳಲ್ಲಿ ಯಾವುದೋ ಕಾರಣಕ್ಕಾಗಿ ಹೋರಾಟವಾಗಿ ಅದು ಧಾರ್ಮಿಕ ಕಲ್ಪನೆಗಳ ವೈಷಮ್ಯವಾಗಿ ರೂಪುಗೊಂಡಿರಬೇಕು. ಈ ಜಗಳ ತೀರ ಉಲ್ಬಣಕ್ಕೆ ಹೋಗಿ ಸಂಪೂರ್ಣ ವಿಚ್ಛೇದದಲ್ಲಿ ಮುಗಿದಿರಬೇಕು. ಪುರಾಣಗಳಲ್ಲಿ ಬರುವ ದೇವಾಸುರ ಯುದ್ಧಗಳು ಆರ್ಯರ ಈ ಪಂಗಡ ಹೋರಾಟದ ಅಲೌಕಿಕೀಕರಣವಾಗಿರಬಹುದು. ಅವರ ಕೊನೆಗೆ ಪಂಗಡಗಳು ಎರಡು ಬೇರೆ ಬೇರೆ ಕಡೆ ನೆಲಸಿ ತಮ್ಮ ದೈವತಗಳನ್ನು ಪರಸ್ಪರ ವಿರುದ್ಧವಾಗಿ ಮಾಡಿಕೊಂಡಿರಬಹುದು. ಸಂಸ್ಕೃತದಲ್ಲಿ ಅಸುರರಿಗೆ ಪೂರ್ವದೇವಾಃ (ಮುಂಚೆ ದೇವತೆಗಳಾಗಿದ್ದವರು) ಎಂಬ ಶಬ್ದವೂ ಇದೆಯೆಂಬುದು ಅರ್ಥಪೂರ್ಣ.

ಈ ಮುರುಗಡೆ ಮತ್ತು ತಿರುವು ಮುರುವಿನ ಐತಿಹಾಸಿಕ ಘಟನೆ ಎಂದು ನಡೆದಿರಬಹುದು? ಹೇಳುವುದು ಕಷ್ಟ. ಆದರೆ ಯೌರೋಪ್ಯಾರ್ಯ ಭಾಷೆಗಳಲ್ಲಿ ಅಲೌಕಿಕ ಸತ್‌ಶಕ್ತಿಗಳಿಗೆ ದೇವ ಶಬ್ದದ ಜ್ಞಾತಿ ಶಬ್ದಗಳೇ ಇವೆಯೆಂದು ಗಮನಿಸಿದರೆ ಒಂದು ಊಹೆ ಮಾಡಬಹುದು. ಸುರಾಸುರ ತಿರುವು ಮುರುವು ಯೌರೋಪ್ಯಾರ್ಯ ಪಂಗಡಗಳು ಬೇರೆಯಾದ ನಂತರ, ಮತ್ತು ಋಗ್ವೇದದ ಹಳೇ ಭಾಗಗಳ ರಚನೆ ಆದ ನಂತರ ನಡೆದಿರಬೇಕು. ಋಗ್ವೇದ ರಚನೆ ಕ್ರಿ. ಪೂ. ೧೫೦೦ರಲ್ಲಿ ಆದದ್ದು ನಿಜವಾದರೆ (ಇದು ಖಂಡಿತವಲ್ಲ), ಆ ತೇದಿಯ ಸಮೀಪದಲ್ಲಿ ಎಂದೋ ಆಗಿರಬಹುದು. ಪಾರ್ಸಿಗಳ ವೇದವೆನಿಸಿದ ಅವೆಸ್ತಾ ಅದೇ ಸುಮಾರಿಗೆ, ಇಲ್ಲ ಸ್ವಲ್ಪ ನಂತರ, ರಚನೆಯಾಗಿರಬಹುದು. ಆದರೆ ಸುರ, ಅಸುರ, ದೇವ ಶಬ್ದಗಳ ಈ ವೈಪರೀತ್ಯ ಒಂದೇ ಬಳಗದ ಪಂಗಡಗಳ ಹೋರಾಟದ ಕಥೆ ಹೇಳುತ್ತಿದೆಯೆಂಬುದು ಸುಮಾರಾಗಿ ಖಚಿತ.

ಇರಾಣಿ ಆರ್ಯರು ದೇವರನ್ನು ಅಸುರರನ್ನಾಗಿ ಮಾಡಿದ ಈ ಕಥೆಗೊಂದು ಉಪಕಥೆಯೂ ಇದೆ. ಕ್ರಿಸ್ತಶಕ ೮ನೇ ಶತಮಾನದ ನಂತರ ಇರಾಣವನ್ನು ಇಸ್ಲಾಂ ಧರ್ಮ ಆಕ್ರಮಿಸಿಕೊಂಡ ಮೇಲೆ ತಮ್ಮ ಸಂಸ್ಕೃತ ಧರ್ಮವನ್ನು ಹೆಚ್ಚೆಂದು ಬಗೆದ ಇರಾಣಿಗಳು ದೇವಭೂಮಿಯಾದ ಭಾರತಕ್ಕೇ ಬಂದು ಆಶ್ರಯ ಪಡೆದರು.

ಶಾನೆಂ

ದೊಡ್ಡವರ ಸಣ್ಣ ಕತೆಗಳು

ಕೃ. ನಾರಾಯಣರಾವ್

ಆಗ ಕನ್ನಡ ಕಲಿಯುವುದೆಂದರೇ ವಿದ್ಯಾರ್ಥಿಗಳಿಗೆ ಕಸಿವಿಸಿ ಎನಿಸುತ್ತಿದ್ದ ಕಾಲ. ವಿಶ್ವವಿದ್ಯಾನಿಲಯದ ಉಪನ್ಯಾಸಕರಲ್ಲಿ ಸಹ ವಿದ್ಯಾರ್ಥಿಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಸಾಮರ್ಥ್ಯವಿರುತ್ತಿರಲಿಲ್ಲ. ಅದರಲ್ಲೂ ಕನ್ನಡದ ಪ್ರಾಧ್ಯಾಪಕರೆಂದರೆ ವಿದ್ಯಾರ್ಥಿಗಳಿಗೆ ಮೂಗಿಗೆ ನಶ್ಯ ಏರಿಸಿದ ಹಾಗೆ.

ಕನ್ನಡ ಪ್ರಾಧ್ಯಾಪಕರೊಬ್ಬರು ಇದಕ್ಕೆ ಅಪವಾದವಾಗಿದ್ದರು, ಆಗಲೂ ಸಹ ಅವರು ಬರುವ ಠೀವಿಯೇ ಒಂದು ರೀತಿಯ ಮೋಹಕ ಗುರಿಯಲ್ಲಿ ದಿಟ್ಟತನವನ್ನು ತೋರಿಸುವಂತೆ ಹಿಮಾಲಯದ ರೀತ್ಯ ತಲೆ ಎತ್ತಿ, ಎದೆಯುಬ್ಬಿಸಿ ಜಗಜಟ್ಟಿಯಂತೆ ಹೆಜ್ಜೆ ಹಾಕುತ್ತಾ ಸಿಂಹಾವಲೋಕನದೊಂದಿಗೆ ಬರುತ್ತಿದ್ದರು. ಬರುತ್ತಲೇ ಕಾಲೇಜಿನ ಕನ್ನಡದ ಕೊಠಡಿಯ ಎರಡೂ ಬಾಗಿಲುಗಳನ್ನೂ ಮುಚ್ಚಿಸುತ್ತಿದ್ದರು. ಯಾರೋ ಒಬ್ಬ ಘಟಿಂಗ ವಿದ್ಯಾರ್ಥಿಪಟು ಪ್ರಶ್ನಿಸಿದ: "ಯಾಕೆ ಸಾರ್, ಬಾಗಿಲುಗಳೆಲ್ಲಾ ಮುಚ್ಚಿಸುತ್ತೀರಿ ?"

ಕನ್ನಡ ಪ್ರಾಧ್ಯಾಪಕರ ಮಾತಿನಲ್ಲೂ ಮೋಡಿ. ಕೇಳುವವರನ್ನು ಮಂತ್ರಮುಗ್ಧಗೊಳಿಸುವ ಮಹಾಶಕ್ತಿ. ವ್ಯಂಗ್ಯವಾದರೂ ವಿವೇಕಕ್ಕೆ ಹಾದಿ ತೋರಿಸುವ ಸಿದ್ಧಿ ಅವರ ಮಾತುಗಾರಿಕೆಯಲ್ಲಿ ಮೂಡಿ ಬರುತ್ತಿತ್ತು. ಆ ಹುಡುಗನಿಗೆ ಉತ್ತರ ಕೊಟ್ಟರು: "ಏನೋ, ನಿನ್ನ ಮಾತ್ನಲ್ಲಿ ನನ್ನನ್ನೂ ಕುಸ್ತೀಗ್ ಕರ್ಯೋ ಗಮ್ಮತ್ ಇದ್ ಹಾಗ್ ಇದೆ. ಬಾರೋ, ಮಾಡ್ತೀಯೇನೋ ಕುಸ್ತಿ ? ನೀನೇ ಏನೋ, ನಿನ್ನ ಜೊತೆಗಾರರೆಲ್ಲಾ ಬನ್ನಿ. ನಂದ್ ಒಂದೇ ಒಂದ್ ಪಟ್ಟು, ನೀವ್ಯಾರ್ ಮಾಡ್ ತೋರಿಸ್ತೀರೋ ತೋರ್ಸಿ.

ವಿಧಿಯ ಆಟ

ಲೇಖಕರು ಈ ಲೇಖನವನ್ನು ನಮಗೆ ಕಳಿಸಿದಾಗ ರಾಜರತ್ನಂ ಇನ್ನೂ ಜೀವಿಸಿದ್ದರಷ್ಟೇ ಅಲ್ಲ, ಮೊನ್ನೆ ಧರ್ಮಸ್ಥಳದಲ್ಲಿ ನಡೆದ ಸಾಹಿತ್ಯ ಸಮ್ಮೇಲನಕ್ಕೂ ಹೋಗಿ ಬಂದರು. ಆದರೆ ವಿಧಿಯ ಲೆಕ್ಕ ಬೇರೆಯೇ ಆಗಿತ್ತು. ಮಾರ್ಚ್ ೧೩ರ ಅಪರಾಹ್ನ ಆಕಸ್ಮಾತ್ತಾಗಿ ಎರಗಿದ ಹೃದಯಾಘಾತ ಅವರನ್ನು ನಮ್ಮ ಮಧ್ಯದಿಂದ ಎತ್ತಿಕೊಂಡು ಹೋಯಿತು. ಒಮ್ಮೆ ಎಡಗೈ ಮುಷ್ಟಿಯಿಂದ ತೇಗದ ಮೇಜಿನ ಕಾಲನ್ನು ಹೂವಿನಂತೆ ಎತ್ತಿ ಹಿಡಿಯಬಲ್ಲಷ್ಟು ಸಮರ್ಥರಾಗಿದ್ದ ಈ ಮಹಾಪುರುಷನನ್ನು ಕಾಲರಾಯ ಹೂವಿನಂತೆಯೆ ಎತ್ತಿಕೊಂಡೊಯ್ದನಲ್ಲ! —ಸಂಪಾದಕ

"ನೋಡ್ರೋ, ನನ್ ಮುಂದೆ ಈ ಮೇಜಿದೆ. ಇದರ್ ಒಂದ್ ಕಾಲ್ನ ಒಂದೇ ಹಿಡೀಲ್ ಹಿಡ್ದು, ನೆಟ್ಟಗೆತ್ರೋ ಮೇಲೆ, ನೋಡ್ತೀನ್ ನಿಮ್ ಪಟ್ಟ."

"ಇದ್ಯಾವ ಮಹಾ ಕೆಲ್ಸಾ ಸಾರ್," ಎನ್ನುತ್ತಾ ಎಲ್ಲಾ ವಿದ್ಯಾರ್ಥಿಗಳೂ ಶಿವ ಧನಸ್ಸಿನಂತಿದ್ದ ಆ ಮೇಜನ್ನು ಪ್ರಾಧ್ಯಾಪಕರು ಹೇಳಿದ ಪಟ್ಟಿನಲ್ಲಿ ಎತ್ತಲು ಯತ್ನಿಸಿ, ಅದನ್ನು ಮೇಲೆ ಹಾಕಿಕೊಂಡು, ಜೋಲು ಮೋರೆಯೊಂದಿಗೆ ತಮ್ಮ ತಮ್ಮ ಜಾಗಗಳಲ್ಲಿ, ಪಿಳಪಿಳನೆ ಪ್ರಾಧ್ಯಾಪಕರ ಕಡೆ ಕಣ್ ಕಣ್ ಬಿಡುತ್ತಾ ಕುಳಿತರು.

"ಆಯ್ತೇನ್ರೋ ನಿಮ್ಗಟ್ಟೂ?" ಎಂದು ಹುಸಿ ನಗೆಯೊಂದಿಗೆ, ಅವರು ತಮ್ಮ ಎಡಗೈ ಮುಷ್ಟಿಯಿಂದ ತೇಗದ ತೂಕದ ಮೇಜಿನ ಒಂದು ಕಾಲನ್ನು ಹೂವೆತ್ತುವಂತೆ ಮೇಲಕ್ಕೆತ್ತಿ, ಎರಡು ನಿಮಿಷ ಹಾಗೆಯೇ ಹಿಡಿದಿದ್ದು, ಅಷ್ಟೇ ನಿಧಾನವಾಗಿ ಕೆಳಗಿಳಿಸಿದರು. ವಿದ್ಯಾರ್ಥಿವೃಂದದ ಬಾಯೆಲ್ಲಾ ಒಣಗಿ ಹೋಯಿತು. ಅವರ ಕ್ಲಾಸೂ ಅಂದರೆ ಎಲ್ಲರಿಗೂ ಪಂಚಪ್ರಾಣ. ಎಲ್ಲಿಲ್ಲದ ಶ್ರದ್ಧೆ-ಭಕ್ತಿ, ತರಗತಿಯಲ್ಲಿ ಸದ್ದು-ಗದ್ದಲ ಸ್ವಲ್ಪವೂ ಇರದು.

ಈಗ ಅವರು ನಿವೃತ್ತರಾಗಿದ್ದರೂ ವಿದ್ಯಾರ್ಥಿಗಳ ಮನದಲ್ಲಿ ಮೂರ್ತಿಗೊಂಡಿದ್ದಾರೆ. ಅವರೇ "ಮೂಗ್ನಲ್ ಕನ್ನಡ ಪದವಾಡ್ತೀನಿ" ಎನ್ನುವ ಶ್ರೀಯುತ ಜಿ. ಪಿ. ರಾಜರತ್ನಂ.

■

ಒಮ್ಮೆ ದೇ. ಜವರೇಗೌಡರು, ಡಿ. ಯಲ್. ನರಸಿಂಹಾಚಾರ್ಯರು ಇನ್ನೂ ಇತರ ಸಂಗಡಿಗರು ಮಾತಿನ ಮಂಥನದಲ್ಲಿ ಶ್ರೀಯುತರಾದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ವಿಷಯವನ್ನು ಹಾಕಿದರು.

ಅವರ ಕಾರ್ಯಚಾತುರ್ಯ, ಶಿಸ್ತು ಸಂಯಮ, ಶ್ರದ್ಧೆ-ಉತ್ಸಾಹ ಮುಂತಾದ ವಿಚಾರಗಳ ಬಗ್ಗೆ ಚರ್ಚೆ ಮುಗಿಯುತ್ತಿದ್ದಂತೆ ಒಬ್ಬರು ರಾಗ ತೆಗೆದರು, "ಅವರೇನೇ ಮಾಡಿರಲಿ, ಏನೇ ನೋಡಿರಲಿ, ಅವರ ಮಾತಿಗೆ ಬೆಲೆ ಕೊಟ್ಟವರು, ಅವರನ್ನು ಅರಿತವರು ಕಡಿಮೆಯೇ."

ಇನ್ನೊಬ್ಬರು ತಾಳ ಹಾಕಿದರು : "ವಿಶ್ವೇಶ್ವರಯ್ಯನವರೂ ಅಂದರೆ ಎಂಜಿನ್ನು, ಅವರ ಅನುಯಾಯಿಗಳೆಲ್ಲಾ ರೈಲ್ವೆ ಬೋಗಿಗಳು, ಅವುಗಳನ್ನು ವೇಗವಾಗಿ ಎಳೆಯಲು [ಎಂಜಿನ್ನು ಪಡುತ್ತಿದ್ದ ಪಾಡು ಅಷ್ಟಿಷ್ಟಲ್ಲ. ನಿಧಾನವಾಗಿ ಎಳೆದರೆ ಬಂಡಿಗಳು ಕದಲುತ್ತಲೇ ಇರಲಿಲ್ಲ. ಜೋರಾಗಿ ಎಳೆದರೆ ಎಂಜಿನ್ನೇ ಮುಂದೆ ಹೋಗಿ ಬಿಡುತ್ತಿತ್ತು. ಬಂಡಿಗಳೆಲ್ಲಾ ಕಳಚಿಕೊಂಡು ಬಿಡುತ್ತಿದ್ದುವು."

ಎಲ್ಲರ ಮಧ್ಯೆ ನಗುವಿನ ಹೊಳೆ ಹರಿದಾಡುತ್ತಿತ್ತು.

ಈ ಮಧ್ಯೆ ಒಬ್ಬ ಗಿಡ್ಡನೆಯ ವ್ಯಕ್ತಿ ತಲೆ ತಗ್ಗಿಸಿಕೊಂಡೇ ಗಂಭೀರದ, ತೂಕದ ದನಿಯಲ್ಲಿ ಉಸುರಿತು: "ಅದು ಏಕೆ ಗೊತ್ತೇ ?"

ಎಲ್ಲರೂ ತಬ್ಬಿಬ್ಬಾದಂತೆ ಆ ಕಡೆಯೇ ನೋಡತೊಡಗಿದರು.

ಆ ವ್ಯಕ್ತಿ ಅದೇ ತಗ್ಗಿದ ತಲೆಯಲ್ಲಿಯೇ ಕಂಚಿನ ಕಂಠದಲ್ಲಿ ಹೇಳಿತು: "ಬಂಡಿಗಳಿಗೂ ಎಂಜಿನ್ನಿಗೂ ಮಧ್ಯೆ ಕೊಂಡಿ ಬಿಗಿಯಾಗಿ ಹಾಕಿರಲಿಲ್ಲ."

"ಅಂದರೆ ?" ಎನ್ನುವಂತೆ ಎಲ್ಲರೂ ಕಕಮಕನೆ ಅವರನ್ನೇ ನೋಡತೊಡಗಿದರು.

ವ್ಯಕ್ತಿ ಮುಕ್ತಾಯ ಹಾಡಿತು: "ಅಂದರೆ ವಿಶ್ವೇಶ್ವರಯ್ಯನವರು ಮಾತಾಡುತ್ತಿದ್ದುದೆಲ್ಲಾ ಇಂಗ್ಲೀಷಿನಲ್ಲಿಯೇ. ಅದು ಯಾರಿಗೆ ಅರ್ಥ ಆಗುತ್ತಿತ್ತು ? ಕನ್ನಡದಲ್ಲಿ ಹೇಳಿದ್ದರೆ ಎಷ್ಟೋ ಜನ ಅವರನ್ನು ಇನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಿದ್ದರು. ಇಲ್ಲೂ ಅಷ್ಟೇ. ಬಂಡಿಗಳಿಗೂ ಇಂಜಿನ್ನಿಗೂ ಮಧ್ಯೆ ಕನ್ನಡದ ಕೊಂಡಿಯನ್ನು ಬಿಗಿದಿದ್ದಿದ್ದರೆ ಇಂಜಿನ್ನು ಬಂಡಿಗಳನ್ನು ಸುಲಭವಾಗಿ ಎಳೆಯಬಹುದಾಗಿತ್ತು. ಬಂಡಿಗಳು ಕಳಚಿಕೊಳ್ಳುತ್ತಲೂ ಇರಲಿಲ್ಲ."

ಈಗ ತಗ್ಗಿದ ತಲೆ ಮೇಲೆದ್ದಿತ್ತು, ನಗುವಿನ ಮಿಂಚಿನೊಂದಿಗೆ. ಎಲ್ಲರೂ ಹೌದೆನ್ನುವಂತೆ ತಲೆ ತೂಗಿದರು. ಹೀಗೆ ಹೇಳಿದ ವ್ಯಕ್ತಿ ಬೇರೆ ಯಾರೂ ಅಲ್ಲ "ಕನ್ನಡದ ಆಸ್ತಿ" ಮಾಸ್ತಿ. ✡

ಗಣಿತ ಸಂಶೋಧನೆಗೇ
ಇವರ ಜೀವನ ಮೀಸಲು

ಪರಿಚಿತರ ನಾಡಿನಲ್ಲೊಬ್ಬ ಅಪರಿಚಿತ

ಕೋ. ರಾ. ರವೀಂದ್ರ

ಸುಮಾರು ಮೂವತ್ತು ವರ್ಷ ಹಿಂದಿನ ಮಾತು. ಹತ್ತಾರು ಜನ ಸ್ನೇಹಿತರು ಸೇರಿ ಎಲ್ಲೋ ಒಂದು ಕಡೆ ಪ್ರವಾಸಕ್ಕೆ ತೆರಳಿದರು. ತಂಡದ 'ನಾಯಕ' ಚಂದ್ರಶೇಖರನಿಗೆ ರೈಲ್ವೆ ಟಿಕೆಟ್ ಕೊಂಡುಕೊಂಡು ಪ್ರವಾಸ ಏರ್ಪಡಿಸುವ ಹೊಣೆ. ದುರದೃಷ್ಟವಶಾತ್ ಹಿಂತಿರುಗಬೇಕೆನ್ನುವಷ್ಟರೊಳಗಾಗಿ ಎಲ್ಲರಿಗಾಗಿ ತೆಗೆದಿದ್ದ ಟಿಕೆಟುಗಳು ಹಾಗೂ ಎಲ್ಲರ ಪಾಲಿನ ಹಣ ಇದ್ದ ಪರ್ಸ್ ಎಲ್ಲೋ ಬಿದ್ದೋ ಪಿಕ್‌ಪಾಕೆಟ್ಆಗಿಯೋ ಕಳೆದು ಹೋಯಿತು. ಎಲ್ಲಾ ಶಾಲಾ ಮಕ್ಕಳು. ಯಾರ ಕೈಯಲ್ಲೂ ಹೆಚ್ಚಿಗೆ ಹಣ ಇಲ್ಲ. ಹೇಗಾದರೂ ಮಾಡಿ ಊರು ಸೇರಲೇಬೇಕು. ಚಂದ್ರಶೇಖರ ಜ್ಯೋತಿಷಿಯಂತೆ ನಟಿಸಿ ಹಣ ಸಂಪಾದನೆ ಮಾಡುವಂತೆ ಎಲ್ಲರ ಸಲಹೆ ದೊರೆಯಿತು. ಜನನಿಬಿಡ ಚೌಕಿಯೊಂದರಲ್ಲಿ ಎಲ್ಲರೂ ಸೇರಿದರು. ಸ್ನೇಹಿತರೇ ಗಿರಾಕಿಗಳು. ಒಬ್ಬರ ನಂತರ ಒಬ್ಬರಂತೆ ಆಸಕ್ತಿಯಿಂದ ಭವಿಷ್ಯ ಕೇಳಿಸಿಕೊಳ್ಳುವವರಂತೆ ನಟಿಸಿದರು. ಎಷ್ಟಾದರೂ ಭಾರತವಲ್ಲವೆ? ನಿಜವಾಗಿಯೂ ಜನ ಆಕರ್ಷಿತರಾದರು. ಎಲ್ಲರಿಗೂ ಹಿಂದಿರುಗಲು ಬೇಕಾದುದಕ್ಕಿಂತ ಹೆಚ್ಚಿಗೆ ಹಣ ಸಂಪಾದನೆಯಾಯಿತು. ಆದರೆ. ಚಂದ್ರಶೇಖರನ ಆತ್ಮಸಾಕ್ಷಿ ಮಿಡಿಯುತ್ತಲೇ ಇತ್ತು. ಜನರನ್ನು ವಂಚಿಸಿ ಹಣ ಸಂಪಾದನೆ ಮಾಡಿರುವುದಕ್ಕೆ ಪ್ರಾಯಶ್ಚಿತ್ತ ಆಗಲೇಬೇಕು. ಇದಕ್ಕೇನು ಮಾಡುವುದು? ಉಳಿದ ಹೆಚ್ಚಿಗೆ ಹಣದಿಂದ ಜ್ಯೋತಿಶ್ಶಾಸ್ತ್ರದ ಪುಸ್ತಕಗಳನ್ನು ಕೊಂಡು ನಿಜವಾಗಿಯೂ ಜ್ಯೋತಿಷ್ಯವನ್ನು ಅಭ್ಯಾಸ ಮಾಡಲು ತಾನು ನಿರ್ಧರಿಸಿರುವುದರಿಂದ ಯಾರೂ ಹೆಚ್ಚಿಗೆ ಹಣದ ಪಾಲು ಕೇಳಬಾರದೆಂದು ಚಂದ್ರಶೇಖರ ಹೇಳಿದ. ಉಳಿದವರು ಒಪ್ಪಿದರು. ಬಾಲ್ಯದಲ್ಲಿ ಹುಟ್ಟಿದ ಈ ಹಟದಿಂದ ಇಂದು ಈತನೊಬ್ಬ, ಸಮರ್ಥ ಜ್ಯೋತಿಷಿ. ಖಗೋಳಶಾಸ್ತ್ರದಲ್ಲೂ ಸಾಕಷ್ಟು ಪರಿಣತಿ ಇವನಿಗೆ.

ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರದ ಚಂದ್ರಶೇಖರ ಚೆನ್ನಬಸಪ್ಪ ಯಲಿಗಾರ್ ಅವರು ಧಾರವಾಡ ಜಿಲ್ಲೆಯವರಿಗೆ ಸುಪರಿಚಿತರಿರಲಿಕ್ಕಿಲ್ಲ. ಏಕೆಂದರೆ ಕಳೆದ ಇಪ್ಪತ್ತು ವರ್ಷಗಳಿಂದಲೂ ಅವರು ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ನೆಲಸಿ ಅಲ್ಲಿನ ಸರಕಾರೀ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಅದರಿಂದಾಗಿಯೋ ಏನೋ ಗಣಿತ ಶಾಸ್ತ್ರದಲ್ಲಿ ಅವರಿಗಿರುವ ಸ್ಥಾನವದೆಷ್ಟು ಉನ್ನತವಾದದ್ದು ಎಂಬುದೂ ಜನಕ್ಕೆ ಅಪರಿಚಿತವಾಗಿದೆ

ಉಳಿದಿದೆ. ಲೇಖನದ ಪ್ರಾರಂಭದಲ್ಲಿ ಪ್ರಸ್ತಾಪಿಸಲಾದ ಚಂದ್ರಶೇಖರರೂ ಇವರೇ. ಕೆಲವರಿಗೆ "ಎಲ್ಲಾ ಒಳ್ಳೆಯದಕ್ಕೆ" ಎನ್ನುವಂತೆ ಇವರಿಗೆ ಹದಿನೈದರ ಹರೆಯದಲ್ಲಿ ಪರ್ಸ್ ಕಳೆದು ಹೋದುದೂ ಒಳ್ಳೆಯದೇ ಆಯಿತು. ಏಕೆಂದರೆ ಜೀವನದಲ್ಲಿ ಏನೋ ಸಾಧಿಸಬೇಕು ಎಂಬ ಹಟವಾದಿತನ ಬೇರೂರುವುದು ಇಂತಹ ಕೆಲವು ಸಂಕಷ್ಟದ ಸನ್ನಿವೇಶಗಳಲ್ಲಿಯೇ ಅಲ್ಲವೆ? ಬಹುಶಃ ಇದೇ ಛಲಗಾರಿಕೆ ಇವರಿಗೆ ಮುಂದಿನ ಜೀವನದಲ್ಲೂ ಮೈಗೂಡಿ ಗಣಿತ ಪ್ರಪಂಚದಲ್ಲೊಂದು ಸ್ಥಾನ ಪಡೆಯಲು ಕಾರಣವಾಗಿರಬಹುದು.

ಫರ್ಮಾ* ಹದಿನೇಳನೇ ಶತಮಾನದ ಫ್ರೆಂಚ್ ಗಣಿತಶಾಸ್ತ್ರಜ್ಞ. ೧೬೩೦ರ ಸುಮಾರಿನಲ್ಲಿ ಜಿಲ್ಲಾ ನ್ಯಾಯಾಧೀಶನಾಗಿ ಫ್ರಾನ್ಸ್ ದೇಶದಲ್ಲಿ ವೃತ್ತಿಪರನಾಗಿದ್ದ. ಫರ್ಮಾ ಎಲ್ಲರಂತೆಯೆ ಬದುಕಿ ಸತ್ತಿದ್ದರೆ ವಿಶೇಷವೇನೂ ಇರುತ್ತಿರಲಿಲ್ಲ. ಆದರೆ ಆತ ಬೀಜಗಣಿತದಲ್ಲಿ ಸೂತ್ರವೊಂದನ್ನು ಬರೆದಿಟ್ಟು ಕೊನೆಯುಸಿರೆಳೆದ. ಆತ ಆ ಸೂತ್ರದ ಉತ್ತರಗಳನ್ನು ಬರೆದಿಟ್ಟಿಲ್ಲವೆಂಬುದೇ ಈಗಿರುವ ಸಮಸ್ಯೆ. ಆತ ತನ್ನ ಸೂತ್ರದ ಉತ್ತರವನ್ನು ತನ್ನ ದಿನಚರಿಯಲ್ಲಿ ಬರೆದಿಟ್ಟಿದ್ದನೆಂದೂ ಆದರೆ ಅದು ಕಳೆದುಹೋಗಿರುವುದೆಂದೂ ಹೇಳಲಾಗುತ್ತಿದೆ. ಅಂತೂ ಇದು ಗಣಿತ ಶಾಸ್ತ್ರಜ್ಞರಿಗೆ ಸಮಸ್ಯೆಯಾಗಿ ಉಳಿದಿದೆ. ಯಲವಗಿ ಅವರಿಗೆ ಈಗ ಸುಮಾರು ಐವತ್ತು ವರ್ಷ ಪ್ರಾಯ.

ಇವರು ನಾಲ್ಕನೆಯ ತರಗತಿಯಲ್ಲಿ ಓದುತ್ತಿದ್ದಾಗಿನ ಸಂದರ್ಭ. ಶಾಲಾ ಮಾಸ್ತರೊಬ್ಬರು ಮಾಮೂಲಿನಂತೆ "ಅಜ್ಜಿ ಕತೆ" ಹೇಳುವಾಗ ಫರ್ಮಾನ ಪ್ರಸ್ತಾಪ ಮಾಡುತ್ತ ಅವನ ಸಮಸ್ಯೆಯು ಮುನ್ನೂರು ವರ್ಷಗಳಿಂದಲೂ ಸಮಸ್ಯೆಯಾಗಿಯೇ ಉಳಿದಿದೆಯೆಂದು ಹೇಳಿದರು. ಆಗ ಯಲವಗಿಯವರಲ್ಲಿ ಈ ಸಮಸ್ಯೆಯ ಬಗೆಗೆ ಉಂಟಾದ ಆಕರ್ಷಣೆ ಪ್ರಾಯವಾದಂತೆ ಬಲಿಯುತ್ತಾ ಬಂತು. ೧೯೫೫ರಲ್ಲಿ ಈ ಕುರಿತು ಹೆಚ್ಚಿನ ಸಂಶೋಧನೆಗೆ ಆರಂಭಿಸಿದರು. ನಂತರ ಸುಮಾರು ಹದಿನೆಂಟು ವರ್ಷಗಳಲ್ಲಿ ಅಂದರೆ ೧೯೭೭ರ ಡಿಸೆಂಬರ್ ತನಕ ಇವರು ಸಂಶೋಧನೆಗಳಿಗಾಗಿ ಖರ್ಚು ಮಾಡಿರುವ ಮೊತ್ತ ಮೂವತ್ತು ಸಾವಿರವನ್ನೂ ಮೀರಬಹುದು.


ಬೀಜಗಣಿತದಲ್ಲಿ ಹೊಸದಾಗಿ ಅಳವಡಿಸಲ್ಪಟ್ಟ 'ಟೂರ್ನಮೆಂಟಲ್ ಡಿಸ್ಟೆನ್ಸ್' ಎಂಬ ಶಾಸ್ತ್ರವನ್ನು ಯಲವಗಿಯವರು ಅಭಿವೃದ್ಧಿಪಡಿಸಿದರು. ದೇಶವಿದೇಶಗಳೊಡನೆ ಸಂಪರ್ಕ ಪಡೆಯಬೇಕಾಗುವದಕ್ಕಲ್ಲದೆ ಅಧ್ಯಯನಕ್ಕಾಗಿ ಅವಶ್ಯವಿರುವ ಫ್ರೆಂಚ್ ಮತ್ತು ಜರ್ಮನ್ ಭಾಷೆಗಳನ್ನೂ ಕಲಿತರು.

೧೯೭೪ರಲ್ಲಿ ಬೆಂಗಳೂರಿನಲ್ಲಿ ಭಾರತೀಯ ಗಣಿತಶಾಸ್ತ್ರಜ್ಞರ ಸಂಘದ ಅಧಿವೇಶನ ಜರುಗಿದಾಗ ಯಲವಗಿಯವರು ಅಧಿವೇಶನದಲ್ಲಿ ಟೂರ್ನಮೆಂಟಲ್ ಡಿಸ್ಟೆನ್ಸ್ ಕುರಿತು ಸಿದ್ಧಾಂತವೊಂದನ್ನು ಮಂಡಿಸಿದರು. ಅಮೇರಿಕದ ಮ್ಯಾಸೆಚುಸೆಟ್ಸ್‌ನ ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಸ್ಪೆನ್ಸರ್ ಅವರು "ಡಿಸ್ಟೆನ್ಸ್ ಸಾಹಿತ್ಯದಲ್ಲಿ ಕುಡುಬಾದಿದ್ದ ಕೊರತೆಯೊಂದನ್ನು ಈ ಸಾಮಗ್ರಿಯು ತುಂಬಿದೆ" ಎಂದು ಒಂದೆಡೆ ಹೇಳಿದ್ದಾರೆ.

ನಂಬರ್ ಥಿಯರಿಯ ಒಂದು ವಿಭಾಗ ಫಿಬೊನಾಸಿ ನಂಬರ್ಸ್ ಎಂಬುದು ಫರ್ಮಾನ ಕೊನೆಯ ಸಿದ್ಧಾಂತದೊಂದಿಗೆ ಪರಸ್ಪರ ಪೂರಕವಾದುದು, ಈ ದಿಸೆಯಲ್ಲಿ ಯಲವಗಿಯವರ ಮೂರು ನಾಲ್ಕು ಪ್ರಬಂಧಗಳು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ "ಫಿಬೊನಾಸಿ ಕ್ವಾರ್ಟರ್ಲಿ' ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿವೆ, ಇದೇ ವಿಷಯದ ಮೇಲೆ ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಹೆಚ್. ವಿ. ಕೃಷ್ಣಮೂರ್ತಿ ಎಂಬವರು ಯಲವಗಿಯವರ ಮಾರ್ಗದರ್ಶನದಲ್ಲಿ ಹೆಚ್. ವಿ. ಕೃಷ್ಣ ಎಂಬ ಹೆಸರಿನಲ್ಲಿ 'ಮ್ಯಾತಮ್ಯಾಟಿಕ್ಸ್ ಸ್ಟೂಡೆಂಟ್' ಎಂಬ ಭಾರತೀಯ ಸಂಶೋಧನಾ ಪತ್ರಿಕೆಯಲ್ಲಿ ಫಿಬೊನಾಸಿ ನಂಬರ್ಸ್ ವಿಚಾರವಾಗಿ ಸಂಶೋಧನಾ ಲೇಖನಗಳನ್ನು ಪ್ರಕಟಿಸಿ (೧೯೭೭ ರಿಂದೀಚೆಗೆ)ದ್ದರು. ಈ ಲೇಖನಗಳನ್ನು ಮತ್ತು ಹೆಚ್ಚಿಗೆ ಕೆಲವು ಸಂಶೋಧನಾ ವಿಷಯಗಳನ್ನು ಸೇರಿಸಿ ಒಂದು ಥೀಸಿಸ್ಸನ್ನು ಯಲ

* ನೋಡಿ, 'ಫರ್ಮಾನ ಅಂತಿಮ ಪ್ರಮೇಯ' ಕಸ್ತೂರಿ, ಡಿಸೆಂಬರ್ ೧೯೭೮.

ಗಿಯವರ ಮಾರ್ಗದರ್ಶನದಲ್ಲಿ ತಯಾರಿಸಿದರು. ಅದೇ ವೇಳೆಗೆ ಯಲವಿಗಿಯವರು ಕೊಲೆಜಿಯೆಟ್ ಶಿಕ್ಷಣದ ನಿರ್ದೇಶಕರ ಮುಖಾಂತರ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಿಗೆ ಪತ್ರ ಬರೆದು ತಮ್ಮನ್ನು ಕೃಷ್ಣಮೂರ್ತಿಯವರ ಥೀಸಿಸ್‌ಗೆ ಮಾರ್ಗದರ್ಶಕರಾಗಿ ಮಾನ್ಯ ಮಾಡಬೇಕೆಂದು ಕೋರಿದರು ಮತ್ತು ಆ ಕಾರ್ಯದ ಮುಕ್ಕಾಲು ಭಾಗ ಆಗಲೇ ಪೂರ್ತಿಗೊಂಡಿದೆಯೆಂದೂ ತಿಳಿಸಿದರು. ಒಬ್ಬ ರೀಡರ್ ಮಾತ್ರವೇ ಪಿಯೆಚ್. ಡಿ. ವಿದ್ಯಾರ್ಥಿಗೆ ಮಾರ್ಗದರ್ಶನ ಮಾಡಬಹುದೆಂದು ವಿಶ್ವವಿದ್ಯಾನಿಲಯವು ಯಲವಿಗಿಯವರಿಗೆ ತಿಳಿಸಿ ಅವರ ಕೋರಿಕೆಯನ್ನು ತಿರಸ್ಕರಿಸಿತು. (ಇದು ಸುಮಾರು ೧೯೭೦ರಲ್ಲಿ) ಆಗ ಯಲವಿಗಿಯವರು ಯಲವಿಗಿಯವರು ಥೀಸಸ್ಸನ್ನು ತಿದ್ದಿ ಅಂತಿಮ ಹಂತಕ್ಕೆ ತಂದು ನಂತರ ಅದನ್ನು [illegible] ನಿರ್ಧಾರಕ್ಕಾಗಿ ವಿಶ್ವವಿದ್ಯಾನಿಲಯದ ಡಿ. ಪ್ರೊ. ಕೇಶವ ಪಂಗನೆಯವರಿಗೆ ತೋರಿಸಲು ಸಲಹೆ ನೀಡಿದರು. ಡಾ. ಪಂಗನೆಯವರು ಈ ಥೀಸಿಸ್ [illegible] ಗಿಯವರ ಎಫ್. ಎಲ್. ಟಿ. ಸಾಹಿತ್ಯ ಏನಾಯಿತೆಂದು ಕೃಷ್ಣಮೂರ್ತಿಯವರಲ್ಲಿ ಪ್ರಶ್ನಿಸಿದರು. ಅಲ್ಲದೆ ಫಿಲೊಸಾಫಿ ಥೀಸಿಸ್ ಮೌಲ್ಯಮಾಪನಕ್ಕೆ ಸೂಕ್ತ ತಜ್ಞರು ಮೈಸೂರು ವಿಶ್ವವಿದ್ಯಾಲಯದಲ್ಲಿಲ್ಲವೆಂದು ಹೇಳಿ ಆ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸದೆ ಅಲ್ಲಿಗೆ ಕೈ ಬಿಟ್ಟರು. ನಂತರ ಕೃಷ್ಣಮೂರ್ತಿಯವರು ಇದೇ ಫಿಲೊಸಾಫಿ ಥೀಸಿಸ್ಸನ್ನು ಸ್ವತಂತ್ರವಾಗಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದರು. ಈ ಥೀಸಿಸ್‌ಗೆ ಡಾ. ಸಂಪತ್ ಕುಮಾರ್ ಅವರು ಮಾರ್ಗದರ್ಶಕರಾಗಿದ್ದರು. ಅನಂತರ ಅಮೇರಿಕದ ಪ್ರೊ. ರಿಯೋರ್ಡನ್ ಮತ್ತು ಪ್ರೊ. ಎಡ್ಗರ್ ಕಾರ್ಸ್ಟ್ ಹಾಗೂ ಭಾರತೀಯ ತಜ್ಞರಾದ ಪ್ರೊ. ಡಿ. ವಿ. ಜೈಸ್ವಾಲ್ ಮತ್ತು ಶ್ರೀಮತಿ ಮುತ್ತುಲಕ್ಷ್ಮಿ ಅಯ್ಯರ್ ಇವರುಗಳು ಥೀಸಿಸ್ಸನ್ನು ಮೌಲ್ಯಮಾಪನ ಮಾಡಬಹುದೆಂದು ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸೂಚಿಸಲಾಯಿತು. ಈ ಪೈಕಿ ಪ್ರೊ. ರಿಯೋರ್ಡನ್ ಮತ್ತು ಶ್ರೀಮತಿ ಮುತ್ತುಲಕ್ಷ್ಮಿ ಅಯ್ಯರ್ ಇವರುಗಳು ಥೀಸಿಸ್ಸಿನ ಮೌಲ್ಯಮಾಪನ ಮಾಡಿದರು.



ಭಾರತ, ಫ್ರಾನ್ಸ್, ಜರ್ಮನಿ, ಹಂಗೇರಿ, ಪೋಲೆಂಡ್, ಅಮೇರಿಕ, ಜಪಾನ್ ದೇಶಗಳ ಹಲವಾರು ತಜ್ಞರು ಈ ಬಗ್ಗೆ ಪರಿಶ್ರಮ ಪಟ್ಟಿದ್ದರೂ ಫಲ ಮಾತ್ರ ಸೊನ್ನೆ. ಭಾರತವನ್ನೊಳಗೊಂಡಂತೆ ಯಾವ ಅಭಿವೃದ್ಧಿಶೀಲ ದೇಶದ ಗಣಿತ ತಜ್ಞರಿಂದಲೂ ಈ ಸೂತ್ರಕ್ಕೆ ಉತ್ತರ ಸಿಗಲಾರದೆಂದು ಪಾಶ್ಚಿಮಾತ್ಯದೇಶಗಳ ಸಾಮಾನ್ಯ ನಿಲವು. ಏಕೆಂದರೆ ಅಭಿವೃದ್ಧಿಶೀಲ ದೇಶಗಳಲ್ಲಿ ಇಷ್ಟು ಅಗಾಧ ಪ್ರಮಾಣದಲ್ಲಿ ಗಣಿತಶಾಸ್ತ್ರ ಮುಂದುವರಿದಿರಲು ಸಾಧ್ಯವಿಲ್ಲ ಎಂಬುದು ಅವರ ಧೋರಣೆ.

ಆದರೆ ಫರ್ಮಾನ ಕೊನೆಯ ಸಿದ್ಧಾಂತಕ್ಕೆ ತಾವು ಸೂಚಿಸಿದ ಪರಿಹಾರ ಸರಿ ಎಂದು ಯಲವಿಗಿಯವರಿಗೆ ವಿಶ್ವಾಸವಿದೆ.

ಅಮೇರಿಕದ 'ಫಿಬೊನಾಸಿ' ಪತ್ರಿಕೆಯ ಸಂಪಾದಕರೂ, ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಪ್ರೊಫೆಸರರೂ ಆದ ವಿ. ಇ. ಹೊಗಾಟ್ ಜೂನಿಯರ್ ಅವರು ತಮ್ಮ ಮೊದಲಿನ ಪತ್ರವ್ಯವಹಾರಗಳಲ್ಲಿ ಯಲವಗಿಯವರ ಪರಿಹಾರಸೂತ್ರಗಳನ್ನು ಅಲ್ಲಗಳೆದರು. ಯಲವಗಿಯವರು ಹೇಳುವದನ್ನು ನಂಬಲು ಸಾಧ್ಯವಿಲ್ಲವೆಂದರು. ಒಂದು ವೇಳೆ ಯಲವಗಿಯವರು ಹೇಳುವದು ನಿಜವೇ ಆಗಿದ್ದರೆ ಅದು ಜಾಗತಿಕ ಪ್ರಸಿದ್ಧಿಯ ವಿಷಯವಾಗಬಹುದೆಂದೂ ಬರೆದರು. ಆದರೆ ಪ್ರೊ. ಹೊಗಾಟ್ ನಂಬಲು ಸಾಧ್ಯವಾಗುವಂತೆ ಯಲವಿಗಿಯವರು ಇತರ ವಿಷಯಗಳ ಮೇಲೆ ಐದು ಪ್ರಬಂಧಗಳನ್ನು 'ಫಿಬೊನಾಸಿ' ಪತ್ರಿಕೆಗೆ ಕಳುಹಿಸಿದರು. ಕೊನೆಯಲ್ಲಿ ಫರ್ಮಾನ ಕೊನೆಯ ಸಿದ್ಧಾಂತದ ಬಗೆಗೆ ತಮ್ಮ ಪರಿಹಾರವನ್ನು ಸೂಚಿಸಿ ಅವರು ೧೯೬೯ರಲ್ಲಿ ಅಮೇರಿಕದ 'ಫಿಬೊನಾಸಿ' ಪತ್ರಿಕೆಯ ಸಂಪಾದಕರಿಗೆ ಪ್ರಕಟಣೆಗಾಗಿ ಕಳುಹಿಸಿದರು. ಆಗ ಫಿಬೊನಾಸಿ ಪತ್ರಿಕೆಯವರು ಅದನ್ನು ಅವರ ತಜ್ಞರಿಗೆ ಮೌಲ್ಯಮಾಪನಕ್ಕಾಗಿ ಕಳಿಸಿದರು. ಆ ಮೌಲ್ಯಮಾಪನದ ಪ್ರಕಾರ ಎಲ್. ಟಿ. ಯಲವಗಿಯವರ ಎಫ್. ಎಲ್. ಟಿ. ಸಾಹಿತ್ಯವು ಎಫ್. ಸಿದ್ಧಾಂತದ ಪರಿಹಾರವನ್ನು ಕೊಡಬಹುದಾಗಿಯೂ ಆದರಲ್ಲಿ ಒಂದು ಸಂದಿಗ್ಧತೆ ಇದೆಯೆಂದೂ ಸೂಚಿಸಲಾಗಿತ್ತು. ಆ ಸಂದಿಗ್ಧತೆಯನ್ನು ಯಲವಗಿಯವರು ಬಗೆಹರಿಸಿದರು. ಅಲ್ಲದೆ ಬೇರೇನಾದರೂ ಸಂದಿಗ್ಧತೆಗಳಿವೆಯೇ ಎಂದು ಕೇಳಿದಾಗ ಫಿಬೊನಾಸಿ ಪತ್ರಿಕೆಯ ಸಂಪಾದಕರು ಈ ಸಾಹಿತ್ಯವನ್ನು ಪ್ರಕಟಿಸಲು ಮುಂಬರಲಿಲ್ಲ. ನಂತರ ಯಲವಗಿಯವರು ಈ ಸಾಹಿತ್ಯವನ್ನು ಫಿಬೊನಾಸಿ ಪತ್ರಿಕೆಯಿಂದ ಹಿಂತೆಗೆದುಕೊಂಡು ಭಾರತದ ಬಿಹಾರದ 'ಮ್ಯಾತಮ್ಯಾಟಿಕ್ಸ್ ಎಜುಕೇಶನ್' ಎಂಬ ಸಂಶೋಧನಾ ಪತ್ರಿಕೆಯಲ್ಲಿ ಪ್ರಕಟಿಸಿದರು. (೧೯೭೦, ಜೂನ್) ಈ ಸಾಹಿತ್ಯವನ್ನು ಅಮೇರಿಕದ ಅಕೆಡೆಮಿಯಿಂದ ಪ್ರಕಟವಾಗುವ 'ಮ್ಯಾತಮ್ಯಾಟಿಕ್ಸ್ ರಿವ್ಯೂಸ್' ಎಂಬ ವಿಮರ್ಶಾ ಪತ್ರಿಕೆ ನವೆಂಬರ್ ೧೯೭೦ರಲ್ಲಿ ವಿಮರ್ಶೆಯನ್ನು ಪ್ರಕಟಿಸಿತು. ಆ ವಿಮರ್ಶೆಯನ್ನು ಮಾಡಿದ ತಜ್ಞ ಇಂಗ್ಲೆಂಡಿನ ನಾಟಿಂಗ್‌ಹ್ಯಾಂ ವಿಶ್ವವಿದ್ಯಾಲಯದ ತಜ್ಞರಾದ ಪ್ರೊ. ಹೆಲ್ಬರ್‌ಸ್ಟ್ಯಾಂ ಅವರು ಆ ತಜ್ಞರು ಪ್ರಕಟಿಸಿದ ವಿಮರ್ಶೆ ಯಲವಗಿಯವರ ಎಫ್. ಎಲ್. ಟಿ. ಸಾಹಿತ್ಯವು ಎಫ್. ಎಲ್. ಟಿ. ಸಿದ್ಧಾಂತದ ಪರಿಹಾರವನ್ನು ಕೊಡುವದೊ ಇಲ್ಲವೊ ಎಂಬುದನ್ನು ನಿರ್ಧಾರವಾಗಿ ಹೇಳುವುದಿಲ್ಲ.

ಜರ್ಮನಿಯ ಬರ್ಲಿನ್ ಅಕ್ಯಾಡಮಿಯ "ತೆಂತ್ರಲ್‌ಬ್ಲಾತ್ ಫ್ಯೂರ್ ಮ್ಯಾತೆಮ್ಯಾಟಿಕ್" (Zentralbladtt Fur Mathematik) ಎಂಬ ಪತ್ರಿಕೆಯು ಜಾಗತಿಕ ಸಮೀಕ್ಷಕರಾಗಿ ಗೌರವ ಸ್ಥಾನ ಯಲವಗಿಯವರಿಗೆ ೧೯೭೦ರಲ್ಲಿ ದೊರೆಯಿತು. ಅದೇ ವರ್ಷದ ಜೂನ್ ತಿಂಗಳಲ್ಲಿ ಬಿಹಾರದ ಗಣಿತ ಪತ್ರಿಕೆಯಲ್ಲಿ ಇವರ ಎಫ್. ಎಲ್. ಟಿ. ಸಾಹಿತ್ಯ ಪ್ರಕಟಗೊಳ್ಳಲು ತಯಾರಿ ನಡೆಯುತ್ತಿದ್ದಾಗ ಬರ್ಲಿನ್ನಿನ ಈ ಪತ್ರಿಕೆಯ ಸಮೀಕ್ಷಕರಾಗಿರಲೂ ಯಲವಗಿ ಅವರಿಗೆ ಕೋರಿಕೆ ಬಂತು. ಆದರೆ ಆ ಪತ್ರಿಕೆಯವರು ಇವರ ಎಫ್. ಎಲ್. ಟಿ. ಸಾಹಿತ್ಯವನ್ನು ಪ್ರಕಟಿಸುವುದಾಗಿ ೧೯೭೦ರಲ್ಲಿ ಒಪ್ಪಿ ಇವರಿಗೆ ತಿಳಿಸಿದ್ದರೂ ಇದುವರೆಗೆ ಪ್ರಕಟಿಸಿಲ್ಲ. ಆದರೆ ಆಶ್ಚರ್ಯವೆಂದರೆ ಸ್ವತಃ ಯಲವಗಿಯವರೆ ರಚಿಸಿದ ಗಣಿತ ಸಾಹಿತ್ಯವನ್ನೂ ಒಳಗೊಂಡಂತೆ ಗಣಿತಶಾಸ್ತ್ರದ ಯಾವುದೇ

ವಿಭಾಗವನ್ನು ಯಲವಗಿ ಅವರು ವಿಮರ್ಶೆ ಮಾಡಬಹುದೆಂಬ ಸ್ವಾತಂತ್ರ್ಯವನ್ನು ಬರ್ಲಿನ್ ಅಕಾಡೆಮಿ ಯಲವಗಿ ಅವರಿಗೆ ನೀಡಿತ್ತು. ಆದರೆ ಸಂಕೋಚಶೀಲರಾದ ಯಲವಗಿಯವರು ಸ್ವತಃ ತಮ್ಮ ಸಾಹಿತ್ಯವನ್ನು ವಿಮರ್ಶೆ ಮಾಡುವ ಗೋಜಿಗೆ ಹೋಗಲಿಲ್ಲ.

ಈ ಮಧ್ಯೆ ಮೈಸೂರು ವಿಶ್ವವಿದ್ಯಾನಿಲಯದ ಮಿತ್ರರೊಬ್ಬರು ಯಲವಗಿಯವರ ಎಫ್.ಎಲ್.ಟಿ. ಸಾಹಿತ್ಯವನ್ನು ನೋಡಬಯಸಿ ತರಿಸಿಕೊಂಡು ಗಣಿತಶಾಸ್ತ್ರಬಲ್ಲ ತಮ್ಮ ಮಿತ್ರರಿಗೆ ತೋರಿಸಿ ಇದು 'ತಥ್ಯವಿಲ್ಲದ ಸಾಹಿತ್ಯ'ವೆಂಬ ಅಭಿಪ್ರಾಯದೊಂದಿಗೆ ಮರಳಿ ಕಳಿಸಿಕೊಟ್ಟರು.

ಆದರೆ ಜಿಹಾರದಲ್ಲಿ ಪ್ರಕಟವಾದ ಈ ಪ್ರಬಂಧವನ್ನು ಕುರಿತು ಗಣಿತಶಾಸ್ತ್ರಕ್ಕೆ ಮೀಸಲಾದ ಕೆಲವು ಅಮೇರಿಕದ ಪತ್ರಿಕೆಗಳಲ್ಲಿ ವಿಮರ್ಶೆಗಳು ಬಂದುದಲ್ಲದೆ ಬ್ರಿಟನ್ನಿನ ನಾಟಿಂಗ್‌ಹಾಂ ವಿಶ್ವವಿದ್ಯಾಲಯದ ಪ್ರೊ. ಹಲ್ಬರ್‌ಸ್ಟ್ಯಾಂ ಅವರ ವಿಮರ್ಶೆಯನ್ನು ಅಮೇರಿಕದ ಗಣಿತ ಪತ್ರಿಕೆಯೊಂದರಲ್ಲಿ ೧೯೭೦ರಲ್ಲಿ ಪ್ರಕಟಿಸಲಾಯಿತು. ದುರ್ದೈವದಿಂದ ಇಂದಿಗೂ ಯಾವೊಬ್ಬ ಭಾರತೀಯನೂ ಯಲವಗಿಯವರ ಸಾಹಿತ್ಯವನ್ನು ವಿಮರ್ಶಿಸಿಲ್ಲ.

ಯಲವಗಿ ಅವರು ಸಂಶೋಧನೆ ಪ್ರಾರಂಭಿಸಿದುದಿನಿಂದ ಮಾರ್ಚ್ ೧೯೭೭ರ ತನಕ ಪ್ರಕಟಿಸಿರುವ ಗಣಿತಶಾಸ್ತ್ರ ಕುರಿತು ಮೌಲಿಕ ಪ್ರಬಂಧಗಳು ಮೂವತ್ತಾರು. ಟೂರ್ನಮೆಂಟ್ ಪ್ರಾಬ್ಲಮ್, ಬ್ಲಾಕ್ ಡಿಸೈನ್ಸ್ ಮಿಕ್ಸೆಡ್ ಡಬಲ್ ಟೂರ್ನಮೆಂಟ್ ಕಾಂಪ್ಲೆಕ್ಸ್, ಫಿಬೊನಾಸಿ ಸಿರೀಸ್, ಮಾಡ್ಯುಲೊ ಮುಂತಾದಾಗಿ ಪ್ರಬಂಧಗಳು ಅಮೇರಿಕ, ಜರ್ಮನಿ, ಮುಂತಾದೆಡೆಗಳ ಗಣಿತ ಶಾಸ್ತ್ರದ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಮಾರ್ಚ್ ೧೯೭೭ರ ತನಕ ಯಲವಗಿ ಅವರು ಬರ್ಲಿನ್ ಮತ್ತು ಹೈಡೆಲ್‌ಬರ್ಗ್ ಅಕಾಡೆಮಿಗಳ ಮಾನ್ಯತೆ ಪಡೆದು ಸಮೀಕ್ಷೆ ನಡೆಸಿರುವ ಗಣಿತ ಪ್ರಬಂಧಗಳ ಸಂಖ್ಯೆ ಐವತ್ತನ್ನೂ ಮೀರಿದೆ. ಈ ಸಮೀಕ್ಷೆಗಳಲ್ಲಿ ತ್ಸೆಂಟ್ರಲ್ ಬ್ಲಾತ್ ಪತ್ರಿಕೆಯಲ್ಲಿ ಪ್ರಕಟಗೊಂಡಿವೆ. ಸಮೀಕ್ಷೆಗೆ ಬ್ರಿಟನ್, ಕೆನಡಾ, ಅಮೇರಿಕ, ಇಸ್ರೇಲ್, ಜರ್ಮನಿ, ಹಂಗೇರಿ, ಪೋಲಂಡ್, ರಶಿಯ, ಜಪಾನ್, ಹಾಗೂ ಭಾರತಗಳಿಂದ ಸಾಹಿತ್ಯಗಳು ದೊರೆತಿವೆ.

ಯಲವಗಿಯವರು ಎಂ.ಎಸ್‌ಸಿ. ಪರೀಕ್ಷೆಗೆ ಕುಳಿತಾಗ (೧೯೫೭) ಕಾಂಬಿನೇಟ್ರಿಕ್ಸ್, ನಂಬರ್ ಥಿಯರಿ ಮತ್ತು ಗೇಮ್ ಥಿಯರಿ ಇವುಗಳನ್ನು ತೆಗೆದುಕೊಳ್ಳುವ ಸೌಕರ್ಯ ಇರಲಿಲ್ಲ. ಈ ವಿಷಯಗಳನ್ನು ಪ್ರಾರಂಭಿಕ ಹಂತದಲ್ಲಿ ಕಲಿಸಬೇಕಾದರೂ ಸಹ ಇವರಿಗೆ ಈ ವಿಷಯಗಳನ್ನು ಎಂ.ಎಸ್‌ಸಿ. ಯಲ್ಲಿ ತೆಗೆದುಕೊಳ್ಳದೇ ಇರುವುದು ವಿಶ್ವವಿದ್ಯಾನಿಲಯದ ನಿಯಮಗಳ ಪ್ರಕಾರ ಆತಂಕವೊಡ್ಡಿತು. ಜಾಗತಿಕ ದೃಷ್ಟಿಯಲ್ಲಿ ಈ ವಿಷಯಗಳು ಮುಂದುವರಿದಿದ್ದು ಆ ಮೂರು ಪದವಿಕೆಯ ಹಂತಕ್ಕೆ ವಿಶ್ವವಿದ್ಯಾನಿಲಯಗಳ ಪತ್ರಗಳು ಇನ್ನೂ ರಚಿತವಾಗಿಲ್ಲ. ಈ ಮೂರು ವಿಷಯಗಳಲ್ಲಿ ವಿಶ್ವವಿದ್ಯಾನಿಲಯಗಳು ಇವರು ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದಾರೆಂಬುದನ್ನು ಒಪ್ಪದೇ ಇವರು ಈ ಮೂರು ವಿಷಯಗಳನ್ನು ವಿಶ್ವವಿದ್ಯಾನಿಲಯಗಳ ಯಾವ ಹಂತದಲ್ಲೂ ಬಳಸಲಾರದಂತಾಗಿದೆ. ಪರಿಣಾಮವಾಗಿ ಗಣಿತಶಾಸ್ತ್ರದಲ್ಲಿ ಜಾಗತಿಕ ಮಾನ್ಯತೆ ಪಡೆದಿದ್ದರೂ ಯಲವಗಿ ಅವರು ಇಂದಿಗೂ ಪ್ರೀ ಯೂನಿವರ್ಸಿಟಿ ತರಗತಿಗಳಿಗೂ ಗಣಿತ ಹೇಳಿ ಕೊಡಲು 'ಅರ್ಹತೆ' ಗಳಿಸಿಲ್ಲದಂತಾಗಿದೆ. ಎಂಥ ವಿಧಿ ವಿಪರ್ಯಾಸ!

೧೯೭೩–೭೪ರಲ್ಲಿ ಯಲವಗಿ ಅವರು ಏಕಕಾಲದಲ್ಲಿ ಐದು ಅಂತಾರಾಷ್ಟ್ರೀಯ ಗಣಿತ ಸಂಸ್ಥೆಗಳ ಸದಸ್ಯರಾಗಿದ್ದರು. ಅಮೇರಿಕನ್ ಮೆತೆಮ್ಯಾಟಿಕಲ್ ಸೊಸೈಟಿ, ಸೊಸೈಟಿ ಆಫ್ ಇಂಡಸ್ಟ್ರಿಯಲ್ ಎಂಡ್ ಅಪ್ಲೈಡ್ ಮ್ಯಾತ್ಸ್, ಫಿಬೊನಾಸಿ ಕ್ವಾರ್ಟರ್ಲಿ, ಜರ್ನಲ್ ಆಫ್ ನಂಬರ್ ಥಿಯರಿ (ಇವೆಲ್ಲವೂ ಅಮೇರಿಕನ್ ಸಂಸ್ಥೆಗಳು); ಹಾಗೂ ಭಾರತದ ಇಂಡಿಯನ್ ಮ್ಯಾತೆಮ್ಯಾಟಿಕಲ್ ಸೊಸೈಟಿ– ಇವೇ ಆ ಐದು ಅಂತಾರಾಷ್ಟ್ರೀಯ ಸಂಸ್ಥೆಗಳು.

ಯಲವಗಿಯವರು ತಮಗೆ ಸಾಕಷ್ಟು ಪರಿಚಿತರಿರುವ ಈ ನಾಡಿನಲ್ಲಿ ಒಂದು ರೀತಿಯಲ್ಲಿ ಅಪರಿಚಿತರಾಗಿಯೆ ಉಳಿದಿದ್ದಾರೆ. ✡

ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. ಚರಿತಾರ್ಥ

(ಅ) ಊಟ (ಆ) ಕಾರ್ಯಸಿದ್ಧಿ (ಇ) ಹಣ ಸಂಪಾದನೆ (ಈ) ಓಡಾಟ

೨. ಉಪಲಬ್ಧಿ

(ಅ) ಲಂಚ (ಆ) ಕಲ್ಪಿಸ ಕೆಲಸ (ಇ) ದೊರಕಿಸಿಕೊಳ್ಳುವಿಕೆ (ಈ) ಸಾಪಕಾಶತನ

೩. ಒದವಿ

(ಅ) ಕೊಡುಗೆ (ಆ) ಪೆಟ್ಟು (ಇ) ನನೆದ ಬಟ್ಟೆ (ಈ) ಸೊತ್ತು

೪. ಜನ್ಯ

(ಅ) ತಂದೆ (ಆ) ಬೇರೊಂದರಿಂದ ಹುಟ್ಟುವ (ಇ) ಗಂಡ (ಈ) ಜನರಿಂದ ತುಂಬಿದ

೫. ಅರ್ಥಾಪತ್ತಿ

(ಅ) ಊಹೆ (ಆ) ಪ್ರಯೋಜನವಿಲ್ಲದ್ದು (ಇ) ನಷ್ಟ (ಈ) ಲಾಭ

೬. ಕುಮುಟು

(ಅ) ದುರ್ವಾಸನೆ (ಆ) ಸುಟ್ಟು ಹೋದದ್ದು (ಇ) ಬೇಯು (ಈ) ಬೆಚ್ಚಿಬೀಳು

೭. ನಿವರ್ತನ

(ಅ) ಸುಧಾರಿಸುವಿಕೆ (ಆ) ಹಿಂದಿರುಗುವಿಕೆ (ಇ) ಸಾಗಹಾಕೋಣ (ಈ) ತಪ್ಪಿಸುವಿಕೆ

೮. ಉತ್ಸಾರಣ

(ಅ) ಸೋದಿಸುವುದು (ಆ) ಉಂಟು ಮಾಡುವಿಕೆ (ಇ) ದೂರ ಮಾಡುವುದು (ಈ) ಬೀಳುವಿಕೆ

೯. ಪಾಡಳಿ

(ಅ) ದೇವರ ಸೇವೆಯುವನು (ಆ) ಅಪಸ್ವರ (ಇ) ಅಂದ ಕೆಡು (ಈ) ಕೈಒಳಿ

೧೦. ಪ್ರತ್ಯಾಸತ್ತಿ

(ಅ) ವಿರೋಧ (ಆ) ತೀರ ಹತ್ತಿರ (ಇ) ಇಚ್ಛೆಯಿಲ್ಲದಿರುವಿಕೆ (ಈ) ಅಭಾವ

೧೧. ಉಪಸತ್ತಿ

(ಅ) ಕೂಡಿರುವಿಕೆ (ಆ) ನೆರಮನೆ (ಇ) ನೋವು (ಈ) ಹೊಯ್ಯುವಿಕೆ

೧೨. ಮುಂಬಿಸಿಲು

(ಅ) ಮುಖಕ್ಕೆ ಹೊಡೆಯುವ ಬಿಸಿಲು (ಆ) ತೀವ್ರವಾದ ಬಿಸಿಲು (ಇ) ಸಂಜೆ ಬಿಸಿಲು (ಈ) ಬೆಳಗಿನ ಬಿಸಿಲು

‘ಶಬ್ದ ಭಾಂಡಾರ’ದ ಸರಿಯಾದ ಅರ್ಥಗಳು

೧. **ಚರಿತಾರ್ಥ** (ಅ) ಕಾರ್ಯಸಿದ್ಧಿ; ಕಾರ್ಯ ಸಾಧಿಸುವುದರಲ್ಲಿ ಯಶಸ್ವಿಯಾದವ, ಕೃತಾರ್ಥ; ಬದುಕು. ಉದಾ:— ಕೈಕೊಂಡದ್ದರಲ್ಲಿ ಚರಿತಾರ್ಥನಾದ [ಸಂ. ಚರಿತ = ನಡೆಸಿದ, ಪೂರೈಸಿದ, + ಅರ್ಥ = ಉದ್ದೇಶ.]

೨. **ಉಪಲಬ್ಧಿ** (ಇ) ದೊರಕಿಸಿಕೊಳ್ಳುವಿಕೆ; ಪ್ರಾಪ್ತಿ; ಆದಾಯ; (ತತ್ವಜ್ಞಾನದಲ್ಲಿ) ತಿಳಿವಳಿಕೆ, ಜ್ಞಾನ, ಉದಾ:— ಈ ಕೆಲಸದಲ್ಲಿ ಇಷ್ಟೇ ಉಪಲಬ್ಧಿ. [ಸಂ. ಉಪ = ಸಮೀಪ; ಲಬ್ಧಿ = ಪಡೆಯುವಿಕೆ.]

೩. **ಒದವಿ** (ಅ) ಕೊಡುಗೆ, ದಾನ. ಉದಾ:— ವಿದ್ಯೆಯ ಒದವಿ ದೊರೆಯಿತು. [ದೇಶ್ಯ...ಒದವು = ದೊರೆ.]

೪. **ಜನ್ಯ** (ಅ) ಬೇರೊಂದರಿಂದ ಹುಟ್ಟುವ. ಉದಾ:— ಲೋಭಜನ್ಯವಾದ ಅಪರಾಧ, [ಸಂ. ಜನ್ = ಹುಟ್ಟು ಎಂಬುದರಿಂದ]

೫. **ಅರ್ಥಾಪತ್ತಿ** (ಅ) ಊಹೆ, ಅರ್ಥ ಕಟ್ಟುವುದು. ಉದಾ:— ಹಗಲುಣ್ಣದೆಯೂ ದಪ್ಪಗೆ ಇದ್ದಾನೆ ಅಂದರೆ ರಾತ್ರಿ ಉಣ್ಣುತ್ತಾನೆಂದೇ ಅರ್ಥಾಪತ್ತಿ. [ಸಂ. ಅರ್ಥ + ಆಪತ್ತಿ = ಆಲೋಚಿಸುವುದು.]

೬. **ಕುಮುಟು** (ಈ) ಬೆಚ್ಚಿಬೀಳು (ನಿದ್ರೆಯಲ್ಲಿ; ಹೆದರಿಕೆಯಿಂದ ನಡುಗು. ಕಳ್ಳನನ್ನು ಕಂಡು ಕುಮುಟಿದ. [ದೇಶ್ಯ]

೭. **ನಿವರ್ತನ** (ಅ) ಹಿಂದಿರುಗುವಿಕೆ; ಪೂರೈಸುವಿಕೆ, ಮುಗಿಸುವಿಕೆ. ಉದಾ:— ಸ್ವಪ್ನಗಳ ನಿವರ್ತನ; ಉದ್ದೇಶದ ನಿವರ್ತನ. [ಸಂ. ನಿ = ಹಿಂದೆ, ವರ್ತನ = ತಿರುಗುವಿಕೆ.]

೮. **ಉತ್ಸಾರಣ** (ಇ) ದೂರ ಮಾಡುವುದು, ದೂರ ಇಡುವುದು, ಅತ್ತ ಬಂದದ್ದನ್ನು ನಿವಾರಿಸುವುದು. ಉದಾ:— ವಿಘ್ನಗಳ ಉತ್ಸಾರಣ. [ಸಂ. ಉತ್ = ಮೇಲೆ, ಸಾರಣ = ಸರಿಸುವುದು.]

೯. **ಪಾಡಳಿ** (ಅ) ಅಂದಗೆಡು, ರೂಪುಗೆಡು; ಹದಗೆಡು, ಸ್ಥಿತಿಗೇಡು. ಉದಾ:— ಪಾಡಳಿದ ಚಿತ್ರ. [ಕನ್ನಡ, ಪಾಡು = ಸ್ಥಿತಿ, ಅಳಿ = ಹಾಳಾಗು.]

೧೦. **ಪ್ರತ್ಯಾಸತ್ತಿ** (ಅ) ತೀರ ಹತ್ತಿರ ಇರುವುದು, ತಗಲಿರುವುದು; ಹತ್ತಿರದ ಸಂಪರ್ಕ. ಉದಾ:— ಎರಡು ಘಟನೆಗಳ ಪ್ರತ್ಯಾಸತ್ತಿ [ಸಂ. ಪ್ರತಿ = ಎದುರು, + ಆ=ಹತ್ತಿರ + ಸತ್ತಿ = ಕೂಡಿರುವಿಕೆ.]

೧೧. **ಉಪಸತ್ತಿ** (ಇ) ಕೂಡಿರುವಿಕೆ, ಜೋಡಣೆ; ಸೇವೆ; ದಾನ. ಉದಾ:— ಎರಡು ಪ್ರಶ್ನೆಗಳಿಗೆ ಉಪಸತ್ತಿ ಇಲ್ಲ. [ಸಂ. ಉಪ = ಸಮೀಪ, ಸತ್ತಿ = ಇರುವಿಕೆ.]

೧೨. **ಮುಂಬಿಸಿಲು** (ಈ) ಬೆಳಗಿನ ಬಿಸಿಲು, ಎಳೆ ಬಿಸಿಲು. ಉದಾ.— ಮುಂಬಿಸಿಲಲ್ಲಿ ಚಳಿ ಕಾಯಿಸುತ್ತಿದ್ದ. [ಕನ್ನಡ, ಮುನ್ = ಎದುರು, + ಬಿಸಿಲು.]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮	ಸರಿಯಿದ್ದರೆ	... ಸಾಧಾರಣ
೯—೧೦	”	... ಉತ್ತಮ
೧೧—೧೨	”	... ಅತ್ಯುತ್ತಮ

ಪ್ರಾಚೀನ ಭಾರತದಲ್ಲಿ ವಕೀಲರಿದ್ದರೆ ?

ಬಾಲಕೃಷ್ಣ

ತುಂಬ ಕುತೂಹಲಕಾರೀ ಪ್ರಶ್ನೆ ಅಲ್ಲವೇ? ವಕಾಲತ್ತು ನಡೆಯಿಸುವ ಪದ್ಧತಿ, ಎಲ್ಲಿ, ಎಂದು ಪ್ರಾರಂಭವಾಯಿತು ಯಾರಿಗೂ ಗೊತ್ತಿಲ್ಲ. ನಮ್ಮ ಹಿಂದಿನ ಸ್ಮೃತಿಕಾರರಾದರೂ ವಕಾಲತ್ತು ಇಂದಿನ ಅಡ್ವೊಕೇಟ್ ಸಾಲಿಸಿಟರುಗಳಂತೆ ಅದು ಉದ್ಯೋಗವಾಗಿತ್ತು, ಹಾಗೂ ಈ ದಂಧೆ, ಸರಕಾರ (ಅಂದಿನ ರಾಜಶಾಸನ)ದಿಂದ ನಿಯಂತ್ರಿಸಲ್ಪಟ್ಟಿತ್ತು, ಎಂಬ ಬಗ್ಗೆಯಾದರೂ ಉದಾಹರಿಸಿಲ್ಲ. ಆದರೂ 'ಸ್ಮೃತಿ'ಯ ಅನುಶಾಸನಗಳಲ್ಲಿ ಪಾರಂಗತರಾದವರು ಹಾಗು ನ್ಯಾಯಶಾಸನ ಪದ್ಧತಿಯನ್ನು ಅರಿತವರು ಇನ್ನೊಬ್ಬರಿಂದ ಅವರ ವಾದಗಳನ್ನು ಮಂಡಿಸಲು ನೇಮಿಸಲ್ಪಟ್ಟು 'ನಿಯುಕ್ತಾ' ಎಂದು ಕರೆಯಿಸಿಕೊಳ್ಳುತ್ತಿದ್ದ ಉದಾಹರಣೆಗಳಿವೆ.

ನ್ಯಾಯದಾನ ಪದ್ಧತಿ*ಯ ವಿಧಿ–ವಿಧಾನಗಳು ನಾರದಸ್ಮೃತಿಯಲ್ಲಿ ಬೃಹಸ್ಪತಿಸ್ಮೃತಿಯಲ್ಲಿ ಹಾಗೂ ಕಾತ್ಯಾಯನಸ್ಮೃತಿಯಲ್ಲಿ ವಿವರಿಸಲ್ಪಟ್ಟಂತೆ ತುಂಬ ಕ್ಲಿಷ್ಟಕರವಾಗಿದ್ದು ತೀರ ಪರಿಣತರಾದವರು ಮಾತ್ರ ನ್ಯಾಯಸ್ಥಾನದ ಬಾಗಿಲು ತಟ್ಟಬಹುದಿತ್ತು. ಕಲ್ಯಾಣ ಭಟ್ಟನು ನಾರದಸ್ಮೃತಿಯ 'ಅಸಹಾಯ' ಅಧ್ಯಾಯದಲ್ಲಿ ಸಂಕಲಿಸಿದ ಟೀಕೆಗಳಲ್ಲೊಂದು ಉದಾಹರಣಾರ್ಥ ಕಥೆ ಬರುತ್ತದೆ. ಸ್ಮೃತಿಗಳಲ್ಲಿ ಪಾರಂಗತರಾದವರು, ನ್ಯಾಯಸ್ಥಾನದೆದುರು ವಾದ ಪ್ರತಿವಾದಗಳನ್ನು ಆಯಾ ಪಕ್ಷದವರ ಪರವಾಗಿ ಮಂಡಿಸಲು ಸಂಭಾವನೆ ಪಡೆಯುತ್ತಿದ್ದರು ಎಂಬ ವಿಷಯ ಈ ಕಥೆಯಲ್ಲಿ ಬರುತ್ತದೆ. ನಾನು ಪಕ್ಷಗಾರ ಕುಟುಂಬದ ತುಂಬ ಹಳೆಯ ಮಿತ್ರನಿದ್ದು ಆ ನಾತೆಯಿಂದ ಅವರ ಸಹಾಯ ಮಾಡುವ ಬಗ್ಗೆ ನೇಮಿಸಲ್ಪಟ್ಟಿದ್ದೇನೆಂದು ಮುಂದೆ ಬರುವ ಸಂದರ್ಭಗಳೂ ಇಲ್ಲದಿರಲಿಲ್ಲ. ಇದು ಸ್ಥೂಲವಾಗಿ, Civil Procedure Code, Order III r 2 (Act V of 1908) ದ ಪ್ರಕಾರ Recognised Agent, ಅಂದರೆ "ಅಧಿಕೃತ ಪ್ರತಿನಿಧಿ" ವ್ಯಾಖ್ಯೆಗೆ ಸರಿಸಮಾನವಾಗಿದೆ.

ಶುಕ್ರನೀತಿಸಾರದ ೪ನೇ ಅಧ್ಯಾಯದಲ್ಲಿ ಈ ಬಗ್ಗೆ ಕೆಲವು ಪ್ರಮುಖ ನಿಯಮಗಳನ್ನೂ ಹೇಳಲಾಗಿದೆ. ಕಕ್ಷಿಗಾರನೊಬ್ಬನನ್ನು ಪ್ರತಿನಿಧಿಸು

* History of Dharmashastra by P. V. Kane, Vol. III

ವಾದಿಯು (ವಾದಿ?) ತನ್ನ ಸಂಭಾವನೆಯಿಂದು ನಿರ್ದಿಷ್ಟ ಮೊಬಲಗನ್ನು ಮಾತ್ರ ಪಡೆಯ ತಕ್ಕದ್ದು. ಅದು ವಿವಾದಕ್ಕೊಳಪಟ್ಟ ಮೊತ್ತದ ೧/೧೦. ೧/೨೦. ೧/೪೦, ೧/೮೦, ಅಥವಾ ೧/೧೬೦ ದಂತೆ. ವಿವಾದದ ಮೊಬಲಗು ಹೆಚ್ಚಾದಂತೆ ಸಂಭಾವನೆಯ ಪ್ರಮಾಣ ಕಡಿಮೆಯಾಗುವ ಪ್ರಮಾಣದಂತೆ ಇರತಕ್ಕದ್ದು ಎಂದೂ, ಹಲವಾರು ಜನ ಕಕ್ಷಿಗಾರರು ಸೇರಿ ಒಬ್ಬನ ಮೂಲಕವೇ ಪ್ರತಿನಿಧಿಸಲ್ಪಟ್ಟಾಗ ಕೂಡ ಸಂಭಾವನೆಯ ಪ್ರಮಾಣ ಕಡಿಮೆಯಾಗುವ ರೀತಿಯಲ್ಲಿ ವಿಧಿಸಲ್ಪಟ್ಟಿದೆ. ಧರ್ಮಶಾಸ್ತ್ರದಲ್ಲಿ ಪಾರಂಗತನಾದವನು ಹಾಗೂ ನ್ಯಾಯಶಾಸ್ತ್ರದ ವಿಧಿ-ವಿಧಾನಗಳನ್ನು ಚೆನ್ನಾಗಿ ಅರಿತವನಲ್ಲದೇ ಇನ್ನುಳಿದವರು ಹೀಗೆ ಪ್ರತಿನಿಧಿಸಲು ಅನರ್ಹರು ಎಂದು ಕೂಡ ಹೇಳಲಾಗಿದೆ; ಮತ್ತು ಇಂಥ ಪಾಂಡಿತ್ಯ-ಪಾರಂಗತ ಇಲ್ಲದೇ ಸಂಭಾವನೆ ಸ್ವೀಕರಿಸಿದವನನ್ನು ದಂಡಿಸುವ ಅಧಿಕಾರ ರಾಜನಿಗೆ ಇತ್ತು. ಆದಾಗ್ಯೂ ರಾಜನಿಗೆ ಕಕ್ಷಿಗಾರನಿಗಾಗಿ ಒಬ್ಬ ಪ್ರತಿನಿಧಿಯನ್ನು ನೇಮಿಸುವ ಅಧಿಕಾರವಿಲ್ಲ. ವಕೀಲನನ್ನು ಆಯ್ದುಕೊಳ್ಳುವ ಅಧಿಕಾರ ಕಕ್ಷಿಗಾರನಿಗೇ ಇದ್ದಿತು. ಅಲ್ಲಿಗೂ ಅಂಥ ಪ್ರತಿನಿಧಿಯೊಬ್ಬನು ದುರಾಸೆಗೆ ಬಿದ್ದು ತನ್ನ ಕಕ್ಷಿಗಾರನು ಸೋಲುವಂತೆ ರಾಜನು ಅವನಿಗೆ (ವಕೀಲನಿಗೆ) ದಂಡ ವಿಧಿಸಬಹುದಿತ್ತು!

ಮ್ಯಾಕ್ಸ್‌ಮುಲ್ಲರರು ಸಂಗ್ರಹಿಸಿದ, 'ಪೌರ್ವಾತ್ಯ ದೇಶಗಳ ಗ್ರಂಥಗಳು' ಮಾಲಿಕೆಯ ೩೬ನೆಯ ಗ್ರಂಥದಲ್ಲಿ 'ಮಿಳಿಂದರ ಪ್ರಶ್ನೆಗಳು' ಎಂಬಲ್ಲಿ "ಧಮ್ಮನಗರ'(ಧರ್ಮನಗರ)ದ ಕೆಲವು 'ಭಿಕ್ಷುಗಳ' ಬಗ್ಗೆ ಪ್ರಸ್ತಾಪ ಬರುತ್ತದೆ. ಅವರನ್ನು 'ಧರ್ಮ ವಕೀಲರು' ಹಾಗೂ 'ಧರ್ಮಪ್ರವರ್ತಕರು'(?) ಎಂದು ಕರೆದು ಈ ರೀತಿ ವರ್ಣಿಸಲಾಗಿದೆ:

"ಓ ರಾಜನೇ, ಆ ಕೃಪಾಛತ್ರದಡಿಯ ಈ ಧರ್ಮನಗರದ ನಿವಾಸಿಗಳಲ್ಲಿ ವಕೀಲರು ಯಾರೆಂದರೆ, ಯಾವ ಭಿಕ್ಷುಗಳು ಆ ಬುದ್ಧದೇವನ ಒಂಭತ್ತು ಮಡಿ (ಪಟ್ಟು?) ಶಬ್ದಗಳನ್ನು ಅವುಗಳ ಭಾವಾರ್ಥ ಮನನಮಾಡುತ್ತ ಸೂತ್ರ, ವಾದ-ವಿವಾದಗಳೊಂದಿಗೆ, ತರ್ಕಬದ್ಧ ಉದಾಹರಣೆಗಳನ್ನು ಕೂಡ ಕಲಿಸಲು ಹಾಗೂ ಪುನರುಚ್ಚರಿಸಲು ಮತ್ತು ನೆನಪಿಡಲು ಸಮರ್ಥರೋ ಅವರು ಮಾತ್ರ."

ಇದೇ ಹೊತ್ತಿಗೆಯಲ್ಲಿ ಮುಂದೆ 'ಧರ್ಮ ಶ್ರೇಷ್ಠಿಗಳು' (Bankers of Dharma) ಎಂಬುದು ಶೂದ್ರಕನ 'ಮೃಚ್ಛಕಟಿಕ' ನಾಟಕದಲ್ಲಿ ಬರುವ 'ಶ್ರೇಷ್ಠಿನ್' ಶಬ್ದವನ್ನು ನೆನಪಿಗೆ ತರುವಂತಿದೆ.

'ಶುಕ್ರನೀತಿಸಾರ'ದಲ್ಲಿ ಹೇಳಲಾದ ನಿಯಮಗಳು ಇಂದಿನ 'ಬಾರ್ ಅಸೋಸಿಯೇಶನ್' ನಿಯಮಗಳಿಗೆ ಸಮಾನಾರ್ಥಕವಾಗಿವೆ. ಮತ್ತು ಅದರಲ್ಲಿ ಈ ಮೊದಲೇ ಹೇಳಿದ ವಕೀಲರ ಸಂಭಾವನೆಯ ಪ್ರಮಾಣವು Bombay Regulation II of 1827 ಹಾಗೂ Schedule III to the Bombay Pleaders' Act (Bombay Act XVII of) 1920) ಇವುಗಳಲ್ಲಿ ನಿರ್ದೇಶಿಸಿದ ಪ್ರಮಾಣಕ್ಕೆ ಹೆಚ್ಚು ಕಡಿಮೆ ಸಮೀಪವಾಗಿಯೇ ಇದೆ.

ಕ್ರಿ.ಶ. ೧೭೯೩ನೇ ಇಸ್ವಿಯಲ್ಲಿ ಅಂದಿನ ಬ್ರಿಟಿಶ್ ಸರಕಾರ Bengal Regulation VII of 1793ರ ಮೂಲಕ ಜಾರಿಯಲ್ಲಿ ತಂದ ಕಟ್ಟಳೆಯೇ ವಕೀಲರು ಕಕ್ಷಿಗಾರರನ್ನು ಪ್ರತಿನಿಧಿಸುವಲ್ಲಿ ಪಾಲಿಸತಕ್ಕ ನಿಯಮಗಳ ಮೊದಲನೇ ಶಾಸನ. ಈ ಕಟ್ಟಳೆ 'ವಕೀಲ' ಶಬ್ದವನ್ನು (ಮೂಲದ Agent-ಪ್ರತಿನಿಧಿ) ವರ್ಣಿಸಿದ್ದು ಮಾತ್ರವಲ್ಲ. ಅವರ ಹಕ್ಕು ಬಾಧ್ಯತೆಗಳ ಬಗ್ಗೆ ಒಂದು ವ್ಯಾಖ್ಯೆಯನ್ನೂ ಕೊಡ ಕೊಟ್ಟಿತು. ಹಾಗೂ ಅವರು ಪಡೆಯಬಹುದಾದ ಸಂಭಾವನೆ ರುಸುಮನ್ನು (ಮೊದಲನೇ ರೂ. ೧,೦೦೦/-ದ ವರೆಗೆ ಪ್ರತಿಶತ ೫ ರಂತೆಯೂ, ಅನಂತರ ಕ್ರಮಬದ್ಧವಾಗಿ ಕಡಿಮೆಯಾಗುವ ರೀತಿಯಲ್ಲೂ) ನಿರ್ದೇಶಿಸಿದೆ,

ಇವೆಲ್ಲವುಗಳ ಹಿನ್ನೆಲೆಯಲ್ಲಿ ವಕೀಲಿ ವ್ಯವಸಾಯ ತುಂಬ ಪ್ರಾಚೀನ ಕಾಲದಿಂದಲೂ ಇದ್ದದ್ದು ಎಂದು ಹೇಳಿಕೊಳ್ಳಬಹುದು? ಅಷ್ಟೇ ಅಲ್ಲ. ಹನ್ನೆರಡು-ಹದಿಮೂರು ಶತ-ಶತಮಾನಗಳಿಂದ ಯಾವುದೇ ಸ್ಥೂಲ ಬದಲಾವಣೆಗೆ ಕೂಡ ಒಳಗಾಗದೆ ಇದ್ದುದೇ ಒಂದು ವಿಶೇಷ. 'ಶುಕ್ರನೀತಿಸಾರ'ದಲ್ಲಿ ಹೇಳಿದ ಮೊದಲನೇ ಸಾವಿರಕ್ಕೆ ೧/೧೬ ಸಂಭಾವನೆಗೂ ೧೮೨೭ರಲ್ಲಿ

ಬಂಗಾಲ್ ರೆಗ್ಯುಲೇಶನ್ 7 ರಲ್ಲಿ ನಿಗದಿಪಡಿಸಿ ದಂತೆ ಅದೇ ಕಾರ್ಯಕ್ಕೆ 5%. [illegible] ಈಗಿನ Advocates' Act ನಲ್ಲಿ ನಿಯಮಿಸಿದ 3%. [illegible] ಹೆಚ್ಚಿನ ಬದಲಾವಣೆ ಅನಿಸುವುದಿಲ್ಲ. ಹಾಗೆ ನೋಡಿದರೆ ಅಂದಿನ ಸಂಭಾವನೆ–ರುಸುಮುಗಳೇ ಈ ದಿನಮಾನದ [illegible] (?) [illegible] ಎಂದುಕೊಳ್ಳಬಹುದು.

ನಮ್ಮ ಕಾಯಿದೆಗಳು ಒಂದು ತಲೆಮಾರಿನ ಹಿಂದಿನವು. ನ್ಯಾಯಾಧೀಶ ವಕೀಲರುಗಳು ಎರಡು ತಲೆಮಾರು ಹಿಂದಿನವರು ಹಾಗೂ ನ್ಯಾಯಾಲಯ ಗಳು ಪೀಳಿಗೆ-ಪೀಳಿಗೆಗಳ ಹಿಂದಿವೆ ಎನ್ನುವುದು ಸುಮ್ಮನೇ ಅಲ್ಲ ಎನ್ನುವುದಂತೂ ನಿಜ.

ವಕೀಲರ ಬಗ್ಗೆ ವರದಿಯಾಗದ ಒಂದು ಪ್ರಕರಣ

'ನಾರದಸ್ಮೃತಿ'ಯ ಟೀಕೆಯಲ್ಲೊಂದು ಕಥೆ ಬಂದಿದೆ. ಪಾಟಲೀಪುತ್ರದಲ್ಲಿ (ಇಂದಿನ ಪಾಟ್ನಾ) ಶ್ರೀಧರನೆಂಬ ಬ್ರಾಹ್ಮಣ ಯುವಕ ತುಂಬ ಕಷ್ಟಪಟ್ಟು ಅಗಾಧ ಸಂಪತ್ತನ್ನು ಗಳಿಸಿದ. ದೇವಧರನೆಂಬ ವ್ಯಾಪಾರಿಗೆ ಹತ್ತು ಸಾವಿರ ದಮ್ಮಡಿ* ಗಳನ್ನು ತಿಂಗಳೊಂದಕ್ಕೆ ಪ್ರತಿಶತ ಎರಡರಂತೆ ಬಡ್ಡಿದರದಲ್ಲಿ ಸಾಲ ನೀಡಿದನು. ಒಂದು ತಿಂಗಳಾದೊಡನೆ ದೇವಧರನು 200 ದಮ್ಮಡಿಗಳ ಬಡ್ಡಿಯನ್ನು ವಸೂಲ ಕೊಟ್ಟನು. ಎರಡನೇ ತಿಂಗಳು ನಡೆಯುತ್ತಿರುವಾಗ ದೇವಧರನು ತೀವ್ರ ಜ್ವರ ಬಾಧೆಯಿಂದ ತೀರಿಕೊಂಡನು. ಅವನ ಮಗನು ಅತಿಸಾರದಿಂದ ಸತ್ತನು. ದೇವಧರನ ಮೊಮ್ಮಗನ ಮಗ ಮಹೀಧರನೆಂಬುವನು ಮಾತ್ರ ಉಳಿದನು. ಈ ಮಹೀಧರನು ಇನ್ನೂ ಚಿಕ್ಕ ಪ್ರಾಯದವನಿದ್ದು ಜೂಜು ಮುಂತಾದ ಚಟಕ್ಕೆ ಬಲಿಬಿದ್ದಿದ್ದನು. ಹಾಗಾಗಿ ಅವನ [illegible] ರಕ್ಷಣೆಯನ್ನು ವಹಿಸಿಕೊಂಡಿದ್ದರು.

ಸ್ಮಾರ್ತದುರ್ಧರನೆಂಬ ಅಲ್ಪಸ್ವಲ್ಪ 'ಸ್ಮೃತಿ' ಪಠಿಸಿಕೊಂಡಿದ್ದ ಬ್ರಾಹ್ಮಣನು, "ಒಂದು [illegible]ವನ್ನೂ ಸಾಹುಕಾರ ಶ್ರೀಧರನಿಗೆ ಕೊಡತಕ್ಕದ್ದಿಲ್ಲ" ಎಂದು ಮಹೀಧರನ [illegible]ಗೆ [illegible]. [illegible]ಗಳಿಂದ ನ್ಯಾಯಶಾಸ್ತ್ರದಲ್ಲಿಯೂ [illegible] ರಕ್ಷಿಸುತ್ತೇನಾಗಿ ಭರವಸೆಯಿತ್ತನು. "ಹಾಗೆ ಮಾಡಿದಲ್ಲಿ ನಿನಗೆ ಒಂದು ಸಾವಿರ ದಮ್ಮಡಿಗಳ ಸಂಭಾವನೆ ನೀಡುತ್ತೇನೆ" ಎಂದು ಆ [illegible] ಮಾವಂದಿರು ಹೇಳಿದರು. ಸಾಲ ಕೊಂಡ [illegible] ಹಾಯದ ಎರಡನೆಯ ತಿಂಗಳೂ ಕಳೆದಾಗ ಸಾಹುಕಾರ ಶ್ರೀಧರನು ಮಹೀಧರನ ಸೋದರ ಮಾವಂದಿರೊಡನೆ ಆ ತಿಂಗಳ ಬಡ್ಡಿ 200 ದಮ್ಮಡಿಗಳನ್ನು ವಸೂಲು ಕೊಡುವಂತೆ ಕೇಳ



"ಸಿಂತ್ಕೊಳ್ಳಯ್ಯಾ. ಈ ವಾರದಲ್ಲಿ ಒಂದು ಕೇಸೂ ಕೈಗೆ ಸಿಕ್ಕಲಿಲ್ಲಾ."

* 'ಸಿದ್ಧಾಂತ ಶಿರೋಮಣಿ'ಯನ್ನು ಬರೆದ ಭಾಸ್ಕರಾಚಾರ್ಯನ ಲೀಲಾವತಿ I. 2-4 ರ ಕೋಷ್ಟಕದಂತೆ; ೨೦ ವರಾಟಿಕ = ಕಾಕಿನಿ, ೪ ಕಾಕಿನಿ = ಪಣ ೧೬ ಪಣ = ದಮ್ಮಡಿ, ೧೬ ದಮ್ಮಡಿ = ನಿಷ್ಕ.

ಕೊಂಡನು. ಅವರು, "ಬಡ್ಡಿ ಹಾಗಿರಲಿ, ಅಸಲೂ ಸಿಗಲಾರದು" ಎಂದುತ್ತರಿಸಿದನು. ಅವರ ಕಾಯಿದೆ ಸಲಹೆಗಾರ ಸ್ಮಾರ್ತದುರ್ಧರನು 'ನಾರದಸ್ಮೃತಿ' ಯನ್ನು (ಋಣದಾನ–೪) ಉದಾಹರಿಸಿ, ಅಜ್ಜನ ಋಣ ತೀರಿಸುವ ಭಾರ ಮೊಮ್ಮಗನ ವರೆಗೇ ಮುಕ್ತಾಯವಾಗುತ್ತದೆಂದೂ, ಮರಿಮಗನನ್ನು ಆ ಜವಾಬ್ದಾರಿ ಬಾಧಿಸಲಾರದೆಂದೂ ಹೇಳಿದಾಗ ಸಾಹುಕಾರ ಶ್ರೀಧರ ಸ್ತಂಭಿತನಾದ. ಆದರೂ ಬುದ್ಧಿಯನ್ನು ಪ್ರಯೋಗಿಸಿ ನ್ಯಾಯಾಲಯದಲ್ಲೊಂದು ವ್ಯಾಜ್ಯ ಹೂಡಿದ. ದಾವೆಯ ನೋಟೀಸು ಮೂಲ ಸಾಲಗಾರನಾದ ದೇವಧರನ ಮೊಮ್ಮಗನ ಮಗ ಮಹೀಧರನಿಗೆ ಹಾಗೂ ಅವನ ಸೋದರಮಾವಂದಿರ ಮೇಲೆ ಜಾರಿ ಮಾಡಲ್ಪಟ್ಟಿತು. ಎರಡೂ ಪಕ್ಷದವರ ಕಡೆಯಿಂದ ನ್ಯಾಯನಿರ್ಣಯಕ್ಕೆ ಬದ್ಧರಾಗಿರುವಂತೆ ಜಾಮೀನು ಪಡೆದುಕೊಳ್ಳಲಾಯಿತು. (ಅಂದಿನ ಪದ್ಧತಿ ?) ನ್ಯಾಯಾಸ್ಥಾನ ಮಹೀಧರನ ಸೋದರಮಾವಂದಿರಿಗೆ, "ಶ್ರೀಧರನ ಬಡ್ಡಿಯನ್ನೇಕೆ ಕೊಡುವುದಿಲ್ಲ ?" ಎಂಬ ಸವಾಲು ಹಾಕಿತು. ಮಹೀಧರನ ಕುಟುಂಬಕ್ಕೆ ತನ್ನ ಪೂರ್ವಜರು ಸ್ನೇಹಿತರು ಎಂದು ಹೇಳಿಕೊಂಡ ಸ್ಮಾರ್ತದುರ್ಧರನನ್ನು ತಮ್ಮ ವಕೀಲ(?)ನನ್ನಾಗಿ ಪ್ರತಿವಾದಿ ಮಹೀಧರ ಹಾಗೂ ಅವನ ಸೋದರಮಾವಂದಿರು ನಿಯಮಿಸಿಕೊಂಡರು. ಈ ಮೇಲೆ ಹೇಳಿದ 'ನಾರದಸ್ಮೃತಿ'ಯ ಋಣದಾನ ಪ್ರಜ್ಞೇದವನ್ನೇ ಸ್ಮಾರ್ತದುರ್ಧರನು ಉದಾಹರಿಸಿ, ಮಹೀಧರನು ಮೂಲ ಸಾಲಗಾರನಿಂದ ನಾಲ್ಕನೆಯ ತಲೆಯವನಾಗುತ್ತಿದ್ದುದರಿಂದ, ತನ್ನ ಪಕ್ಷಗಾರನಿಗೆ ಈ ಸಾಲ ತೀರಿಸುವ ಜವಾಬ್ದಾರಿ ಇಲ್ಲವೆಂಬ ಪ್ರತಿವಾದವನ್ನು ಒಡ್ಡಿದನು. ನ್ಯಾಯಾಧೀಶ ಸ್ಮಾರ್ತಶೇಖರಭಟ್ಟನು ಇದನ್ನು ಕೇಳಿ ಸಮ್ಮನೇ ನಕ್ಕು ಹೇಳಿದನು: "ಎಲೈ ಸ್ಮಾರ್ತದುರ್ಧರನೇ ! ನೀನಿನ್ನೂ ಸ್ಮೃತಿಯ ಅಭ್ಯಾಸವನ್ನಾಗಲೀ, ಅದರ ಟಿಪ್ಪಣಿಗಳನ್ನಾಗಲೀ ಆಳವಾಗಿ ಅಭ್ಯಸಿಸಿಲ್ಲ, ಮಹೀಧರನು ಮೂಲ ಸಾಲಗಾರನ ಕೇವಲ ಮೊಮ್ಮಗನ ಮಗನಷ್ಟೇ. ಪಿತೃಋಣ ತೀರಿಸುವ ಹೊಣೆ ಮೂರು ತಲೆಗಳವರೆಗೂ ಇದ್ದುದರಿಂದ, ಸಾಲಗಾರನನ್ನು ಬಿಟ್ಟು ಮರಿಮಗನು ಕೇವಲ ಮೂರನೆಯ ತಲೆಗೆಯಾಗಿದ್ದು (ಅಂದರೆ ಮೂಲ ಸಾಲಗಾರನನ್ನು ಹಿಡಿದು ನಾಲ್ಕನೆಯ ತಲೆ.) ಇರುವುದರಿಂದ ಶ್ರೀಧರನು ಕೊಟ್ಟ ಸಾವಿರ ವರಹಗಳ ಸಾಲದ ಹೊಣೆ ಮಹೀಧರನು ವಸೂಲಿ ಕೊಡತಕ್ಕದ್ದೇ ಆಗುವುದು. ಮತ್ತು ಮಹೀಧರನ ಮಗನಿಗೆ ಮಾತ್ರ ಈ ಹೊಣೆ ತಪ್ಪುವುದು." ಎಂದು ಘೋಷಿಸಿ–ನಿರ್ಣಯಿಸಿ ಇಂಥ ದುರ್ಬೋಧನೆಯ ಕೆಲಸಕ್ಕಾಗಿ ಸಂಭಾವನೆಯ ಧರವಸೆ ಪಡೆದುದಕ್ಕಾಗಿ ಅವನನ್ನು ದಂಡಿಸಿದನು.

ಈ ಪ್ರಕಾರ ಸ್ಮಾರ್ತದುರ್ಧರನೂ ಅವನ ಪಕ್ಷಗಾರರೂ ತಮ್ಮ ಪ್ರತಿವಾದದಲ್ಲಿ ಅಪಜಯ ಹೊಂದಿದರು. ✡

(ಈ ಲೇಖನದ ಪ್ರಥಮಾರ್ಧ ಶಿರಸಿಯ ಬಾರ್ ಅಸೋಶಿಯನ್ ಪ್ರಕಟಿಸಿದ Advocates' Dossier ನಿಂದ ಉದ್ಧೃತ)

ಹುಟ್ಟು ಕೋಮಟಿ

"ನಾನು ಹುಟ್ಟು ಬನಿಯಾ. ನನ್ನ ವೃತ್ತಿಯನ್ನು ನಾನಿನ್ನು ಬಿಟ್ಟಿಲ್ಲ-ಐದೈದು ರೂಪಾಯಿಗಳಿಗೆ ಒಂದೊಂದರಂತೆ ನಾನು ನನ್ನ ಆಟೋಗ್ರಾಫ್‌ನ್ನು ಮಾರುತ್ತಿದ್ದೇನೆ ಬೇಗ ಬೇಗ. ಯಾರ್‍ಯಾರಿಗೆ ಇಷ್ಟವೋ ಅವರು ನಿಮ್ಮ ನಿಮ್ಮ ಆಟೋಗ್ರಾಫ್ ಪುಸ್ತಕಗಳನ್ನು ನನ್ನತ್ತ ನೀಡಿ..." ಎಂದು ಹೇಳುತ್ತಾ ಬಾಪು ತಮ್ಮ ಪೆನ್ನನ್ನು ಹೊರತೆಗೆದರು. ಅವರು ಆಗ ಹರಿಜನರ ಕಲ್ಯಾಣ ನಿಧಿಗಾಗಿ ಚಂದಾ ಸಂಗ್ರಹಿಸುತ್ತಿದ್ದರು.

– ಎಸ್. ವಿಶ್ವನಾಥ

ಕೈ ಹಿಡಿದು ನಡೆಸುವನೆನ್ನ...

ಸಂಗ್ರಹ: ಎಲ್. ಜಿ. ಮೊಕ್ತಾಲಿ

ಅರವಿಂದರು. ಹಾಗೆ ನೋಡಿದರೆ ಭಾರತೀಯ ಸಂಸ್ಕೃತಿಯ ಸಮೀಪ ಕೂಡ ಸುಳಿಯಬಾರದಿತ್ತು. ಅವರ ತಂದೆ ಭಾರತೀಯವಾದ-ದ್ದಾವುದೂ ಅವರನ್ನು ತಟ್ಟಬಾರದು ಎಂದು ಮಗನನ್ನು ಬಾಲ್ಯದಿಂದಲೇ ಇಂಗ್ಲೆಂಡಿನಲ್ಲಿಟ್ಟು 'ಸಾಹೇಬ'ನಾಗುವಂತೆ ಬೆಳೆಸಿದರು, ಕಲಿಸಿದರು. ಆದರೆ ವಿಧಿ ಅವರಿಗೆ ಹಾಕಿಕೊಟ್ಟಿದ್ದ ಪಾತ್ರ ತೀರಾ ಭಿನ್ನವೇ ಆಗಿತ್ತು.

ನಿಮ್ಮ ಈ ವಾರ್ಷಿಕ ಸಭೆಯಲ್ಲಿ ಹಿಂದೂ ಧರ್ಮದ ಬಗ್ಗೆ ಮಾತಾಡುವುದಾಗಿ ಒಪ್ಪಿಕೊಂಡಿದ್ದೆ. ಆದರೆ ಆ ಮಾತನ್ನು ನಾನೀಗ ಪೂರೈಸುವೆನೋ ಇಲ್ಲವೋ ತಿಳಿಯದು. ಯಾಕೆಂದರೆ, ನಾನಿಲ್ಲಿ ಕುಳಿತಿರುವಂತೆಯೇ ನಿಮ್ಮೆದುರು ಏನು ಮಾತಾಡಬೇಕೆಂದು ನನ್ನ ಮನಸ್ಸಿಗೆ ಗೋಚರವಾಗುತ್ತಿದೆ. ನಾನೀಗ ಹೇಳಬೇಕಿರುವುದು ನಿಮಗಷ್ಟೇ ಅಲ್ಲ, ಇಡೀ ಭಾರತ ರಾಷ್ಟ್ರಕ್ಕೇ. ಈ ಮಾತಿನ ದರ್ಶನ ಸೆರೆಮನೆಯಲ್ಲಿದ್ದಾಗಲೇ ನನಗಾಯಿತು. ಅದಕ್ಕೇ ಅಲ್ಲಿಂದ ಹೊರಬಂದ ನಂತರ ನನ್ನ ಜನರೆದುರು ಇಡುತ್ತಿದ್ದೇನೆ.

ಲಾಲ್ ಬಜಾರ್ ಹಾಜತ್ ಜೇಲಿನ ಬಳಿಗೆ ನನ್ನನ್ನು ಕರೆದೊಯ್ಯುತ್ತಿರುವಾಗ ನನ್ನಲ್ಲೇ ಆಂತರಿಕವಾಗಿ ಒಂದು ಬಗೆಯ ವಿಚಾರ ಕ್ರಾಂತಿಯೇ ಆರಂಭವಾಯಿತು. ನಾನು ಮೊದಲಿಗೆ ವಿಚಾರ ಮಾಡುತ್ತಿದ್ದಾಗ ನನ್ನ ಸುತ್ತಲಿನ ಜನರೆಲ್ಲರೂ 'ನಾವು ಮಾಡಿದ [illegible]? ನಾವು ಮಾಡಬೇಕಾದ ಕಾರ್ಯ [illegible] ಇದೆಯೇ?' ಎಂದು ಕೇಳುತ್ತಿದ್ದರು. ಅಂತಹವರಲ್ಲಿ ನಾನೂ ಒಬ್ಬನಾದುದರಿಂದ ಈಗ ಹೀಗಾಗಿದೆಯೇ. ಇದೇನು ದೇವರೇ? ನಾನು ಮಾಡಬೇಕಾದ ಕಾರ್ಯವು ಯಾವುದು? ಈ ಎಡೆಗೆ [illegible] ನನ್ನದೂ ಒಂದು ನಿರ್ದಿಷ್ಟ ಕಾರ್ಯವಿದೆ. ನನ್ನ ಜನರ ಸಲುವಾಗಿ, ನನ್ನ ದೇಶದ ಸಲುವಾಗಿ

ನನ್ನದೆಲ್ಲವನ್ನೂ ತ್ಯಾಗ ಮಾಡಬೇಕು. ಆ ಕಾರ್ಯವು ಮುಗಿಯುವ ವರೆಗೆ ನಿನ್ನ ರಕ್ಷಣೆಯು ನನಗೆ ಬೇಕು. ಇದೇನು ? ಎಂಥ ಅಪರಾಧಕ್ಕಾಗಿ ನಾನು ಬಂಧನದಲ್ಲಿದ್ದೇನೆ! ಎಂದು ನನ್ನ [illegible] ಒಂದೆರಡು ದಿನ ಕಳೆದ. ಆಗ ಒಂದು ಅಶರೀರವಾಣಿಯು "ಕಾರ್ಯ [illegible]" ಎಂಬುದಾಗಿ ಕೇಳಿಬಂತು. ಅದರಿಂದ ಅಂದಿನ ಸಮಾಧಾನವೂ ಶಾಂತವೂ ಬಂದಂತಾಯಿತು. ಅಷ್ಟರಲ್ಲಿ [illegible] ಜೇಲಿನಿಂದ ಅಲೀಪುರ ಜೇಲಿಗೆ ಬಂದು ಅಲ್ಲಿ ನನ್ನನ್ನು ಒಂದು ತಿಂಗಳವರೆಗೆ ಏಕಾಂತವಾಸದಲ್ಲಿರಿಸಿದರು. ಅಲ್ಲಿ ನಾನೊಬ್ಬನೇ ಇರಬೇಕಾಯಿತು. ಹಗಲು ರಾತ್ರಿ ನನ್ನ ಅಂತರಾತ್ಮನಾಗಿ ನೆಲೆಸಿದ ಭಗವಂತನ ಮಾತಿಗಾಗಿ ಕಾದೆನು. ದೇವಾ! ನನಗೆ ಹೇಳಬೇಕಾದದ್ದೇನಾದರೂ ಇದೆಯೇ? ನಾನು ಮಾಡಬೇಕಾದ ಕಾರ್ಯವನ್ನು ನಾನೇನಾದರೂ ಕಲಿಯಬೇಕಾಗಿದೆಯೇ? ಎಂದು ಪ್ರಾರ್ಥಿಸಿದೆ? ನನ್ನನ್ನು [illegible]. ಆಗ ನಾನು ಬಂಧನದಲ್ಲಾದದಕ್ಕಿಂತ ಒಂದೆರಡು ತಿಂಗಳು ಮುಂಚಿತವಾಗಿಯೇ "ನಿನ್ನ ಎಲ್ಲ ಚಟುವಟಿಕೆಗಳನ್ನು ಬದಿಗಿರಿಸು; ಏಕಾಂತವಾಸಕ್ಕೆ ತೆರಳು; ನಿನ್ನಲ್ಲಿ ನನ್ನನ್ನು ನೋಡಿಕೋ" ಎಂದು ಕೇಳಿದ ಸಂದೇಶದ ನೆನಪಾಯಿತು. ನಾನು ಹಾಗೆ ಮಾಡುವುದರಿಂದ ಆ ಭಗವಂತನೊಂದಿಗೆ ಹೆಚ್ಚಿನ ಸಂಪರ್ಕವನ್ನು ಹೊಂದಬಹುದು [illegible] ಎಂದು [illegible]. ಆದರೆ ನಾನು ನಿರ್ಬಲ; ಅಷ್ಟು ಶಕ್ತಿ ನನ್ನಲ್ಲಿರಲಿಲ್ಲ. ಆ ಕರೆಯನ್ನು ಸ್ವೀಕಾರ ಮಾಡುವುದೂ ಆಗಲಿಲ್ಲ. ಆಗ ನಾನು ಕೈಕೊಂಡ ಕಾರ್ಯವು ಬಹಳ ಮಹತ್ವದ್ದು. ನಾನು ಇಲ್ಲದಿದ್ದರೆ ಅದನ್ನು ಯಾರೂ ಮಾಡಲಾರರು. ಅದು ಯಶಸ್ವಿಯೂ ಆಗಲಾರದು. [illegible] ದಿಂದ ಅದನ್ನು ಬಿಡಬಾರದು ಎಂಬ ಅಭಿಮಾನವು ಬೇರೆ. ಅಂತಹ ನೆನಪಿನಲ್ಲಿ ಮುಂದೆ ಯಾವ ಪಾಠವೂ ಕಾಣದಾಗಿ ಮೌನವಾಗಿ ನನ್ನ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದಾಗ ಅಲೀಪುರದ ಜೇಲಿನಲ್ಲಿ ಆ ಭಗವಂತನ ಆದೇಶವಾಯಿತು. "ನಿನ್ನ ಶಕ್ತಿಯಿಂದ ನಿನಗೇ ಹರಿದುಕೊಳ್ಳಲು ಬಾರದ ಬಂಧನಗಳನ್ನು ನಾನು ನಿನ್ನ ಸಲುವಾಗಿ ಹರಿದೊಗೆದಿದ್ದೇನೆ. ನೀನು ಇದೇ ಸ್ಥಿತಿಯಲ್ಲಿ ಬಹಳ ಕಾಲದ ವರೆಗೆ ಉಳಿಯ ಬೇಕೆಂಬುದು ನನ್ನ ಉದ್ದೇಶವಲ್ಲ. ನಿನ್ನ ಸಲುವಾಗಿ ಬೇರೊಂದು ಕಾರ್ಯವನ್ನು ನಿಯೋಜಿಸಿದ್ದೇನೆ. ಅದನ್ನು ಹೇಗೆ ಮಾಡುವುದು ಎಂಬುದನ್ನು ತಿಳಿಸಲು ನಿನ್ನನ್ನು ಇಲ್ಲಿಗೆ ತಂದಿದ್ದೇನೆ. ನಿನ್ನ ಶಕ್ತಿ ನೀನೇ ಕಲಿಯಲು ಸಾಧ್ಯವಿರಲಿಲ್ಲ. ಆ ಕಾರ್ಯವನ್ನು ಪೂರ್ತಿಗೊಳಿಸುವುದಕ್ಕಾಗಿ ನಿನ್ನನ್ನು ತರಬೇತು ಕೊಟ್ಟು ಸಿದ್ಧ ಮಾಡುತ್ತೇನೆ. ಅದಕ್ಕಾಗಿಯೇ ನಿನ್ನನ್ನು ಇಲ್ಲಿಗೆ ತಂದಿದ್ದೇನೆ". ಎಂದು ಹೇಳಿ ಭಗವದ್ಗೀತೆಯನ್ನು ನನ್ನ ಕೈಯಲ್ಲಿಟ್ಟಂತಾಯಿತು. ಅಕ್ಷಣಕ್ಕೆ ಮಿಂಚಿನ ವೇಗದಿಂದ ಒಂದು ಹೊಸ ಶಕ್ತಿಯು ನನ್ನಲ್ಲಿ ಪ್ರವೇಶಿಸಿತು. ಅದರಿಂದ ಭಗವದ್ಗೀತೆಯ ಸಾಧನೆಯನ್ನು ಕೈಕೊಳ್ಳಲು ನನಗೆ ಶಕ್ತಿ ಬಂದಿತು. ಅದರಿಂದ ಕೇವಲ ಬೌದ್ಧಿಕ ರೀತಿಯಿಂದ ಶ್ರೀಕೃಷ್ಣನನ್ನು ಕಲ್ಪಿಸುವುದಕ್ಕಿಂತ ಹೆಚ್ಚಾಗಿ, ಅವನ ಸಾನ್ನಿಧ್ಯವನ್ನು ಕಾಣುವ ಭಾಗ್ಯ ಬಂದಂತಾಯಿತು. ಅವನ ಕಾರ್ಯವನ್ನು ಮಾಡುವವರು ರಾಗದ್ವೇಷಾದಿಗಳಿಂದ ದೂರವಿದ್ದು ಫಲಾಪೇಕ್ಷೆಯಿಲ್ಲದೇ ಕಾರ್ಯ ಮಾಡಿ ಅಹಂಕಾರ ತುಂಬಿದ ಸಂಕಲ್ಪವನ್ನು ನಿಷೇಧಿಸಿ ಮೌನವಾದ, ನಿರ್ವಿಕಲ್ಪವಾದ ಮತ್ತು ಉತ್ಸಾಹಪೂರ್ಣವಾದ ಸಾಧನವಾಗಿ ಅವನ ಆಜ್ಞೆಯಂತೆ ನಡೆಯುವುದು ಮತ್ತು ಮೇಲು ಕೀಳು, ಮಿತ್ರ – ವೈರಿ, ಯಶಸ್ಸು – ಅಪಯಶಸ್ಸುಗಳನ್ನು ತಾರತಮ್ಯಭಾವದಿಂದ ನೋಡದೇ ಎಲ್ಲವನ್ನು ಸಮನಾಗಿ ಗಣಿಸಬೇಕು – ಎಂಬ ಆದೇಶವನ್ನು ನನಗೆ ಕೊಟ್ಟಂತಾಯಿತು. ಆ ಆದೇಶದಿಂದಲೇ ಹಿಂದೂ ಧರ್ಮದ ರಹಸ್ಯವನ್ನು ತಿಳಿದುಕೊಳ್ಳಲು ಸಾಧ್ಯವಾಯಿತು. ಹಿಂದೂ ಧರ್ಮವು [illegible] ಧರ್ಮ. ಇತರ ಧರ್ಮಗಳು ಪ್ರಾಮುಖ್ಯವಾಗಿ ಶ್ರದ್ಧೆ ಮತ್ತು ವೃತ್ತಿ ಮೂಲವಾದವುಗಳಾದರೆ ಹಿಂದೂ ಧರ್ಮ

ಜೀವನವೇ ಆಗಿದೆ.

ಎಲ್ಲೆಲ್ಲೂ ಅವನೇ

ಕೇವಲ ನಂಬಿಕೆಯೇ ಅವರ ಅನುಗೋಲಲ್ಲ. ಅದರಂತೆ ಜೀವಿಸುವುದೇ ಅವರ ಸಂದೇಶ. ವೇದಕಾಲದಿಂದಲೂ ಭಾರತದಲ್ಲಿ ಪ್ರಶಾಂತ ವಾಸಿಯಾಗಿ ತಪಸ್ಸು ಮಾಡುತ್ತ ಬಂದ ನಮ್ಮ ಋಷಿಗಳು ಕಲ್ಪಿಸಿದ ಮಾನವ ಮುಕ್ತಿಯೇ ಅದರ ಗುರಿ. ಮಾನವ ಕುಲವನ್ನು ಉದ್ಧಾರಮಾಡು ವುದಕ್ಕೆ ನಮ್ಮ ಭಾರತವು ಉದಯೋನ್ಮುಖಿ ವಾಗುತ್ತಿದೆ. ಅದು ಉಳಿದ ದೇಶಗಳಂತೆ ಸ್ವಾರ್ಥ ಕ್ಕಾಗಿ, ನಿರ್ಬಲರನ್ನು ತುಳಿಯುವುದಕ್ಕಾಗಿ ಬಲಿಷ್ಠ ವಾಗಬಯಸುವದಿಲ್ಲ. ಭಗವಂತನು ಅದಕ್ಕೆ ಆದೇಶ ಕೊಟ್ಟಂತೆ ವಿಶ್ವವ್ಯಾಪ್ತಿಯುಳ್ಳ ಅನಂತವಾದ ಜ್ಞಾನಜ್ಯೋತಿಯನ್ನು ಬೆಳಗಲು ಭಾರತಮಾತೆ ತನ್ನ ಮುಖವನ್ನು ಎತ್ತುತ್ತಿದ್ದಾಳೆ. ಅವಳು ಕೇವಲ ತನ್ನ ಸಲುವಾಗಿಯೇ ಅಸ್ತಿತ್ವದಲ್ಲಿಲ್ಲ. ಅವಳು ಮಾನವಕುಲದ ಉದ್ಧಾರಕ್ಕಾಗಿ ಅಸ್ತಿತ್ವ ದಲ್ಲಿದ್ದಾಳೆ. ಮುಂದೆ ನನ್ನ ಜೇಲ್ ಅಧಿಕಾರಿಯ ಮನಸ್ಸು ತಿಳಿಯಾದಾಗ ನನಗೆ ಹೊರಗೆ ಬಂದು ಸ್ವಲ್ಪ ಹೊತ್ತು ತಿರುಗಾಡಲು ಅಪ್ಪಣೆ ಸಿಕ್ಕಿತು. ನಾನು ಹೀಗೆ ತಿರುಗಾಡುತ್ತಿದ್ದಾಗ ಆ ಭಗವಂತನ ಶಕ್ತಿ ನನ್ನಲ್ಲಿ ಮತ್ತೆ ಪ್ರವೇಶಿಸಿತು. ನನ್ನ ಸುತ್ತಣ ನಾಲ್ಕೂ ಗೋಡೆಗಳು ಮಣ್ಣಿನ ಬಂಧನದಂತೆ ಕಾಣದೇ ಆ ವಾಸುದೇವನೇ ನನ್ನನ್ನು ಸುತ್ತಿ ದಂತೆ ಭಾಸವಾಗಲು ಆರಂಭವಾಯ್ತು. ನನ್ನ ಕೋಣೆಯ ಮುಂದಿದ್ದ ಗಿಡಗಳ ರೆಂಬೆಗಳು ಬರಿ ಗಿಡಗಳಾಗಿ ಕಾಣದೇ ಆ ವಾಸುದೇವನು ಚಾಚಿದ ಕೈತೋಳುಗಳೆಂದು ಭಾಸವಾಗಲು ಆರಂಭ ವಾಯ್ತು. ಅವನೇ ನನ್ನ ಮುಂದೆ ನಿಂತು ಕೈ ಚಾಚಿ ದಂತೆ ಅನಿಸುತ್ತಿತ್ತು. ನನ್ನ ಕೋಣೆಯ ಬಾಗಿ ಲಿನ ಕಬ್ಬಿಣದ ಸಲಾಕೆಗಳು ಸಹ ಅವನ ನಿಲು ವನ್ನು ಸೂಚಿಸುವಂತೆ ಅನಿಸುತ್ತಿತ್ತು. ಅವನೇ, ಆ ನಾರಾಯಣನೇ ನನ್ನ ಎದುರು ನಿಂತು ನನ್ನನ್ನು ಕಾಯುತ್ತಿದ್ದಾನೆಂದು ಅನಿಸುತ್ತಿತ್ತು. ನಾನು ಹೊತ್ತುಕೊಳ್ಳುವ ಉಣ್ಣೆಯ ಹೊದಿ ಕೆಯು ಕೂಡ ಅವನ ಆಲಿಂಗನದಲ್ಲಿ ಮಲಗಿದ ಅನುಭವವನ್ನು ನೀಡುತ್ತಿತ್ತು.

ಅಲ್ಲಿ [illegible] ಕಳ್ಳರು, ಕೊಲೆಗಾರರು [illegible] ಮೊದಲಾದವರೆಲ್ಲ [illegible] ಆದರೆ ಅವರ [illegible] ದಲ್ಲಿ ಆ ವಾಸುದೇವನನ್ನೇ, ಆ ನಾರಾಯಣನನ್ನೇ ಕಾಣಲು ಆರಂಭಿಸಿದೆ. ಅಲ್ಲಿದ್ದ [illegible] ಗಳೂ ವಾಸುದೇವನನ್ನೇ ತೋರಿಸುತ್ತಿದ್ದರು. ಹೀಗಿದ್ದಾಗ [illegible] ಉದ್ಧಾರಮಾಡುವುದೇ ನನ್ನ ಕಾರ್ಯ; ನೀನು ಅದನ್ನು ಚೆನ್ನಾಗಿ ತಿಳಿದುಕೊಂಡು ನಾನು ನಿನ್ನನ್ನು ತಂದಿ ರಿಸಿದ ಜನರ ಮಧ್ಯದಲ್ಲಿ ಸಮರಸವಾಗಿರು." ಎಂದಿತು.

ನನ್ನ ಮೇಲಿನ ಮೊಕದ್ದಮೆಯ ವಿಚಾರಣೆಯು ಆರಂಭವಾಯ್ತು. ನನ್ನನ್ನು ನ್ಯಾಯಾಲಯದ ಮುಂದೆ ನಿಲ್ಲಿಸಿದರು. ನನ್ನಲ್ಲಿ ಆ [illegible] ಸಂದೇಶದ ಮಂಥನ ಸಾಗಿತ್ತು. "[illegible] ತರುವಾಗ ನೀನು ದುಃಖಿಸಿದೆ. ಅಲ್ಲವೆ? ನನಗೆ ರಕ್ಷಣೆ ಎಲ್ಲಿದೆ ಎಂದು ಕಣ್ಣೀರಿಟ್ಟೆ ಅಲ್ಲವೆ? ಈಗ [illegible] ನೋಡು. [illegible] ವಾದಿಯ ಕಡೆಗೆ ನೋಡು" ಎಂದು [illegible]. ನಾನು ನೋಡಿದೆ. [illegible] ಅಲ್ಲಿ [illegible] ಆ ವಾಸುದೇವನೇ ಅಲ್ಲಿ ನಿಂತಿದ್ದಾನೆ. ಈಗ [illegible]? ನಾನು [illegible] ನನ್ನ [illegible] ಕೊಡುತ್ತೇನೆ. ನನ್ನ [illegible] ನನಗೆ ಈ [illegible]. [illegible] ನನ್ನನ್ನು [illegible] ಮೊಕದ್ದಮೆಯ [illegible] ವಿಚಾರಣೆಗಾಗಿ [illegible] ತಯಿಲ್ಲ. ಅವರ [illegible] ಬೇರೆ [illegible]. [illegible] ನನ್ನ ಕಾರ್ಯಕ್ಕೆ ಸಹಾಯಕ ಸಾಧನವಾಗಿದೆ. ಅಷ್ಟೇ. ಬೇರೆ ಏನೂ ಅಲ್ಲ" ಎಂದು [illegible].

"ನಿಯಾಮಕ ನಾನು...."

ವಿಚಾರಣೆಯು ಆರಂಭವಾದಂತೆ ನಾನು ನನ್ನ ಹೇಳಿಕೆಗಳನ್ನು ತಯಾರಿಸಲು ಟಿಪ್ಪಣಿಗಳನ್ನು ಬರೆಯಲು ಆರಂಭಿಸಿದಂತೆ ಒಂದು ಚಮತ್ಕಾರ

ವಾಯಿತು. ನನ್ನ ಮುಂದೆ ಮೊದಲು ನಿಂತ ನ್ಯಾಯವಾದಿಯ ಬದಲಾಗಿ ನನ್ನ ಮಿತ್ರನೊಬ್ಬನು ಬಂದ. ಅವನ ಬರುವಿಕೆ ಬಹಳ ಅನಪೇಕ್ಷಿತ. ಅವರೇ ಚಿತ್ತರಂಜನ ದಾಸರು. "ಇವರೇ ನಿನ್ನನ್ನು ರಕ್ಷಿಸುವರು. ಬಂಧನದಿಂದ ಮುಕ್ತಮಾಡುವರು. ನಿನ್ನ ಟಿಪ್ಪಣಿಗಳನ್ನೆಲ್ಲ ಬದಿಗಿರಿಸು. ಅವನಿಗೆ ನಿನ್ನ ಟಿಪ್ಪಣಿಗಳು ಬೇಕಿಲ್ಲ. ನಾನು ಅವನಿಗೆ ಮಾರ್ಗದರ್ಶನ ಮಾಡುವೆ," ಎಂದು ನನಗೆ ಸೂಚಿಸಿದಂತಾಯಿತು. ಅದರಂತೆಯೇ, "ನಾನು ಅವನಿಗೆ ಮಾರ್ಗ ತೋರಿಸುತ್ತಿದ್ದೇನೆ. ಆದುದರಿಂದ ಹೆದರಬೇಡ. ಜೇಲಿಗೆ ನಿನ್ನನ್ನು ನಾನು ತಂದ ಕಾರ್ಯದ ಕಡೆಗೆ ನಿನ್ನ ಲಕ್ಷ್ಯ ಪೊರೈಸು. ನೀನು ಹೊರಗೆ ಬಂದು ನಂತರ ಹೆದರಿಕೆಯನ್ನು ಬದಿಗಿರಿಸು. ಕಾರ್ಯ ಮಾಡಲು ಹಿಂಜರಿಯಬೇಡ. ಆ ಕಾರ್ಯವನ್ನು ನೀನು ಮಾಡುತ್ತಿರುವಿಯೆಂದು ತಿಳಿಯಬೇಡ. ಅದನ್ನು ನಾನು ಮಾಡುತ್ತಿರುವೆನೆಂದು ತಿಳಿ. ನೀನೂ ಅಲ್ಲ. ಮತ್ತೆ ಉಳಿದವರು ಯಾರೂ ಅಲ್ಲ. ಯಾವ ಕಷ್ಟ ನಷ್ಟಗಳು ಬಂದರೂ ಹೆದರಬೇಡ. ಅಸಾಧ್ಯವೆಂಬುದು ಯಾವುದೂ ಇಲ್ಲ. ಕಠಿಣವೆಂಬುದು ಯಾವುದೂ ಇಲ್ಲ. ನಾನಿದ್ದೇನೆ. ನಾನು ಎಲ್ಲೆಲ್ಲೂ ಇದ್ದೇನೆ. ನಾನೇ ಆ ವಾಸುದೇವನು. ನಾನೇ ಆ ನಾರಾಯಣನು. ನಾನು ಸಂಕಲ್ಪಿಸಿದ್ದೇ ಘಟಿಸುವುದಲ್ಲದೇ ಬೇರೆ ಯಾರ ಸಂಕಲ್ಪವೂ ಫಲಿಸಲಾರದು. ನಾನು ಆಗಬೇಕೆಂದ ಕಾರ್ಯವನ್ನು ಯಾವ ಮಾನವಶಕ್ತಿಯೂ ತಡೆಯಲಾರದು" ಎಂದು ಸೂಚಿಸುತ್ತಲೇ ಇತ್ತು.

ಇಷ್ಟರಲ್ಲಿಯೇ ಆ ಶಕ್ತಿಯು ನನ್ನನ್ನು ಆ ಏಕಾಂತವಾಸದಿಂದ ಹೊರಗೆ ತಂದು ನನ್ನಂತೆಯೇ ಅಪರಾಧಿಗಳೆಂದು ಗಣಿಸಲ್ಪಟ್ಟ ಜನರ ಮಧ್ಯೆ ತಂದು ಇರಿಸಿತ್ತು. ನನ್ನ ಬಗೆಗೆ ನಾನೇ ಹೇಳುವದಾದರೆ ನಾನು ನಿರ್ಬಲ. ನನ್ನಲ್ಲಿ ದೋಷಗಳು ಬೇಕಷ್ಟು ಇವೆ. ನಾನು ಅವುಗಳನ್ನು ಕಂಡಿದ್ದೇನೆ. ನನ್ನ ವಿರುದ್ಧ ಅವೆಲ್ಲವೂ ಎದುರಾಗಿ ನಿಂತಾಗ ನಾನು ನಿಸ್ಸಹಾಯನಾಗುತ್ತೇನೆ. ಆದರೆ ಆ ಶಕ್ತಿಯು ನನ್ನಲ್ಲಿ ಪ್ರವೇಶ ಮಾಡಿದಂದಿನಿಂದ ಎಲ್ಲ ಸನ್ನಿವೇಶಗಳಲ್ಲಿಯೂ ಧೈರ್ಯ ತಾಳುತ್ತೇನೆ, "ಇದು ಯುವ ಜನಾಂಗವು; ನನ್ನ ಅಪ್ಪಣೆಯಂತೆ ಹೊಸದಾದ ಬಲಿಷ್ಠ ರಾಷ್ಟ್ರವು ತಲೆ ಎತ್ತುತ್ತಿದೆ. ಅವರು ನಿನಗಿಂತಲೂ ಹೆಚ್ಚು ಬಲಿಷ್ಠರಾಗಿದ್ದಾರೆ. ನೀನು ಹೆದರಬೇಕಿಲ್ಲ. ನೀನು ಒಂದು ಬದಿಗೆ ಸರಿದು ನಿಷ್ಕ್ರಿಯನಾಗಿ ನಿಂತರೂ ಚಿಂತೆಯಿಲ್ಲ. ಆ ಕಾರ್ಯವು ಸಾಂಗವಾಗುವುದು. ನೀನು ದೂರ ಸರಿಸಲ್ಪಟ್ಟರೆ ಈ ಯುವಜನರು ನಿನ್ನ ಕಾರ್ಯವನ್ನು ಪೂರ್ತಿಗೊಳಿಸುವರು. ನೀನು ಮಾಡುವುದಕ್ಕಿಂತಲೂ ಹೆಚ್ಚಾದ ಬಲದಿಂದ ಅವರು ಅದನ್ನು ಕೊನೆಗಾಣಿಸುವರು. ಈ ರಾಷ್ಟ್ರಕ್ಕೆ ತಲೆ ಎತ್ತಲು ಸ್ವಲ್ಪ ಸಹಾಯ ಮಾಡಲು ನನ್ನಿಂದ ನಿನಗೆ ಸ್ವಲ್ಪ ಶಕ್ತಿಯು ಕೊಡಲ್ಪಟ್ಟಿದೆ," ಎಂದು ಆ ಅಶರೀರವಾಣಿಯು ನನ್ನೊಳಗೆಯೇ ಇದ್ದು ಸೂಚಿಸುತ್ತಿತ್ತು.

ಮತ್ತೆ ನನ್ನನ್ನು ಆ ಏಕಾಂತವಾಸದ ಕೋಣೆಗೇ ಅವಸರದಿಂದ ಒಯ್ಯಲಾಯಿತು. ಅಲ್ಲಿ ಘಟಿಸಿದ ಅನುಭವಗಳು ವರ್ಣನಾತೀತವಾಗಿವೆ. ಅನೇಕ ಆಶ್ಚರ್ಯಕಾರಕ ವಿಷಯಗಳನ್ನು ತಿಳಿಸಿ ಹಿಂದೂ ಧರ್ಮದ ನಿಜವಾದ ಮರ್ಮವನ್ನು ಆ ವಾಸುದೇವನು ತಿಳಿಸಿಕೊಟ್ಟನು. ಆಂಗ್ಲರ ಶಿಕ್ಷಣದಲ್ಲಿ ಬೆಳೆದು ಹಿಂದೂ ಧರ್ಮದ ರಹಸ್ಯವನ್ನೇ ತಿಳಿಯದ ನನಗೆ ಅದರ ನಿಜವಾದ ತತ್ವಗಳನ್ನು ವಾಸುದೇವನು ತಿಳಿಸಿಕೊಟ್ಟನು. ಅಲ್ಲಿಯ ವರೆಗೆ ಹಿಂದೂ ಧರ್ಮವೆಂದರೆ ಕಾಲ್ಪನಿಕವಾದದ್ದು, ಕನಸಿನ ರಾಜ್ಯ, ಮತ್ತು 'ಮಾಯಾ'ದಿಂದ ತುಂಬಿದ್ದು ಎಂದು ನನ್ನ ಅಭಿಪ್ರಾಯವಾಗಿತ್ತು. ಅಂದಿನಿಂದ ಹಿಂದೂ ಧರ್ಮದ ತತ್ವಗಳು ಸಜೀವ ತತ್ವಗಳಾಗಿವೆ. ಈ ಕಾರ್ಯವನ್ನು ಲೌಕಿಕ ವಿಜ್ಞಾನ ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗುತ್ತಿರಲಿಲ್ಲ. ಅದರ ಸತ್ವವು ದಿವಸ ದಿವಸಕ್ಕೆ ನನ್ನ ಮನಸ್ಸನ್ನೂ ಹೃದಯವನ್ನೂ ತುಂಬಿಕೊಂಡು ಈ ರಹಸ್ಯದ ಜ್ಞಾನ ಅರಿವಾಯ್ತು. ನಾನೊಬ್ಬ ಜ್ಞಾನಿಯೆಂದು ಈ ರಹಸ್ಯವನ್ನು ತಿಳಿಯಲು ಸಂಪೂರ್ಣವಾಗಿ ಪ್ರಯತ್ನಿಸಿಯೂ ಇದ್ದಿಲ್ಲ, ಭಕ್ತನೆಂದೂ ಸಂಪೂರ್ಣವಾಗಿ ಇರಲಿಲ್ಲ.

ಆಗ ದೇವರನ್ನು ಸಂಪರ್ಕಿಸಿದಾಗ, ಅವನ ಅಸ್ತಿತ್ವದ ವಿಷಯವಾಗಿ ವಿಶ್ವಾಸವೇ ಇದ್ದಿರಲಿಲ್ಲ. ನಾನೊಬ್ಬ ನಿರೀಶ್ವರವಾದಿಯಾಗಿದ್ದೆ, ನಾಸ್ತಿಕನಾಗಿದ್ದೆ. ಸಂದೇಹವಾದಿಯಾಗಿದ್ದೆ. ದೇವರಿದ್ದಾನೆ ಎಂಬುದಕ್ಕೆ ನನ್ನಿಂದ ನಿಶ್ಚಿತವಾದ ನಿರ್ಣಯ

ವಿದ್ದಿಲ್ಲ. ಅವನ ಅಸ್ತಿತ್ವದ ಅರಿವೂ ನನಗಿರಲಿಲ್ಲ. ಆದರೂ ವೇದಗಳ ಸತ್ಯಾಂಶಗಳ ಕಡೆಗೆ ಯಾವುದೋ ಶಕ್ತಿಯು ನನ್ನನ್ನು ಎಳೆಯುತ್ತಿತ್ತು. ಗೀತೆಯು ಸತ್ಯಾಂಶದ ಕಡೆಗೆ ಎಳೆಯುತ್ತಿತ್ತು. ಅದರಂತೆಯೇ ಹಿಂದೂ ಧರ್ಮದ ಸತ್ಯಾಂಶದ ಕಡೆಗೂ ಎಳೆಯುತ್ತಿತ್ತು. ಯೋಗದಲ್ಲಿ ಮಹತ್ತ್ವಾದ ಸತ್ಯವು ಅಡಗಿರಬೇಕು. ವೇದಾಂತದ ತಳಹದಿಯಮೇಲೆ ನಿಂತ ಈ ಧರ್ಮದಲ್ಲಿ ಅದೇ ಮಹತ್ತ್ವದ ತತ್ತ್ವವು ಅಡಗಿರಬೇಕು ಎಂದು ನನಗೆ ಅನಿಸುತ್ತಿತ್ತು. ಕಾರಣ ಯೋಗದ ಕಡೆಗೆ ನಾನು ಲಕ್ಷ್ಯ ಪೂರೈಸಿ ಅದನ್ನು ಕಾರ್ಯಾಚರಣೆಯಲ್ಲಿ ತಂದು ನನ್ನ ಕಲ್ಪನೆಯು ಸರಿಯಾಗಿದೆಯೋ ಎಂಬುದನ್ನು ಮನಗಾಣಲು ನಿರ್ಣಯಿಸಿದಾಗ– "ನೀನು ಇದ್ದದ್ದೇ ಆದರೆ ನನ್ನ ಹೃದಯದಲ್ಲಿಯ ಆತುರವನ್ನು ನೀನು ಬಲ್ಲೆ. ನಾನು ಮುಕ್ತಿಯನ್ನು ಬೇಡುವದಿಲ್ಲವೆಂಬುದು ನಿನಗೆ ಗೊತ್ತಿದೆ. ಎರಡನೆಯವರು ಬೇಡುವ ಯಾವುದನ್ನೂ ನಾನು ಬೇಡುವದಿಲ್ಲವೆಂಬುದೂ ನಿನಗೆ ಗೊತ್ತಿದೆ. ರಾಷ್ಟ್ರವನ್ನು ಉದ್ಧರಿಸಲಿಕ್ಕೆ ನನಗೆ ಶಕ್ತಿಯನ್ನು ಕೊಡು ಎಂದಿಷ್ಟೇ ಬೇಡುತ್ತಿದ್ದೇನೆ. ಅದರಲ್ಲಿದ್ದ ಜನರ ಸೇವೆಗಾಗಿ, ಅವರ ಪ್ರೀತಿಯ ಸೇವೆಗಾಗಿ ದುಡಿಯಲು ಆಯುಷ್ಯವನ್ನು ಕೊಡು, ಅದಕ್ಕಾಗಿ ನಾನು ನನ್ನ ಜೀವನವನ್ನೇ ಮುಡಿಪಾಗಿಡಲು ಕೊಡು" ಎಂಬ ಕಳಕಳಿಯ ಪ್ರಾರ್ಥನೆಯಿಂದ ಬೇಡಿಕೊಳ್ಳುತ್ತಿದ್ದೆ.

"ಇದು ನಿನ್ನ ಕೆಲಸ"

ಹೀಗೆ ಅದೆಷ್ಟೋ ಕಾಲಾವಧಿಯವರೆಗೆ ಯೋಗದ ಸಾಕ್ಷಾತ್ಕಾರಕ್ಕಾಗಿ ಶ್ರಮಿಸಿದೆ. ಕೊನೆಗೊಮ್ಮೆ ಅದರಲ್ಲಿ ಕೆಲವಂಶವನ್ನು ಸಾಧಿಸಿದೆ. ಆದರೂ ಪೂರ್ಣ ಸಮಾಧಾನ ಬಂದಿರಲಿಲ್ಲ. ಕಾರಣ ನಾನು ಏಕಾಂತವಾಸದಲ್ಲಿದ್ದ ಆ ಜೇಲಿನ ಕೋಣೆಯಲ್ಲಿ ಮತ್ತೊಮ್ಮೆ ಬೇಡಿಕೊಂಡೆ, "ನಿನ್ನ ಆದೇಶವನ್ನು ಕೊಡು; ಯಾವ ಕಾರ್ಯವನ್ನು ಮಾಡಬೇಕು, ಅದನ್ನು ಹೇಗೆ ಮಾಡಬೇಕು ಎಂಬುದು ನನಗೆ ತಿಳಿಯದು," ಎಂದು. ಆಗ, ಆ ಯೋಗಸಮಾಧಿಯಲ್ಲಿದ್ದಾಗ, ಎರಡು ಆದೇಶಗಳು ಬಂದವು. "ನಿನಗೆ ನಾನೊಂದು ಕೆಲಸ ಕೊಟ್ಟಿದ್ದೇನೆ. ಈ ದೇಶದ ಉದ್ಧಾರ ಕಾರ್ಯದಲ್ಲಿ ನೀನೂ ನೆರವಾಗಬೇಕು. ಇನ್ನು ಸ್ವಲ್ಪ ಕಾಲದಲ್ಲಿಯೇ ನೀನು ಈ ಜೇಲಿನಿಂದ ಹೊರಗೆ ಹೋಗುವಿ, ನಿನಗೆ ಶಿಕ್ಷೆಯಾಗಬೇಕೆಂಬುದು ನನ್ನ ಇಚ್ಛೆ ಅಲ್ಲ. ನನ್ನ ಕಾರ್ಯ ಮಾಡುವದಕ್ಕೆ, ಅದರ ಸಲುವಾಗಿ ದುಡಿಯುವುದಕ್ಕೆ ಇಲ್ಲಿಗೆ ನಿನ್ನನ್ನು ತಂದಿದ್ದೇನೆ. ನಿನಗೆ ಇದೇ ನನ್ನ ಆದೇಶ. ಮುಂದೆ ಸಾಗು. ನನ್ನ 'ಕಾರ್ಯವನ್ನು ಮಾಡು" ಎಂಬುದು ಮೊದಲನೆಯ ಆದೇಶವಿತ್ತು. ಅದರಂತೆಯೇ. "ಈ 'ಏಕಾಂತವಾಸದ ವರ್ಷದಲ್ಲಿ ಯಾವುದರ ಬಗೆಗೆ ನಿನಗೆ ಸಂಶಯವಿತ್ತೋ ಆ ಕಾರ್ಯದ ಸುಳಿವು ಕೊಡಲ್ಪಟ್ಟಿದೆ. ಅದೆಂದರೆ, ಹಿಂದೂ ಧರ್ಮದ ನಿಜವಾದ ರಹಸ್ಯದ ಗುಟ್ಟು. ಈ ಧರ್ಮವನ್ನೇ ನಾನು ಜಗತ್ತಿನ ಮುಂದೆ ಇಡುವವನಿದ್ದೇನೆ. ಇದನ್ನು ಋಷಿಗಳ, ಸಾಧುಗಳ ಅವತಾರಿ ಪುರುಷರ ಮುಖಾಂತರ ಬೆಳೆಯಿಸಿ ಪೂರ್ಣತ್ವಕ್ಕೆ ತಂದಿದ್ದೇನೆ. ಈಗ ಅದೇ ರಾಷ್ಟ್ರ ರಾಷ್ಟ್ರಗಳಲ್ಲೆಲ್ಲ ಸಾಗಿ ನನ್ನ ಕಾರ್ಯವನ್ನು ಮಾಡುತ್ತಿದೆ. ಭಾರತವನ್ನು ಎಚ್ಚರಿಸುತ್ತಿರುವದಕ್ಕೆ ಇದೇ ಕಾರಣ. ಅದೇ ನನ್ನ ಆದೇಶವನ್ನು ಜಗತ್ತಿಗೆ ದಾರಿದೀಪವನ್ನಾಗಿ ಮಾಡಿ ತೋರಿಸುತ್ತಿದೆ. ಇದೇ ಸನಾತನ ಧರ್ಮ. ನಿನಗೆ ಈ ಮೊದಲಿಗೆ ಗೊತ್ತಿಲ್ಲದ ಧರ್ಮವೇ ಇದು. ಇದು ಅನಂತವಾಗಿದೆ, ಶಾಶ್ವತವಾಗಿದೆ. ಇದನ್ನೇ ನಾನು ಬಹಿರಂಗಪಡಿಸಿ ನಿನಗೆ ತಿಳಿಸಿದ್ದೇನೆ. ನಿನ್ನಲ್ಲಿ ನಿರಾಶಾವಾದಿ, ನಾಸ್ತಿಕವಾದಿ, ಸಂದೇಹವಾದಿಗಳೆಲ್ಲರಿಗೂ ಯೋಗ್ಯ ಸ್ಪಷ್ಟೀಕರಣ ಕೊಟ್ಟಿದ್ದೇನೆ. ಅದಕ್ಕಾಗಿ ನಿನಗೆ ಪ್ರಾಕೃತಿಕ ಮತ್ತು ಸತ್ವ ಪ್ರಭಾವದ ಆಧಾರಗಳನ್ನು ಕೊಟ್ಟು ನಿನ್ನ ಆಂತರಿಕವಾದ ಮತ್ತು ಬಾಹ್ಯವಾದ ಸೃಷ್ಟಿಯಲ್ಲಿ ಮನಗಾಣಿಸಿದ್ದೇನೆ. ಹೊರಗೆ ಹೋದಾಗ 'ಸನಾತನ ಧರ್ಮದ ಸಲುವಾಗಿಯೇ ತಾವು ಎಚ್ಚರಿಸಿದ್ದು, ವಿಶ್ವದ ಸಲುವಾಗಿಯೇ ತಾವು ಎಚ್ಚರಿಸಿದ್ದು, ತಮ್ಮ ಸ್ವಾರ್ಥದ ಸಲುವಾಗಿ ಅಲ್ಲ'– ಎಂಬ ಸಂದೇಶವನ್ನು ಸಾರು. ವಿಶ್ವದ ಸೇವೆಗಾಗಿ ಅವರಿಗೆ ಸ್ವಾತಂತ್ರ್ಯವನ್ನು ನಾನು ದಯಪಾಲಿಸುತ್ತಿದ್ದೇನೆ. ಭಾರತವು ಎಚ್ಚತ್ತಿದೆ ಎಂದಾಗ

ಸನಾತನ ಧರ್ಮವು ಏಳುತ್ತಿದೆ ಎಂದು ತಿಳಿ. ಭಾರತವು ಬಲಿಷ್ಠವಾಗುತ್ತಿದೆ ಅಂದಾಗ ಸನಾತನ ಧರ್ಮವು ಬಲಿಷ್ಠವಾಗುತ್ತಿದೆ ಎಂದು ತಿಳಿ. ಭಾರತವು ವಿಸ್ತಾರವಾಗಿ ಸುತ್ತಲೂ ಹಬ್ಬುತ್ತಿದೆ ಅಂದಾಗ ಸನಾತನ ಧರ್ಮವು ಸುತ್ತಲೂ ವಿಶ್ವವನ್ನೇ ವ್ಯಾಪಿಸುತ್ತಿದೆ ಎಂದು ತಿಳಿ. ಭಾರತವು ಧರ್ಮಕ್ಕಾಗಿ ಮತ್ತು ಧರ್ಮಮಾರ್ಗದಿಂದಲೇ ಏಳುತ್ತಿದೆ. ಧರ್ಮವನ್ನು ಗೌರವಿಸುವುದೆಂದರೆ ರಾಷ್ಟ್ರವನ್ನೇ ಗೌರವಿಸಿದಂತೆ ಎಂದು ತಿಳಿ. ನಾನು ಎಲ್ಲೆಡೆಗಳಲ್ಲಿಯೂ ಇದ್ದೇನೆ. ಎಲ್ಲ ತರಹದ ಜನರಲ್ಲಿಯೂ ಇದ್ದೇನೆ, ಎಲ್ಲ ವಸ್ತುಗಳಲ್ಲಿಯೂ ಇದ್ದೇನೆ. ಈ ಚಳವಳಿಯಲ್ಲಿಯೂ ಇದ್ದೇನೆ. ರಾಷ್ಟ್ರದ ಸಲುವಾಗಿ ಶ್ರಮಿಸುವವರಲ್ಲಿ ಇದ್ದೇನಲ್ಲದೇ ಅವರನ್ನು ವಿರೋಧಿಸುವವರಲ್ಲಿಯೂ, ಅವರಿಗೆ ವಿಘ್ನಗಳನ್ನು ಒಡ್ಡುವವರಲ್ಲಿಯೂ ಇದ್ದೇನೆ. - ಎಲ್ಲರಲ್ಲಿಯೂ, ಎಲ್ಲ ತರಹದ ವಿಚಾರಗಳಲ್ಲಿಯೂ ನಾನು ಇದ್ದೇನೆ. ಅವರೂ ನನ್ನ ಕಾರ್ಯವನ್ನೇ ಮಾಡುತ್ತಿರುತ್ತಾರೆ. ಅವರು ನನ್ನ ವೈರಿಗಳಲ್ಲ. ನನ್ನ ಕಾರ್ಯದ ಸಾಧನಗಳಾಗಿದ್ದಾರೆ. ನಿನ್ನ ಎಲ್ಲ, ಕಾರ್ಯಗಳಲ್ಲಿ ನೀನು ಯಾವ ಕಡೆಗೆ ಸಾಗಿರುವಿ ಎಂಬುದು ತಿಳಿಯದೇ ನೀನು ಮುಂದೆ ಸಾಗಿರುವಿ. ಒಂದು ಕಾರ್ಯ ಮುಗಿಸಲು ಹೋಗಿ ಮತ್ತೊಂದನ್ನೇ ಮುಗಿಸುವಿ. ನಿಂಣಾಮದ ಕಡೆಗೆ ನಿನ್ನ ಲಕ್ಷ್ಯವಿದ್ದಾಗ ನಿನ್ನ ಪ್ರಯತ್ನಗಳು ಮತ್ತೊಂದು ದಿಕ್ಕಿಗೆ ಸಾಗಿರುತ್ತವೆ. 'ಶಕ್ತಿ'ಯು ಜನರಲ್ಲಿ ಪ್ರವೇಶಿಸಿದ್ದಾಳೆ. ಎಂದಿನಿಂದಲೋ ಈ ವಿಚ್ಚರಿಸುವ ಕಾರ್ಯವನ್ನು ನಾನು ಕೈಕೊಂಡಿದ್ದೆ. ಈಗ ಅದರ ಕಾಲ ಬಂದಿದೆ. ನಾನೇ ಅದನ್ನು ಫಲದಾಯಕವಾಗಿ ಮಾಡುವೆ"—ಎಂಬುದು ಎರಡನೆಯ ಸೂಚನೆಯಾಗಿತ್ತು. ★

(ಇದು ಅಲಿಪುರ ಜೇಲಿನಿಂದ ಹೊರಬಂದ ನಂತರ ಅರವಿಂದರು ಉತ್ತರಪಾರಾ ಎಂಬಲ್ಲಿ ಮಾಡಿದ ಭಾಷಣದಿಂದ ಸಂಗ್ರಹಿತ.)

೧೮೮೩ರಲ್ಲಿ 'ಟಿಟ್ ಬಿಟ್ಸ್' ಪತ್ರಿಕೆ ತನ್ನ ವಾಚಕರಿಗೆ ಏಳು ಕೋಣೆಯ ಮನೆಯೊಂದನ್ನು ಪ್ರಥಮ ಬಹುಮಾನವಾಗಿ ಕೊಡುತ್ತೇವೆಂದು ಸಾರಿತು. ಅದನ್ನು ಗಳಿಸಲು ವಾಚಕರು ಮಾಡಬೇಕಾಗಿದ್ದ ಕೆಲಸವಿಷ್ಟೆ, ತಾವೇ ಬರೆದಿರುವ ಇಲ್ಲವೇ ಬೇರೆ ಯಾರಾದರೂ ಬರೆದು ಪ್ರಕಟಿಸಿರುವ ಕತೆ ಇಲ್ಲವೇ ಕವನವೊಂದನ್ನು ಆರಿಸಿ ಪತ್ರಿಕೆಗೆ ಕಳಿಸಬೇಕು. ಹೀಗೆ ಬಂದವುಗಳಲ್ಲಿ ಉತ್ತಮವೆನಿಸಿದ್ದಕ್ಕೆ ಈ ಬಹುಮಾನ.

'ಟಿಟ್ ಬಿಟ್ಸ್' ಮನೆ ವಿಲ್ಲಿಯಂ ಪೇಲ್ಲಿಶ್ ಎಂಬ ಸೈನಿಕನಿಗೆ ಸಿಕ್ಕಿತು. ಆತ ಮೇಕ್ಸ್ ಅಡ್ಲರ್ ಎಂಬಾತನು ಬರೆದ ಕತೆಯೊಂದನ್ನು ಇದಕ್ಕಾಗಿ ಆರಿಸಿ ಕಳಿಸಿದ್ದ. ಈ ಫಲಿತಾಂಶ ಬಹಳ ಮಂದಿಗೆ ಅತೃಪ್ತಿಯನ್ನುಂಟುಮಾಡಿದ್ದಿತು. ಮುನ್ನೂರೈವತ್ತು ಮೂರು ಜನ ಬೈಬಲ್ಲಿನ ಕತೆಯೊಂದನ್ನು ಕಳಿಸಿದ್ದರು. ನೂರಕ್ಕೂ ಮಿಕ್ಕಿ ತಮ್ಮ ಚರ್ಚಿನ ಪ್ರಾರ್ಥನಾಗೀತೆಯನ್ನು ಕಳಿಸಿದ್ದರು.

ಪೇಲ್ಲಿಶ್‌ನಿಗೆ ಸಿಕ್ಕಿದ 'ಟಿಟ್ ಬಿಟ್ಸ್' ಮನೆ ಡಾಲ್ವಿಚ್ ಎಂಬಲ್ಲಿ ಕಟ್ಟಲ್ಪಟ್ಟಿತು. ಮುಂದೆ ಅದನ್ನು ನೋಡಿಹೋಗಲು ದಿನನಿತ್ಯವೂ ಸಾವಿರಾರು ಜನ ಬರುತ್ತಿದ್ದರು.

– ಭಾರತಿ ಎಸ್. ಭಟ್

ಪಕ್ಷಿಗಳ ಭಾಷೆ

ಡಾ. ಸುನಂದಾ ಕುಲಕರ್ಣಿ

" ಆಡು ಬಾ ಕೋಗಿಲೆ
ನಲಿದಾಡು ಬಾರೆ ನವಿಲೆ "

ಎಂದು ಕನ್ನಡದ ಕವಿಯೊಬ್ಬರು ಬರೆದಿದ್ದಾರೆ. ಹೀಗೆ ಆಕಾಶದಲ್ಲಿ ಹಾರಾಡುತ್ತಿರುವ ಪಕ್ಷಿಗಳು ತಮ್ಮ ವಿವಿಧ ಬಣ್ಣಗಳಿಂದ, ಮೈಮಾಟಗಳಿಂದ ನಮ್ಮನ್ನು ರಂಜಿಸುತ್ತಲೇ ಇವೆ. ಪಕ್ಷಿಗಳ ಈ ಚಿಲಿಪಿಲಿಗುಟ್ಟುವಿಕೆಯು ಕರ್ಣಮಧುರವಾಗಿದ್ದು, ಮನಸ್ಸಿಗೆ ಆಹ್ಲಾದವೆನಿಸುತ್ತದೆ. ಕೋಗಿಲೆಯ ಗಾನವನ್ನು ಕೇಳಿ ಆನಂದಿಸದವರೆ ಇರಲಾರರು.

ಪಕ್ಷಿಗಳ ಈ ಉಲಿತವನ್ನು ಅರ್ಥಮಾಡಿಕೊಳ್ಳಲು ಮಾನವ ಎಂದಿನಿಂದಲೂ ಪ್ರಯತ್ನಿಸುತ್ತಲೆ ಇದ್ದಾನೆ. ಕೆಲವು ಪಕ್ಷಿಗಳು ಸುಮ್ಮನೇ ಚಿಲಿಪಿಲಿ ಧ್ವನಿಗೈಯುತ್ತಿದ್ದರೆ, ಕೆಲವು ಮನುಷ್ಯರಂತೆಯೆ ಮಾತನಾಡಿ . ನಮ್ಮನ್ನು ಅವು ಅನುಕರಿಸುತ್ತವೆಯೋ ಏನೋ ಎಂದು ಭಾಸವನ್ನುಂಟುಮಾಡುತ್ತವೆ. ಉದಾಹರಣೆಗೆ ಗಿಳಿ ಸ್ಟಾರ್ಲಿಂಗ್ ಹಕ್ಕಿಗಳನ್ನು ನೋಡಬಹುದು. ಪಕ್ಷಿಗಳ ಈ ಉಲಿತವು ಕೇವಲ ಅವುಗಳ ಭಾಷೆಯಾಗಿರದೆ ಅವುಗಳ ಭಾವನೆಯನ್ನು ಸಹ ವ್ಯಕ್ತಪಡಿಸುವ ಸಾಧನವೂ ಆಗಿದೆ ಎನ್ನುತ್ತಾರೆ, ಡಬ್ಲ್ಯು. ಎಚ್. ತೋರ್ಪ್. ಅವರು ಪಕ್ಷಿಗಳನ್ನು ಒಂಟಿಯಾಗಿ ಬೆಳೆಸಿ, ಬಂಧು-ಬಳಗದವರ ಜೊತೆಗೆ ಬೆಳೆಸಿ. ಹೀಗೆ ನೂರಾರು ಪ್ರಯೋಗಗಳನ್ನು ಮಾಡಿ ಅವುಗಳ ಧ್ವನಿಯನ್ನು ಇಲೆಕ್ಟ್ರಾನಿಕ್ ಸ್ಪೆಕ್ಟ್ರೋಗ್ರಾಮ್‌ನಲ್ಲಿ ಮುದ್ರಿಸಿ ನೋಡಿದ್ದಾರೆ. ಈ ಭಾಷೆಯನ್ನು ಸೂಕ್ಷ್ಮವಾಗಿ ಅಭ್ಯಸಿಸಲು ಎರಡು ಶತಮಾನಗಳಷ್ಟು ಹಿಂದೆಯೇ ಇಂಗ್ಲಂಡು, ಜರ್ಮನಿಗಳ ಪ್ರಾಣಿಶಾಸ್ತ್ರಜ್ಞರು ಪ್ರಯತ್ನಿಸಿದರು. ಆದರೆ ಸೂಕ್ಷ್ಮಯಂತ್ರದ ಅಭಾವದ ಕಾರಣ ಆಗ ಅದು ಅಷ್ಟು ಫಲಕಾರಿಯಾಗಲಿಲ್ಲ.

ತೋರ್ಪ್ ಅವರು ತಮ್ಮ ಪ್ರಯೋಗಕ್ಕಾಗಿ English chhaffinch (Fringilla coelebs) ಎಂಬ ಪಕ್ಷಿಯನ್ನು ಆರಿಸಿಕೊಂಡಿದ್ದಾರೆ. ಈ ಪಕ್ಷಿಯ ಭಾಷೆಯನ್ನು ಅವರು ಎರಡು ತರವ ವಿಂಗಡಿಸಿದ್ದಾರೆ. ಮೊದಲನೆಯದು, ಭಾವೋದ್ರೇಕವನ್ನುಂಟುಮಾಡುವಂತಹದು; ಎರಡನೆಯದು, ಸಮಾಚಾರಗಳನ್ನು ಮುಟ್ಟಿಸಲು ಬಳಸುವಂಥದು. ಮೊದಲನೆಯ ತರಹದ ಧ್ವನಿಯು ಅನುವಂಶಿಕವಾಗಿ ಬಂದದ್ದು. ಆದರೆ ಎರಡನೆಯ ತರಹದ್ದು ಮಾತ್ರ ಪೂರ್ತಿ ಅನುವಂಶಿಕವಾಗಿ ಬಂದದ್ದಿರಬಹುದು ಇಲ್ಲವೆ ಅರ್ಧ ಅನುವಂಶಿಕ, ಅರ್ಧ ಕಲಿಕೆಯಿಂದ ಬಂದದ್ದಿರಬಹುದು, ಇಲ್ಲವೇ ಪೂರ್ತಿ ಕಲಿತದ್ದೇ ಆಗಿರಬಹುದು.

ಪಕ್ಷಿಯು ಅನೇಕ ಶಬ್ದಗಳನ್ನು ಉಪಯೋಗಿಸುತ್ತಿದ್ದರೆ ಅದಕ್ಕೆ ಹಾಡು ಎನ್ನುತ್ತಾರೆ. ಈ ಹಾಡಿನಲ್ಲಿ ಒಂದೇ ಶಬ್ದದ ಪುನರಾವರ್ತನೆಯಾಗಿರಬಹುದು ಇಲ್ಲವೆ ಎರಡು ಮೂರು ಶಬ್ದಗಳ ಸಮ್ಮಿಶ್ರಣವೂ ಇರಬಹುದು. ಒಂದೊಂದೇ ಶಬ್ದವಿದ್ದರೆ ಅದಕ್ಕೆ call-note ಎನ್ನುತ್ತಾರೆ. ಇದು ಕೆಳ ಧ್ವನಿಯುಳ್ಳದ್ದಿರಬಹುದು ಇಲ್ಲವೆ ತಾರಕ ಸ್ವರದಲ್ಲಿ

ರಬಹುದು. ಈ ತರಹ ಒಂದೊಂದೇ ಶಬ್ದಗಳನ್ನು ಹತ್ತಿರದಲ್ಲಿ ಆಹಾರವಿದೆಯೆಂದು ಸೂಚಿಸಲಿಕ್ಕೋ ಇಲ್ಲವೇ ಪ್ರಾಣಾಪಾಯವಿದೆಯೆಂದು ಕೂಗಲಿಕ್ಕೋ ಉಪಯೋಗಿಸಲಾಗುತ್ತದೆ.

ಕೆಳಗಿನ ಧ್ವನಿ ಅಥವಾ ಮಂದ್ರ ಧ್ವನಿಯಲ್ಲಿ ಬರುವ ಶಬ್ದಗಳಲ್ಲಿ ತರಂಗಾಂತರಗಳಿಂದ ಧ್ವನಿಯನ್ನು ಇತರ ಪಕ್ಷಿಗಳೂ ಮನುಷ್ಯರೂ ಗುರುತಿಸಬಹುದು. ಆ ಧ್ವನಿಯಿಂದ ಅದು ಯಾವ ದಿಕ್ಕಿನಿಂದ ಬಂದಿದೆ ಮತ್ತು ಅದರ ತೀವ್ರತೆ ಎಷ್ಟು ಎಂಬುದನ್ನು ತಿಳಿಯಬಹುದು. ಆದರೆ ತಾರಕ ಸ್ವರದಲ್ಲಿ ಧ್ವನಿಯು ಯಾವ ದಿಕ್ಕಿನಿಂದ ಬಂದಿದೆಯೆಂದಾಗಲಿ ಅದರ ತೀವ್ರತೆ ಯೆನ್ನಾಗಲಿ ತಿಳಿಯುವುದು ಕಷ್ಟ. ಹೀಗೆ ತಾರಕ ಸ್ವರದಲ್ಲಿ ಧ್ವನಿ ಹೊರಡಿಸಿ, ಪಕ್ಷಿಯು ತಾನು ಅಡಗಿ ಕುಳಿತು ಉಳಿದವಕ್ಕೆ ಎಚ್ಚರಿಕೆಯನ್ನು ಕೊಡುತ್ತದೆ. ತನ್ನ ಅಸ್ತಿತ್ವವನ್ನು ಉಳಿದವಕ್ಕೆ ತೋರಿಸಿಕೊಡುವುದಿಲ್ಲ.

ಗಂಡು ಪಕ್ಷಿಯು ಉದ್ದುದ್ದ ಹಾಡುಗಳನ್ನು ಹಾಡಿ ಹೆಣ್ಣನ್ನು ಕರೆಯುತ್ತದೆ. ಆದರೆ ಅದೇ ಹೊತ್ತಿಗೆ ಉಳಿದ ಗಂಡುಗಳಿಗೆ ತನ್ನ ಸೀಮೆಯಲ್ಲಿ ಬರಬಾರದೆಂಬ ಮುನ್ನೆಚ್ಚರಿಕೆಯನ್ನು ಸಹ ನೀಡುತ್ತದೆ. ವಿಶಿಷ್ಟ ಸಂಗತಿಗಳನ್ನು ಹೇಳಲು ವಿಶಿಷ್ಟ ತರಹದ ಧ್ವನಿಯನ್ನು ಬಳಸಲಾಗುತ್ತದೆ. ಆನುವಂಶಿಕವಾಗಿ ಬಂದಿರುವ ಧ್ವನಿ ಯಾವುದೇ ದೇಶದಲ್ಲಿ ಹುಟ್ಟಿದ ಅಥವಾ ಬೆಳೆದ ಪಕ್ಷಿಗಳ ಗುತ್ತಿಗೆಯಲ್ಲ; ಅದು ಎಲ್ಲಿ ಹುಟ್ಟಿದರೂ ಎಲ್ಲಿ ಬೆಳೆದರೂ ಒಂದೇ ತೆರನಾಗಿ ಇರುತ್ತದೆಂದು ಸ್ಪೆಕ್ಟ್ರೋಗ್ರಾಫ್ ತೋರಿಸಿಕೊಟ್ಟಿದೆ.

ನುರಿತ ಕಿವಿಗಳು ಒಂದೇ ಜಾತಿಯ ಹಕ್ಕಿಗಳಲ್ಲೂ ಪ್ರತಿಯೊಂದರ ಧ್ವನಿಯನ್ನು ಗುರುತಿಸುತ್ತವೆ. ಪಕ್ಷಿಯನ್ನು ಒಂಟಿಯಾಗಿ ಬೆಳೆಸಿದರೆ ಅದರ ಭಾಷೆಯು ತೀರ ಸಂಕುಚಿತವಾಗುತ್ತದೆ. ಆದರೆ ಎರಡು ಮೂರು ಹಕ್ಕಿಗಳನ್ನು ಉಳಿದವುಗಳಿಂದ ಪ್ರತ್ಯೇಕಿಸಿದರೆ ಅವುಗಳು ಉದ್ದುದ್ದ ಹಾಡುಗಳನ್ನು ಕಲಿಯುತ್ತವೆ. ಈ ಹಾಡುಗಳು ಎಷ್ಟೇ ದೊಡ್ಡದಾಗಿದ್ದರೂ ಆ ಜಾತಿಯ ವಿಶಿಷ್ಟ ಹಾಡಿನಿಂದ ಬೇರೆಯಾಗಿರುತ್ತದೆ. ಎರಡು ಮೂರು ಹಕ್ಕಿಗಳನ್ನು ಬೆಳೆಸಿದಾಗ, ಒಂದನ್ನೊಂದು ಪ್ರಚೋದಿಸಿ ದೊಡ್ಡ ಹಾಡನ್ನು ಕಲಿಯುತ್ತವೆ.

ಚ್ಯಾಫಿಂಚ್ ಹಕ್ಕಿಯು ಹುಟ್ಟಿ ಆರು ವಾರದಿಂದ ೧೧ ತಿಂಗಳವರೆಗೆ ತನ್ನ ಶಬ್ದ ಸಂಗ್ರಹವನ್ನು ಬೆಳೆಸುತ್ತದೆ. ತಿಂಗಳ ನಂತರ ಎಷ್ಟೇ ಹಾಡುಗಳನ್ನು ಅದರ ಬಂಧು-ಬಾಂಧವರು ಕಲಿಸಿದರೂ ಅದು ಕಲಿಯದು. ಮುಂದೆ ಆಜೀವ ಪರ್ಯಂತ ಅದು ತಾನು ಕಲಿತದ್ದನ್ನಷ್ಟೇ ತಿರುತಿರುಗಿ ಹಾಡುತ್ತದೆ. ಮರಿ ಪಕ್ಷಿಯು ತಂದೆ, ತಾಯಿಗಳಿಂದ ಮಾತುಗಳನ್ನು ಕಲಿಯುತ್ತದೆ. ವಸಂತಕಾಲದಲ್ಲಿ ಈ ಶಿಕ್ಷಣವು ಭರದಿಂದ ಸಾಗುತ್ತದೆ. ತಾಯಿ, ತಂದೆಗಳು ಇರದಿದ್ದರೆ, ಅಕ್ಕ ಪಕ್ಕದವರಿಂದ ಅದು ಕಲಿಯುತ್ತದೆ.

ಮರಿ ಹಕ್ಕಿಯು ಅರ್ಥವಿರದ ಅನೇಕ ಧ್ವನಿಯನ್ನು ಮೊದಲು ಕಲಿಯುತ್ತದೆ. ನಂತರ ನಿರ್ದಿಷ್ಟ ಸ್ವರದಿಂದ ನಿರ್ದಿಷ್ಟ ಶಬ್ದಗಳನ್ನು ಉಚ್ಚರಿಸಲು ಕಲಿಯುತ್ತದೆ. ಇದೇ ತರಹ ನಾವು ಚಿಕ್ಕ ಮಕ್ಕಳಲ್ಲಿಯೂ ಕಾಣುತ್ತೇವೆ. ಅರ್ಥಹೀನ ಶಬ್ದಗಳನ್ನು ಮಕ್ಕಳು ದೊಡ್ಡವರಾದ ನಂತರ ಉಚ್ಚರಿಸುವುದಿಲ್ಲ.

ಗಿಳಿಯಂಥ ಕೆಲವು ಹಕ್ಕಿಗಳು ಬೇರೆ ಬೇರೆ ಧ್ವನಿಯನ್ನು ಪೂರ್ತಿಯಾಗಿ ಅನುಕರಿಸುತ್ತವೆ. ಈ ತರಹ ಏಕೆ ಮಾಡುತ್ತವೆಯೆಂದು ತಿಳಿದು ಬಂದಿಲ್ಲ. ಶಾಸನದ ಪರಿಣಾಮವನ್ನು ಸುಲಿಗ್ಗದಕ್ಕಿವಲು ಇರಬಹುದು ಎಂದು ಪ್ರಾಣಿಶಾಸ್ತ್ರಜ್ಞರ ಅಭಿಪ್ರಾಯ.

ಈಗ ಎರಡು ಬೇರೆ-ಬೇರೆ ತಳಿಗಳಿಂದ ಹುಟ್ಟಿರುವ ಹಕ್ಕಿಗಳ ಮೇಲೆ ಪ್ರಯೋಗ ಮಾಡುತ್ತಿದ್ದಾರೆ. ಈ ಹೊಸ ತಳಿಗಳಿಂದ ಇನ್ನೂ ಏನೇನು ತಿಳಿಯಬಹುದೆಂದು ಕಾದುನೋಡಬೇಕು. ✿

ಒಂದು ಗುರಿ ಮೂರು ಬಲಿ

ಡಿ. ಆರ್. ಕುಲಕರ್ಣಿ

ನನ್ನ ಬೇಟೆಯ ಅನುಭವಗಳಲ್ಲಿಯೇ ಇದು ಅವಿಸ್ಮರಣೀಯ ಎಂದೆನ್ನಬಹುದು. ನಾನು ಬೆಳಗಾವಿಯ ಸಮೀಪ ಚಿರತೆಯೊಂದನ್ನು ಬೇಟೆ ಯಾಡಿದ ಮೇಲೆ ಸುತ್ತಮುತ್ತಲಿನ ಹಳ್ಳಿಗರಿಗೆ ಕಾಡುಪ್ರಾಣಿಗಳಿಂದ ತಮಗುಂಟಾಗುವ ತೊಂದರೆ ಯನ್ನು ನಿವಾರಿಸಬಲ್ಲವನೊಬ್ಬನಿದ್ದಾನೆ ಎಂದು ಮನವರಿಕೆಯಾಯಿತು. ಎಷ್ಟೋ ಜನ ಕಾಡು ಪ್ರಾಣಿಗಳಿಂದ ತಮಗಾದ, ತಮ್ಮ ಸಾಕುಪ್ರಾಣಿಗಳಿ ಗಾದ ಹಾನಿಯನ್ನು, ಭಯವನ್ನು ಕತೆ ಮಾಡಿ ಹೇಳಿಹೋದರು. ಆದರೆ ಯಾವುದೂ ನಿರ್ದಿಷ್ಟ ವಾಗಿ ನಂಬಲಾಗುತ್ತಿರಲಿಲ್ಲ. ಈ ಯೋಚನೆಯ ಮೇರೆಗೆ ಬಂದೂಕು ಎತ್ತಿಕೊಂಡು ಬೇಟೆಗೆ ಹೊರ ಡುವವ ನಾನಾಗಿರಲಿಲ್ಲ. ಆದರೆ ಹಳ್ಳಿಗರು ಹೇಳು ವುದನ್ನು ಹಾಗೇ ನಿರ್ಲಕ್ಷಿಸಲೂ ಆಗುತ್ತಿರಲಿಲ್ಲ. ಏಕೆಂದರೆ ಅವರಿಗೆ ಸಾಕಷ್ಟು ಹಾನಿಯಾದದ್ದೂ ನಿಜವೆ. ನನ್ನ ಕ್ಯಾಂಪಿನ ಸಮೀಪದಲ್ಲಿಯೇ ಕೆಲ- ವೊಮ್ಮೆ ಹುಲಿಯೋ ಚಿರತೆಯೋ ಕೊಂದೊಗೆದ ಪ್ರಾಣಿಗಳ ಕಳೇಬರಗಳು ಕಾಣಸಿಕ್ಕುತ್ತಿದ್ದವು. ಮ- ನೋಲ್ಲಾಸಕ್ಕಾಗಿ ನಾನೆಂದೂ ಬೇಟೆಯಾಡಿದವನಲ್ಲ.

೧೯೫೧ರ ಆಗಸ್ಟ್ ತಿಂಗಳಿನಲ್ಲಿ ನಾನು ಜಂಗಲ್ ಬೆಲ್ಟ್‌ನಲ್ಲಿ ಕ್ಯಾಂಪು ಹೂಡಬೇಕಾಗಿ ಬಂತು. ಜಂಗ ಲ್ ಬೆಲ್ಟ್ ಅರಣ್ಯದಲ್ಲಿ ಅರ್ಥಿಕ ಸ್ಥಿತಿ, ಬೀಸು ಮರಗಳ ಬೆಳೆ ಮತ್ತು ಬಿದಿರು ನಿರ್ವಹಣೆ ನನ್ನ ಈ ಕ್ಯಾಂಪಿನ ಉದ್ದೇಶ. ನಾನು ಆ ಕೆಲಸ ಆರಂಭಿಸಿ ಒಂ ದೆರಡು ದಿನವಾಗಲೇ ನಾಲ್ಕು ಮೈಲು ದೂರದ ಮಾಯಂಡಿ ಗ್ರಾಮದವನೊಬ್ಬ ಓಡಿಬಂದ. ತನ್ನ ಅಕ್ಕ ಹಿಂದಿನ ದಿನ ಸಂಜೆಯಿಂದ ಕಾಣೆಯಾಗಿದ್ದಾ ಳೆಂದೂ, ಹುಲಿಯೋ ಚಿರತೆಯೋ ಅವಳನ್ನು ಕೊಂದು ತಿಂದಿರಬೇಕೆಂದೂ ಹೇಳಿದ. ಯಾವ ಸ್ಥಳದಲ್ಲಿ ಅವಳು ಕೊಲ್ಲಲ್ಪಟ್ಟಿರಬೇಕೆಂದು ಅವನನ್ನು ಕೇಳಿದೆ. ತಾನಲ್ಲಿ ಹೋದರೂ ಯಾವ ಜಾಗ ಎಂಬುದನ್ನು ಸರಿಯಾಗಿ ಪತ್ತೆಹಚ್ಚಲಾಗಿಲ್ಲ ಎಂದು ಹೇಳಿದ. ಹಾಗಾದರೆ ಹಿಂಸ್ರಪ್ರಾಣಿ ಯಿಂದಲೇ ಕೊಲ್ಲಲ್ಪಟ್ಟಳೆಂದು ಹೇಗೆ ಹೇಳುವಿ? ಎಂದೆ. ಕೆಲವೊಮ್ಮೆ ಮೃಗಗಳಿಂದ ಪೆಟ್ಟುತಿಂದ ವರೂ ತಪ್ಪಿಸಿಕೊಂಡು ಬದುಕಿ ಮನೆಗೆ ಎರಡು ಮೂರು ದಿನಗಳ ನಂತರ ಮರಳುವುದೂ ಇದೆ. ಆದರೆ ತನ್ನ ಅಕ್ಕಳು ಮಾತ್ರ ಕೊಲ್ಲಲ್ಪಟ್ಟದ್ದು ನಿಜ

ಎಂದು ಆತ ಹೇಳತೊಡಗಿದ. ಹಾಗಾದರೆ ಮೊದಲು ಆನರ ಕಳೇಬರ ಬಿದ್ದಿದ್ದ ಜಾಗವನ್ನು ಪತ್ತೆಮಾಡಿಕೊಂಡು ನಂತರ ನನ್ನ ಬಳಿ ಬಾ ಎಂದೆ. ಆತ ನನ್ನನ್ನು ತನ್ನೊಂದಿಗೆ ಆಕಳು ಮತ್ತು ಆ ಮೃಗ ಹೋರಾಡಿರಬಹುದಾದ ಜಾಗಾದವರೆಗೂ ಜೊತೆಗೆ ಬರಲು ಒತ್ತಾಯಿಸತೊಡಗಿದ. ಅರೆಮನಸ್ಸಿನಿಂದ ಒಪ್ಪಿಕೊಂಡೆ. ಏಕೆಂದರೆ ಅದನ್ನು ಮುಗಿಸಿ ನಾನು ಈ ಕ್ಯಾಂಪಿಗೆ ಬಂದ ಉದ್ದೇಶಿತ ಕೆಲಸದ ಕಡೆ ಗಮನ ಹರಿಸಬೇಕಿತ್ತು.

ಆತನ ಹಿಂದೆ ಹೋದೆವು. ಆಕಳು ಮತ್ತು ಮೃಗದ ನಡುವೆ ಬಲು ತುರುಸಿನ ಹೋರಾಟವೇ ನಡೆದಿರಬೇಕೆಂದುಕೊಂಡೆ. ಹಾಗೆ ನಡೆದ ಹೋರಾಟದಿಂದಾಗಿ ಕೆದರಿದ ಮಣ್ಣು, ಅಲ್ಲಿ ಮೂಡಿದ ಹೆಜ್ಜೆ ಗುರುತುಗಳು, ಆಕಳು ತನ್ನ ಕೋಡನ್ನು ನೆಲಕ್ಕೆ ತಿವಿದಿದ್ದರಿಂದಾದ ಗುಳಿಗಳು ಸ್ಪಷ್ಟವಾಗಿ ಕಂಡವು. ಆಕಳು ಕೂಡ ಬಲಶಾಲಿಯೇ ಆಗಿತ್ತೆಂಬುದು ಅದರಿಂದ ಸ್ಪಷ್ಟವಾಯಿತು.

ಈಗ ಮಾಡಬೇಕಾದ ಮೊದಲ ಕೆಲಸ ಎಂದರೆ ಆಕಳಿನ ಕಳೇಬರ ಬಿದ್ದ ಸ್ಥಳವನ್ನು ಪತ್ತೆ ಹಚ್ಚುವುದು. ನಾವಿದ್ದಲ್ಲಿ ಗ್ರಾಮದ ಸ್ವಲ್ಪ ಅಂತರದಲ್ಲಿ ಹರಿಯುವ ನದಿ ಗುಂಟ ಹೆಜ್ಜೆಗಳು ಮುಂದುವರಿದಿದ್ದವು. ಈ ನದಿ ಮುಂದೆ ಮತ್ತೊಂದು ನದಿಯನ್ನು ಕೂಡಿಕೊಳ್ಳುತ್ತದೆ. ನಾಲೆಯ ಮತ್ತೊಂದು ಬದಿಗೆ ಅರಣ್ಯವಿದೆ. ಅದು ಹುಲಿಯೋ ಚಿರತೆಯೋ—ಒಟ್ಟು ಆಕಳನ್ನು ಕೊಂದ ಪ್ರಾಣಿ ನಂತರ ಅದನ್ನು ಎಳೆದುಕೊಂಡು ಅಡವಿಯೊಳಗೆ ಹೋಗಿರಬೇಕೆಂಬುದು ಸ್ಪಷ್ಟವಾಯಿತು.

ಈ ವೇಳೆಗೆ ಜೋರು ಮಳೆ. ನಾನು ರೇನ್ ಕೋಟು ಹಾಕಿಕೊಂಡಿದ್ದರೂ ತೋಯಿಸಿಕೊಂಡಿದ್ದೆ. ಬೆಳಕೂ ಕಡಿಮೆಯಾಗತೊಡಗಿತ್ತು. ಈ ಹುಡುಕಾಟವನ್ನು ಒಮ್ಮೆ ಮುಗಿಸಿಯೇ ಬಿಡುವುದು ಒಳ್ಳೆಯದೆಂದು ನಿರ್ಧರಿಸಿದೆ. ಮೊದಲು ಪ್ರವಾಹದ ಎದುರುದಿಕ್ಕಿಗೆ ಕೆಲವಷ್ಟು ದೂರ ನಡೆದೆವು. ಆದರೆ ಅಲ್ಲಿ ಆ ಪ್ರಾಣಿ ದನವನ್ನು ಎಳೆದುಕೊಂಡು ಹೋದ ಗುರುತಾಗಲಿ ಹೆಜ್ಜೆಗಳ ಗುರುತಾಗಲಿ ಕಾಣಲಿಲ್ಲ. ನಂತರ ಪ್ರವಾಹದ ಗುಂಟ ಹೊರಟೆವು. ಕೆಲ ಅಡಿಗಳ ಅಂತರ ಕ್ರಮಿಸಿದಾಗ ಮೂರು ನಾಲ್ಕು ಅಡಿ ಎತ್ತರ ಹುಲ್ಲು ಬೆಳೆದ ಪ್ರದೇಶವೊಂದು ಕಾಣಿಸಿತು. ಸುತ್ತ ಗಿಡಮರಗಳು ಅಷ್ಟು ಎತ್ತರಕ್ಕೆ ಬೆಳೆದಿರಲಿಲ್ಲ. ಮಳೆಯಂತೂ ಬಿಟ್ಟಿರಲೇ ಇಲ್ಲ. ದೂರದಲ್ಲಿ ಹುಲಿಯೊಂದು ನಮ್ಮ ಕಡೆ ಬೆನ್ನು ಮಾಡಿ ಕುಳಿತಿರುವುದು ಕಾಣಿಸಿತು. ಬಹುಶಃ ಕಳೇಬರವನ್ನು ತಿನ್ನುತ್ತಿದ್ದಿರಬೇಕು. ಮಳೆ ಹನಿಗಳು ನೆಲದ ಮೇಲೆ ಬಿದ್ದು ಎಲೆರಾಶಿಗೆ ತಾಗಿ ಉಂಟಾದ ಸದ್ದಿನಲ್ಲಿ ನಮ್ಮ ಇರುವು ಆ ಹುಲಿಗೆ ಗೊತ್ತಾಗುತ್ತಿರಲಿಲ್ಲ. ನಾವು ಅರೆಕ್ಷಣ ಅದನ್ನು ನೋಡುತ್ತಲೇ ಇದ್ದೆವು. ಅಲ್ಲದೇ ಅದಕ್ಕೂ ನಮಗೂ ನಡುವೆ ಸುಮಾರು ನೂರು ಅಡಿಗಳಷ್ಟು ಅಂತರವಾದರೂ ಇದ್ದಿರಬೇಕು. ಹುಲಿಯನ್ನು ನೋಡಿದ ತಕ್ಷಣ ಒಂದು ಕೈ ನೋಡಿಯೇಬಿಡಬೇಕೆಂಬ ಮನಸ್ಸಾಯಿತು. ಕ್ಯಾಂಪಿನಿಂದ ಬರುವಾಗ ಹುಲಿಯನ್ನು ನೋಡುತ್ತೇನೆಂದು ನಾನಂದುಕೊಂಡಿರಲಿಲ್ಲ. ಅದಕ್ಕೆ ಕಾರಣವೆಂದರೆ ಹಗಲಿನಲ್ಲಿ ಸಾಮಾನ್ಯವಾಗಿ ಹುಲಿಗಳು ಹೊರಬೀಳದೇ ನೆರಳಿನಲ್ಲಿ ಮಲಗಿ ವಿಶ್ರಾಂತಿ ಪಡೆಯುತ್ತವೆ ಎಂಬುದು ಮತ್ತು ರಾತ್ರಿ ಮಾತ್ರ ಬೇಟೆಯನ್ನು ತಿನ್ನಲು ಬರುತ್ತವೆ ಎಂದು ನನಗೆ ತಿಳಿದಿತ್ತು. ಆದರೆ ಇದು ಅನಿರೀಕ್ಷಿತ. ರಾತ್ರಿಯಾಗಿದ್ದರೆ ಹುಲಿಬೇಟೆಗೆ ಮಂಚವನ್ನು ಸಿದ್ಧಪಡಿಸಿ ಕಾಯಬಹುದಾಗಿತ್ತು. ಆದರೆ ಈಗ ಅದಕ್ಕೆ ಸಮಯವಿರಲಿಲ್ಲ. ನಾಲೆಯ ಬದಿಯಲ್ಲೊಂದು ದೊಡ್ಡ ಬಿದ್ದ ಮರವಿತ್ತು. ಅದರ ಬೊಡ್ಡೆಗೆ ಆತುಕೊಂಡು ಹುಲಿಗೆ ನೇರವಾಗಿ ಗುರಿ ಇಡಬಹುದಾಗಿತ್ತು. ಆದರೆ ನನ್ನಲ್ಲಿದ್ದದ್ದು ಕೆಲವು ತೋಟಾಗಳು ಮಾತ್ರ. ಈ ರೀತಿ ಹುಲಿ ನಮಗೆ ಎದುರಾದೀತೆಂದು ನಾನು ಮೊದಲೇ ಊಹಿಸಿದ್ದರೆ ಅವಶ್ಯಕ ಮದ್ದುಗುಂಡುಗಳನ್ನು ತರಬಹುದಾಗಿತ್ತು. ದಾರಿಯಲ್ಲಿ ಬೇರೆ ಯಾವುದಾದರೂ ಪ್ರಾಣಿ ಅಡ್ಡಬಂದರೆ ಹೊಡೆದು ಕೆಡವಲು ಅವುಗಳನ್ನು ತಂದಿದ್ದೆ. ನಾನು [illegible] ತುಂಬಿದ್ದ ಬಂದೂಕಿನಲ್ಲಿ ಬಕ್‌ಶಾಟ್ ಮತ್ತು ಲೀಥಲ್ ಬಾಲ್ ಲೋಡು ಮಾಡಿದ್ದೆ. ಬಂದೂಕಿನ ಕುದುರೆಯನ್ನು ಹಿಡಿದು ಬೊಡ್ಡೆಗೆ ಆತುಕೊಂಡೆ. ದೂರದಲ್ಲಿ ಅರ್ಧಂಬರ್ಧ ಕಾಣುತ್ತಿದ್ದ ಹುಲಿಯ



ಎದೆಗೆ ಅಜಮಾಸು ಗುರಿಯಿಟ್ಟೆ. ಯಾಕೆಂದರೆ ಸರಿಯಾಗಿ ಗುರಿಯಿಡಬೇಕೆಂದರೆ ಬೆಳೆದಿದ್ದ ಹುಲ್ಲು ಅಡ್ಡಿಯಾಗುತ್ತಿತ್ತು. ಬಕ್‌ಶಾಟ್ ಮತ್ತು ಲೀಥಲ್ ಬಾಲುಗಳನ್ನು ಒಮ್ಮೆಲೇ ಹಾರಿಸಿದೆ. ಅದು ನನ್ನ ವೈಶಿಷ್ಟ್ಯವಾಗಿತ್ತಾದರೂ ಈ ಸಲ ನಾನು ತಪ್ಪು ಮಾಡಿದೆನೇನೋ ಅನಿಸಿತು. ಸಾಮಾನ್ಯವಾಗಿ ಬಕ್‌ಶಾಟ್‌ಗಳು ೩೦೦ ಗ್ರೇನ್ಸ್ ಭಾರದವು. ಪ್ರಾಣಿಯ ದೇಹಕ್ಕೆ ಬಿದ್ದು ಗಾಯವಾದ ಒಳಗೆ ಪಸರಿಸಿಕೊಂಡು ಬಿಡುತ್ತವೆ. ಅಲ್ಲದೇ ಲೀಥಲ್ ಬಾಲ್ ಕೂಡ ಅದೇ ಜಾಗಕ್ಕೆ ಗುರಿಯಿಡಲ್ಪಟ್ಟು ಬಕ್‌ಶಾಟಿನೊಂದಿಗೇ ಹೊಡೆಯಲ್ಪಟ್ಟುದರಿಂದ ಮತ್ತಷ್ಟು ಗಾಯವುಂಟುಮಾಡಿ ಪ್ರಾಣಿಗೆ ಪ್ರಾಣಾಪಾಯವುಂಟುಮಾಡುತ್ತವೆ. ಈ ರೀತಿ ಎರಡನ್ನೂ ಒಮ್ಮೆಲೇ ಹೊಡೆಯಲು ಬೇಟೆಯಾದವನಿಗೆ ಸ್ವಲ್ಪ ಮುಂದಾಲೋಚನೆ, ಊಹಿಸುವ ಶಕ್ತಿ ಮತ್ತು ಅಭ್ಯಾಸಬಲ ಅವಶ್ಯ. ಇದರಿಂದ ಗುರಿಯಿಟ್ಟವನ ಎದೆಗೆ ಪೆಟ್ಟಾಗುತ್ತದೆಂದು ಕೆಲವರ ಅಂಬೋಣ. ಆದರೆ ಅಂಥ ಹೆದರಿಕೆಯೇನೂ ಇಲ್ಲ.

ಕಾಡೆಮ್ಮೆ, ಕಾಡಾಕಳು, ಜಿಂಕೆ ಮೊದಲಾದ ಪ್ರಾಣಿಗಳಿಗೆ ವಾಸನೆಯಿಂದ ಇತರ ಪ್ರಾಣಿಗಳ ಸುಳಿವು ಮತ್ತು ಇರುವಿಕೆಯನ್ನು ಪತ್ತೆ ಮಾಡಬಲ್ಲ ಶಕ್ತಿಯಿದೆ. ಹುಲಿ ಚಿರತೆಗಳಿಗೆ ಅಂಥ ಸಾಮರ್ಥ್ಯವಿಲ್ಲ. ಒಂದು ವೇಳೆ ಮಾರ್ಜಾಲ ಜಾತಿಗೆ ಸೇರಿದ ಹುಲಿ ಚಿರತೆ ಅಥವಾ ಕಾಡುಬೆಕ್ಕುಗಳಿಗೆ ಇಂಥ ಶಕ್ತಿ ಇದ್ದಿದ್ದರೆ ಉಳಿದ ಪ್ರಾಣಿಗಳಿಗೆ ಉಳಿಗಾಲವೇ ಇರುತ್ತಿರಲಿಲ್ಲವೋ ಏನೋ. ಹುಲಿ ಪ್ರಾಣಿಯನ್ನು ನೋಡಿಯಾಗಲಿ ಅದರ ಸದ್ದನ್ನು ಸೂಕ್ಷ್ಮವಾಗಿ ಆಲಿಸಿಯಾಗಲಿ ಎರಗುವುದಕ್ಕೆ ಮತ್ತು ಬೇಟೆ ಹೊಡೆದು ಕೊಲ್ಲಲಿಕ್ಕೆ ಸಿದ್ಧವಾಗುತ್ತದೆ.

ನಾನೀಗ ಗುರಿಯಿಟ್ಟು ಹೊಡೆದದ್ದು ಒಂದು ಹೆಣ್ಣು ಹುಲಿಯನ್ನು ಎಂಬುದು ನನಗೆ ನಂತರ ಗೊತ್ತಾಯಿತು. ಗುಂಡು ಬಿದ್ದ ತಕ್ಷಣ ಹುಲಿ ನೆಗೆದು ಮಾಯವಾಯಿತು. ಹೋಗುವಾಗ ಒಮ್ಮೆ ಗುಡುಗು ಹಾಕಿ ಕಂಟಿಗಳ ಹಿಂದೆ ಅಡಗಿಕೊಂಡಿತು. ಆದರೆ ಕೂಡಲೇ ಸಾಮಾನ್ಯ ಎತ್ತರ ಬೆಳೆದ ಹುಲಿಮರಿಯೊಂದು ಗುಡುಗು ಹಾಕುತ್ತ ನಮ್ಮತ್ತಲೇ ಬರತೊಡಗಿತು. ನನಗೆ ಇದು ಆಕಸ್ಮಿಕ. ಹುಲಿಯೊಂದಿಗೆ ಮರಿಯೂ ಇದೆ ಎಂಬುದು ನನಗೆ ಗೊತ್ತಿರಲೇ ಇಲ್ಲ. ಕೂಡಲೇ ನನ್ನ ಬಂದೂಕನ್ನು ಮತ್ತೊಮ್ಮೆ ಬಕ್‌ಶಾಟ್ ಮತ್ತು ಲೀಥಲ್ ಬಾಲಿನಿಂದ ಲೋಡು ಮಾಡಿದೆ. ಮರಿಗೆ ಗುರಿಯಿಟ್ಟು ಮೊದಲು ಬಕ್‌ಶಾಟ್ ಹೊಡೆದೆ. ಮರಿ ನಾಲೆಯ ದಡದ ಬಳಿ ದೊಪ್ಪನೇ ಬಿತ್ತು. ಆದರೆ ಮತ್ತೊಂದು ಆಘಾತ ನಮಗಾಗಿ ಕಾದಿತ್ತು. ಮತ್ತೊಂದು ಮರಿ ನಮ್ಮ ಮೇಲೆ ಏರಿ ಬರುವವರಂತೆ ಗುಡುಗುತ್ತ ಓಡಿ ಬರತೊಡಗಿತು. ಈಗ ನನ್ನ ಬಂದೂಕಿನಲ್ಲಿ ಉಳಿದದ್ದು ಒಂದೇ ಒಂದು ಲೀಥಲ್‌ಬಾಲ್. ಅದನ್ನು ಹಾರಿಸದೇ ಬೇರೆ ದಾರಿಯಿರಲಿಲ್ಲ. ಹಾರಿಸಿದೆ. ಆ ಮರಿಯೂ ಸತ್ತುಬಿತ್ತು.


ಅಂದಿನ ಆ ಆಘಾತ ಮತ್ತು ನಮ್ಮ ಸಮಯಾನುಸಾರ ವರ್ತನೆಯ ಬಗ್ಗೆ ನಾವಿಬ್ಬರೂ ಮಾತಾಡಿಕೊಳ್ಳುತ್ತ ಎರಡು ಹೆಜ್ಜೆ ಮುಂದಿಡುತ್ತಿರುವಂತೆಯೇ ಆತ, "ನೋಡಿ ಸರ್, ತಾಯಿ ಹುಲಿ ಕಂಟಿಗಳಿಂದ ಹೊರಬಂದು ತನ್ನ ಸತ್ತ ಮರಿಗಳ ಹತ್ತಿರ ನಿಂತಿದೆ" ಎಂದ. ನೋಡಿದೆ. "ಸರ್, ಕೂಡ್ಲೇ ಅದನ್ನೂ ಗುಂಡು ಹಾರಿಸಿ ಕೊಂದುಬಿಡಿ" ಅಂದು ಈಗ ನನ್ನ ಮನಸ್ಥಿತಿ ಏನಾಗಿರಬೇಕು? ಗಾಯಗೊಂಡ, ಕೋಪಗೊಂಡ ಹೆಣ್ಣುಹುಲಿ ಎದುರು ನಿಂತಿದೆ! ನಮ್ಮ ಮೇಲೆ ನೆಗೆಯಲು ಅದಕ್ಕೆ ಸಾಧ್ಯವಿತ್ತೋ ಇಲ್ಲವೋ–ಕೈಗೆ ಸಿಕ್ಕರೆ ಮಾತ್ರ ನಮ್ಮನ್ನು ಹರಿದು ತಿಂದು ತೇಗುವುದರಲ್ಲಿ ಸಂಶಯವೇ ಇರಲಿಲ್ಲವೆಂದು ಅನಿಸಿತು. ನನ್ನ ಬಳಿ ಈಗ ಕೇವಲ ಬಂದೂಕಿದೆ. ಕ್ಯಾಂಪಿನಿಂದ ಬರುವಾಗ ತಂದಿದ್ದ ಗುಂಡುಗಳೆಲ್ಲ ತೀರಿಹೋಗಿವೆ. ಕೋಪೋದ್ರಿಕ್ತ ಹುಲಿ ಎಷ್ಟು ದೂರವಾದರೂ ಒಂದೇ ಸಲಕ್ಕೆ ನೆಗೆಯಬಲ್ಲದೆಂದು ನನಗೆ ಗೊತ್ತಿತ್ತು. ಇಂಥ ಸಂದರ್ಭಗಳಲ್ಲಿ 'ಬಂದದ್ದೆಲ್ಲಾ ಬರಲಿ' ಎಂದು ಅಸಹಾಯಕರಾಗಿ ಕೂಡುವುದೊಂದೇ ದಾರಿ. ಬಂದೂಕನ್ನು ಮರದ ಬೊಡ್ಡೆಗೆ ಆನಿಸಿಟ್ಟೆ. ಹುಲಿಯನ್ನು ನೋಡುತ್ತ ಕೈಕಟ್ಟಿಕೊಂಡು ನಿಂತುಬಿಟ್ಟೆ. ನನ್ನನ್ನು ರಕ್ಷಿಸಿಕೊಳ್ಳುವುದು ಆ ಭಗವಂತನ ಕೈಯಲ್ಲಿದೆ ಎಂಬುದು ಗೊತ್ತಾಗಿ

ಹೋಯಿತು. ಎರಡೇ ಎರಡು ಕ್ಷಣ ಹುಲಿ ಸತ್ತ ಮರಿಗಳನ್ನು ಮೂಸಿನೋಡಿ ಮತ್ತೆ ಕಂಟಿಗಳಲ್ಲಿ ಮಾಯವಾಯಿತು.

ಸದ್ಯ ಪಾರಾದವು ಎಂದುಕೊಂಡೆನಾದರೂ ಗಾಯಗೊಂಡು ಕಂಟಿಗಳಲ್ಲಿ ಅಡಗಿಕೊಂಡಿರುವ ಹುಲಿಯನ್ನು ಹುಡುಕಿ ಕೊಂದೇ ಬಿಡಬೇಕೆಂದು ನಿರ್ಧರಿಸಿದೆ. ಯಾಕೆಂದರೆ ಇಂಥ ಹುಲಿ ಬಹಳ ಅಪಾಯಕಾರಿ. ಮುಂದೆ ಅವು ನರಭಕ್ಷಕಗಳಾಗಿ ಪರಿಣಮಿಸುವುದೂ ಉಂಟು. ಹಳ್ಳಿಗಳ ಸುತ್ತ ಮುತ್ತಲಾದರೂ ಇಂಥ ಹುಲಿ ಯಾವಾಗ ಎಲ್ಲಿಂದ ಹೇಗೆ ಎರಗೀತು; ಯಾರ ರಕ್ತ ಹೀರೀತು ಎಂಬುದನ್ನು ಹೇಳಲು ಸಾಧ್ಯವೇ ಇಲ್ಲ. ಈಗ ನಾನು ಮತ್ತೆ ಜಗಲ್‌ಬೆಟ್ಟಿಗೆ ಹೋಗಿ ಮತ್ತಷ್ಟು ಗುಂಡುಗಳನ್ನು ತಂದು, ಗಾಯಗೊಂಡ ಹುಲಿ ರಕ್ತ ಸುರಿಸುತ್ತ ಎಲ್ಲಿ ಹೋಗಿರಬಹುದೆಂಬುದನ್ನು ಪತ್ತೆಹಚ್ಚಬೇಕೆಂದು ಯೋಚಿಸಿದೆ. ಆದರೆ ಹುಲಿ ಮುಂದು ರಕ್ತದ ಗುರುತು ಕೂಡ ತೋರದಂತೆ ಕೊಂಡು ಹೋಗಿರುವುದೂ ಸಾಧ್ಯ ಎಂಬ ವಿಚಾರ ಬಂದು ಹಾಗೇ ನಿಂತಿದ್ದೆ.

ಇಷ್ಟರಲ್ಲೇ ನಾವು ಕಾಡಿನಲ್ಲಿ ಬಂದ ವಿಚಾರ ತಿಳಿದ ಅಲ್ಲಿಯ ಒಬ್ಬ ಬೇಟೆಗಾರ ನಾವಿದ್ದಲ್ಲಿಗೇ ಬಂದ. ನಾನು ಗಾಯಗೊಂಡ ಹುಲಿ ಕಂಟಿಗಳಲ್ಲಿ ಅಡಗಿರುವ ವಿಚಾರ ತಿಳಿಸಿ, ಅದನ್ನು ಹುಡುಕಿ ಕೊಲ್ಲಬೇಕಾದ ಆವಶ್ಯಕತೆಯನ್ನು ಒತ್ತಿ ಹೇಳಿದೆ. ಆತ ಕೂಡಲೇ ಹಳ್ಳಿಗೆ ಹೋಗಿ ಕೆಲವರನ್ನು ಕೂಡಿಸಿಕೊಂಡು ಬಂದ. ಬರುವಾಗ ತನ್ನೊಂದಿಗೆ ಒಂದು ೧೨ ಬೋರ್‌ಗನ್ನನ್ನು ತಂದ. ಕೆಲವರ ಕೈಯಲ್ಲಿ ದೊಣ್ಣೆಗಳಿದ್ದವು. ಅವರೆಲ್ಲ ಕಂಟಿಗಳಿದ್ದಲ್ಲಿ ಹೋಗಿ ಹುಡುಕತೊಡಗಿದರು. ಎರಡು ತಾಸಿನವರೆಗೂ ಹುಡುಕಾಟ ನಡೆಸಿದರೂ ಹುಲಿಯ ಸುಳಿವು ಸಿಕ್ಕದಾದಾಗ ಅದು ಬಹುಶಃ ಪಾರಾಗಿ ಕಾಡುಕಂಟಿಗಳಿರುವಲ್ಲಿ ಹೋಗಿರಬೇಕೆಂದು ತರ್ಕಿಸಿದೆ. ಕಾಡುಕಂಟಿಗಳ ಮುಳ್ಳುಗಳು ಹುಲಿಯುಗುರಿನಷ್ಟೆ ಹರಿತವಾದುವುಗಳು. ಮೈ ಕೈ ಪರಚಿಕೊಂಡು ಬಿಡುತ್ತವೆ. ಅಷ್ಟೇ ಅಲ್ಲ ಆಳವಾದ ಗಾಯವುಂಟು ಮಾಡಿ ರಕ್ತ ಹರಿಸುತ್ತವೆ. ಹುಡುಕಲು ಹೋದ ಎಷ್ಟೋ ಜನ ಇಷ್ಟರೊಳಗಾಗಿ ಬಟ್ಟೆ, ಹರಿದು ಕೊಂಡು. ಮೈ ಕೈಮುಖಗಳಲ್ಲಿ ರಕ್ತ ಹರಿಸಿಕೊಂಡುದನ್ನು ನೋಡಿ ಹುಡುಕಾಟ ಸಾಕು ಎಂದು ಹೇಳಿದೆನಲ್ಲದೆ ಸತ್ತ ಹುಲಿಮರಿಗಳ ಚರ್ಮ ಸುಲಿಯಲು ಏರ್ಪಾಟುಮಾಡಿ ಜಗಲ್‌ಬೆಟ್ ಕ್ಯಾಂಪಿಗೆ ಮರಳಿದೆ. [illegible] ಚರ್ಮ ಸುಲಿದು ಉಪ್ಪು ನೀರಿನ ದ್ರಾವಣದಲ್ಲಿ ಅದ್ದಿ ಇಟ್ಟರೆ ಮಾತ್ರ ಪ್ರಾಣಿಗಳ ಚರ್ಮವನ್ನು ಚೆನ್ನಾಗಿ ಕಾದಿರಿಸಲು ಸಾಧ್ಯ ಹಾಗೂ ಇಂಥ ಚರ್ಮಕ್ಕೆ ಹೆಚ್ಚು ಬೆಲೆಯೂ ಸಿಗುತ್ತದೆ.

ಮರುದಿನ ಮತ್ತೆ ಆ ಹುಲಿಗಾಗಿ ಹುಡುಕಾಟ ಆರಂಭಿಸಬೇಕಿತ್ತು. ಆದರೆ ಬೇರೆ ಯಾವುದೋ ಅವಸರದ ಕೆಲಸಕ್ಕಾಗಿ ನಾನು ಪರಸ್ಥಳಕ್ಕೆ ಹೋಗಬೇಕಾಯಿತು. ಹೀಗಾಗಿ ನನ್ನ ಜತೆಯವರಿಗೆ ಹುಲಿಯ ಸುಳಿವೇನಾದರೂ ಸಿಕ್ಕರೆ ನನಗೆ ತಕ್ಷಣ ತಿಳಿಸಬೇಕು ಎಂದು ಸೂಚನೆ ನೀಡಿದ್ದೆ. ಎರಡು ದಿನಗಳಾದರೂ ಅದರ ಬಗ್ಗೆ ಯಾವ ಸುದ್ದಿಯೂ ಸಿಗಲಿಲ್ಲ. ಮೂರನೆಯ ದಿನ ಹಳ್ಳಿಗನೊಬ್ಬ ನನ್ನ ಬಳಿ ಬಂದವನೇ ನಾವು ಬೇಟೆಯಾಡಿದ ಆ ಕಾಡಿನಲ್ಲಿ ಸಂಜೆಯ ವೇಳೆಗೆ ಒಂದು ಹುಲಿ ಕೆಸರಿನಲ್ಲಿ ಹೊರಳಾಡುತ್ತಿತ್ತೆಂದೂ ರಕ್ತ ಸುರಿಯುತ್ತಿತ್ತೆಂದೂ ಹೇಳಿದ. ಬಹುಶಃ ಹುಲಿಗೆ ನೆಕ್ಕಲು ಬಾರದ ಜಾಗದಲ್ಲಿ ಗುಂಡು ಬಿದ್ದು ಗಾಯವಾಗಿರಬೇಕು. ನೊಣಗಳು ಒಳಹೊಕ್ಕು ತೊಂದರೆಕೊಡುತ್ತಿದ್ದಿರಬೇಕು. ಅಂತೆಯೇ ಅದು ಹೊರಳಾಡುತ್ತಿದ್ದಿರಬಹುದೆಂದು ಭಾವಿಸಿದೆ. ಹುಲಿ ಚಿರತೆಗಳಿಗೆ ನೆಕ್ಕಲು ಸಾಧ್ಯವಾಗುವ ಜಾಗದಲ್ಲಿ ಗಾಯವಾದರೆ ನೆಕ್ಕಿಕೊಂಡು ಗಾಯವನ್ನು ಮಾಯುವಂತೆ ಮಾಡಿಕೊಂಡು ಬಿಡುತ್ತವೆ. ನೆಕ್ಕಲಾಗದ ಜಾಗದಲ್ಲಿ ಗಾಯವಾದರೆ ಹುಣ್ಣಾಗಿ ಮಾರಣಾಂತಿಕ ಸ್ಥಿತಿಗೆ ತಲುಪುತ್ತವೆ. ಈ ಹುಲಿಗೆ ಬಹುಶಃ ಭುಜದ ಮೇಲೆ ಗುಂಡು ಬಿದ್ದಿರಬೇಕು. ಒಂದೆರಡು ಗಂಟೆಗಳ ನಂತರ ಕೆಲವು ದನ ಕಾಯುವ ಹುಡುಗರು ತೀರಾ ಕೊಳೆತು ನಾರುತ್ತಿರುವ ಹುಲಿಯ ಶವವನ್ನು ಕಂಡಿರುವುದಾಗಿ ಸುದ್ದಿ ತಂದರು.



ನಗೆಲಾಯ? ನ್ಯಾಯಾಲಯ!

ವಕೀಲ ಫಿರ್ಯಾದಿಗೆ,

"ಆರೋಪಿ ನಿನಗೆ ಏನೆಂದು ಬೈದನೆಂದು ಇನ್ನೊಮ್ಮೆ ಹೇಳು?"

ಸಾಕ್ಷಿ,

"ಸ್ವಾಮಿ. ಅದನ್ನು ಸಭ್ಯಗೃಹಸ್ಥರೆದುರು ಹೇಳುವಂತಿಲ್ಲ."

ವಕೀಲ,

"ಹಾಗಾದರೆ ಅದನ್ನು ನ್ಯಾಯಾಧೀಶರಿಗೆ ಮಾತ್ರ ಕೇಳುವಂತೆ ಅವರ ಕಿವಿಯಲ್ಲಿ ಹೇಳು!"

■

ವಕೀಲ: "ಆರೋಪಿ ನಿನಗೇನು ಮಾಡಿದ?"

ಸಾಕ್ಷಿ: "ನನ್ನನ್ನು ಸಿಕ್ಕಾಪಟ್ಟೆಯಾಗಿ ಅವಹೇಳನ ಮಾಡಿದ"

ವಕೀಲ: "ಏನೇನು ಹೇಳಿದ?"

ಸಾಕ್ಷಿ: "ನೀನು ಅಂಥವನು, ಇಂಥವನು, ಹಾಳಾಗಿ ಹೋಗು - ನರಕಕ್ಕೆ ಹೋಗು, ಎಂದ."

ವಕೀಲ: "ನೀನೇನು ಮಾಡಿದೆ?"

ಸಾಕ್ಷಿ: "ನಾನು ಕೋರ್ಟಿಗೆ ಬಂದೆ!"

■

ನ್ಯಾಯಾಧೀಶ ಆರೋಪಿಗೆ,

ಕಿನ ರಾತ್ರಿಯ ನಂತರ ೩ರ ಬೆಳಗ್ಗಿಯೊಳಗೆ, ಫಿರ್ಯಾದಿಯ ಮನೆಯ ಹಿಂಬಾಗಿಲನ್ನು ಆಕ್ರಮವಾಗಿ ಪ್ರವೇಶಿಸಿ, ಅವನಿಗೆ ಅಥವಾ ಅವನ ಮನೆಯವರಿಗೆ ತಿಳಿಯಗೊಡದಂತೆ, ಅವನ ಮನೆಯಲ್ಲಿದ್ದ ಕಪಾಟಿನ ಕೀಲಿಯನ್ನು ಮುರಿದು ಅಥವಾ ತೆಗೆದು ಅದರೊಳಗಿದ್ದ ಬೆಲೆ ಬಾಳುವ ಬೆಳ್ಳಿ-ಬಂಗಾರ ಆಭರಣ ಮುಂತಾದ ಅಜಮಾಸ ಎರಡು-ಮೂರು ಸಾವಿರ ರೂಪಾಯಿ ಬೆಲೆಯಾಗಬಹುದಾದ ವಸ್ತುಗಳನ್ನು ಕದ್ದು ಅಥವಾ ಕದಿಯುವ ಉದ್ದೇಶದಿಂದ ತೆಗೆದುಕೊಂಡು ಓಡಿಹೋಗಲು ಪ್ರಯತ್ನಿಸುತ್ತಿದ್ದಿ, ಎಂದು ಆರೋಪವಿದೆ. ಏನೆನ್ನುತ್ತೀ?"

ಆರೋಪಿ: "ನಾನು ಅಂ......ಏನು?"

■

ನ್ಯಾಯಾಧೀಶ: "ಏನು? ಕೇವಲ ಹತ್ತು ರೂಪಾಯಿಗೆ ಒಬ್ಬನ ಕೊಲೆ ಮಾಡಿದೆಯಾ?"

ಆರೋಪಿ: "ಕೆಟ್ಟಕಾಲ ಮಹಾಸ್ವಾಮೀ! ಏನು ಮಾಡಲಿ? ಅಲ್ಲೊಂದು ಹತ್ತು ರೂಪಾಯಿ ಇಲ್ಲೊಂದು ಹತ್ತು ರೂ...!"

ವಕೀಲ ಸಾಕ್ಷಿಗೆ,

"ನೀನು ಕುಡಿಯುತ್ತೀಯಾ ?"

"ಇಲ್ಲ."

"ಸಿಗರೇಟಿನ ಚಟ ?"

"ಇಲ್ಲ."

"ಆಗೀಗ ಕುಡಿಯುವದು?"

"ಇಲ್ಲ."

"ಇನ್ನು ಇತರ ಯಾವುದೇ ಚಟ?"

"ಇಲ್ಲವೇ ಇಲ್ಲ".

"ಹಾಗಾದರೆ ನಿನಗೆ ಯಾವುದೇ ಚಟಗಳೇ ಇಲ್ಲವೇ?"

"ಇಲ್ಲ, ಒಂದೇ ಒಂದು ಚಟವಿದೆ."

"ಏನದು ?"

"ಸುಳ್ಳು ಹೇಳುವುದು!"

•

ನ್ಯಾಯಾಧೀಶ ಆರೋಪಿಗೆ,

"ನೀನು ನಿನ್ನ ನೆರೆಮನೆಯವನ ಕೋಳಿಗಳನ್ನು ಕದಿಯುತ್ತಿದ್ದುದನ್ನು ತಾವು ನೋಡಿದ್ದೇವಾಗಿ ಎರಡು ಜನ ಸಾಕ್ಷಿ ಹೇಳುತ್ತಾರೆ. ನಿನಗೇನು ಹೇಳುವುದಿದೆ?"

ಆರೋಪಿ,

"ಸ್ವಾಮಿ, ನಾನು ಕದ್ದುದನ್ನು ನೋಡದೇ ಇದ್ದ ನೂರು ಜನ ಸಾಕ್ಷಿಗಳನ್ನಾದರೂ ಹಾಜರು ಪಡಿಸುತ್ತೇನೆ. ತಾವೇನು ಹೇಳುತ್ತೀರಿ?"

—ಜೆಸ್‌ಕ್ವೀನ್



"ದೀಪಾವಳಿಗೆ ಬಂದ ಅಳಿಯಂದಿರು, ಉಗಾದಿ ಆದಮೇಲೂ ಹೋಗೋ ಹಾಗೆ ಕಾಣ್ಲಿಲ್ಲ. ಮಗುವಿನ ನಾಮಕರಣದ ಹೊತ್ತಿಗಾದರೂ ಇವರ ಕೆಲಸ ಮಾಡ್ತಾ ಇರೋ ಫ್ಯಾಕ್ಟರಿ ತೆಗೆಯಬಹುದು."

ಬಾಬ್ ಕ್ಯಾಟ್

ಗೋವಾ

ತನ್ನ ತವರಾದ ಉತ್ತರ ಅಮೇರಿಕದಲ್ಲಿಯೇ ಬಹುಜನ ಕಂಡರಿಯದ–ಕೇಳರಿಯದ [illegible] ಪಾಲಿನ ಈ ಪ್ರಾಣಿ ಬಹುಶಃ ಪಶುಸಾಮ್ರಾಜ್ಯದಲ್ಲಿಯೇ ಒಂದು ರಹಸ್ಯಜೀವಿ. ಅದನ್ನು ಒಂದೆರಡು ಬಾರಿಗೆ ಕಂಡವರಿಗೆ ಅದರ ಆಹಾರ–ವಿಹಾರ, ಜೀವನ ಕ್ರಮಗಳ ಬಗ್ಗೆ ಅರಿತುಕೊಳ್ಳುವುದಂತೂ ಸಾಧ್ಯವೇ ಇಲ್ಲ. ಸುಲಭವಾಗಿ ಕಣ್ಣಿಗೆ ಬೀಳುವ ಪ್ರಾಣಿಯೂ ಇದಲ್ಲ.

ಅಟ್ಲಾಂಟಿಕ್ಕಿನಿಂದ ಪ್ಯಾಸಿಫಿಕ್‌ವರೆಗೆ, ದಕ್ಷಿಣ ಕೆನಡಾದಿಂದ ಮೆಕ್ಸಿಕೋವರೆಗೆ ಕಾಡುಗಳಲ್ಲಿ ಅವಿತುಕೊಂಡಿರುವ ಇದು ಮಾರ್ಜಾಲ ಕುಟುಂಬದ ಮತ್ತೊಬ್ಬ ಸದಸ್ಯ. ಆಡುಭಾಷೆಯಲ್ಲಿ ಲಿಂಕ್ಸ್ ಕ್ಯಾಟ್, ಕಾಡುಬೆಕ್ಕು ಎಂದು ಕರೆಸಿಕೊಳ್ಳುವ ಇದಕ್ಕೆ ಬಾಬ್‌ಕ್ಯಾಟ್ ಎಂಬ ಹೆಸರೂ ಇದೆ. ಸಾಮಾನ್ಯವಾಗಿ ಇದನ್ನು ಅಮೇರಿಕನ್ ಬಾಬ್ ಕ್ಯಾಟ್‌ಎಂದು ಕರೆಯಲಾಗುತ್ತದೆ. ಬಾಬ್‌ಕ್ಯಾಟ್ ಎಂದು ಇದಕ್ಕೆ ಹೆಸರು ಬರಲು ಇದಕ್ಕಿರುವ ಗಿಡ್ಡವಾದ ಕುಚ್ಚುಬಾಲ (ಬಾಬ್) ಕಾರಣ. ಈ ಪ್ರದೇಶದ ಹಿಂಸ್ರ ಪಶುಗಳು, ವ[illegible]ಗಳು ಗಣನೀಯ ಪ್ರಮಾಣದಲ್ಲಿ ನಾಶವಾಗಿವೆಯಾದರೂ ಬಾಬ್‌ಕ್ಯಾಟ್ ಮಾತ್ರ ಇನ್ನೂ ಅಡಗಿಕೊಂಡು – ಅಲೆದುಕೊಂಡು ಬೇಟೆಯಾಡಿ ಜೀವಿಸುತ್ತಲಿದೆ.

ನಿಶಾಚರಿ ಇದು. ಆದರೂ ಸದಾಕಾಲ ಚಟುವಟಿಕೆಯುಳ್ಳದ್ದಾಗಿರುತ್ತದೆ. ಇದರ ಜಿಡುಗಣ್ಣುಗಳು ಯಾವಾಗಲೂ ಸುತ್ತಮುತ್ತ ಸೂಕ್ಷ್ಮವಾಗಿ ವೀಕ್ಷಿಸುತ್ತಿದ್ದರೆ ಕಿವಿಗಳು ನಿಮಿರಿಕೊಂಡು ಪರಿಸರವನ್ನು ಆಲಿಸುತ್ತಲೇ ಇರುತ್ತವೆ. ಗಿಡಮರಗಳ ಮೇಲೆ, ಪೊದರುಗಳಲ್ಲಿ, ಹಿಮಾವೃತ ದಿನ್ನೆಗಳ ಮೇಲೆ ಅಥವಾ ಮರೆಯಲ್ಲಿ ಇರುವ ಇದು ಸರಸರನೇ ಓಡಾಡಿಕೊಂಡು ಮರೆಯಾಗಿ ಬಿಡುತ್ತದೆ. ಹೀಗಾಗಿ ಅದರ ಪಕ್ಕದಲ್ಲಿಯೇ ಹಾದು ಹೋದರೂ ಅದರ ಇರುವು ಗೊತ್ತಾಗುವುದಿಲ್ಲ.

ಒಂದು ಅಡಿಯಷ್ಟು ಎತ್ತರ. ಮೂರು ಅಡಿಗಳಷ್ಟು ಉದ್ದದ ಈ ಪ್ರಾಣಿಗೆ ಗಿಡ್ಡ ಬಾಲ. ಗಿಡ್ಡ ಕಾಲು, ಅಗಲವಾದ ಪಾದಗಳಿವೆ. ಮುಖ ಸಾಮಾನ್ಯವಾಗಿ ಬೆಕ್ಕಿನಂತೆಯೇ ಆದರೂ ಕಿವಿಗಳು ಚಿಕ್ಕವು. ಕಿವಿಗಳ ಕೆಳಗೆ ಮತ್ತು ದವ

ವಾಗಿರುವ ಕತ್ತಿನ ಸುತ್ತ ತುಪ್ಪುಳಿರುತ್ತದೆ. ಕಿವಿಗಳ ಮೇಲ್ತುದಿಗೆ ಕಪ್ಪನೆಯ ಜೊಂಪು-ಕಿರುಕೂದಲಿವೆ. ಮೈಯೆಲ್ಲ ಕಂದು ಬಣ್ಣದ್ದಿದ್ದು ಮೇಲೆ ಬೂದು ಬಣ್ಣದ ದಪ್ಪ ಚುಕ್ಕೆಗಳಿವೆ. ಬಾಲಪ್ರಾಂತವನ್ನು ಬಿಟ್ಟರೆ ಸಾಮಾನ್ಯವಾಗಿ ಬಾಬ್‌ಕ್ಯಾಟ್ ಚಿರತೆ ಮರಿಯನ್ನು ಹೋಲುತ್ತದೆ.

ತನ್ನದೇ ಆದ ಗಡಿಗಳನ್ನು ಗುರುತಿಸಿಕೊಂಡು ಆ ಪ್ರದೇಶದಲ್ಲಿ ತನ್ನದೇ ಪ್ರಭುತ್ವ ನಡೆಸಿಕೊಂಡು ಜೀವಿಸುವ ಇಂಥ ಪ್ರಾಣಿ ಬೇರೊಂದಿಲ್ಲ ಎನ್ನಬೇಕು. ಈ ವಿಷಯದಲ್ಲಿ ಅದು ತುಂಬ ಜಾಗರೂಕ. ತನ್ನ ಸೀಮೆಯೊಳಗೆ ಮಾತ್ರ ಸಂಚರಿಸಿ, ಬೇಟೆಯಾಡಿಕೊಂಡಿರುತ್ತದೆ ಬಾಬ್‌ಕ್ಯಾಟ್. ಮಧ್ಯವರ್ತಿ ಸ್ಥಳದಲ್ಲಿ ವಾಸಸ್ಥಾನ ನಿರ್ಮಿಸಿಕೊಳ್ಳುತ್ತದೆ. ಅಲ್ಲಿಯೇ ಅದರ ಕುಟುಂಬ ಜೀವನ. ಗುಡ್ಡದ ಓರೆ, ಪೊದರು, ಮರಗಳ ಪೊಟರೆ ಇಂಥವುಗಳಲ್ಲಿ ವಾಸಿಸಿ, ತನ್ನ ಸೀಮೆಯಲ್ಲಿ ಮಾತ್ರ ಬೇರೊಂದು ಬಾಬ್‌ಕ್ಯಾಟ್ ಬರದ ಹಾಗೆ ಎಚ್ಚರವಹಿಸುತ್ತದೆ. ತನ್ನ ಎಲ್ಲೆ ಮೀರುವುದು ತೀರಾ ಕಡಿಮೆ. ಒಂದು ವೇಳೆ ತನ್ನ ಸೀಮೆಯಲ್ಲಿ ಬೇರೊಬ್ಬನ ಪ್ರವೇಶವಾಗಿದೆ ಎಂಬುದನ್ನು ಈ ಸೂಕ್ಷ್ಮ ಮೂಗಿನ ಮಾರ್ಜಾಲ ಅತಿ ಶೀಘ್ರ ಕಂಡುಕೊಳ್ಳುತ್ತದೆ.

ಸಾಮಾನ್ಯವಾಗಿ ಮರಿಗಳೊಂದಿಗೆ ಹೆಣ್ಣು ಸೀಮೆಯಲ್ಲಿ ಕೂಡ ಬಲು ದೂರ ಹೋಗುವುದಿಲ್ಲ. ಸುಲಭವಾಗಿ ಆಹಾರ ಅಥವಾ ಬೇಟೆ ಸಿಗುವಂಥ ನೆಲೆಗಳನ್ನು ಗುರುತಿಸಿಕೊಂಡು ಅಲ್ಲಿಯೇ ಬಚ್ಚಿಸಿ ಕಾಯುತ್ತ ಕೂಡುತ್ತದೆ. ಆದರೆ ತರುಣ ಬಾಬ್‌ಕ್ಯಾಟ್ ಇಲ್ಲವೇ ಹಿರಿಯ ಗಂಡು ಬಾಬ್‌ಕ್ಯಾಟ್ ಮಾತ್ರ ಒಮ್ಮೊಮ್ಮೆ ಸೀಮೋಲ್ಲಂಘನೆ ಮಾಡುವುದುಂಟು. ಹೀಗಾದಾಗ ಆ ಸೀಮೆಯ ಬಾಬ್‌ಕ್ಯಾಟಿನೊಂದಿಗೆ ಹೋರಾಟ ಅನಿವಾರ್ಯ. ಇದು ಘೋರ ಹೋರಾಟ. ಇದರಿಂದಾಗಿ ಹೆಚ್ಚು ತೊಂದರೆಗೊಳಗಾಗುವುವೆಂದರೆ ಹೆಣ್ಣು ಬಾಬ್‌ಕ್ಯಾಟುಗಳು. ಮರಿಗಳಂತೂ ದಾರಿ ತಪ್ಪಿ ಅನೇಕ ಸಲ ಗಂಡಾಂತರಕ್ಕೆ ಎರವಾಗಬೇಕಾಗುತ್ತದೆ. ಆದ್ದರಿಂದ ಕದನದಿಂದ ದೂರವಿರಲು ಹೆಣ್ಣು ಬಾಬ್‌ಕ್ಯಾಟ್ ಮರಿಗಳನ್ನು ತನ್ನೊಂದಿಗೇ ಕರೆದುಕೊಂಡು ಸೀಮೆಯ ಒಳಗೇ ತಿರುಗಾಡುತ್ತದೆ.

ಇರುವೆ ಹುತ್ತಗಳು, ಕಂಟಿಗಳು, ನೀರಿನ ಒರತೆಗಳು ಇವರ ಸೀಮಾಸ್ಥಾನಗಳು. ಈ ಎಲ್ಲೆಯನ್ನು ದಾಟಿ ಒಂದು ವೇಳೆ ಅತಿಥಿ ಬಂದರೆ ಅದಕ್ಕೆ [illegible]. ಬೇರೆ ಬಾಬ್‌ಕ್ಯಾಟ್‌ನ ಸೀಮೆಗೆ [illegible] [illegible] ಅದನ್ನು [illegible] [illegible] [illegible]. ಇದೆಲ್ಲ ಹೋರಾಟ ತಪ್ಪಿಸಿಕೊಳ್ಳುವುದಕ್ಕಾಗಿ. ನೆಲವನ್ನು, ಅರ್ಧ ತಿಂದುಳಿದ ಪ್ರಾಣಿಗಳ ಶರೀರಗಳನ್ನು ಅಲ್ಲಲ್ಲಿ ಬಿಸುಟ ಪ್ರಾಣಿಗಳ ಮಲಮೂತ್ರಗಳನ್ನು ಮೂಸಿ ನೋಡುವ ಈ ಬಾಬ್‌ಕ್ಯಾಟ್ [illegible] ಬೇರೆ ಸೀಮೆಯಲ್ಲಿ ಬಂದಿದ್ದೇನೆಯೋ ಇಲ್ಲವೋ ಎಂಬುದನ್ನು ಅರಿತುಕೊಳ್ಳುತ್ತದೆ.

ತಮ್ಮ ಸೀಮೆಯಲ್ಲಿ ಅಲ್ಲಲ್ಲಿ ಮೂತ್ರ ವಿಸರ್ಜಿಸುವುದೊಂದು ಇವುಗಳ ವೈಶಿಷ್ಟ್ಯ. ಹೀಗೆ ಮಾಡುವುದರಿಂದ ಅವು ತಮ್ಮ ಸೀಮೆಯನ್ನು ಸ್ಥಾಪಿಸಿಕೊಳ್ಳುತ್ತವೆ. ಇದು ಬೇರೆ ಬಾಬ್‌ಕ್ಯಾಟಿಗೆ ಎಚ್ಚರಿಕೆ ಕೂಡ. ಅಷ್ಟೇ ಅಲ್ಲ, ಇವುಗಳ ಆಸನದ್ವಾರದ ಎಡಬಲಕ್ಕೆ (ತಿಕಗಳ ಮೇಲೆ) ಇರುವ ಅಡಿಕೆಬೆಟ್ಟು ಗಾತ್ರದ ಗ್ರಂಥಿಗಳಿಂದ ಹೊರಡುವ ವಿಶಿಷ್ಟ ವಾಸನೆ (Pheromone) [illegible]. ಇದು [illegible] ಮತ್ತು ಹೆಣ್ಣು-ಗಂಡುಗಳ ಭೇದವನ್ನು ಅರಿತುಕೊಳ್ಳಲು ಸಹಾಯವಾಗುತ್ತದೆ.

ಒಮ್ಮೊಮ್ಮೆ ಕೆಲವು ಬಾಬ್‌ಕ್ಯಾಟುಗಳು ತಮ್ಮ ಸೀಮೆ ಬಿಟ್ಟು ನೂರು ಮೈಲುಗಳಷ್ಟು ದೂರದವರೆಗೂ ರಾತ್ರೋರಾತ್ರಿ ಓಡುವುದುಂಟು. ಇದಕ್ಕೆ ಕಾರಣ ಆಹಾರ ಮತ್ತು ಬೇಟೆಯ ಕೊರತೆ. ಹೀಗೆ ಹೋಗುವುದರಲ್ಲೂ ಸಾಕಷ್ಟು ವೈವಿಧ್ಯವಿದೆ. ಈ ಅಂತರ ಕ್ರಮಿಸುವಿಕೆ ಬಾಬ್‌ಕ್ಯಾಟಿನ ಲಿಂಗ, ವಯಸ್ಸು, ಬೇಟೆ ಸುಲಭವಾಗಿ ದೊರೆಯುವ ಪ್ರದೇಶಗಳ ಮೇಲೆ



ಅವು [illegible] ಬಾಬ್‌ಕ್ಯಾಟ್ ಮರಿ ಗಳೊಡನಿದ್ದರೆ [illegible] ಕ್ಕೆ ಹಾಕು ವುದಿಲ್ಲ. ತನ್ನ [illegible] ಕೊಂಡು [illegible] ತಿರುಗುತ್ತದೆ. [illegible] ವಾಗಿ ತಿರುಗಾಡತೊಡಗಿದ ಮೇಲೆ ತಾಯಿಗೆ ಅವು [illegible]

ವರೆಗೆ ಅಥವಾ ಗರ್ಭಧರಿಸುವವರೆಗೆ ತಾಯಿ ಗಂಡಿನಷ್ಟೇ ದೂರಕ್ಕೆ ಹೋಗಬಲ್ಲದು. ತನ್ನ ಸ್ವಸ್ಥಾನಕ್ಕೆ ಮರಳಲು ಅದಕ್ಕೆ ಒಮ್ಮೊಮ್ಮೆ ತಿಂಗಳುಗಟ್ಟಲೇ ಸಮಯ ಹಿಡಿಯುತ್ತದೆ.

ಆಹಾರಕ್ಕಾಗಿ ಬಾಬ್‌ಕ್ಯಾಟ್ ಬೇಟೆಯಾಡು ವುದು ಹೆಚ್ಚಾಗಿ ಚಿಕ್ಕ ಹಕ್ಕಿಗಳು ಮತ್ತು ಇಲಿ [illegible]

ವಿಶೇಷವಾಗಿ ಜಾಕ್‌ರ್‍ಯಾಬಿಟ್‌ಗಳು, ಕಾಟನ್ ಟೇಲ್‌ಗಳು (ಇವೆರಡೂ ಅಮೇರಿಕದ ಇಲಿಜಾತಿಗೆ ಸೇರಿದ ಪ್ರಾಣಿಗಳು.) ಇದರ ಮುಖ್ಯ ಬೇಟೆ. ಶೇಕಡಾ ೬೦ ರಷ್ಟು ಬಾಬ್‌ಕ್ಯಾಟುಗಳು ಇದನ್ನೇ ಅವಲಂಬಿಸಿವೆ. ಮೇಲಿನೆರಡೂ ಸಿಕ್ಕದಿದ್ದಾಗ, ಹಕ್ಕಿಗಳು ಮತ್ತು ಕೋರೆ ಹಲ್ಲುಳ್ಳ ದಂಶಕ-ಗಳನ್ನು ಬೇಟೆಯಾಡುವುದು. ಅನಿವಾರ್ಯವೆನಿಸಿದಾಗ ಮಾತ್ರ ಪರ್ವತಗಳ ಇಳಿಜಾರು ಪ್ರದೇಶಗಳಲ್ಲಿ ವಿಪುಲವಾಗಿ ಸಿಗುವ ಜಿಂಕೆಗಳನ್ನು ಬೇಟೆಯಾಡಲು ಹೋಗುತ್ತದೆ.

ಜಿಂಕೆಗಳನ್ನು ಕೂಡ ಬೇಟೆಯಾಡ ಬಲ್ಲ ಸಾಮರ್ಥ್ಯವಿರುವುದಾದರೂ ಆ ಕೆಲಸಕ್ಕೆ ಮುಂದಾಗುವುದಿಲ್ಲ. ಚಳಿಗಾಲದಲ್ಲಿ, ಯಾವ ಪ್ರಾಣಿಯೂ ತನ್ನ ಪಂಜಿನ ಹೊಡೆತಕ್ಕೆ ಸಿಕ್ಕದಂತಾದಾಗ ಜಿಗಿದು ಕುಳಿತು, ಹೋಗುತ್ತಿರುವ ಜಿಂಕೆಯ ಕುತ್ತಿಗೆಗೆ ಹಾರಿ ಕಚ್ಚಿ ಹಿಡಿಯುತ್ತದೆ ಬಾಬ್ ಕ್ಯಾಟ್. ಚೂಪು ಕೊಂಬುಗಳ ಈ ಪ್ರಾಣಿಗಳನ್ನು ಬೇಟೆ-ಯಾಡಲು ಆದ ಹೆದರುವ ಹವಾಸ್ಟರಿಂದ ಬಿದ್ದು ಜಿಂಕೆಗಳನ್ನು ಹೊಡೆಯಲು ಎಂದೂ ಮುಂದಾಗುವುದಿಲ್ಲ. ಈ ರೀತಿ ಬೇಟೆಯಾಡಲು ಹೋಗಿ ಜೀವ ಕಳೆದುಕೊಂಡ ಅಥವಾ ಜಿಂಕೆಗಳ ಇರಿತದಿಂದ ಗಾಯಗೊಂಡು ನರಳಿ ಸತ್ತ ಬಾಬ್ ಕ್ಯಾಟ್‌ಗಳನ್ನು ಪರೀಕ್ಷಿಸಿದ ಪ್ರಾಣಿಜೀವನ ತಜ್ಞರು, 'ಈ ಹೆದರಿಕೆಯಿಂದಾಗಿಯೇ ಜಿಂಕೆಗಳನ್ನು ಬಾಬ್‌ಕ್ಯಾಟು ತೀರ ಕ್ವಚಿತ್ತಾಗಿ ಬೇಟೆಯಾಡುತ್ತದೆ' ಎಂಬಭಿಪ್ರಾಯ ನೀಡುತ್ತಾರೆ. ಚಳಿಗಾಲದಲ್ಲಿ ಅಲ್ಲಿಯ ಕಾಡುಗಳಲ್ಲಿ ಜಿಂಕೆಗಳು ಚಳಿಯಿಂದ ನಡುಗಿ ನೂರಾರು ಸಂಖ್ಯೆಯಲ್ಲಿ ಸಾಯುತ್ತವೆ. ಆಗ ಬಾಬ್‌ಕ್ಯಾಟ್‌ಗಳಿಗೆ ಹಬ್ಬ.

ಕಾಡುಜನ ತಾಂಡೆಗಳಲ್ಲಿ ಸಾಕುವ ಕುರಿಗಳು, ಕುರಿ ಮರಿಗಳು ಬಾಬ್‌ಕ್ಯಾಟುಗಳಿಗೆ ಸುಲಭವಾಗಿ ಸಿಗುವ ಬೇಟೆ. ಆದರೆ ಕುರುಬರ ಎಚ್ಚರಿಕೆ ಕಾವಲು, ಅವರ ನಾಯಿಗಳ ಭಯದಿಂದಾಗಿ ಕುರಿಗಳು ಇವುಗಳ ಆಹಾರವಾಗುವುದು ತೀರ ಕ್ವಚಿತ.

ಬೇಟೆಯ ವಿಧಾನದಲ್ಲಿ ಇದರದೊಂದು ವೈಶಿಷ್ಟ್ಯ. ಬೇಟೆ ಸುಲಭವಾಗಿ ಸಿಕ್ಕಬಹುದಂಥ, ತಪ್ಪಿಸಿಕೊಂಡು ಹೋಗಲು ಅವಕಾಶವಿರದಂಥ ಇಕ್ಕಟ್ಟಿನಲ್ಲಿ ಕಾದು ಕುಳಿತು ಒಮ್ಮೆಲೇ ಮೇಲೆ ಹಾರಿ ಕತ್ತು ಕಡಿದು ರಕ್ತ ಹೀರಿ ನಂತರ ಬಾಯಲ್ಲಿ ಕಚ್ಚಿಕೊಂಡು ಓಡತೊಡಗುತ್ತದೆ. (ಮನೆಬೆಕ್ಕು ಇಲಿ-ಗಿಲಿಗಳನ್ನು ಬಾಯಿಂದ ಹಿಡಿದುಕೊಂಡೋಡುವಂತೆ.) ತನ್ನಳವಿಗೆ ಸಿಗಬಲ್ಲ ಜ್ಯಾಕ್‌ರ್‍ಯಾಬಿಟ್, ರೋಡೆಂಟು ಗಳನ್ನು ಮಾತ್ರ ಬಿಡದೇ ಮುಗಿಸುತ್ತದೆ. ಜ್ಯಾಕ್‌ರ್‍ಯಾಬಿಟ್ ಎದುರಿಗೆ ಕಂಡರೂ ಅದರ ಸಮೀಪ ಸುಳಿಯದೇ ನೋಡಿಯೂ ನೋಡದಂತೆ ಹೋಗಿ ನಂತರ ಒಮ್ಮೆಲೇ ನೆಗೆದು ಅದರ ಮೇಲೆ ಬೀಳುತ್ತದೆ. ನೆಗೆಯುವ ಮುನ್ನ ಮೂರು ಸಲ ತಾನು ನಿಂತ ಜಾಗದಲ್ಲೇ ಸುತ್ತು ಹೊಡೆದು ಸ್ಪ್ರಿಂಗಿನಂತೆ ಚಿಮ್ಮುತ್ತದೆ. ಕಾಟನ್‌ಟೇಲು ಗಳು ಬಾಬ್‌ಕ್ಯಾಟಿನ ಹೊಟ್ಟೆ ಸೇರುವುದು ಸರ್ವಸಾಮಾನ್ಯ. ಯಾಕಂದರೆ ಅವು ಜ್ಯಾಕ್‌ರ್‍ಯಾಬಿಟ್‌ಗಳಿಗಿಂತ ಹೆಚ್ಚು ಸುಲಭದಲ್ಲಿ ಆಕ್ರಮಿಸಬಹುದಾದಂಥವು. ಜ್ಯಾಕ್‌ರ್‍ಯಾಬಿಟ್‌ಗಳು ಹೆಚ್ಚು ವೇಗದಿಂದ ಓಡಿ ಬಿಲ ಸೇರಿಕೊಂಡುಬಿಡಬಲ್ಲವು. ಆದರೆ ಕಾಟನ್‌ಟೇಲುಗಳು ಮಿಸುಕದೇ ನಿಂತು ಒಮ್ಮೊಮ್ಮೆ ತಮ್ಮ ಇರುವಿನ ಬಗ್ಗೆ ಬಾಬ್‌ಕ್ಯಾಟು ಗಳಿಗೆ ದಿಕ್ಕು ತಪ್ಪುವಂತೆ ಮಾಡುವುದೂ ಉಂಟು.

ಒಂದರಿಂದ ಒಂದೂವರೆ ವರ್ಷ ವಯಸ್ಸಿಗೆ ಬಾಬ್ ಕ್ಯಾಟುಗಳು ಪ್ರೌಢಾವಸ್ಥೆ ತಲುಪುತ್ತವೆ. ಫೆಬ್ರುವರಿಯಿಂದ ಜೂನ್‌ವರೆಗೆ ಅವುಗಳು ರತಿ ಕ್ರೀಡೆಯಲ್ಲಿ ತೊಡಗಿ ಗರ್ಭಧರಿಸುತ್ತವೆ. ಮರಿಗ-ಳೊಂದಿಗ ಹೆಣ್ಣಿನೊಂದಿಗೆ ಗಂಡು ಸಂಭೋಗಿಸಲೆತ್ನಿಸುತ್ತದೆ. ಮರಿಗಳು ದೊಡ್ಡವಾಗಿ ತಮ್ಮ ಪಾಡಿಗೆ ತಾವು ತಿರುಗಾಡಿಕೊಂಡಿದ್ದರೆ ಮಾತ್ರ ಹೆಣ್ಣು ಈ ಕ್ರಿಯೆಗೆ ಅನುಮತಿಸುತ್ತದೆ. ಇಲ್ಲದೇ ಹೋದರೆ ಗಂಡನ್ನು ಸಮೀಪ ಕೂಡ ಸುಳಿಯಗೊಡುವುದಿಲ್ಲ.

ಡಿಸೆಂಬರ್ ತಿಂಗಳಿನಲ್ಲಿ ಗರ್ಭಸ್ಥ ಹೆಣ್ಣು ವಿಶ್ರಾಂತಿ ತೆಗೆದುಕೊಳ್ಳುತ್ತದೆ. ಆಗ ಅದು ಬೇಟೆಯ ಗೋಜಿಗೆ ಹೋಗದೇ ಚಳಿಯಿಂದ ಸಾಯುವ ಜಿಂಕೆಗಳನ್ನು ತಿನ್ನುತ್ತದೆ. ಡಿಸೆಂಬರಿನ ಕೊನೆಯ ಹೊತ್ತಿಗೆ ಎರಡರಿಂದ ಐದರವರೆಗೆ ಮರಿಗಳನ್ನು ಹಾಕುತ್ತದೆ. ಬಾಬ್‌ಕ್ಯಾಟ್ ಮೊದಲ ಸಲ ಮರಿ ಹಾಕುವುದು ಕೇವಲ ಎರಡನ್ನು ಮಾತ್ರ. ಅದರ ವಯಸ್ಸು ಜಾಸ್ತಿಯಾದಂತೆಲ್ಲ

ಹಾಕುವ ಮರಿಗಳ ಸಂಖ್ಯೆ ಹೆಚ್ಚಾಗುತ್ತದೆ.

ಸುರಕ್ಷಿತ ಪ್ರದೇಶಗಳಾದ ಮರದ ಪೊಟರೆಗಳು, ಗವಿಯಂಥ ಕಲ್ಲು ಪೊಳಕೆಯ ಜಾಗಗಳನ್ನು ಹುಡುಕಿಕೊಂಡು ಪ್ರಸವಿಸುತ್ತದೆ. ಮರಿಗಳು ಐದುಗುಲ ಉದ್ದ ಮೂರಂಗುಲ ದಪ್ಪ ಇದ್ದು ಬೂದು ಇಲ್ಲವೇ ಕಂದು ಬಣ್ಣದವಾಗಿರುತ್ತವೆ. ಐದು ತಿಂಗಳ ನಂತರ ಮರಿಗಳು ತಾಯಿಯೊಂದಿಗೆ ತಿರುಗಾಡ ತೊಡಗಿ ಅವುಗಳ ಮೈಮೇಲೆ ಚುಕ್ಕೆಗಳು ಕಾಣಲಾರಂಭಿಸುತ್ತವೆ. ಅಪಾಯದ ಅಂಜಿಕೆಯಿಂದ ಮರಿಗಳನ್ನು ಮೇಲಿಂದ ಮೇಲೆ ಬೇರೆ ಬೇರೆ ಜಾಗಗಳಿಗೆ ಸಾಗಿಸುವ ಇದು ಸುರಕ್ಷಿತವೆನ್ನಬಹುದಾದ ಸ್ಥಳದಲ್ಲಿಯೇ ಪ್ರತಿ ಸಲ ಮರಿ ಹಾಕುತ್ತದೆ. ಅಲ್ಲದೇ ಅವು ತಿರುಗಾಡುವವರೆಗೆ ತಾನೇ ಆಹಾರವನ್ನು ತಂದು ಹಾಕುತ್ತದೆ. ತನ್ನೊಂದಿಗೆ ಮರಿಗಳನ್ನು ರಾತ್ರಿ ಕರೆದೊಯ್ಯುವಾಗ ತಾಯಿ ಬಾಲವನ್ನು ಮೇಲೆತ್ತಿ, ಕಿವಿಗಳನ್ನು ಸದಾ ನಿಮಿರಿಸಿ ಪಟಪಟ ಬಡಿಯುತ್ತ ಸಾಗುತ್ತದೆ. ಮರಿಗಳಿಗಿದು ಒಂದು ರೀತಿಯ ಮಾರ್ಗದರ್ಶನ. ಒಂದು ವೇಳೆ ಮರಿ ಹಿಂದುಳಿದರೂ ತಾಯಿಯ ಬಾಲ ಮತ್ತು ಕಿವಿಗಳನ್ನು ನೋಡಿ ಓಡಿ ಬರುತ್ತದೆ. ಮರಿ ಬೆಳೆದು ದೊಡ್ಡದಾಗಿ ತನ್ನಷ್ಟಕ್ಕೆ ತಾನು ತಿರುಗಾಡತೊಡಗಿತೆಂದರೆ ತನ್ನ ಕೂಗಿನಿಂದ ತಾಯಿ ಮತ್ತು ಒಡಹುಟ್ಟಿದವುಗಳೊಡನೆ ಸಂಭಾಷಿಸುತ್ತದೆ, ತಾನೆಲ್ಲಿರುವೆನೆಂದು ಸೂಚಿಸುತ್ತದೆ.

ಮರಿಗಳಿಗೆ ಇತರ ಪ್ರಾಣಿಗಳಿಂದ ಮತ್ತು ಬೇರೆ ಸೀಮೆಯ ಬಾಬ್‌ಕ್ಯಾಟಿನಿಂದ ಅಪಾಯ ಹೆಚ್ಚು. ಆದ್ದರಿಂದ ಅವುಗಳನ್ನು, ತಾನು ಮತ್ತೊಮ್ಮೆ ಗರ್ಭಧರಿಸುವವರೆಗೆ, ತಾಯಿ ಕಾಪಾಡುತ್ತದೆ.

ಈ ಪ್ರಾಣಿಯ ಚರ್ಮ, ತುಪ್ಪಳ ಬಲು ಬೆಲೆಯುಳ್ಳವು– ಹೀಗಾಗಿ ಅವುಗಳನ್ನು ಕಾಡು ಜನ ಬೇಟೆಯಾಡುವ ಪ್ರಮೇಯ. ಇವುಗಳ ಚರ್ಮಕ್ಕೆ ಬೇಡಿಕೆ ಬಹಳ. ಒಂದು ಚರ್ಮದ ಅಡಿಗೆ ೨೦ ರಿಂದ ೨೫ ಡಾಲರುಗಳು ದೊರೆಯುತ್ತವೆ. ಅಲ್ಲದೆ ಈ ಪ್ರಾಣಿ ಒಂದು ಬಗೆಯ ವಾಸನೆಯಿರುವ ಅಂಟುಅಂಟಾದ ದ್ರವವನ್ನು ಸ್ರವಿಸುವುದೊಂದು ವಿಶೇಷ. ಇದನ್ನು ಈ ಪ್ರಾಣಿಗಳನ್ನು ಕೊಂದೇ ಸಂಗ್ರಹಿಸಬೇಕು. ಇದು ಕಾಮೋತ್ತೇಜಕವಾಗಿರುವುದರಿಂದ ಇದಕ್ಕೆ ಬೇಡಿಕೆಯೂ ಬಹಳ. ಬಾಬ್‌ಕ್ಯಾಟುಗಳ ಸಂತತಿ ಕ್ಷಿಪ್ರವಾಗಿ ಕ್ಷಯಿಸುವುದಕ್ಕೆ ಇದೂ ಒಂದು ಕಾರಣ. ಮರಿ ಉತ್ಸಾಹದಿಂದ ತನ್ನ ಜನ್ಮಸ್ಥಳದಿಂದ ಹತ್ತು ಹನ್ನೆರಡು ಮೈಲು ದೂರ ಹೋದರೆ ಮರಳಿ ಬರುವುದು ಬಹುತೇಕ ಸಾಧ್ಯವಿಲ್ಲ.

ಬಾಬ್‌ಕ್ಯಾಟುಗಳಿಗೆ ಇತರ ವನ್ಯಪ್ರಾಣಿಗಳಿಗಿರುವಂಥ ರಕ್ಷಣೆಯನ್ನು ಅಲ್ಲಿಯ ಸರಕಾರ ನೀಡಿಲ್ಲ. ಅವುಗಳ ಬೇಟೆಯನ್ನು ಪ್ರತಿಬಂಧಿಸಿಲ್ಲ. ೧೯೭೦–೭೧ರ ಸರ್ವೆಯ ಪ್ರಕಾರ ಅಲ್ಲಿಯ ಕಾಡುಗಳಲ್ಲಿ ಬಾಬ್‌ಕ್ಯಾಟುಗಳ ಪ್ರಮಾಣ ಶೇ. ೧೫ ರಷ್ಟು ಮಾತ್ರ. ಅಲ್ಲಿಯ ಸರಕಾರ ಚಿಕ್ಕ ಚರ್ಮದ ನಿರ್ಯಾತದ ಮೇಲೆ ಪ್ರತಿಬಂಧ ವಿಧಿಸಿದೆಯೇ ವಿನಾ ಅವುಗಳ ರಕ್ಷಣೆ ಮತ್ತು ಬೆಳವಣಿಗೆಯತ್ತ ಗಮನ ಹರಿಸಿಲ್ಲ. ✿

ಚಂದಾ ವಸೂಲಿ; ವಿನೂತನ ರೀತಿ

"ನೀವೆಲ್ಲಾ ತುಂಬಾ ಗುಂಪು ಸೇರಿದ್ದೀರಿ. ಈ ಜನಜಂಗುಳಿಯಲ್ಲಿ ಜೇಬುಗಳ್ಳರು ನಿಮ್ಮ ಜೇಬು ಕತ್ತರಿಸುವ ಸಾಧ್ಯತೆಯಿದೆ. ಎಲ್ಲಿ?... ಬೇಗ ಬೇಗ...... ದಯವಿಟ್ಟು ಎಲ್ಲರೂ ನಿಮ್ಮ ನಿಮ್ಮ ಜೇಬಿನಲ್ಲಿರುವ ಹಣವನ್ನು ನನ್ನ ಕೈಗೆ ಕೊಟ್ಟುಬಿಡಿ..." ಎಂದು ಬಾಪುರವರು ನಗುತ್ತಾ ಎಲ್ಲರೆದುರು ಕೈಚಾಚಿ, ಹರಿಜನರ ಕಲ್ಯಾಣ ನಿಧಿಗಾಗಿ ಚಂದಾ ಕೇಳಲಾರಂಭಿಸಿದರು.

—ಎಸ್. ವಿಶ್ವನಾಥ

ಇದುವೇ ಜೀವ ಇದು ಜೀವನ

ಇದು ನನ್ನ ಮಿತ್ರರೊಬ್ಬರಿಂದ ತಿಳಿದು ಬಂದ ವಿಷಯ. ಅವರು ಕಲಕತ್ತಾದಲ್ಲಿದ್ದು ತಮ್ಮ ರಜಾ ದಿನಗಳನ್ನು ಹೆಂಡತಿ ಮಕ್ಕಳೊಂದಿಗೆ ದಕ್ಷಿಣ ಭಾರತದಲ್ಲಿರುವ ಸಂಬಂಧಿಕರ ಮನೆಯಲ್ಲಿ ವಿನಿಯೋಗಿಸುವ ತಯಾರಿಯಲ್ಲಿದ್ದರು. ರೇಲ್ವೆಯಲ್ಲಿ ಮುಂದಾಗಿಯೇ ಟಿಕೆಟ್ ರಿಸರ್ವೇಶನನ್ನು ಸಹ ಪಡೆದಾಗಿತ್ತು. ದುರದೃಷ್ಟವಶಾತ್ ಅವರಿಗೆ ಅಂದು ಸ್ಥಳೀಯ ಆದಾಯ ತೆರಿಗೆಯ ಇಲಾಖೆಯಿಂದ ಕರೆ ಬಂದಿತ್ತು. ಮುಂದಿನ ವಾರ ಆದಾಯದ ವಿವರಗಳನ್ನು ತಿಳಿಸಲು ಮುಖತಃ ಕರೆಯಲಾಗಿತ್ತು. ಆದಾಯ ಇಲಾಖಾ ಕಚೇರಿಗೆ ತೆರಳಿ ಇದನ್ನು ಮುಂದೆ ಬೇರೊಂದು ತಾರೀಖಿಗೆ ನಿಗದಿಪಡಿಸಲು ಪ್ರಯತ್ನಿಸಿದರು. ಇಲಾಖಾ ಅಧಿಕಾರಿಗಳು ಇದು ಸರ್ವಥಾ ಸಾಧ್ಯವಿಲ್ಲವೆಂದು ಹೇಳಿಬಿಟ್ಟರು. ಇನ್ನೇನು ತನ್ನ ಕಾರ್ಯಕ್ರಮಗಳನ್ನೆಲ್ಲ ಬದಲು ಮಾಡಬೇಕಾಯಿತಲ್ಲಾ ಎಂದು ಜೋಲು ಮೋರೆ ಹಾಕಿಕೊಂಡು, ಹೊರಬರುತ್ತಿರುವಾಗ ಇಲಾಖೆಯ ಜವಾನನೊಬ್ಬ ಎದುರಾಗಿ, "ಸಾಹೇಬರೆ ನಿಮಗೆ ಏನಾಗಬೇಕಿತ್ತು?" ಎಂದು ಕೇಳಿದ. ವಿವರಗಳನ್ನು ಹೇಳಿದ ನಂತರ, "ನೀವೇನೂ ಯೋಚಿಸಬೇಡಿ ಸುಖವಾಗಿ ಊರಿಗೆ ಹೋಗಿ ಬನ್ನಿ. ಮುಂದಿನ ಕಾರ್ಯವನ್ನು ನಾನು ಮಾಡುತ್ತೇನೆ," ಎಂದ. ಕೈಗೆ ಎರಡು ರೂಪಾಯಿ ಹಚ್ಚಿ ಹೊರ ನಡೆದರು. ಮುಂದೆ ರಜಾ ದಿನಗಳನ್ನು ಕಳೆದು ಹಿಂದಿರುಗಿದಾಗ ಆಫೀಸಿನ ಮೇಜಿನ ಮೇಲೆ ಆದಾಯ ಇಲಾಖೆಯ ಮಗುದೊಂದು ಪತ್ರ. ಮುಂದಿನ ವಾರ ವಿವರಗಳನ್ನು ತಿಳಿಸಲು ಕರೆಯಲಾಗಿತ್ತು. ವಿವರಗಳೊಂದಿಗೆ ಇಲಾಖಾ ಕಚೇರಿಯನ್ನು ಪ್ರವೇಶಿಸುವಾಗ ಆ ಜವಾನನು ಎದುರಾಗಿಯೇ ಬಿಟ್ಟ. "ಸ್ವತಃ ಆಫೀಸರರನ್ನು ಕಂಡು ಆಗದಿದ್ದ ವಿಷಯವನ್ನು ನೀನು ಹೇಗೆ ಮಾಡಿದೆಯಪ್ಪಾ?" ಎಂದು ಕೇಳಿದಾಗ, "ಏನಿಲ್ಲಾ ಸಾರ್, ನಿಮ್ಮ ಫೈಲನ್ನು ನಿಗದಿ ಮಾಡಿದ ದಿವಸ 'S' ವಿಭಾಗದಿಂದ ತೆಗೆದು 'T' ವಿಭಾಗದಲ್ಲಿ ಸೇರಿಸಿದೆ. ಇದರಿಂದಾಗಿ ವಿಭಾಗಾಧಿಕಾರಿಗಳಿಗೆ ನಿಗದಿಪಡಿಸಿದ ದಿನ ನಿಮ್ಮ ಫೈಲು ಸಿಕ್ಕಲಿಲ್ಲ. ಅವರು ಬೇರೊಂದು ದಿನವನ್ನು ನಿಗದಿಪಡಿಸಬೇಕಾಯಿತು."

-ತಾರಾನಾಥ ಶೆಟ್ಟಿ


ಸುಮಾರು ೧೨ ವರ್ಷಗಳ ಹಿಂದಿನ ಘಟನೆ ಇದು. ಆಗ ನಮ್ಮ ಅಣ್ಣ ಮೈಸೂರು ಅರಮನೆಯ ವೈದ್ಯರಾಗಿದ್ದರು. ಮಹಾರಾಜರೊಡನೆ ಅಮೇರಿಕಕ್ಕೆ ಹೋಗಿಬರುವ ಅವಕಾಶ ಒದಗಿ ಬಂತು. ಆ ತಂಡದಲ್ಲಿ ಮಹಾರಾಜರು, ಆಪ್ತ ಕಾರ್ಯದರ್ಶಿ, ಇನ್ನೊಬ್ಬ ಹಿರಿಯ ಅಧಿಕಾರಿ, ನಮ್ಮಣ್ಣ ಹೀಗೆ ನಾಲ್ವರಿದ್ದರು. ಒಂದು ದಿನ ನ್ಯೂಯಾರ್ಕ್ ನಗರದ ನೋಟ ನೋಡಲು ಹೋಗಿದ್ದವರು ಹೋಟಲಿಗ ವಾಪಸು ಬಂದು ಮಹಡಿ ಮೇಲಿನ ತಮ್ಮ ಕೋಣೆಗಳಿಗೆ ಹೋಗುವುದಕ್ಕಾಗಿ ಲಿಫ್ಟ್ ಹೊಕ್ಕರು. ಆಗ ಅಣ್ಣನ ಎರಡು ಕೈಗಳಲ್ಲೂ ಭಾರಿ ಸೂಟುಕೇಸುಗಳಿದ್ದವು. ಆ ಭಾರದಿಂದ ಜಗ್ಗುತ್ತಿದ್ದ ಅಣ್ಣನ ಸಹಾಯಕ್ಕೆ ಮಿಕ್ಕವರು ಯಾರೂ ಬರಲಿಲ್ಲ- ಏಕೆಂದರೆ ಹುದ್ದೆಯಲ್ಲಿ ಅವರೆಲ್ಲರೂ ಹಿರಿಯರು. ಲಿಫ್ಟ್ ಮೇಲೇರುವ ಮುನ್ನ ಅಮೇರಿಕನ್ ವ್ಯಕ್ತಿಯೊಬ್ಬ ಒಳಹೊಕ್ಕವನು, ನಮ್ಮ ಅಣ್ಣನ ಮೂಕವೇದನೆ ನೋಡಲಾರದೆ, ಮಿಕ್ಕವರು 'ಡಾಕ್ಟರ್' ಎಂದು ಸಂಬೋಧಿಸುತ್ತಿದ್ದನ್ನು ಕೇಳಿಕೊಂಡು 'Give me doctor' ಎಂದು ಹೇಳಿ ಬಲವಂತದಿಂದ ಅವರ ಕೈಯಿಂದ

ಒಂದು ಸೂಟುಕೇಸು ಕಿತ್ತುಕೊಂಡನಂತೆ. ಲಿಫ್ಟ್ ಇವರ ಅಂತಸ್ತು ತಲಪಿತು. ಆಗಂತುಕನ ಕೊಠಡಿಯೂ ಅಲ್ಲೇ ಇದ್ದದ್ದರಿಂದ 'Thank you, doctor' ಎಂದು ಹೇಳಿ ಸೂಟುಕೇಸು ಒಪ್ಪಿಸಿ ತನ್ನ ಕೋಣೆಯತ್ತ ನಡೆದುಬಿಟ್ಟನಂತೆ. ಕುತೂಹಲದಿಂದ ಆ ವ್ಯಕ್ತಿ ಯಾರೆಂದು ಹೋಟೇಲು ನೌಕರನನ್ನು ವಿಚಾರಿಸಲಾಗಿ ಆತ ವಿಶ್ವಸಂಸ್ಥೆಗೆ ಅಮೇರಿಕದ ರಾಯಭಾರಿ ಮಿ. ಅಡ್ಲಾಯ್ ಸ್ಟೀವನ್‌ಸನ್ ಎಂಬ ಉತ್ತರ ಬಂದಿತಂತೆ.

-ಡಿ. ಶೇಷಗಿರಿರಾವ್

ಇದು ನನ್ನ ಹಿರಿಯ ಸಹೋದ್ಯೋಗಿ ಶಿಕ್ಷಕಿಯೊಬ್ಬರು ಹೇಳಿದ ತಮ್ಮ ಅನುಭವದ ಘಟನೆ. ಅದು ಜೂನ್ ತಿಂಗಳ ಸಮಯ. ತಮ್ಮ ಮಕ್ಕಳಿಗೆ ಎಂಟನೆಯ ವರ್ಗಕ್ಕೆ ಪ್ರವೇಶ ಬಯಸಿ ಪೋಷಕರು ಮತ್ತು ವಿದ್ಯಾರ್ಥಿಗಳು ಶಾಲೆಗೆ ಬರುತ್ತಿದ್ದರು. ಅದು ಹಳ್ಳಿಯೊಂದರ ಪ್ರೌಢಶಾಲೆ. ಬರುತ್ತಿದ್ದ ಬಹುಸಂಖ್ಯಾತ ಪೋಷಕರು ಅನಕ್ಷರಸ್ಥರು, ಅಥವಾ ಕೇವಲ ಸಹಿ ಮಾಡಲು ಮಾತ್ರ ಬಲ್ಲವರು. ಅವರಿಗೆ ಇಂಗ್ಲೀಷಿನೊಂದಿಗೆ ಕನ್ನಡದಲ್ಲೂ ಇರುತ್ತಿದ್ದ ಪ್ರವೇಶಪತ್ರವನ್ನು ಓದಿ ಭರ್ತಿ ಮಾಡಲೂ ತಿಳಿಯುತ್ತಿರಲಿಲ್ಲವಾದ್ದರಿಂದ ಆ ಕೆಲಸ ಶಾಲೆಯ ಏಕೈಕ ಗುಮಾಸ್ತೆಗೇ ಬೀಳುತ್ತಿತ್ತು. ಅದುದರಿಂದ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿದ್ದರೆ ಅವರನ್ನು ಆಗ ವಿರಾಮದಲ್ಲಿರುತ್ತಿದ್ದ ಅಧ್ಯಾಪಕರ ಬಳಿಗೆ ಪ್ರವೇಶಪತ್ರದ ಭರ್ತಿಗಾಗಿ ಕಳುಹಿಸುವ ಕ್ರಮವಿತ್ತು. ಅಂದು ಈ ಶಿಕ್ಷಕಿಗೆ ವಿರಾಮವಿದ್ದುದರಿಂದ ಹೋಂವರ್ಕ್ ತಿದ್ದುತ್ತಾ ಸ್ಟಾಫ್ ರೂಂನಲ್ಲಿ ಕುಳಿತಿದ್ದರು. ಬಾಗಿಲಿನಲ್ಲಿ ಯಾರೋ ಬಂದಂತಾದುದರಿಂದ ತಲೆ ಎತ್ತಿ ನೋಡಿದಾಗ ಅಲ್ಲಿ ಒಬ್ಬ ವಿಧವೆ ಬಾಲಕನೊಬ್ಬನೊಂದಿಗೆ ನಿಂತಿರುವುದು ಕಂಡಿತು. ಒಳ ಬರಲು ಹೇಳಿ ಏನೆಂದು ವಿಚಾರಿಸಿದಾಗ ತಮ್ಮ ಮಗನನ್ನು ಎಂಟನೆಯ ವರ್ಗಕ್ಕೆ ದಾಖಲ್ಮಾಡಿಸಲು ಆಕೆ ಬಂದಿರುವುದಾಗಿ ತಿಳಿಯಿತು. ಅವಳಿಂದ ಪ್ರವೇಶಪತ್ರವನ್ನೂ ಅಪ್ಪಣೆ ಚೀಟಿಯನ್ನೂ ಪಡೆದು ಅಗತ್ಯವಾದ ವಿವರಗಳನ್ನು ಕೇಳಿ ತಿಳಿದು ಪ್ರವೇಶಪತ್ರವನ್ನು ಭರ್ತಿ ಮಾಡಿ, ಪೋಷಕರ ಸಹಿ ಹಾಕುವಲ್ಲಿ ಆಕೆಯ ಸಹಿ ಹಾಕಿಸಿ ಅವುಗಳನ್ನು ಗುಮಾಸ್ತೆಗೆ ಕೊಡುವಂತೆ ಹೇಳಿದರು. ಆದರೂ ಆಕೆ ಹೊರಡದೇ ಅಲ್ಲಿಯೇ ನಿಂತಿದ್ದರು. "ಇನ್ನೂ ಏನಾಗಬೇಕಮ್ಮಾ?" ಎಂದಾಗ ಆಕೆ ಕೇಳಿದ ಪ್ರಶ್ನೆಯಿಂದ ಒಂದು ಗಳಿಗೆ ದಿಗ್ಭ್ರಾಂತರಾದರು ಈ ಶಿಕ್ಷಕಿ. ಆಕೆ ಕೇಳಿದ ಪ್ರಶ್ನೆ ಮತ್ತೇನಲ್ಲ. "ಇವನ್ನೆಲ್ಲಾ ನೀವು ಭರ್ತಿ ಮಾಡಿಕೊಟ್ಟದ್ದಕ್ಕೆ ಎಷ್ಟು ದುಡ್ಡು ಕೊಡಬೇಕಮ್ಮಾ?" ಎಂದು. ಅದನ್ನೂ ಅಂಜುತ್ತಂಜುತ್ತಾ ಈ ವಿದ್ಯಾವಂತ ಉದ್ಯೋಗಿ ಮಹಿಳೆಯೊಂದಿಗೆ ಹೇಗೆ ಮಾತನಾಡಿದರೆ ಹೇಗೋ ಎಂಬ ಅಳುಕಿನಿಂದ ಕೇಳಿದ್ದರು ಆಕೆ. "ಹಾಗೇನಿಲ್ಲಮ್ಮಾ, ನಮಗೆ ಸರ್ಕಾರ ತಿಂಗಳು ತಿಂಗಳೂ ಸಂಬಳ ಕೊಡುತ್ತದೆ" ಎಂಬ ಉತ್ತರದೊಂದಿಗೆ ಆಕೆಯನ್ನು ಹೊರಕ್ಕೆ ಕಳಿಸಿದ್ದಾಯಿತು. ಆದರೆ ಸ್ವತಃ ಇವರು ಅದೆಷ್ಟೋ ಹೊತ್ತು ತಲೆ ಹಿಡಿದುಕೊಂಡು ಕೂಡುವಂತೆ ಮಾಡಿತ್ತು ಆ ಘಟನೆ. ಕೈಬಿಸಿ ಮಾಡದೇ ಯಾವ ಕೆಲಸವೂ ಆಗದೆಂಬಂಥ ಭಾವನೆ ಆ ಅವಿದ್ಯಾವಂತ ಮಹಿಳೆಯಲ್ಲೂ ಅದೆಷ್ಟು ಬಲವಾಗಿ ಬೇರೂರಿಬಿಟ್ಟಿತ್ತು!

-ರಮಾದೇವಿ



ಡಾರ್ವಿನ್ ವಾದ ಎಷ್ಟು ಸರಿ ?

ಶ್ರೀಕಾಂತ ಮುಳಗಿ

ಇದೊಂದು ಬಹು ವಿಚಿತ್ರವಾದ ಜಗತ್ತು. ಈಗ ನಮಗೆ ಕಾಣುವ ಗಿಡಮರಗಳಾಗಲಿ ಪಶುಪಕ್ಷಿಗಳಾಗಲಿ ಗೋಚರಿಸುತ್ತಿರಲಿಲ್ಲ. ಎಲ್ಲಿ ನೋಡಿದರೂ ಬೃಹದಾಕಾರದ ಪೆಡಂಭೂತಗಳದೇ ಸಾಮ್ರಾಜ್ಯ. ಆಕಾಶವನ್ನು ನಿರುಕಿಸಿದರೋ ನಾಲ್ವತ್ತು ನಾಲ್ವತ್ತೈದು ಅಡಿಗಳಷ್ಟು ಉದ್ದವಾದ ರೆಕ್ಕೆಗಳಿರುವ ಮಹಾ ಮಹಾ ಸರೀಸೃಪಗಳು ಹಾರಾಡುವಾಗ ತೋರಣದಂತೆ ಕಾಣುತ್ತಿದ್ದವು. ಇನ್ನು ಸಮುದ್ರದತ್ತ ದೃಷ್ಟಿಹರಿಸಿದರೋ ಗಾತ್ರದಲ್ಲಿ ತಿಮಿಂಗಿಲುಗಳನ್ನೂ ಮೀರುವ ಜಲಚರಗಳು. ಭೂಮಿಯ ಮೇಲೆ ಜರೀಗಿಡಗಳನ್ನು ಬಿಟ್ಟರೆ ಬೇರಾವುದೆ ಜಾತಿಯ ಗಿಡಗಳ ಅಸ್ತಿತ್ವವಿರಲಿಲ್ಲ. ಆ ಮಹಾ ಪೆಡಂಭೂತಗಳ ಹೊಟ್ಟೆಯ ಭುಗಿಲನ್ನು ಈ ಜರೀಗಿಡಗಳೇ ಶಾಂತಗೊಳಿಸಬೇಕು. ಇಲ್ಲವೆ ಗಾತ್ರದಲ್ಲಿ ಇವಕ್ಕಿಂತ ಚಿಕ್ಕದಾದ ಪ್ರಾಣಿಗಳು ಬಲಿಯಾಗಬೇಕು. ಮುಂದೆ ಈ ಮಹಾಕಾಯಗಳಿಗೆಲ್ಲ ಬಹು ಕರಾಳವಾದ ದಿನ ಬಂತು. ಪೃಥ್ವಿಯ ಸಮಸ್ತ ಭೂಚರಗಳೂ ಜಲಚರಗಳೂ ಸೇರಿಯೆ ಕಾಲದ ಕರಾಳ ಗರ್ಭದಲ್ಲಿ ಸಮಾಹಿತವಾಗಿ ಹೋದವು.

ಅನಂತರ ಕೋಟಿ ಕೋಟಿ ವರ್ಷಗಳೇ ಉರುಳಿದವು. ಮುಂದೆ ಹತ್ತೊಂಭತ್ತನೆಯ ಶತಮಾನದಲ್ಲೊಂದು ದಿನ ಇಂಗ್ಲಂಡಿನ ಚಾರ್ಲ್ಸ್ ಡಾರ್ವಿನ್ ಮಹಾಶಯ ತನ್ನ ಪ್ರಪಂಚ ಪರ್ಯಟನೆಯ ಕಾಲದಲ್ಲಿ ಸಂಗ್ರಹಿಸಿದ ಪಳೆಯುಳಿಕೆಗಳನ್ನೆಲ್ಲಾ ವ್ಯವಸ್ಥಿತವಾಗಿ ವರ್ಗೀಕರಿಸಿ ವಾನರ ಜಾತಿಗೂ ಮನುಷ್ಯಜಾತಿಗೂ ಕಾರಣವಾದ ಪ್ರಾಣಿ ವಿಶೇಷವೊಂದರಿಂದ ಮನುಕುಲ ವಿಕಾಸಗೊಂಡಿತೆಂದು ಸಾಧಿಸಿದ. ಆದರೆ ಆ ಪ್ರಾಣಿವಿಶೇಷದ ಅಸ್ತಿತ್ವ ಕೇವಲ ತರ್ಕದ ಮೇಲೆ ಆಧಾರಿತವಾಗಿತ್ತಲ್ಲದೆ ಅದು ಇದ್ದ ಬಗೆಗೆ ಆದಾಗಿ ಯಾವ ಕುರುಹೂ ದೊರೆಯಲಿಲ್ಲ. ಕಾಲಮಾನ ಪರಿಸ್ಥಿತಿಗನುಗುಣವಾಗಿ ಜೀವಿಗಳ ಚರ್ಯೆಯಲ್ಲೂ ಶರೀರದಲ್ಲೂ ಕೆಲವು ಮಾರ್ಪಾಟುಗಳಾಗುವವೆಂದೂ ಬದಲಾದ ಹೊಸ ಪರಿಸ್ಥಿತಿಗೆ ಒಗ್ಗಿಕೊಳ್ಳಲಾರದ ಜೀವಿಗಳು ಸಮೂಲ ನಾಶಗೊಳ್ಳುವವೆಂದೂ ಆತ ಪ್ರತಿಪಾದಿಸಿದ. ವಾದ ಅಪ್ಯಾಯಮಾನವಾಗಿತ್ತು; ತರ್ಕಬದ್ಧವಾಗಿತ್ತು. ಯೋಗ್ಯತೆಯುಳ್ಳವನೇ ಬಾಳುವನೆಂಬ ತತ್ವ ಸ್ಫೂರ್ತಿದಾಯಕವೂ ಆಗಿತ್ತು. ಡಾರ್ವಿನ್ನನ ವಿಚಾರ ತೀರಾ ಹೊಸದಾಗಿದ್ದುದರಿಂದ ಅದಕ್ಕೆ ಸಾಕಷ್ಟು ಪ್ರಚಾರವೂ ದೊರೆಯಿತು. ಅವನ ಈ ನವೀನ ಸಂಶೋಧನೆಗಾಗಿ ಕೆಲವರು ಆತನ ಬೆನ್ನು ಚಪ್ಪರಿಸಿದರು. ಇನ್ನು ಎಷ್ಟೋ ಜನ ಅದು ಬೈಬಲ್ಲಿನಲ್ಲಿ ಹೇಳಿದುದಕ್ಕೆ ವಿರುದ್ಧವಾಗಿದೆಯೆಂಬ ಕಾರಣದಿಂದ ವಿರೋಧಿಸಿದರು. ಈ ಗಲಾಟೆಯಲ್ಲಿ ಡಾರ್ವಿನ್ನನ ಸರಣಿಯಲ್ಲಿ ಕೆಲವು

ಆಧಾರ: ಎಡ್ವಿನ್ ಕೋಲ್ಬರ್ಟ್ ಹಾಗೂ ಡಬ್ಲ್ಯು ಡಿ. ಮ್ಯಾಥ್ಯೂ ಅವರ ಗ್ರಂಥಗಳು

272-7

ಕೊಂಡಿಗಳು ಕಳಚಿದ ವಿಷಯ ಯಾರ ಲಕ್ಷ್ಯಕ್ಕೂ ಬರಲಿಲ್ಲ. ಆದರೆ ವಿಕಾಸವಾದ ಎಷ್ಟು ಮಟ್ಟಿಗೆ ಸರಿ ಎಂಬ ಬಗೆಗೆ ಇದೀಗ ವಿಜ್ಞಾನಿಗಳು ತಲೆ ತುರಿಸಿಕೊಳ್ಳುತ್ತಿದ್ದಾರೆ. ಅವರ ಅಭಿಪ್ರಾಯವನ್ನು ತಿಳಿದುಕೊಳ್ಳುವ ಮೊದಲು ಪ್ರಾಗೈತಿಹಾಸಿಕ ಪ್ರಾಣಿಯವಶೇಷಗಳ ಪಳೆಯುಳಿಕೆಗಳು ದೊರೆತ ಬಗೆಯನ್ನೂ ದೊರೆತ ಸ್ಥಳವನ್ನೂ ಪರಿಶೀಲಿಸುವುದು ಅವಶ್ಯ.

೧೯೩೪ರಲ್ಲಿ ಬರ್ನಾಮ್ ಬ್ರೌನ್ ಎಂಬ ಪಳೆಯುಳಿಕೆಗಳ ತಜ್ಞ ಅಮೇರಿಕದ ವ್ಯೋಮಿಂಗ್‌ನಲ್ಲಿ ಪಳೆಯುಳಿಕೆಗಳನ್ನು ಸಂಗ್ರಹಿಸುತ್ತಿದ್ದಾಗ ಬಿಗ್ ಹಾರ್ನ್ ಪರ್ವತ ಶ್ರೇಣಿಯಲ್ಲಿ ಬಾರ್ಕರ್ ಹೋ ಎನ್ನುವವನ ಹತ್ತಿರ ಪಳೆಯುಳಿಕೆಗಳ ದೊಡ್ಡ ಸಂಗ್ರಹವಿದೆಯೆಂದು ಕೇಳಿದ. ಆತ ಅಲ್ಲಿಗೆ ಹೋದಾಗ ಆಶ್ಚರ್ಯವೇ ಕಾದಿತ್ತು. ಅತಿ ಅಲಭ್ಯವೆನಿಸುವ ಪೆಡಂಭೂತಗಳ ಅಸ್ಥಿಪಂಜರಗಳನ್ನು ಬಾರ್ಕರ್ ಹೋ ನೆಲದಿಂದ ಅಗೆದು ರಾಶಿರಾಶಿಯಾಗಿ ಒಟ್ಟಿದ್ದ. ಹಿಂದೆ ಅದಾವುದೋ ಒಂದು ಕಾಲದಲ್ಲಿ ಯಾವುದೋ ಉತ್ಪಾತ ಸಂಭವಿಸಿದ್ದರಿಂದಲೆ ಅಲ್ಲಿ ವಾಸವಾಗಿದ್ದ ಸಮಸ್ತ ಪ್ರಾಣಿಗಳು ನಾಶಗೊಂಡವು ಎಂಬುದನ್ನು ಇದು ಸೂಚಿಸುತ್ತದೆಯೆ? ಇದ್ದರೂ ಇರಬಹುದು.

ಆದರೆ ಪ್ರಾಗೈತಿಹಾಸಿಕ ಪ್ರಾಣಿಗಳ ಅವಶೇಷಗಳು ದೊಡ್ಡ ಪ್ರಮಾಣದಲ್ಲಿ ಒಂದೇ ಸ್ಥಳದಲ್ಲಿ ದೊರಕಿದ ದೃಷ್ಟಾಂತ ಇದೊಂದೆ ಅಲ್ಲ. ಹಿಂದೆ ೧೮೭೮ರಲ್ಲಿ ಕೋಮೋ ಬ್ಲಫ್‌ನ ನಿರ್ಜನ ಪ್ರದೇಶದಲ್ಲಿ ಕುರಿ ಕಾಯುವವನೊಬ್ಬನಿಗೆ ಪ್ರಾಣಿಗಳ ಎಲುವುಗಳಿಂದಲೆ ಗುಡಿಸಲನ್ನು ಕಟ್ಟಿಕೊಂಡಿದ್ದಾನೆಂಬ ಖ್ಯಾತಿಯಿತ್ತು. ಆ ಎಲವುಗಳು ಯಾವ ಯಾವ ಪ್ರಾಣಿಗಳದೆಂಬುವನ್ನು ಪರಿಶೀಲಿಸಲು ಪುರಾತತ್ವಶಾಸ್ತ್ರಿಗಳು ಅಲ್ಲಿ ಭೇಟಿಯಿತ್ತಾಗ ಅವೆಲ್ಲ ಪೆಡಂಭೂತದ ಎಲುವುಗಳೆಂಬುದು ಗೊತ್ತಾಯಿತು. ಆಗ ಆಸಕ್ತಿ ಕುದುರಿ ಆ ಸ್ಥಳದಲ್ಲಿ ಉತ್ಖನನವನ್ನು ಕೈಕೊಂಡರು. ಅಲ್ಲಿ ಪೆಡಂಭೂತಗಳ ಹಾಗೂ ಸರೀಸೃಪಗಳ ಅವಶೇಷಗಳಲ್ಲದೆ ಅವುಗಳಿಗೆ ಆಹಾರವಾದ ಇತರ ಚಿಕ್ಕಪುಟ್ಟ ಮಾಂಸಾಹಾರಿ ಪ್ರಾಣಿಗಳ ಅವಶೇಷಗಳೂ ವಿಪುಲ ಪ್ರಮಾಣದಲ್ಲಿ ದೊರೆತವು. ವಿಶೇಷವೆಂದರೆ ಪ್ರಕೃತಿಯು ಕೋಟ್ಯಂತರ ವರ್ಷಗಳವರೆಗೆ ಈ ಪಳೆಯುಳಿಕೆಗಳನ್ನು ಎಷ್ಟು ಸುರಕ್ಷಿತವಾಗಿಟ್ಟಿತ್ತೆಂದರೆ ಪೆಡಂಭೂತದ ಉಗುರುಗಳನ್ನು ಕೂಡ ಯಾರಾದರೂ ಗುರುತಿಸಬಹುದಾಗಿತ್ತು. ಇಲ್ಲಿಯೂ ಹಿಂದೆ ಉತ್ಪಾತ ಸಂಭವಿಸಿತೆಂದು ಭಾವಿಸೋಣವೇ?

೧೯೨೨ರಲ್ಲಿ ಅಮೇರಿಕದ ಪ್ರಾಕೃತಿಕ ಇತಿಹಾಸ ಸಂಸ್ಥೆಯ ತಜ್ಞರು ಮಂಗೋಲಿಯದ ಗೋಬಿ ಮರುಭೂಮಿಯಲ್ಲಿ ಸಂಚರಿಸುತ್ತಿದ್ದಾಗ ನೆಲದಿಂದ ಎದ್ದ ಕಡಿದಾದ ಶಿಖರಗಳು ಒಂದೆಡೆ ಕಂಡುಬಂದವು. ಇಂತಹ ವಿಶಾಲವಾದ ಮರುಭೂಮಿಯಲ್ಲಿ ಕೇವಲ ಒಂದು ಕಡೆ ಮಾತ್ರ ಇಂತಹ ಶಿಖರಗಳು ಕಾಣಿಸುವುದು ಸ್ವಲ್ಪ ವಿಚಿತ್ರವೆನಿಸಿ ಅವರು ಆ ಸ್ಥಳದಲ್ಲಿ ಉತ್ಖನನವನ್ನು ಕೈಕೊಂಡಾಗ ಪ್ರಾಗೈತಿಹಾಸಿಕ ಪ್ರಾಣಿಗಳ ಅವಶೇಷಗಳನ್ನಲ್ಲದೆ ಆ ಕಾಲದ ಪ್ರಾಣಿಗಳ ತತ್ತಿಗಳನ್ನೂ ಕಂಡುಹಿಡಿದರು. ತತ್ತಿಗಳು ಸುಸ್ಥಿತಿಯಲ್ಲೆ ಇದ್ದವು. ಆದರೆ ಪಳೆಯುಳಿಕೆ ಶಾಸ್ತ್ರಜ್ಞರಿಗೆ ಹೀಗೆ ತತ್ತಿಗಳು ಸಿಕ್ಕಿದ್ದು ಇದೇ ಮೊದಲ ಸಲವಲ್ಲ. ಮಂಗೋಲಿಯವಲ್ಲದೆ ಫ್ರಾನ್ಸ್, ಅಮೇರಿಕ, ಬ್ರೆಜಿಲ್, ಪೋರ್ಚುಗಲ್ ಹಾಗೂ ಪೂರ್ವ ಆಫ್ರಿಕದಲ್ಲೂ ಇಂತಹ ತತ್ತಿಗಳು ದೊರೆತಿವೆ. ಅದರೊಟ್ಟಿಗೆ ಪೆಡಂಭೂತಗಳ ಅವಶೇಷಗಳೂ ದೊರೆತಿವೆ. ಆದರೆ ಭ್ರೂಣ ಬೆಳೆದು ಮರಿಯಾಗಿ ಅದು ತತ್ತಿಯೊಡೆದು ಹೊರಬಂದ ಉದಾಹರಣೆ ಜಗತ್ತಿನಲ್ಲಿ ಈ ವರೆಗೆ ಒಂದು ಕಡೆಯೂ ದೊರೆತಿಲ್ಲ. ಯಾವುದೋ ಒಂದು ಉತ್ಪಾತ ಒಮ್ಮೆಲೆ ಸಂಭವಿಸಿದ್ದರಿಂದಲೆ ಹೀಗಾಗಿರಬಹುದೆ?

೧೯೦೯ರಿಂದ ೧೯೧೨ರವರೆಗೆ ಜರ್ಮನ್ ತಜ್ಞರು ಈಗಿನ ಟಾಂಜಾನಿಯದಲ್ಲಿ ಸಂಶೋಧನೆಗಳನ್ನು ಕೈಕೊಂಡಾಗ ಕೆಲವೆಡೆ ಭೂಗರ್ಭದಲ್ಲಿ ಪೆಡಂಭೂತಗಳ ಸಹಸ್ರಾವಧಿ ಪಳೆಯುಳಿಕೆಗಳು ಏಕತ್ರಿತವಾಗಿ ಸಂಗ್ರಹಗೊಂಡದ್ದನ್ನು ಕಂಡರು. ಆದರೆ ಅವೆಲ್ಲ ಹರಕುಮುರುಕಾಗಿದ್ದು ಸುಸ್ಥಿತಿಯಲ್ಲಿ ಇರಲಿಲ್ಲ.

೧೮೭೮ರಲ್ಲಿ ಬೆಲ್ಜಿಯಮ್ಮಿನಲ್ಲಿ ಗಣಿ ಕೆಲಸಗಾರರು ಕಲ್ಲಿದ್ದಲನ್ನು ತೋಡುತ್ತಿದ್ದಾಗ ಭೂಮಿಯ ಮೇಲ್ಮೈಯಿಂದ ೧೦೫೬ ಅಡಿಗಳ ಆಳದಲ್ಲಿ

ಬೃಹದಾಕಾರದ ಅಸ್ಥಿಪಂಜರಗಳನ್ನು ಕಂಡರು. ಮುಂದೆ ಅದೇ ಭಾಗದಲ್ಲಿ ಇನ್ನೊಂದೆಡೆ ಸುರಂಗವನ್ನು ತೋಡುತ್ತಿದ್ದಾಗ ೧೧೫೭ ಅಡಿಗಳ ಕೆಳಗೆ ಅಂತಹದೆ ಅಸ್ಥಿಪಂಜರಗಳು ಬಹು ದೊಡ್ಡ ಪ್ರಮಾಣದಲ್ಲಿ ದೊರೆತವು. ಅರ್ಥಾತ್ ಸುಮಾರು ನೂರು ಅಡಿಗಳಷ್ಟು ದಪ್ಪವಾದ ಕಲ್ಲಿದ್ದಲಿಯ ಪದರುಗಳಲ್ಲಿ ಆ ಪ್ರಾಗೈತಿಹಾಸಿಕ ಪ್ರಾಣಿಗಳ ಅವಶೇಷಗಳು ಸಂಗ್ರಹಿತವಾಗಿದ್ದವು.

ಹಾಗಾದರೆ ಪೆಡಂಭೂತಗಳಾಗಲಿ ಸರೀಸೃಪಗಳಾಗಲಿ ಅಥವಾ ಇತರ ಪ್ರಾಗೈತಿಹಾಸಿಕ ಪ್ರಾಣಿಗಳಾಗಲಿ ನಾಶಗೊಳ್ಳಲು ಕಾರಣವೇನಿರಬಹುದು? ಪೃಥ್ವಿಯ ವಾತಾವರಣದಲ್ಲಿ ಏರುಪೇರುಗಳಾಗಿ ಅವು ನಿರ್ವಂಶವಾಗಿರಬಹುದೆ? ವಾತಾವರಣ ಒಮ್ಮೆಲೆ ಶೀತವಾಯಿತೆಂದು ಭಾವಿಸಲು ಆಧಾರಗಳಿಲ್ಲ. ಅದು ಕ್ರಮೇಣವಾಗಿಯಾದರೂ ಶೀತಗೊಂಡಿತೆಂದು ಭಾವಿಸುವುದಾದಲ್ಲಿ ವಿಕಾಸವಾದದ ಮಾನದಂಡದಿಂದ ಹೀಗೆ ವಾತಾವರಣದಲ್ಲಿ ಬದಲಾವಣೆಯಾಗಲು ಲಕ್ಷಾಂತರ ವರ್ಷಗಳೇ ಬೇಕು. ಮತ್ತು ವಿಕಾಸವಾದದ ಪ್ರಕಾರವಾಗಿಯೆ ಈ ಅವಧಿಯಲ್ಲಿ ಆಗ ಜೀವಿಸಿದ್ದ ಕೆಲವು ಪ್ರಾಣಿಗಳಾದರೂ ಹೊಸ ವಾತಾವರಣಕ್ಕೆ ಒಗ್ಗಿಕೊಳ್ಳುವ ಹಾಗೆ ಮಾರ್ಪಾಡುಗೊಳ್ಳಬೇಕು. ಆದರೆ ಹೀಗೆ ಮಾರ್ಪಾಡುಗೊಂಡಿದ್ದಕ್ಕೂ ಆಧಾರಗಳಿಲ್ಲ. ಒಂದು ವೇಳೆ ವಾತಾವರಣದಲ್ಲಿ ಬಿಸಿಯೇರಿದ್ದರೆ ? ಭೂಗರ್ಭಶಾಸ್ತ್ರೀಯವಾಗಿಯೂ ಇದಕ್ಕೆ ಆಧಾರ ದೊರೆತಿಲ್ಲ.

ಆಕಸ್ಮಿಕವಾಗಿ ಈ ಮಹಾಕಾಯವಲ್ಲಿ ಆಹಾರದ ಅಭಾವ ತಲೆದೋರಿ ಅವು ನಾಶಗೊಂಡಿರಬಾರದೇಕೆ? ಹಾಗಾದರೆ ಪೃಥ್ವಿಯ ತುಂಬೆಲ್ಲ ಒಂದೇ ವೇಳೆಗೆ ಆಹಾರದ ಅಭಾವ ಉಂಟಾಗಿರಬೇಕು. ಆದರೆ ಹೀಗೆ ಊಹಿಸುವುದೂ ಕಠಿಣವೇ ಸರಿ. ಅಲ್ಲದೆ ಪ್ರಪಂಚದಾದ್ಯಂತ ಲಭ್ಯವಾಗಿರುವ ಪಳೆಯುಳಿಕೆಗಳಲ್ಲಿ ಪೆಡಂಭೂತಾದಿಗಳಿಗೆ ಆಹಾರವಾಗಿದ್ದ ಸಸ್ಯಗಳು ಬೃಹತ್ ಪ್ರಮಾಣದಲ್ಲಿ ಕಂಡುಬರುವುದರಿಂದ ಆಹಾರಾಭಾವದಿಂದ ಅವುಗಳ ಸಂತತಿ ನಾಶವಾಯಿತೆಂದು ಬಗೆಯುವುದು ಅಷ್ಟು ತರ್ಕಸಂಗತವೆನಿಸುವುದಿಲ್ಲ.

ಪೃಥ್ವಿಯ ಮೇಲೆ ಮಹಾ ಪಿಡುಗು ತಲೆದೋರಿದ್ದರಿಂದ ಪ್ರಾಗೈತಿಹಾಸಿಕ ಪ್ರಾಣಿಗಳೆಲ್ಲ ಗತಿಸಿರಬಹುದೆ? ಆದರೆ ಈ ವರೆಗೆ ಪಿಡುಗು ತಲೆದೋರಿದಾಗಲೆಲ್ಲ ಅದು ಭೂಮಿಯ ಒಂದು ಭಾಗಕ್ಕೆ ಮಾತ್ರ ಮೊದಲು ಸೀಮಿತವಾಗಿದ್ದು ಅನಂತರ ಇತರ ಭಾಗಗಳಿಗೆ ಕ್ರಮೇಣವಾಗಿ ಪಸರಿಸಿದ್ದು ಕಂಡುಬರುತ್ತದೆ. ಪಿಡುಗು ಹಬ್ಬಿದಾಗ ಎಲ್ಲ ಪ್ರಾಣಿಗಳೂ ನಾಶವಾದ ಉದಾಹರಣೆ ಎಲ್ಲಿಯೂ ದೊರೆತಿಲ್ಲ. ಪಿಡುಗು ಎಷ್ಟೇ ತೀವ್ರವಾಗಿದ್ದರೂ ಕೆಲವು ಪ್ರಾಣಿಗಳಾದರೂ ಪ್ರತಿರೋಧಶಕ್ತಿಯನ್ನು ಬೆಳೆಸಿಕೊಂಡು ಬದುಕುವ ಸಾಧ್ಯತೆ ಹೆಚ್ಚು. ಆದ್ದರಿಂದ ಒಂದೇ ವೇಳೆಗೆ ಜಗತ್ತಿನಾದ್ಯಂತ ಪಿಡುಗು ಹಬ್ಬಿ ಜಗತ್ತಿನಲ್ಲಿದ್ದ ಎಲ್ಲ ಪ್ರಾಣಿಗಳಿಗೂ ನಿರ್ವಂಶವಾಗಿ ಹೋದವೆಂದು ಭಾವಿಸುವುದು ಅಷ್ಟು ಸಮಂಜಸವೆನಿಸುವುದಿಲ್ಲ.

ಅವುಗಳ ದೇಹರಚನೆಯಲ್ಲಿ ಏನೋ ದೋಷವಿದ್ದುದರ ಪರಿಣಾಮವಾಗಿ ಅವು ನಶಿಸಿಹೋಗಿರಬಾರದೇಕೆ? ಆದರೆ ಪ್ರಾಗೈತಿಹಾಸಿಕ ಆಧಾರಗಳು ಈ ವಾದವನ್ನೂ ಸಮರ್ಥಿಸುವುದಿಲ್ಲ. ಒಂದು ವೇಳೆ ಈ ವಾದವನ್ನು ಮನ್ನಿಸುವುದೇ ಆದರೆ ಆ ಕಾಲದಲ್ಲಿ ಜೀವಿಸಿದ್ದ ಭೂಚರ ಪ್ರಾಣಿಗಳೆಲ್ಲದರ ದೇಹದಲ್ಲಿಯೂ ದೋಷವಿತ್ತು; ಆದರೂ ಅವುಗಳ ಸಂತತಿ ಲಕ್ಷಾಂತರ ವರ್ಷಗಳವರೆಗೆ ಜೀವಿಸಿ ಆ ದೋಷಗಳಿಂದಾಗಿ ಒಮ್ಮೆಲೆ ನಿರ್ವಂಶವಾದವೆನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಆದ್ದರಿಂದ ಈ ವಾದವೂ ತರ್ಕದ ಒರೆಗೆ ನಿಲ್ಲುವುದಿಲ್ಲ.

ಪ್ರಾಗೈತಿಹಾಸಿಕ ಕಾಲದಲ್ಲಿ ಜೀವಿಸಿದ್ದ ಕೆಲವು ಸ್ತನಿಗಳಿಗೆ ಪೆಡಂಭೂತಗಳ ತತ್ತಿಗಳೆಂದರೆ ಬಹಳ ಇಷ್ಟ. ಅವು ಆ ತತ್ತಿಗಳನ್ನು ಕಂಡಾಬಟ್ಟೆಯಾಗಿ ಭಕ್ಷಿಸಿದ್ದರಿಂದ ಪೆಡಂಭೂತಗಳ ಸಂಖ್ಯೆ ಕ್ರಮೇಣವಾಗಿ ಕಡಿಮೆಯಾಗತೊಡಗಿ ಅವು ಹೇಳಹೆಸರಿಲ್ಲದಂತಾದವೆಂಬ ವಿಚಿತ್ರ ವಾದವೂ ಉಂಟು. ಪೆಡಂಭೂತಗಳಲ್ಲದೆ ಆ ಕಾಲದಲ್ಲಿ

ಜೀವಿಸಿದ್ದ ಉಳಿದ ಬಗೆಯ ಜೀವಿಗಳು ಹೇಗೆ ಲುಪ್ತವಾದವೆಂಬುದನ್ನು ಈ ವಾದ ವಿವರಿಸುವುದಿಲ್ಲ. ಪ್ರಾಕೃತಿಕ ಶತ್ರುಗಳು ಹೆಚ್ಚಾಗಿರುವ ಸಂದರ್ಭಗಳಲ್ಲಿ ಕ್ಷತಿಗೀಡಾಗುವ ಜೀವಿಗಳು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಸಂತಾನೋತ್ಪತ್ತಿಯನ್ನುಂಟುಮಾಡುವ ವ್ಯವಸ್ಥೆಯನ್ನು ನಿಸರ್ಗ ಎಂದಿನಿಂದಲೂ ಏರ್ಪಡಿಸುತ್ತ ಬಂದಿರುವುದು ಸ್ವಯಂವೇದ್ಯವಾದ ವಿಷಯ. ಉದಾಹರಣೆಗೆ ಹೇಳುವುದಾದರೆ ಇಜಿಪ್ತಿನ ನೈಲ್ ನದಿಯಲ್ಲಿ ವಾಸಿಸುವ ಮೊಸಳೆಗಳ ತತ್ತಿಗಳನ್ನು ಅದೇ ಪ್ರದೇಶದಲ್ಲಿ ವಾಸವಾದ ಹಲ್ಲಿ ಜಾತಿಯ ಪ್ರಾಣಿಗಳು ಅನಾದಿಕಾಲದಿಂದ ಕಬಳಿಸುತ್ತಿದ್ದರೂ ಇಂದಿಗೂ ಮೊಸಳೆಗಳ ಸಂತತಿ ಕ್ಷಯಗೊಂಡಿಲ್ಲ. ಇದೆಲ್ಲಕ್ಕಿಂತಲೂ ಮುಖ್ಯವಾಗಿ ಈಗ ನಮಗೆ ಕಾಣಬರುವ ಸ್ತನಿಗಳು ಪೆಡಂಭೂತಾದಿಗಳು ನಿರ್ವಂಶವಾದ ನಂತರವೇ ಭೂಮಿಯ ಮೇಲೆ ಉದ್ಭವಿಸಿದವು ಎನ್ನುವುದು ಪಳಿಯುಳಿಕೆಗಳ ಕೂಲಂಕಷ ಪರಿಶೀಲನೆಯಿಂದ ಸಿದ್ಧವಾಗಿದೆ. ಆದ್ದರಿಂದ ಈ ವಾದದಲ್ಲಿಯೂ ಹುರುಳಿಲ್ಲ.

ಇದೆಲ್ಲವನ್ನೂ ನೋಡಿದಾಗ ಕೋಟ್ಯವಧಿ ವರ್ಷಗಳ ಹಿಂದೆ ಸಮಸ್ತ ಪೃಥ್ವಿಯ ತುಂಬಾ ಮಹಾ ಉತ್ಪಾತವೊಂದು ಸಂಭವಿಸಿ ಆಗ ಜೀವಿಸಿದ್ದ ಪ್ರಾಣಿಗಳೆಲ್ಲವೂ ಒಮ್ಮೆಲೆ ಮರಣ ಹೊಂದಿದವು ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಆದರೆ ಡಾರ್ವಿನ್ನನ ವಿಕಾಸವಾದವನ್ನು ಸಮರ್ಥಿಸುವವರು ಈ ವಾದವನ್ನು ಒಪ್ಪುವುದಿಲ್ಲ. ಏಕೆಂದರೆ ವಿಕಾಸವಾದದ ಪ್ರಕಾರ ಒಂದು ಪರಿಸರದಿಂದ ಮತ್ತೊಂದು ಪರಿಸರಕ್ಕೆ ಶಾರೀರಿಕ ಬದಲಾವಣೆಗಳೊಂದಿಗೆ ಪ್ರಾಣಿವಿಶೇಷವೊಂದು ಹೊಂದಿಕೊಳ್ಳಬೇಕೆಂದರೆ ಲಕ್ಷಾಂತರ ವರ್ಷಗಳೇ ಬೇಕು. ಒಂದು ವೇಳೆ ಮೇಲೆ ಹೇಳಿದ ವಾದವನ್ನೊಪ್ಪುವುದಾದರೆ ವಿಕಾಸವಾದದ ಆಧಾರವೇ ಕುಸಿಯುತ್ತದೆ.

ಆದರೆ ಈ ವರೆಗೆ ಲಭ್ಯವಾದ ವಾಸ್ತವಿಕ ತಥ್ಯಗಳು ಸಾರುವುದೇನನ್ನು ? ಸರೀಸೃಪಗಳಿಂದ ಸ್ತನಿಗಳು ರೂಪುಗೊಂಡವೆನ್ನುವುದಕ್ಕೆ ಈ ವರೆಗೆ ಯಾವ ಪ್ರಾಗೈತಿಹಾಸಿಕ ಆಧಾರವೂ ದೊರೆತಿಲ್ಲ. ವಿಕಾಸವಾದವನ್ನು ಒಪ್ಪುವುದೇ ಆದರೆ ನೀರಿನಲ್ಲಿನ ಅಮೀಬ ಉತ್ಕ್ರಾಂತಿಗೊಂಡು ಕಾಲಾಂತರದಲ್ಲಿ ಹಲವಾರು ಬಗೆಯ ಪ್ರಾಣಿಗಳು ನಿರ್ಮಾಣವಾದವೆಂಬುದನ್ನು ಒಪ್ಪಬೇಕಾಗುತ್ತದೆ. ಆದರೆ ಪಳೆಯುಳಿಕೆಗಳನ್ನು ಪರಿಶೀಲಿಸಿದಾಗ ಪ್ರಾಗೈತಿಹಾಸಿಕ ಕಾಲದಲ್ಲಿ ಜೀವಿಸಿದ್ದ ಸರೀಸೃಪಗಳು ಹಾಗೂ ಈಗ ಕಂಡುಬರುವ ಜೀವಿಗಳ ನಡುವಿನ ಇತಿಹಾಸ ತೀರಾ ಅಸ್ಪಷ್ಟವಾಗಿದ್ದು ಕಾಣುತ್ತದೆ. ಇದೊಂದರ ಆಧಾರದ ಮೇಲೆ ವಿಕಾಸವಾದವನ್ನು ಅಲ್ಲಗಳೆಯುವಂತಿಲ್ಲ ನಿಜ. ಆದರೆ ಈಗ ಕಂಡುಬರುವ ಗಿಡಮರಗಳಾಗಲಿ ಪಶುಪಕ್ಷಿಗಳಾಗಲಿ ಮತ್ಸ್ಯಾದಿಗಳಾಗಲಿ ಬಹುತರವಾಗಿ ಪ್ರಾಗೈತಿಹಾಸಿಕ ಕಾಲದ ಪ್ರಾಣಿಗಳನ್ನು ಹೋಲುವುದಿಲ್ಲ ಹಾಗೂ ಅವುಗಳ ನಡುವೆ ಉತ್ಕ್ರಾಂತಿಯ ಸಂಬಂಧವನ್ನು ಕಲ್ಪಿಸುವ ಆಧಾರಗಳೂ ದೊರೆತಿಲ್ಲ. ಹೀಗಾಗಿ ಸರೀಸೃಪಗಳಿಂದ ಸ್ತನಿಗಳು ರೂಪುಗೊಂಡವೆಂದು ವಿಕಾಸವಾದಿಗಳು ಹೇಳುವ ಮಾತನ್ನು ಒಪ್ಪುವುದು ಕಠಿಣವಾಗುತ್ತದೆ. ಜಗತ್ತಿನ ವಿವಿಧೆಡೆಗಳಲ್ಲಿ ಲಭ್ಯವಾದ ಪಳೆಯುಳಿಕೆಗಳನ್ನು ಪರಿಶೀಲಿಸಿದಾಗ ಪೆಡಂಭೂತ ಸರೀಸೃಪಾದಿ ಪ್ರಾಣಿಗಳು ಒಂದೇ ಕಾಲಕ್ಕೆ ನಿರ್ವಂಶವಾದದ್ದು ವ್ಯಕ್ತವಾಗುತ್ತದೆ. ಹಾಗಾದರೆ ಈಗ ಕಂಡುಬರುವ ಪ್ರಾಣಿಗಳಾಗಲಿ ಗಿಡಮರಗಳಾಗಲಿ ಉದ್ಭವಿಸಿದ್ದು ಹೇಗೆ? ಮಾನವಜನಾಂಗ ಈ ಪೃಥ್ವಿಯ ಮೇಲೆ ಉದಯಿಸಿದ್ದು ಹೇಗೆ? ನಿಜಕ್ಕೂ ಮಂಗನಿಂದ ಮಾನವ ರೂಪುಗೊಂಡನೆ ?

ಡಾರ್ವಿನ್ ಮಹಾಶಯ ಗತಿಸಿ ಸುಮಾರು ನೂರು ವರ್ಷಗಳಾದ ನಂತರ ಅವನ ವಾದ ತಪ್ಪು ಸರಿ ಎಂಬ ಬಗೆ ಇದೀಗ ವಿಜ್ಞಾನಿಗಳು ತಲೆ ತುರಿಸಿಕೊಳ್ಳುತ್ತಿದ್ದಾರೆ.

✡

ಎಂ. ಎಚ್. ನಾಯಕ ಬಾಡ

ಬೆಳಗಾಗಲು ಇನ್ನೂ ಹೊತ್ತಿರುವಾಗ ಅವನಿಗೊಂದು ಕನಸು ಬಿತ್ತು. ಕನಸಿನಲ್ಲಿದ್ದಾಗ ಅದು ತುಂಬಾ ಸುಂದರವಾಗಿದ್ದಂತೆ ತೋರಿದರೂ ಎಚ್ಚರವಾದ ಮೇಲೆ ಅದು ರೋಮಾಂಚಕವೂ ಆಗಿತ್ತೆಂದು ಅವನಿಗನ್ನಿಸಿತು. ಅದು ಎಷ್ಟೊಂದು ರೋಮಾಂಚಕವಾಗಿತ್ತೆಂದರೆ ನಿದ್ದೆ ತಿಳಿದೆದ್ದ ಮೇಲೂ ಅವನೆದೆ ಜೋರಾಗಿ ಹೊಡೆದುಕೊಳ್ಳುತ್ತಿತ್ತು. ಮೈಯಲ್ಲಾ ಬಿಸಿಯಾದಂತೆ ಅನ್ನಿಸಿತು. ಕನಸಿನ ದೆಸೆಯಿಂದಾಗಿ ಮನಸ್ಸಿನಲ್ಲಿ ಆತ ಸುಮಾರು ಹತ್ತು ವರ್ಷಗಳಷ್ಟು ಚಿಕ್ಕವನಾಗಿಬಿಟ್ಟಿದ್ದ. ನೆನಪಿನ ಯಾವುದೋ ಪದರದಲ್ಲಿ ಸಿಕ್ಕಿಕೊಂಡು ಬಹುತೇಕ ವಾಗಿ . ಮರೇತೇಹೋಗಿದ್ದ ಘಟನೆಯೊಂದು ಆತನನ್ನು ಹೊಸದಾಗಿ ಬಾಧಿಸಲಾರಂಭಿಸಿದ ಅನುಭವವಾಯಿತು.

ಕನಸಿನ ಸಾರಾಂಶವಿಷ್ಟೇ. ಒಂದು ಸಂಜೆ ಆಕಾಶ ದಲ್ಲಿ ಇದ್ದಕ್ಕಿದ್ದಂತೆ ಮೋಡ ದಟ್ಟವಾಗತೊಡ ಗಲು ಜೋರಾಗಿ ಮಳೆ ಬರುತ್ತದೆಂದು ಕೊನೆ-ಯ ಪೀರಿಯಡ್ಡಿಗೆ ಅಟೆಂಡಾಗದೆ ಪುಸ್ತಕದ ಚೀಲ ವನ್ನು ಹೆಗಲಿಗೆ ಇಳಿಬಿಟ್ಟು ಆತ ಕಾಲೇಜಿನಿಂದ ಹೊರಬಿದ್ದ. ಆಗಲೇ ಜೋರಾಗಿ ಗಾಳಿ ಬೀಸಲು ಪ್ರಾರಂಭಿಸಿತ್ತು. ಆತ ಒಂದು ಮೈಲಿನಷ್ಟು ಮಾತ್ರ ಬಂದಿದ್ದ. ಹಳಕಾರ ಕತ್ರಿ ದಾಟಿ ಕೆಲವೇ ಮಾರು ದೂರದಲ್ಲಿದ್ದ. ಇದ್ದಕ್ಕಿದ್ದಂತೆ ಗಾಳಿಮಳೆ ಶುರುವಾಯ್ತು. ಸಂಜೆಯ ಮಳೆ, ಸರಕ್ಕನೆ ನಿಲ್ಲೋಣವೆಂದು ತಿಳಿದು ಆತ ಎಲ್ಲಿಯೂ ನಿಂತು ಕೊಳ್ಳುವ ಯೋಚನೆ ಮಾಡದೆ ಮುಂದುವರಿದ. ಬೀಸುವ ಹೊಡೆಯುವ ಮಳೆಯು ಕೊಡೆಗೆ ಕೊಡೆ ಬಿಡಿಸಿ ನಾಲ್ಕುಗಾಲು ಹಾಕತೊಡಗಿದ. ಕೆಲವೇ ಹೆಜ್ಜೆ ಸಾಗುವುದರೊಳಗೆ ಮಳೆಯು ರಭಸ ಹೆಚ್ಚಿದ್ದರಿಂದ ಮಳೆಯಿಂದ ರಕ್ಷಿಸುವಲ್ಲಿ ಆತನ ಕೊಡೆ ವಿಫಲವಾದ್ದರಿಂದ ಅಂಗಿ ಪೈಜಾಮೆಲ್ಲ ತೋಯ್ದು ಹೋದವು. ನೋಡ ನೋಡುತ್ತಿರುವಂತೆ ರಸ್ತೆಯ ಮೇಲೆ ಹಾಗೂ ಕಾಲುವೆಯಲ್ಲಿ ಕೆಂಪು ನೀರಿನ ಹಳ್ಳ ಹರಿಯತೊಡಗಿತು. ಇನ್ನು ಕೆಲವೇ ನಿಮಿಷ ಕಳೆಯುವುದರೊಳಗಾಗಿ ಆತನ ಮೈ ಪೂರ್ತಿಯಾಗಿ ಒದ್ದೆಯಾದುದಲ್ಲದೆ ಚಳಿಯಿಂದ ಆತ ನಡುಗ-ತೊಡಗಿದ. ಪೂರ್ತಿ ಒದ್ದೆಯಾದ ಮೇಲೆ ಇನ್ನೇನಿದೆ ಎಂದು ಆತ ಇನ್ನೂ ಜೋರಾಗಿ ಹೆಜ್ಜೆ ಕೀಳತೊಡ ಗಿದ. ಆಗಲೇ ಆತನಿಗೆ ಯಾರೋ ತನ್ನ ಹೆಸರು ಹಿಡಿದು ಕೂಗಿದ ಅಸ್ಪಷ್ಟ ಧ್ವನಿ ಕೇಳಿಸಿತು. ಮಳೆಯ ಸದ್ದಿನಲ್ಲಿ ಆ ಕೂಗು ಬೆರೆತು ಹೋಗಿದ್ದರಿಂದ ಸ್ಪಷ್ಟ ವಾಗದೇ ಆತ ಅದನ್ನು ಅಷ್ಟಾಗಿ ಗಮನಿಸುವ ಗೋಜಿಗೆ ಹೋಗದೆ ತಲೆಯವರೆಗೆ ಕೆಂಪು ನೀರನ್ನು ಪಟಪಟನೆ ಸಿಡಿಸುತ್ತಿದ್ದ ಹವಾಯಿ ಚಪ್ಪಲಿಗಳನ್ನು ಎಡಗೈಯಲ್ಲಿ ಹಿಡಿದು ಪುಸ್ತಕದ ಚೀಲವನ್ನು ಕಂಕುಳಲ್ಲಿ ಒತ್ತಿ ಹಿಡಿದು ಮುಂದೆ ಮುಂದೆ ನಡೆಯುತ್ತಿದ್ದಾಗ ಮತ್ತೆ ಅದೇ ದನಿ. ಆದರೆ ಈ ಬಾರಿ ಸ್ಪಷ್ಟ. ಆತ ನಿಂತು ಕೊಡೆಯನ್ನು



ಓರೆಮಾಡಿ ಪಕ್ಕಕ್ಕೆ ತಿರುಗಿದರೆ ವಸುಮತಿ ಎರಡೂ ಕೈಗಳನ್ನು ಕತ್ರಿಯಾಕಾರದಲ್ಲಿ ಎದೆಯ ಮೇಲೆ ಇಟ್ಟು ಮರವೊಂದರ ಕೆಳಗೆ ಮಳೆಯಲ್ಲಿ ತೋಯುತ್ತ ನಿಂತಿದ್ದಳು. 'ಅರೆ ಇವಳ ! ಇವಳು ಹೇಗೆ ಇಲ್ಲಿ ಬಂದು ಮಳೆಯಲ್ಲಿ ಸಿಕ್ಕು ಹಾಕಿಕೊಂಡಳು' ಎಂದು ಆತ ಅವಳತ್ತ ಎರಡು ಹೆಜ್ಜೆ ಸರಿದಿದ್ದನಷ್ಟೇ; ಅಷ್ಟರೊಳಗೆ ವಸುಮತಿ ಎರಡೇ ಗುಪ್ಪಿಗೆ ಹಾರಿ ಅವನ ಕೊಡೆಯೊಳಗೆ ತೂರಿಕೊಳ್ಳುವಾಗ ಆತ ಅವಳ ಜೊತೆಗೆ ಗಟಾರಿನಲ್ಲಿ ಬೀಳದಿದ್ದುದೇ ಹೆಚ್ಚಿನದು. ಚಳಿಯಿಂದ ವಸುಮತಿ ನಡಗುತ್ತಿದ್ದಳು. ಅವಳ ತಲೆ ಮೈಯಲ್ಲಾ ಪೂರ್ತಿಯಾಗಿ ತೊಯ್ದು ಹೋಗಿದ್ದವು. ಲಂಗ ಬ್ಲಾವುಸಿನಲ್ಲಿ ಅವಿತುಕೊಂಡಿದ್ದ ಅವಳ ಹರೆಯ ತೊಯ್ದು ಬಟ್ಟೆಯ ದೆಸೆಯಿಂದ ಕಣ್ಣಿಗೆ ಹೊಡೆಯುವಂತೆ ಎದ್ದು ಕಾಣುತ್ತಿತ್ತು.

ಆತ ಪೈಜಾಮಿನ ಜೇಬಿಗೆ ಕೈ ಹಾಕಿ ಒದ್ದೆಯಾದ ಕರವಸ್ತ್ರ ಹೊರಕ್ಕೆಳೆದು ಬಲವಾಗಿ ಒಮ್ಮೆ ಹಿಂಡಿ ಅವಳ ಕೈಗೆ ನೀಡಿ, "ಮೋರೆಯನ್ನೆಲ್ಲ ಒರೆಸಿಕೋ" ಎಂದ. ತಲೆ, ಹಣೆ, ಕುತ್ತಿಗೆ, ಮೋರೆಯನ್ನೆಲ್ಲ ಒರೆಸಿಕೊಳ್ಳುತ್ತ ಮಧ್ಯೆ ಮಧ್ಯೆ ಕರವಸ್ತ್ರವನ್ನು ಹಿಂಡಿಕೊಳ್ಳುತ್ತ ಮೈಯನ್ನೆಲ್ಲ ಸವರಿಕೊಳ್ಳುವಾಗ ಅವಳ ಜೂಪಾದ ಮೆತ್ತನೆಯ ಎದೆ ಅವನ ತೋಳಿಗೆ ಒತ್ತಿಕೊಳ್ಳುತ್ತ ಅವಳ ಬಿಸಿಯುಸಿರು ಅವನ ಮೋರೆಗೆ ಸೋಕುತ್ತ ಆ ಚಳಿಯಲ್ಲೂ ಮೈ ಬಿಸಿಯಾದಂತೆ ಅನ್ನಿಸುವಾಗ ಎಚ್ಚರವಾಗಿಬಿಟ್ಟಿತು.

ಹೊರಗೆ ಮಳೆ ಬೀಳುತ್ತಿತ್ತು. ಹೊರಗಿನ ಮಳೆಯ ದೆಸೆಯಿಂದ ಎಚ್ಚರವಾದ ಮೇಲೂ ಸುಧಾರಿಸಿಕೊಳ್ಳಲು ಅವನಿಗೆ ಹಲವು ಕ್ಷಣಗಳೇ ಬೇಕಾದವು. ಮೈಯಿನ್ನೂ ಬಿಸಿಯಾಗೇ ಇತ್ತು. ಎದೆ ಇನ್ನೂ ಹೊಡೆದುಕೊಳ್ಳುತ್ತಲೇ ಇತ್ತು.



ಹೊರಗಿನ ಮಳೆಯ ಸದ್ದನ್ನು ಆಲಿಸುತ್ತ ಕತ್ತಲೆಯಲ್ಲಿ ಕಣ್ಣು ಪಿಳಿಗುಟ್ಟಿಸುತ್ತ ಕುತ್ತಿಗೆಯ ವರೆಗೆ ರಗ್ಗನ್ನು ಎಳೆದುಕೊಂಡು ಈ ಹೊತ್ತಿನಲ್ಲಿ ವಸುಮತಿ ಏನು ಮಾಡುತ್ತಿರಬಹುದು ಎಂದು ನೆನಪಿಸಿಕೊಂಡರೆ ! ಯಾಕೋ ಆ ನೆನಪು ಹಿತವಾಗಲಿಲ್ಲ. ತನ್ನಿಚ್ಛೆಗೆ ವಿರುದ್ಧವಾಗಿ ಮಾವನ ಮಗನನ್ನು ಮದುವೆಯಾಗಿ ಅವಳು ಗಂಡನ ಜೊತೆಗೆ ಮುಂಬೈಗೆ ಹೊರಟು ಹೋದ ಏಳೆಂಟು ವರ್ಷಗಳಲ್ಲಿ ಒಮ್ಮೆ ಮಾತ್ರ ಊರಿಗೆ ಬಂದಿದ್ದಳು. ಅದೂ ಮೊದಲ ಹೆರಿಗೆಯಲ್ಲಿ. ಆದರೆ ಆಗಲೂ ಕೂಡ ತನಗವಳನ್ನು ಸಂಧಿಸಲಾಗಿರಲಿಲ್ಲ. ಮುಂಬಯಿಯ ಯಾವುದೋ ಬಡಾವಣೆಯಲ್ಲಿ ಯಾವುದೋ ಒಂದು ಚಾಳಿನ ಯಾವುದೋ ಅಂತಸ್ತಿನ ಒಂದು ಪುಟ್ಟ ಗೂಡಿನಲ್ಲಿ ತನ್ನ ಪುಟ್ಟ ಸಂಸಾರದ ಎರಡು ಮರಿಗಳನ್ನು ಪಕ್ಕದಲ್ಲಿ ಮಲಗಿಸಿಕೊಂಡು ಗಂಡನನ್ನು ತಬ್ಬಿಕೊಂಡು ಮಲಗಿರಲು ಸಾಕು. ಇಲ್ಲವೇ ಕೆಳಗಿನ ಮನೆಯ ಡ್ರೈವರನ ಹೆಂಡತಿಯಂತೆ ಪ್ರತಿ ವರ್ಷವೂ ಬಸಿರಾಗುತ್ತ, ಬರೇ ಮಕ್ಕಳನ್ನು ಹೆರುವ ಯಂತ್ರವಾಗಿ, ಬರೇ ಎಲುಬು ಚರ್ಮದ ಹಂದರವಾಗಿ ಸಾಯಲು ಇನ್ನೆಷ್ಟು ದಿನಗಳಿವೆ ಎಂದು ಎಣಿಸುತ್ತ......ಅಥವಾ ಇಷ್ಟೊತ್ತಿಗೆಲ್ಲ ಎದ್ದು ಬೆಳಗಾಗುತ್ತಲೇ ಟ್ರೇನು ಹಿಡಿಯುವ ಗಂಡನಿಗಾಗಿ ಅಡಿಗೆಯ ತಯಾರಿಯಲ್ಲಿರಲು ಸಾಕು. ತನ್ನದೇ ವಯಸ್ಸಿನ ವಸುಮತಿ ಈಗ ಹೇಗಾಗಿರಬಹುದು. ಯಾರಂತೆ ಕಾಣಿಸುತ್ತಿರಬಹುದು ಎಂದು ನೆನಪಿಸಿಕೊಂಡರೂ ಸಾಧ್ಯವಾಗದೇ ಹತ್ತು ವರ್ಷಗಳ ಹಿಂದಿನ ಅವಳ ಆಕೃತಿಯೇ ಕಣ್ಣೆದುರು ನಿಂತಿತು. ಲಂಗ, ಬ್ಲಾವುಸು ತೊಟ್ಟು, ಎಣ್ಣೆ ಹಾಕಿ ತಲೆ ಬಾಚಿ, ಎರಡೆರಡು ಜಡೆ ಹಾಕಿ, ಒಂದು ಜಡೆಗೆ ಮಾತ್ರ ಹೂ ಮುಡಿದು ಮೋರೆಗೆ ತೆಳ್ಳನೆಯ ಪೌಡರಿನ ಲೇಪ ಧರಿಸಿ ಹೆಗಲಿಗೆ ಪುಸ್ತಕದ ಚೀಲ ಇಳಿಬಿಟ್ಟು ತನ್ನ ಜೊತೆಗೆ ದಿನವೂ ಬೊಂಬೆಕಟ್ಟೆಯ ದಾರಿಯಾಗಿ ಹೈಸ್ಕೂಲಿಗೆ ಹೋಗುತ್ತಿದ್ದ ಹುಡುಗಿ ಮುಂದೊಂದು ದಿನ ತನ್ನನ್ನು ಮಾನಸಿಕವಾಗಿ ಸಾಕಷ್ಟು ಗೋಳು ಹೊಯ್ದುಕೊಳ್ಳುವಳೆಂದು ತಾನೇನಾದರೂ ಆ ವಯಸ್ಸಿನಲ್ಲಿ

ಎಣಿಸಿದ್ದೆನೆ ಎಂದು ನೆನಪಾದಾಗ ಈ ಬದುಕು ಎಷ್ಟೊಂದು ನಾಜೂಕು ಅನ್ನಿಸಿತು.

ತಾವಿಬ್ಬರೂ ಒಬ್ಬರಿಗೊಬ್ಬರು ಆತ್ಮೀಯರಾಗಿದ್ದೆವು, ಒಬ್ಬರನ್ನೊಬ್ಬರು ತುಂಬಾ ಆಕರ್ಷಿಸುತ್ತಿದ್ದೆವು ಎಂಬ ಸತ್ಯ ಆತನಿಗೆ ಅರಿವಾದದ್ದು ಮ್ಯಾಟ್ರಿಕ್ ಮುಗಿದ ನಂತರವೇ. ಅಪ್ಪ ಅಮ್ಮರನ್ನು ಎದುರಿಸಲಾರದೆ ವಸುಮತಿ ಮನೆಯಲ್ಲೇ ಕುಳಿತು ತಾನು ಮಾತ್ರ ಅಪ್ಪ, ಅಕ್ಕ, ಭಾವರ ಇಚ್ಛೆಗೆ ವಿರುದ್ಧವಾಗಿ ಕಾಲೇಜಿಗೆ ಮುಂಜಾನೆ ಹೊರಲು ಬೆಳಗೆದ್ದು ತಂಗಳನ್ನ ತಿಂದು ಗದ್ದೆಯ ಬಯಲಿನಲ್ಲಿ ಕೋಟೆಭಟ್ಟರ ಕಟ್ಟೆಯ ದಾರಿಯಾಗಿ ಸಾಗಿ ಬರ್ಸಗುಣೆಯ ಕತ್ರಿಯಲ್ಲಿ ಅಡ್ಡ ತಿರುಗಿ ಗುಡ್ಡ ಹತ್ತಿಳಿದು ಕಾಲೇಜು ತಲಪುವುದರೊಳಗೆ ತಿಂದದ್ದೆಲ್ಲ ಬೆವರಾಗಿ ಹರಿದು, 'ಸಾಕು, ನಾಳೆಯಿಂದಲೇ ಧಂಧೆ ಬಿಟ್ಟು ಎಲ್ಲಿಯಾದರೂ ನೂರು ರೂಪಾಯಿಯ ನೌಕರಿಗಾಗಿ ಪ್ರಯತ್ನಿಸಬೇಕು.' ಎಂಬ ಅನ್ನಿಸಿಕೆಯೂ ಹಿಂದಿನಿಂದ, ಅದನ್ನು ಮೆಟ್ಟಿ ನಿಂತ ಒಂದು ವಿಧವಾದ ಎದೆಗಾರಿಕೆಯೂ ತನ್ನನ್ನು ಸಾಕಷ್ಟು ಗಾಸಿಗೊಳಿಸುತ್ತಿತ್ತು. ಕ್ಲಾಸಿನಲ್ಲಿ ಡೆಸ್ಕಿನ ಮೇಲೆ ಎರಡೂ ಕೈಗಳನ್ನು ಬೊಗಸೆಯಾಕಾರದಲ್ಲಿ ಚಾಚಿ ಅದರ ಮೇಲೆ ಮೋರೆಯನ್ನಿಟ್ಟು ಕ್ಲಾಸು ನಡೆಯುತ್ತಿರಲಿ, ಇಲ್ಲದಿರಲಿ, ಆಗಾಗ ಅವನತ್ತಲೇ ದಿಟ್ಟಿಸುತ್ತ, ಪುಸ್ತಕ, ಪೆನ್ನು ಕಂಪಾಸು ಬಾಕ್ಸು, ನೋಟುಬುಕ್ಕುಗಳಿಗಾಗಿ ದಿನವೂ ಕಾಡುತ್ತ, ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿ ಇತರರ ಕಣ್ಣುತಪ್ಪಿಸಿ ಮನೆಯಿಂದ ತಂದ ದೋಸೆ ಚಟ್ನಿ, ಮೊಸರು ಅವಲಕ್ಕಿಯನ್ನು ಅವನಿಗೆ ಕೊಟ್ಟು. ಆತ ತಿನ್ನುತ್ತಿದ್ದಾಗ ಅವನ ಮೋರೆಯನ್ನು ನೋಡುತ್ತ ಕುಳಿತಿರುತ್ತಿದ್ದ ವಸುಮತಿಯ ಆಕೃತಿ ಕಣ್ಣ ಮುಂದೆ ಸುಳಿದು ಅವಳ ಈ ತೆರನಾದ ವರ್ತನೆಗೆ ಪ್ರತಿಯಾಗಿ ತಾನೇನಾದರೂ ಆತ್ಮೀಯ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿದ್ದೆನೆ ಎಂಬುದನ್ನು ನೆನಪಿಸಿಕೊಂಡಾಗ ತಾನೊಬ್ಬ ಭಾವನೆಗಳೇ ಇಲ್ಲದ ಕಲ್ಲು ಗುಂಡಾಗಿದ್ದೆ ಎಂದುಕೊಂಡ. ಹೊರಗೆ ಮಳೆ ಮೊದಲಿಗಿಂತ ಜೋರಾಗಿ ಸುರಿಯುತ್ತಿತ್ತು. ಮಳೆಯ ಇರಿಚಲು ಕಿಟಕಿಯ ಗಾಜುಗಳ ಮೇಲೆ ಒಂದು ತೆರನಾದ ಆತ್ಮೀಯ ಸಪ್ಪಳ ಮಾಡುತ್ತಿತ್ತು. ಮಗ್ಗಲು ಬದಲಿಸುತ್ತ ರಗ್ಗನ್ನು ಮೇಲೆ ಮೇಲೆ ಎಳೆದುಕೊಳ್ಳುತ್ತ, 'ಏನೆಂದರೂ ಬೆಂಗಳೂರು ಮಳೆ ತುಂಬಾ ಸಪ್ಪೆ. ಒಂದಿಷ್ಟು ಚಳಿ ಕೊಡಬಹುದು, ಅಷ್ಟೆ. ನಮ್ಮೂರಿನ ಮಳೆಯ ಖುಷಿ ಕೊಡಲು ಇದಕ್ಕೆ ಸಾಧ್ಯವಿಲ್ಲ' ಎಂದುಕೊಂಡ. ಮಳೆಗಾಲವಾಗಿದ್ದರೆ ಗುಡೇ ಅಂಗಡಿಯಲ್ಲಿ ಈಗಲೂ ಆಗಿನಂತೆಯೇ ಅರ್ಭಟದ ಮಳೆ ಬೀಳುತ್ತಿರಲು ಸಾಕು. ಮಾದರಿ ರಸ್ತೆಯ ಕೊನೆಯಲ್ಲಿ ಜೇರಪ್ಪ ನಾಯ್ಕನ ಹಿತ್ತಿಲಿಗೆ ಹೊಂದಿಕೊಂಡ ಆ ಹಂಚಿನ ಮನೆಯ ಹಲಗೆ ಹೊದಿಸಿದ ಮಾಳಿಗೆಯ ಮೇಲೆ ಮಳೆ ಬಂದ ರಾತ್ರಿ ಓದುವ ಗೋಜಿಗೇ ಹೋಗದೇ ಚಿಮಣಿ ಬುಡ್ಡಿ ಆರಿಸಿ ತಲೆ ತುಂಬ ಮುಸುಕುಳೆದು ಹಂಚಿನ ಮೇಲೆ ಬೀಳುವ ಮಳೆಯ ಸದ್ದನ್ನು, ಅಬ್ಬರದ ಗಾಳಿಯ ಸಂಗೀತವನ್ನು ಕೇಳುತ್ತ ನಿದ್ದೆ ಹೋದ ರಾತ್ರಿಗಳು ಅಂದೂ ಖುಷಿ ಕೊಡುತ್ತಿದ್ದವು. ಅದರ ನೆನಪು ಈಗಲೂ ಖುಷಿ ಕೊಡುತ್ತಿದೆ. ಗುಡೇ ಅಂಗಡಿಗೆ ಹೋಗದೆ ಬಹಳ ವರ್ಷಗಳೇ ಸಂದವು. ಮಾದರಿರಸ್ತೆ, ಬೊಂಬೆ ಕಟ್ಟೆ, ರಥಬೀದಿ, ಗುಡ್ಡದ ಮೇಲಿನ ಅಮ್ಮನ ದೇವಸ್ಥಾನ, ಗುಡಿಕೊಪ್ಪ ಹರಕಂತ್ರ ಕೇರಿ, ಕೋಟೆಭಟ್ಟರ ಕಟ್ಟೆ, ಬರ್ಸಗುಣೆಯ ಕತ್ರಿ, ಮಾಣಿಕಟ್ಟೆನ ಗಜನಿ, ವಸುಮತಿಯ ಮನೆಯ ಆ ದೊಡ್ಡ ಅಂಗಳ ಹಾಗೂ ಅಂಗಳದ ಅಂಚಿಗೆ ದಣಪೆಕಟ್ಟೆ ಪಕ್ಕದಲ್ಲಿದ್ದ ಆ ದೊಡ್ಡ ಮಾವಿನ ಮರ – ಆತನ ವಿಚಾರ ಗಕ್ಕನೆ ನಿಂತಿತು.

ಎದೆಯಲ್ಲೇನೋ ನೋವಾದಂತೆ ಅನ್ನಿಸಿತು. ತಾನು ವಸುಮತಿಯನ್ನು ಕೊನೆಯ ಸಲ ನೋಡಿದ್ದು ಅಲ್ಲೇ ಅಲ್ಲವೆ! ಅವಳಪ್ಪನನ್ನು ಎದುರಿಸಲಾರದೆ ಹೇಡಿಯಂತೆ ಏನೇನೋ ಬಡಬಡಿಸಿ ತನಗೆ ತಾನೇ ಭಯಪಟ್ಟು ಹಿಂದೆ ತಿರುಗಿ ನೋಡಲೂ ಭಯವಾಗಿ ನಾಲ್ಕುಗಾಲು ಹಾಕುತ್ತ ದಣಪೆ ದಾಟಿ...ಜೇರಪ್ಪ ಚಾರಿ ಮನೆಯ ಓಣಿಯಲ್ಲಿ ತಿರುಗಿಕೊಳ್ಳುವಾಗ ಗಕ್ಕನೆ ಒಮ್ಮೆ ಹಿಂತಿರುಗಿ ನೋಡಿದರೆ ಅಲ್ಲೇ...ಅದೇ ದೈತ್ಯಾಕಾರದ ಮಾವಿನ ಮರದ ಕೆಳಗೆ ನಿಂತಿದ್ದಳಲ್ಲ ವಸುಮತಿ! ಅವಳ

ಮೋರೆಯ ಮೇಲೆ ಸಿಟ್ಟಿತ್ತೆ! ಜಿಗುಪ್ಸೆಯಿತ್ತೆ! ಅಳುವಿತ್ತೆ. ಎಷ್ಟು ನೆನಪಿಸಿಕೊಂಡರೂ ಆಗಿನ ಅವಳ ಮುಖಭಾವವನ್ನು ನೆನಪಿಸಿಕೊಳ್ಳುವದು ಅವನಿಂದ ಸಾಧ್ಯವಾಗಲಿಲ್ಲ.

*

ಸಂಜೆ ಕಾಲೇಜಿನಿಂದ ಬಂದವ ಪುಸ್ತಕ ನೋಟು ಬುಕ್ಕುಗಳನ್ನು ಮೇಜಿನ ಮೇಲೆಸೆದು ಪಂಚೆ ಸುತ್ತಿಕೊಂಡು ಸಮುದ್ರದ ದಂಡೆಗೆ ಬಂದ. ಪರಕಾಂತ್ರ ಮುಕರ್ಗೊಂಡಿಯ ದೋಣಿಯ ಹಾಯಿ ಮೇಲೇರಿ ಉಂಡೆಸೂರ್ಯ ಕಪಲಿಸುತ್ತ ಜಾರುವುದನ್ನು ನೋಡುತ್ತ ಕುಳಿತ. ದೂರದಲ್ಲಿ ವಸುಮತಿ ಕಾಣಿಸಿದಳು. ಒಬ್ಬಳೇ. ಹೈಸ್ಕೂಲು ಓದು ಮುಗಿದ ಮೇಲೆ ಅವಳನ್ನು ಕಾಣುವುದೇ ಅಪರೂಪವಾಗಿತ್ತು. ಆಗೊಮ್ಮೆ ಈಗೊಮ್ಮೆ ಸಮುದ್ರದ ದಂಡೆಯ ಮೇಲೆ ಕಾಣಿಸಿದ್ದರೂ ಅವಳ ಜೊತೆಗೆ ಅವಳಮ್ಮನಾಗಲಿ ಅಥವಾ ಅಪ್ಪನಾಗಲಿ ಇದ್ದೇ ಇರುತ್ತಿದ್ದರು. ಅವರ ಜೊತೆಗೆ ಆತನೂ ಹೆಜ್ಜೆ ಹಾಕುತ್ತ ಸಾಕಷ್ಟು ದೂರ ಸಾಗಿದರೂ ವಸುಮತಿಯೊಡನೆ ಮಾತಾಡುವ ಅವನ ಬಯಕೆ ಬಯಕೆಯಾಗಿಯೇ ಉಳಿಯುತ್ತಿತ್ತು. ಇಂದು ವಸುಮತಿ ಒಬ್ಬಳೇ ಬಂದುದನ್ನು ನೋಡಿ ಅವನಿಗೆ ಆಶ್ಚರ್ಯವೂ ಜೊತೆಗೆ ಎಲ್ಲಿಲ್ಲದ ಆನಂದವೂ ಏಕಕಾಲಕ್ಕೆ ಉಂಟಾಯಿತು. ವಸುಮತಿ ಮೊದಲಿಗಿಂತ ಎತ್ತರವಾಗಿ ಚೆಂದಾಗಿ ಕಾಣಿಸುತ್ತಿದ್ದಳು. ಬಹುಶಃ ಅವಳಮ್ಮನದೆಂದು ಕಾಣಿಸುತ್ತದೆ–ಹೊಸ ಪತ್ತಲ ಉಟ್ಟು, ಎರಡೆರಡು ಜಡೆ ಹೆಣೆದು ಎರಡೂ ಜಡೆಗೆ ಅಬ್ಬಲಿ ಹೂ ಮುಡಿದಿದ್ದಳು. ಹತ್ತಿರ ಬಂದಾಗ ಆತ ಕೆಳಕ್ಕೆ ಜಿಗಿದು, "ವಸು ಏನಿವತ್ತು ಒಬ್ಬಳೇ!' ಎಂದ. "ನಿನ್ನನ್ನೇ ನೋಡುವುದಿತ್ತು ಬಂದೆ" ಎಂದಳು.

ಕ್ಷಿತಿಜದಲ್ಲಿ ಸಂಜೆಯ ಕೆಂಪು ಸೂರ್ಯ, ಕೆಂಪು ಹಳದಿ ಅಂಚುಗಳನ್ನು ಹೊಂದಿದ ತುಣುಕು ಮೋಡಗಳು, ಹಚ್ಚ ಹಸುರಾಗಿ ಕಾಣುತ್ತಿದ್ದ ಕಡಲೆ ಗುಡ್ಡ ಹಾಗೂ ಅಘನಾಶಿನಿ ಗುಡ್ಡಗಳು ಕೆಲವೇ ಅಡಿಗಳ ಅಂತರದಲ್ಲಿ ದಂಡೆಯನ್ನು ಚುಂಬಿಸುತ್ತ ಒಂದಕ್ಕೆ ತೆರಳುತ್ತಿದ್ದ ಪುಟ್ಟ ಪುಟ್ಟ ಅಲೆಗಳು. ಪಕ್ಕದಲ್ಲಿ ಹೆಜ್ಜೆ ಹಾಕುತ್ತ ಸಾಗಿದ್ದ ವಸುಮತಿ ಹಾಗೂ ಅವಳು ತನ್ನನ್ನೇ ಕಾಣಲು ಬಂದೆನೆಂದು ಈಗಷ್ಟೇ ಹೇಳಿದ ಮಾತು ಆತನನ್ನು ಕನಸಿನ ಲೋಕಕ್ಕೆ ಸೆಳೆದೊಯ್ದಿತ್ತು. "ಇಂದು ನೀನು ತುಂಬಾ ಮುದ್ದಾಗಿ ಕಾಣಿಸ್ತಿದಿಯಾ" ಎಂದು ಹೇಳಲು ಬಾಯಿ ತೆರೆದವ ಮಾತು ಅತಿಯಾಗಬಹುದೇನೊ ಎಂದು ತಡೆದ. "ನನಗೆ ಕಾಲೇಜು ಸಾಕಾಗಿಬಿಟ್ಟಿದೆ ವಸೂ. ಅದಕ್ಕೂ ಹೆಚ್ಚಾಗಿ ಈ ಊರು, ಈ ಅಪ್ಪ, ಭಾವ, ಅಕ್ಕ ಇವರಿಂದ ಒಮ್ಮೆ ಕೊಂಡಿ ಕಳಚಿಕೊಂಡು ಎಲ್ಲಿಯಾದರೂ ದೂರ ಓಡಿಹೋಗಿ ಒಂದು ಪುಟ್ಟ ನೌಕರಿ ಗಿಟ್ಟಿಸಿ ಒಬ್ಬ ಚೆಂದದ ಹುಡುಗಿಯನ್ನು ಮದುವೆಯಾಗಿ..." ಎಂದು ಹೇಳುತ್ತ ಅವಳತ್ತ ತಿರುಗಿದರೆ ವಸುಮತಿ ಯಾವ ಪ್ರತಿಕ್ರಿಯೆಯನ್ನೂ ತೋರದೇ ಮೋರೆ ಬಾಡಿಸಿಕೊಂಡು, "ಅಪ್ಪ ಹೊನ್ನಾವರಕ್ಕೆ ಹೋಗಿದ್ದಾರೆ. ನನಗೆ ಮದುವೆ ಮಾಡ್ತಾರಂತೆ. ಮಾವನ ಮಗನ ಜೊತೆಗಂತೆ. ಆತನ ಮೋರೆ ನೋಡಲೂ ನನಗೆ ಭಯವಾಗುತ್ತದೆ. ಇನ್ನವನ ಜೊತೆಗೆ ಇಡೀ ಜೀವನವನ್ನು..." ಹೇಳುತ್ತ ಹೇಳುತ್ತ ಅವಳ ಧ್ವನಿ ಸಣ್ಣಗಾಗುತ್ತ ಕೊನೆಗೊಮ್ಮೆ ನಿಂತೇ ಹೋಯಿತು. ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಸೆರಗಿನ ತುದಿಯಿಂದ ಒರೆಸಿಕೊಂಡು ಅವನತ್ತ ತಿರುಗಿದರೆ ಆತ ಭೂತ ಹಿಡಿದವನಂತೆ ನಿಂತಿದ್ದ. ಒಂದೇ ಕ್ಷಣದ ಹಿಂದೆ ಸೌಂದರ್ಯದ ವಿವಿಧ ಅಂಗಗಳಾಗಿದ್ದ ಸುತ್ತಲಿನ ಪ್ರಕೃತಿ ಭೀಭತ್ಸ ರೂಪ ತಳೆದು ನಿಂತಂತೆ ಭಾಸವಾಯ್ತು. ಇಬ್ಬರ ಮಧ್ಯೆ ಮೌನ ಹೆಪ್ಪುಗಟ್ಟಿ ಅಸಹ್ಯವಾಗ ತೊಡಗಿದಾಗ, "ನಿನಗಿಷ್ಟವಿರದಿದ್ದರೆ ಹಾಗೆಂದು ನೇರವಾಗಿ ಹೇಳಿಬಿಡು. ನಿಮ್ಮಪ್ಪನಿಗೆ ಯಾಕಿಂತಹ ಬುದ್ಧಿ? ನಿನ್ನ ಜೊತೆಗಾರರನನ್ನು ಆರಿಸಿಕೊಳ್ಳುವ ಪೂರ್ಣ ಸ್ವಾತಂತ್ರ್ಯ ನಿನಗಿದೆ. ನೀನೇನೂ ಚಿಕ್ಕವಳಲ್ಲ. ಇಷ್ಟಕ್ಕೂ ನಿಮ್ಮಪ್ಪ ಸರಿಯಾಗದಿದ್ದರೆ ಕೋರ್ಟಿದೆ ಕಾನೂನಿದೆ" ಎಂದೆಲ್ಲ ಹೇಳಬೇಕೆಂದುಕೊಂಡವನಿಗೆ ಅವಳಿರುವ ಸ್ಥಿತಿಯಲ್ಲಿ ಅವಳಿಗೆ ಈ ಮಾತುಗಳಿಂದ ಏನೂ ಪ್ರಯೋಜನವಾಗಲಾರದೆಂದು ತಿಳಿದು, "ನೀನೇನೂ ಯೋಚನೆ ಮಾಡಬೇಡ. ನಾಳೆ ಸಾಯಂಕಾಲ ನಾನು ನಿಮ್ಮ ಮನೆಗೆ ಬರುತ್ತೇನೆ. ನಿಮ್ಮ

ಪ್ಪನ ಜೊತೆಗೆ ಮಾತಾಡ್ತೇನೆ" ಎಂದು ಅವಳತ್ತ ದಿಟ್ಟಿಸಿದಾಗ ಅವಳು ಕಣ್ಣುಗಳನ್ನು ಒರೆಸಿಕೊಳ್ಳುತ್ತ ನಗಲು ಪ್ರಯತ್ನಿಸುತ್ತಿದ್ದಳು. ರಾತ್ರಿಯೆಲ್ಲ ನಿದ್ದೆಯಿಲ್ಲದೆ ಕಳೆಯಿತು. ವಸುಮತಿ ಬೇರೊಬ್ಬರ ಸ್ವತ್ತಾಗುವುದನ್ನು ನೆನೆಸಿಕೊಂಡಾಗ ಏನೋ ಒಂದು ವಿಷಾದ ಒಂಟಿ. ಒಂದೆಂಬೋ ಏನೋ ಆಸೆ. ಮರುಕ್ಷಣದಲ್ಲಿಯೇ ಭಯ. ನಾಳೆ ಅವರಪ್ಪನನ್ನು ಎದುರಿಸುವುದು ಹೇಗೆ? ಏನೆಂದು ಮಾತು ಪ್ರಾರಂಭಿಸುವುದು ಎಂಬ ಆತಂಕ. ಒಂದು ಕ್ಷಣ ಏನೋ ತೀರ್ಮಾನ. ಮರುಕ್ಷಣವೇ ಬೇಡವೇ ಬೇಡ. ಅದರಂತಹ ಅವಮಾನ ಇನ್ನೊಂದಿಲ್ಲ ಎಂಬ ಅನ್ನಿಸಿಕೆ.

ಸಾಯಂಕಾಲ ವಸುಮತಿಯ ಮನೆಗೆ ಬಂದಾಗ ಗಂಟೆ ಐದಾಗುವುದರಲ್ಲಿತ್ತು. ಬಿಳಿಯ ಪ್ಯಾಂಟು ಬಿಳಿಯ ಶರ್ಟು ಮತ್ತೆ ಚರ್ಮದ ಕಪ್ಪಗಿನ ಬೆಲ್ಟು ತೊಟ್ಟು ನೀಟಾಗಿ ಕ್ರಾಪು ಬಾಚಿದ ಅವನನ್ನು ಕಾಣುತ್ತಲೇ ಅಂಗಳದಲ್ಲಿ ಅಪ್ಪನ ಚೇರಿನ ಪಕ್ಕದಲ್ಲಿ ನಿಂತಿದ್ದು ಓಣಿಯುತ್ತಲೇ ದಿಟ್ಟಿಸುತ್ತಿದ್ದ ವಸುಮತಿ ಜಗುಲಿ ಹತ್ತಿ ಇನ್ನೊಂದು ಚೇರು ತಂದು ಹಾಕಿದಾಗ ಅವಳ ತಂದೆ, "ಬಾ ಕುಳಿತುಕೋ" ಎಂದು ಚೇರು ತೋರಿಸಿದರು. ತನ್ನ ಹೃದಯದ ಬಡಿತವನ್ನು ಎಣಿಸುತ್ತ ಅತ್ತ ಮುದುರಿ ಕುಳಿತ. ತಂದೆಯ ಚೇರಿನ ಹಿಂದೆ ನಿಂತು ಆತನತ್ತ ಒಂದು ಮುಗುಳುನಗು ಬೀರಿ ಧೈರ್ಯವಾಗಿರು ಎಂಬಂತೆ ಸನ್ನೆ ಮಾಡಿ ವಸುಮತಿ ಒಳಕ್ಕೆ ಸರಿದಳು. ಅವಳ ತಂದೆ ತನ್ನ ಭಾರವಾದ ಹೊಟ್ಟೆಯನ್ನು ಸವರಿ ಬಿಟ್ಟು ದೊಡ್ಡದಾಗಿ ಆಕಳಿಸಿ ಕೈಗಳೆರಡನ್ನೂ ಒಂದಕ್ಕೊಂದು ಹೆಣೆದು ಲಟಿಕೆ ಮುರಿದು ಅವನತ್ತ ತಿರುಗಿ, "ನನ್ನನ್ನು ಭೆಟ್ಟಿಯಾಗಬೇಕು ಎಂದು ಹೇಳಿದೆಯಂತೆ. ನಮ್ಮ ವಸುಮತಿ ಹೇಳಿದಳು," ಎಂದಾಗ ಮನಸ್ಸಿನಲ್ಲಿಯೇ ತನ್ನ ಡೈಲಾಗನ್ನು ನೆನಪಿಸಿಕೊಳ್ಳುತ್ತಿದ್ದ ಆತ ಒಮ್ಮೆ ಬೆಚ್ಚಿ, "ಅಂ ಹೌದು ಹೂಂ ಏನಿಲ್ಲ ಸುಮ್ಮನೆ!" ಎಂದ. ಜಗಲಿಯಿಂದ ಕೆಳಕ್ಕೆ ಇಳಿಯುತ್ತಿದ್ದ ವಸುಮತಿ ತನ್ನ ಮಾತನ್ನು ಕೇಳಿಸಿಕೊಂಡು ಕಣ್ಣುಗಳನ್ನು ತುಂಬಿಸಿಕೊಂಡುದು ಕಾಣಿಸಿ ಜೊತೆಗೆ ತನ್ನೆದೆಯ ಬಡಿತವೂ ದ್ವಿಗುಣಗೊಂಡು ಹೇಗೆ ಪ್ರಾರಂಭಿಸಬೇಕು ಎಂಬುದು ಹೊಳೆಯದೆ ಬಿಟ್ಟ ಕಣ್ಣು ಬಿಟ್ಟಹಾಗೆ ಅವರತ್ತ ನೋಡುತ್ತಿದ್ದಾಗ ಅವರು ಇನ್ನೊಮ್ಮೆ, "ಹೇಳು ಸಂಕೋಚಪಟ್ಟುಕೊಳ್ಳಬೇಡ. ನನ್ನಿಂದೇನಾಗಬೇಕು?" ಎಂದರು. ಈಗಾತ ಹೇಳಲು ಬಾಯಿ ತೆರೆದ. ಆದರೆ ನಾಲಿಗೆಯೇ ಹೊರಳಲಿಲ್ಲ. ಬಲವಂತವಾಗಿ ಪ್ರಯತ್ನಿಸಿದ. ನಾಲಿಗೆಯೇನೋ ಹೊರಳುವಂತೆ ಕಂಡರೂ ತನ್ನ ಮಾತು ಮುಗಿಯುತ್ತಲೆ, ಬದಲಾಗುವ ವಸುಮತಿಯ ಅಪ್ಪನ ವಿಕಾರ ಮುಖ

ಜೊತೆಗೆ ಅವರ ಆ ಅಜಾನುಬಾಹು ದೇಹ ಎದ್ದೆದ್ದು ಬಿದ್ದು ಬಿದ್ದು ಕುಲುಕುತ್ತ ನಗುತ್ತ, 'ಅಲ್ಲವೋ ಬೇಕೂಫ. ನಿನಗೇನಿದೆ ಎಂದು ನನ್ನ ಮಗಳನ್ನು ಕೊಡಲೋ? ಒಂದು ಆಸ್ತಿಯೋ ಒಂದು ಪಿತ್ರ್ಲ ಮನೆಯೋ, ಹೋಗಲಿ ಒಂದು ನೌಕರಿಯೋ! ನಿನ್ನನ್ನು ಮದುವೆಯಾಗಿ ಅವಳೂ ನಿನ್ನೊಟ್ಟಿಗೆ ಬೇಡುವುದಕ್ಕೆ ಹೋಗಬೇಕೇನೋ?' ಎಂದು ಕೇಳಿದಂತಾಗಿ ನಾಳೆ ಬೊಂಬೆಕಟ್ಟೆಯ ಮೇಲೆ ದೇವಸ್ಥಾನದ ಚಂದ್ರಶಾಲೆಯಲ್ಲಿ ಭಟ್ಟರ ಅಂಗಡಿಯಲ್ಲಿ ಗಹಗಹಿಸುತ್ತಾ, 'ಹೆಣ್ಣು ಬೇಕಂತೆ ಬೋಳಿ ಮಗನಿಗೆ. ನಿನಗ್ಯಾಕೋ ಹೆಣ್ಣು ಎಂದೆ. ಪ್ರಕಳಿ ಮುಚಕೊಂಡ ಓಡಿಹೋಗಿಬಿಟ್ಟ,' ಎಂದು ತನ್ನನ್ನು ಜೀವಂತವಾಗಿ ಸಮಾಧಿಮಾಡುವ ದೃಶ್ಯ ಕಣ್ಣ ಮುಂದೆ ಸುಳಿದು ಅವಸರವಸರವಾಗಿ "ಇನ್ನೇನಿಲ್ಲ ನನಗೆ ಪರೀಕ್ಷೆಗೆ ಫೀಸು ಕಟ್ಟಬೇಕಾಗಿದೆ. ಭಾವನ ಹತ್ತಿರ ಕೇಳಿದೆ. ತನಗೂ ತೊಂದರೆ ಎಂದ. ಐವತ್ತು ರೂಪಾಯಿದ್ದರೆ ಕೊಟ್ಟರೆ ತುಂಬಾ ಸಹಾಯವಾಗುತ್ತಿತ್ತು. ಈಗಲೇ ಬೇಡ. ನಾಳೆ ಕೊಟ್ಟರೂ ಸಾಕು. ಒಂದೆರಡು ವಾರದಲ್ಲಿ ಹಿಂತಿರುಗಿಸುತ್ತೇನೆ" ಎಂದವನೆ ಅವರ ಉತ್ತರಕ್ಕೂ ಕಾಯದೆ ಜೋರು ಬಿಟ್ಟೆನ್ನು ವಸುಮತಿಯ ಮೋರೆಯತ್ತ ದಿಟ್ಟಿಸುವ ಧೈರ್ಯ ಮಾಡದೆ, ಅಂಗಳ ದಾಟಿದ. ತನ್ನ ಹಿಂದು ಹಿಂದೆ ಯಾರೋ ಬಂದಂತೆ, ಬಂದವರು ತನ್ನನ್ನು ದಾಟಿ ಮುಂದೆ ಹೋಗಿ ದಣಪೆಕಟ್ಟೆಯಲ್ಲಿ ಎದುರಲ್ಲೇ ನಿಂತಾಗ ತಾನು ಮೋರೆ ಮೇಲೆತ್ತಿದರೆ ಎದುರಿನ ಮೋರೆಯ ಮೇಲೆ ಹೃದಯವೇ ಕಿತ್ತು ಬರುವಂತಹ ನೋವು ತುಂಬಿಕೊಂಡಿರುವಂತೆ…ಆತ ಓಡ ತೊಡಗಿದ. ಮನೆಯ ಹಾದಿ ಬಿಟ್ಟು ಸಮುದ್ರ ದಂಡೆಯತ್ತ ಓಡತೊಡಗಿದ. ರಾತ್ರಿ ಬಹಳ ಹೊತ್ತಿನ ಮೇಲೆ ಮನೆಗೆ ಬಂದ. ಬೆಳಿಗ್ಗೆ ನಸುಕಿನಲ್ಲಿಯೇ ಊರು ಬಿಟ್ಟ. ಮುಂದಿನ ಒಂದೆರಡು ದಿಂಗಳಲ್ಲೇ ವಸುಮತಿಯ ಮದುವೆಯಾದ ಸುದ್ದಿ ತಿಳಿಯಿತು.

ಹೊರಗೆ ಮಳೆ ನಿಂತಿರಬೇಕು. ರೋಡಿನ ಮೇಲೆ ಪೇಪರು ಮಾರುವ ಹುಡುಗರ ಗಲಾಟೆ ಶುರುವಾಗಿತ್ತು. ಕಿಟಕಿಯಿಂದ ಪೇಪರು ತೂರಿ ಬಂದು ಅವನ ಹಾಸಿಗೆಯ ಮೇಲೆ ಬಿತ್ತು. ಎದ್ದು ಲೈಟು ಹಾಕಿ ಹಾಸಿಗೆ ಸುತ್ತಿ ಅದರ ಮೇಲೆ ಕುಳಿತು ಪೇಪರು ಬಿಡಿಸುತ್ತಿದ್ದಾಗ ತನ್ನಷ್ಟಕ್ಕೆಂಬಂತೆ ಹೇಳಿಕೊಂಡ, 'ಆ ದಿನ ವಸುಮತಿಯ ಅಪ್ಪನನ್ನು ಧೈರ್ಯವಾಗಿ ಒಂದು ಮಾತು ಕೇಳಬೇಕಿತ್ತು.' ✡



೧೯ನೇ ಶತಮಾನದಲ್ಲಿ ನಡೆದ ಘಟನೆ. ಮಾಸ್ಕೋದಲ್ಲಿ ಅಧಿಕಾರಿಯಾಗಿದ್ದ ಗೋಲೋವ್ ವೋಸ್ಕೋವ್. ಸರಕಾರದ ಮೇಲಿನ ದಕ್ಷತೆಯುಳ್ಳ ಪುಸ್ತಕಗಳು, ನಾಟಕಗಳು, ಸಮಾಚಾರಗಳು, ರೇಖಾ ವಿಚಾರಗಳು-ಇವನ್ನು ಪ್ರಕಟನೆಗೆ ಮೊದಲು ಪರಾಮರ್ಶಿಸಿ ದೋಷವಿಲ್ಲದಂತೆ ಮಾಡಿ ಪ್ರಕಟಿಸಲು ಅಪ್ಪಣೆ ಕೊಡುವ ಅಥವಾ ಪ್ರಕಟವಾಗದಂತೆ ಪ್ರತಿಬಂಧಿಸುವ ಕೆಲಸ ಅವನದಾಗಿತ್ತು. ಈ ಗೋಲೋವ್ ವೋಸ್ಕೋವ್, ಗೋಗಲ್‌ರ 'ಸತ್ತ ಆತ್ಮಗಳು' ಎಂಬ ಪುಸ್ತಕದ ಪ್ರಕಟನೆಯನ್ನು ನಿಷೇಧಿಸಿದ. ಆತ ಹಾಗೆ ನಿಷೇಧಿಸಲು ಬರೆದ ಟಿಪ್ಪಣಿ ಇದು: "ಇಂಥ ಆತ್ಮಗಳಿಲ್ಲ; ಆತ್ಮಗಳು ಅಮರ."

-ಎಸ್. ವಿಶ್ವನಾಥ

'ಹಸಿರು ಹೊನ್ನು'

ಕೆ. ಆರ್. ಪ್ರಹ್ಲಾದ

ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದಿರುವ ಡಾ. ಬಿ. ಜಿ. ಎಲ್. ಸ್ವಾಮಿಯವರ 'ಹಸಿರು ಹೊನ್ನು' ಕೃತಿಯ ವೈಶಿಷ್ಟ್ಯದ ಬಗ್ಗೆ ಒಂದೇ ಮಾತಿನಲ್ಲಿ ಹೇಳುವುದಾದರೆ ಈ ಗ್ರಂಥವೇ ಒಂದು ವಿಶಿಷ್ಟ ಕೃತಿ ಎನ್ನಬಹುದು. ಸ್ವಾಮಿಯವರ ಈ ಗ್ರಂಥವನ್ನು ಯಾವ ರೀತಿಯಲ್ಲಿ ವರ್ಗೀಕರಿಸುವುದು? ಪ್ರವಾಸ ಕಥನವೆ? ಹಾಸ್ಯ ಪ್ರಬಂಧಗಳ ಸಂಕಲನವೆ? ಆತ್ಮಚರಿತ್ರೆಯೆ? ಜೀವನಾನುಭವನ್ನು ಹಂಚುವನೆ? ಚರಿತ್ರೆಯತ್ತ ಹಾಕು ನೋಟವೆ? ಮನೋವಿಶ್ಲೇಷಣೆಯೆ? ಸಸ್ಯಶಾಸ್ತ್ರದ ಲಕ್ಷಣ ಗ್ರಂಥವೇ? ಸಸ್ಯಗಳ ಉಪಯುಕ್ತತೆ ಕುರಿತಾದ ಪರಿವಿಡಿ ಎನ್ನಬಹುದೆ? 'ಹಸಿರು ಹೊನ್ನು' ಇದು ಯಾವ ಒಂದೂ ಅಲ್ಲ, ಯಾವುದೂ ಅಲ್ಲವೆನ್ನುವಂತೆಯೂ ಇಲ್ಲ. ಈ ಜಿಜ್ಞಾಸೆ ಬಹುಶಃ ಸ್ವಾಮಿಯವರನ್ನೂ ಕಾಡಿರಬೇಕು ಅದಕ್ಕಾಗಿಯೇ ಅವರು An illustrated travelogue in Kannada giving descriptions and uses of some rare or familiar plants. ಎಂದು ಕರೆದಿದ್ದಾರೆ. "ಕಾಲಾನುಕಾಲದಿಂದ ನಮ್ಮ ಬದುಕಿನೊಂದಿಗೆ ಒಂದಲ್ಲ ಒಂದು ರೀತಿಯಲ್ಲಿ ಒಡನಾಡಿಗಳಾಗಿ ಬೆಳೆದು ಬಂದಿರುವ ಕೆಲವು ಗಿಡ–ಮರಗಳ ಪರಿಚಯ ಮಾಡಿಕೊಡುವುದು ಈ ಬರವಣಿಗೆಯ ಪ್ರಯತ್ನ". ತಮ್ಮ ಈ ಪ್ರಯತ್ನದಲ್ಲಿ ಸ್ವಾಮಿಯವರು ಯಶಸ್ವಿಯಾಗಿದ್ದಾರೆ ಮಾತ್ರವಲ್ಲದೆ ಈ ದಿಸೆಯಲ್ಲಿ ನಾವು ಹೆಚ್ಚಿನ ಯತ್ನಮಾಡಬಹುದಾದ ದಾರಿಯನ್ನೂ ತೋರಿದ್ದಾರೆ.

ಸಸ್ಯಶಾಸ್ತ್ರದ ಅಭ್ಯಾಸಿಗಳಿಗೆ ಸಾಮಾನ್ಯವಾಗಿ 'ವರ್ಗೀಕರಣಶಾಸ್ತ್ರ' ವಿಭಾಗ ತಲೆನೋವು ತರಿಸುವ ವಿಷಯ. ಇಂಥದನ್ನು ಸಾಮಾನ್ಯ ಓದುಗನಿಗೆ ಉಣಬಡಿಸುವಾಗ ಪ್ರತಿ ಹಂತದಲ್ಲೂ ಹಿಡಿತ ಕಳಚಿಕೊಂಡು ಓದುಗನನ್ನು ಕೃತಿಯಿಂದ ವಿಮುಖಗೊಳಿಸುವ ಸಾಧ್ಯತೆ ಹೇರಳವಾಗಿದ್ದರೂ ತಮ್ಮ ಸುಲಲಿತ ಶೈಲಿಯಿಂದ ನಿರೂಪಣೆಯಲ್ಲಿನ ಜಾಣ್ಮೆಯಿಂದ ಹದವಾಗಿ ಬೆರೆಸಿದ ಹಾಸ್ಯದಿಂದ command ಮಾಡುವ ರೀತಿ ಕನ್ನಡ ಗದ್ಯ ಸಾಹಿತ್ಯಕ್ಕೆ ಹೊಸದು ಎಂದರೆ ಅತಿಶಯೋಕ್ತಿ ಆಗಲಾರದು. ಇಲ್ಲಿ ನಾವು ಗಮನಿಸಬೇಕಾದದ್ದು ಸ್ವಾಮಿಯವರಿಗೆ ಹಲವಾರು ವಿಷಯಗಳ ಬಗ್ಗೆ ಇರುವ ಕಳಕಳಿ. ಶಿಕ್ಷಣರಂಗದ ಆಗುಹೋಗುಗಳು, ವಿದ್ಯಾರ್ಥಿಗಳ ಮತ್ತು ದೇಶದ ಭವಿಷ್ಯದ ಬಗ್ಗೆ ಕಾಳಜಿ, ಸಂಸ್ಕೃತಿ ಮತ್ತು ಪರಂಪರೆ ನಶಿಸಿಹೋಗುತ್ತಿರುವ ಬಗ್ಗೆ ವ್ಯಥೆ. ಹಲವಾರು ಕಡೆ ಅಭಿವ್ಯಕ್ತಿಗೊಂಡಿದೆ. ಆದರೆ ಅದಕ್ಕೆ ಭಾಷಣ ಬಿಗಿಯುವುದಿಲ್ಲ ಕವಿತೆ ಕಟ್ಟುವುದಿಲ್ಲ ಪುಟಗಟ್ಟಲೆ ಪದಪುಂಜಗಳನ್ನು ಉರುಳಿಸಿ ಅದರ ಘಾತಕ್ಕೆ ಓದುಗನನ್ನು ಗುರಿಮಾಡುವುದಿಲ್ಲ. ಸಂಭಾಷಣೆಯ ತುದಿಯಲ್ಲಿ ಅಥವಾ ಒಂದು ಪ್ರಸಂಗದ ಅಥವಾ ಅಧ್ಯಾಯದ ಮುಕ್ತಾಯದಲ್ಲಿ ತಮ್ಮ ಕೊರಗನ್ನು ಪರಿಣಾಮಕಾರಿಯಾಗಿ ನಿವೇದಿಸಿಕೊಳ್ಳುತ್ತಾರೆ. ಆದ್ದರಿಂದಲೇ ಗ್ರಂಥದುದ್ದಕ್ಕೂ ಅವರು ಉದಾಹರಿಸುವ ನುಡಿಮುತ್ತುಗಳು ಸಾಮಾಜಿಕ ಕಳಕಳಿಯಿಂದ ಪ್ರೇರಿತವಾಗಿರುವುದನ್ನು ಗಮನಿ

ಸಬಹುದು. ಹಲಸಿನ ಹಣ್ಣಿನ ವರ್ಣನೆಮಾಡುತ್ತ ತಮಿಳು ಕಾವ್ಯವನ್ನು ಹೆಸರಿಸಿ "ಕೆಲವರು ಹೂ ಬಿಡದೆಯೇ ಹಣ್ಣು ಕೊಡುತ್ತಾರೆ. ಮತ್ತೆ ಕೆಲವರು ಹೂ ಬಿಟ್ಟು ಹಣ್ಣು ಕೊಡುತ್ತಾರೆ, ಇನ್ನೂ ಕೆಲವರು ಬರೀ ಹೂವು ತಳೆಯುತ್ತಾರೆ" ಎಂದು ಹೇಳಲು ಮರೆಯುವುದಿಲ್ಲ. ಕನ್ನಡದಲ್ಲಿ ಇಷ್ಟೊಂದು ವ್ಯಾಪಕವಾದ ದುಡಿಮೆಯನ್ನು ಮೂಲಭೂತವಾಗಿ ವೈಜ್ಞಾನಿಕ ಸಾಹಿತ್ಯವೆಂದು ರಚಿಸಿದ ಕೃತಿಯೊಂದರ ಜನಕರು ಬಹುಶಃ ಸ್ವಾಮಿಯವರೇ ಇರಬೇಕು. ಹಾಗೆಯೇ ಈ ಕೃತಿಯ ವೈಶಿಷ್ಟ್ಯ ನನಗನಿಸಿದಂತೆ ಬೇರೆ ಬೇರೆ ಮನೋಧರ್ಮದ, ಬೇರೆ ಬೇರೆ ಹವ್ಯಾಸಗಳುಳ್ಳ ಓದುಗ ಬೇರೆ ಬೇರೆ ಕಾರಣಗಳಿಗಾಗಿ ಮೆಚ್ಚಬಹುದಾದ ಸಾಧ್ಯತೆ (ಅಪಾಯ)ವಿದೆ. ಆದರೆ ಸಮಾಧಾನದ ಸಂಗತಿಯೆಂದರೆ ಯಾರೊಬ್ಬರನ್ನೂ ನಿರಾಶೆಗೊಳಿಸುವುದಿಲ್ಲ.

ನನ್ನನ್ನು ಇಲ್ಲಿ ಮುಖ್ಯವಾಗಿ ಆಕರ್ಷಿಸಿದ ಅಂಶ ಸ್ವಾಮಿಯವರು ಬಳಸಿದ ಭಾಷೆ. ಕನ್ನಡದಲ್ಲಿ ಲಭ್ಯವಿರುವ ವಿಜ್ಞಾನ ಸಾಹಿತ್ಯವನ್ನು ಮುಖ್ಯವಾಗಿ ಮೂರು ವಿಭಾಗಗಳಾಗಿ ಸ್ಥೂಲವಾಗಿ ವಿಂಗಡಿಸಬಹುದು.

(೧) ಸರಳ ಭಾಷೆಯಲ್ಲಿ enterprise ಇಲ್ಲದಂಥ ರೀತಿಯಲ್ಲಿ ಬರೆಯುವುದು.

(೨) ಇಂಗ್ಲಿಷ್ ಇತ್ಯಾದಿ ಭಾಷೆಗಳಿಂದ ವೈಜ್ಞಾನಿಕ ಪದಗಳನ್ನೂ ವಾಕ್ಯಗಳನ್ನೂ ಅನಾಮತ್ತಾಗಿ ಎತ್ತಿಕೊಂಡು 'ಮಕ್ಷಿ-ಕಾ ಮಕ್ಷಿ' ಅನುವಾದಿಸುವ ಕ್ಲಿಷ್ಟ ಬರವಣಿಗೆ.

(೩) ವಾಸ್ತವಿಕತೆಯಿಂದ ದೂರ ಸರಿದು ಕಲ್ಪನಾಲೋಕಕ್ಕೆ ಕರೆದೊಯ್ಯುತ್ತಾ ನಡುದಾರಿಯಲ್ಲಿ ಉದ್ದೇಶದಲ್ಲಿ ವಿಫಲವಾಗುವ ಕೃತಿಗಳು.

ಆದರೆ ಸ್ವಾಮಿಯವರು ಈ ಮೂರು ಪ್ರಕಾರಗಳಲ್ಲಿನ ದೋಷಗಳನ್ನು ನಿಗ್ರಹಿಸಿ ಅದರಲ್ಲಿನ ಒಳ್ಳೆಯ ಅಂಶಗಳನ್ನು ಪಾಕಮಾಡಿ ಭಟ್ಟಿ ಇಳಿಸಿ ನಿರೂಪಣಾ ಕಲೆಯನ್ನು ಸಿದ್ಧಪಡಿಸಿಟ್ಟುಕೊಂಡಿದ್ದಾರೆ. ಸಾಮಾನ್ಯವಾಗಿ ಒಂದು ವಸ್ತುವನ್ನು ವಿಜ್ಞಾನ ವಿವರಿಸುವಾಗ ಅದು precise and accurate ಆಗಿರಬೇಕು ಎನ್ನುತ್ತೇವೆ. ಸ್ವಾಮಿಯವರು ನೀಡುವ ರೂಪಕಗಳು ಉಪಮೆಗಳು ವರ್ಣನೆಗಳಲ್ಲಿ ಈ precision ಮತ್ತು accuracy ಎರಡೂ ಇದೆ. ಉದಾಹರಣೆಗಾಗಿ ಆಗುಂಬೆಯ ಅರಣ್ಯದಲ್ಲಿ ಅವರು ಕಂಡ dictyophora ಎಂಬ ಅಣಬೆಯ ವರ್ಣನೆಯನ್ನು ಹೀಗೆ ನೀಡಿದ್ದಾರೆ. ಅದರ ಹೆಸರು ಕನ್ಯಾಸ್ತ್ರೀ.

"ಕನ್ಯಾಸ್ತ್ರಿ?"

ಹೌದು ಈ ಅಣಬೆಗೆ (dictyophora) ಇದೇ ಹೆಸರು ಹೇಗೆ ಬಂದಿತೋ ಕಾಣೆ. ಅಪರೂಪವಾದ ಅಣಬೆ. ನಾಲ್ಕೈದಂಗುಲ ಉದ್ದವಿರುವ ಕಾಂಡದ ತುದಿಯಲ್ಲಿ ಶಂಕುವಿನಾಕಾರದ ಟೊಪ್ಪಿಗೆ. ಟೊಪ್ಪಿಗೆಯ ಹೊರಮೈ ಜೇನು



ಈಕೆ 'ಕನ್ಯಾಸ್ತ್ರೀ'

ಗೊಳವೆಯಾಕಾರದ ಪಕ್ಕಗಳಿಂದ ಕೂಡಿದೆ. ಟೊಪ್ಪಿಗೆಯ ಅಂಚಿನಿಂದ ಕ್ರಮೇಣ ಅಗಲವಾಗಿ ಹರಡುವ ಬಲೆಯ ಲಂಗ. ಇಷ್ಟು ಒಳ್ಳೆಯ ಒಗಟು ಹೆಸರಿನವಳು ಬೇರೆ ಯಾವುದಾದರೂ ವಾಸನೆಯನ್ನು ಹೊಮ್ಮಬಹುದಾಗಿತ್ತು. ತನ್ನ ಇರುವಿಕೆಯನ್ನು ದೂರದಿಂದಲೇ ಅರಿಯುವಂತಹ ಕೊಳೆತು ನಾರುವ ಮಾಂಸದ ವಾಸನೆ. ಇವರ ನೊಣಗಳಿಗೆ ಈ ಕಂಪು ಬಹಳ ಹಿತ. ಟೊಪ್ಪಿಗೆಯನ್ನು ಸದಾ ಮುತ್ತಿಕೊಂಡಿರುತ್ತವೆ. ಅಲ್ಲಿ ಉತ್ಪತ್ತಿಯಾಗುವ ಬೀಜಕಣಗಳನ್ನು ಚೆದುರಿಸುತ್ತವೆ. ಕನ್ಯಾಸ್ತ್ರೀಯ ಲಂಗವಂತೂ ವಿಪರೀತ ನಾಜೂಕಾದ್ದು. ಬೆರಳು ಸೋಕಿದರೆ ಹರಿದು ಹೋಗುತ್ತದೆ. ಬಿಸಿಲಿನಲ್ಲಿ ಮೈಬಣ್ಣ ಮಾಸಲು ಹಳದಿ. ಕತ್ತಲಲ್ಲಿ ಇಂದ್ರಚಾಪದ ಸಪ್ತವರ್ಣಗಳೂ ಮಿನುಗುತ್ತವೆ. ಇವಳ ಬೆಡಗಿನ ಜೀವಿತವೆಲ್ಲಾ ೨೪ ಗಂಟೆಗಳು ಮಾತ್ರ. ಮೊದಲು ಸಣ್ಣ ಗುಬುಟೊಂದು ತಣುವಿನ ತರಗೆಲೆಗಳ ಸಂದಿನಿಂದ ಕಾಣಿಸಿಕೊಳ್ಳುತ್ತದೆ. ಇನ್ನೊಂದೆರಡು ಗಂಟೆಯೊಳಗಾಗಿ ಗುಬುಟು ಹಿರಿಯದಾಗಿ ಉಬ್ಬಿ ಹೊರಪದರ ಸೀಳಿ ಬೆಳಗಿನಿಂದ ಕಾಂಡವೊಂದು ಮೇಲೇರುತ್ತದೆ. ಕಾಂಡ ರೂಪುಗೊಳ್ಳುತ್ತಿರುವಂತೆಯೇ ಟೊಪ್ಪಿಗೇಯ ಬಲೆಯ ಲಂಗವೂ ಕೊನರುತ್ತದೆ. ಹೀಗೆ ಬೆಳೆದು ನಿಂತಾದ ಮೇಲೆ ದುರ್ನಾತವನ್ನು ಬೀರಿ ನೊಣಗಳನ್ನು ಆಕರ್ಷಿಸುತ್ತದೆ. ಈ ಸ್ಥಿತಿಯೇ ಕನ್ಯಾಸ್ತ್ರೀಯ ಜೀವಿತದ ಪರಮಾವಧಿ. ಇದಾದ ಕೆಲವು ಗಂಟೆಯೊಳಗಾಗಿ ದೇಹ ಪೂರ ಕುಸಿದು ಬಿದ್ದು ಲೋಳೆಯಾಗಿ ಪರಿವರ್ತನೆಗೊಂಡು ತರಗೆಲೆಗಳ ಹಾಸುಗೆಯಲ್ಲಿ ಮಲಗಿ ಬಿಡುತ್ತದೆ."

ಈ ವಿವರಣೆ ಓದಿದ ಮೇಲೆ ಯಾರಿಗಾದರೂ ಕನ್ಯಾಸ್ತ್ರೀ? ಅಣಬೆಯ ಚಿತ್ರ ಕಣ್ಣಿಗೆ ಕಟ್ಟಿ ನಿಲ್ಲುತ್ತದೆ. ಇಲ್ಲಿ ಕಥಾ ಕುಬರನು?. ಅದನ್ನು ಕತ್ತರಿಸುವ ಕಲಾ ಪಾರಿಭಾಷಿಕ ಶಬ್ದಗಳಿಲ್ಲ. ಅದರ ಅಣಬೆಯನ್ನು ಸಾಕಾರಗೊಳಿಸುವ ಸ್ವಾಭಾವಿಕವಾದ ಭಾಷೆ ಇದೆ. ಶುದ್ಧ, ಸರಳ, ನಿಖರವಾದ ಭಾಷೆಯಲ್ಲಿ ತಾವು ವರ್ಣಿಸಬೇಕಾದ ವಸ್ತುವನ್ನು ವಿವರಿಸುವುದು ಪ್ರೊಫೆಸರ್ ಸ್ವಾಮಿಯವರು ಸಾಧಿಸಿರುವ ವೈಶಿಷ್ಟ್ಯ. ಇದಕ್ಕೆ ಮುಖ್ಯ ಕಾರಣ, ಸ್ವಾಮಿಯವರಿಗೆ ವೈಜ್ಞಾನಿಕ ಪರಿಭಾಷೆಯನ್ನು ಕಟ್ಟುನಿಟ್ಟಾಗಿ ಅಚ್ಚಿಳಿಸಿ ಕನ್ನಡದಲ್ಲಿ ಇಂಗ್ಲಿಷನ್ನು ಓದಿಸಬೇಕೆನ್ನುವ ಹಟ ಇಲ್ಲ. ಆದ್ದರಿಂದ ವಿವರಣೆಗಳು ತಾವಾಗಿ ಓದಿಸಿಕೊಂಡು ಹೋಗುತ್ತವೆ.

ಇಂಥ ವಿವರಣೆಗಳು ಸಹ ಎಷ್ಟೇ ಚಿತ್ತಾಕರ್ಷಕವಾಗಿದ್ದರೂ ಸಾಮಾನ್ಯ ಓದುಗನಿಗೆ ತೊಡಕು ಉಂಟುಮಾಡಬಹುದೆಂಬ ಅರಿವು ಸದಾ ಸ್ವಾಮಿಯವರಿಗೆ ಇದೆ. ಅದಕ್ಕಾಗಿಯೇ ಒಂದು ಸಸ್ಯವನ್ನು ವರ್ಣಿಸುವಾಗ ಅದಕ್ಕೆ ಸಂಬಂಧಪಟ್ಟ ಕವಿವಾಣಿಯನ್ನು ಉದ್ಧರಿಸುತ್ತಾರೆ. 'ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸುವಂತೆ' ಮಾಡುತ್ತಾರೆ. ಅದಕ್ಕಾಗಿಯೇ ಹಲವಾರು ಹಾಸ್ಯ ಪ್ರಸಂಗಗಳನ್ನು ಸೃಷ್ಟಿಸಿ ರಂಜನೆಯನ್ನು ಒದಗಿಸುತ್ತಾರೆ. ಸುಮಾರು ೩೦ ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಶಿಕ್ಷಣರಂಗವನ್ನು insider ಆಗಿ ನೋಡಿ ಅನುಭವಿಸಿರುವುದರಿಂದ ಅಲ್ಲಿನ ಸಮಸ್ಯೆಗಳ ನಿಕಟ ಪರಿಚಯ ಸ್ವಾಮಿಯವರಿಗೆ ಯಥೇಚ್ಛವಾಗಿದೆ. ವಿವಿಧ ಹುದ್ದೆಗಳಲ್ಲಿರುವವರ ಅಧಿಕಾರಲೋಲುಪ್ತಿ ಮುದಾದಿ ಅವಗುಣಗಳು; ಕೆಂಪುಟೇಪಿನ ಕಾರ್ಯ ಜಡತೆ–ಇವುಗಳಸುತ್ತ ಹೆಣೆದ ಸನ್ನಿವೇಶಗಳು ಸ್ವಾಮಿಯವರ trump-card ಕಾಲೇಜುರಂಗ, ಕಾಲೇಜುತರಂಗಗಳಲ್ಲಿ ಇದನ್ನು ಯಶಸ್ವಿಯಾಗಿ ಪ್ರಯೋಗಿಸಿದ್ದಾರೆ. ಹಸರು ಹೊನ್ನಿನಲ್ಲೂ ಇಂಥ ಸನ್ನಿವೇಶ ಹಲವಾರು ಬಾರಿ ಕಾಣಿಸುತ್ತದೆ. ಕಾಲೇಜಿನ ಸಸ್ಯಶಾಸ್ತ್ರ ವಿಭಾಗದಲ್ಲಿ ದಿನಗೂಲಿ ಕೊಡುವುದು ವಂಚನೆಂದು ಕತ್ತೆ ಕೊಳ್ಳುವುದು ಹಾಸ್ಯಕ್ಕೆ ಒಪ್ಪಲವಾದ ಸಾಮಗ್ರಿಯನ್ನು ಒದಗಿಸಿದೆ. ಕೊಂಚ ಮಟ್ಟಿಗೆ ಉತ್ಪ್ರೇಕ್ಷೆ ಎನಿಸಿದರೂ ಇದು ಸತ್ಯಕ್ಕೆ ತೀರ ದೂರವಾದ ಮಾತೇನಲ್ಲ...ಎಷ್ಟೋ ವಿಜ್ಞಾನ ವಿಭಾಗಗಳ ಹಣೇಬರಹ ಇಂದಿಗೂ ಕಾಲೇಜುಗಳಲ್ಲಿ ಹೀಗೆ ಇದೆ.

ಇನ್ನು ಹೊರತುಪಡಿಸಿದರೆ ಸ್ವಾಮಿಯವರ ಹಾಸ್ಯವೈಶಿಷ್ಟ್ಯ–ಅಂಗಚೇಷ್ಟೆ ಮತ್ತು ನಡುವಳಿಕೆಯಿಂದ ಉಂಟಾದದ್ದು. ಈ clowning ಮಾಡುವ ನೆಪವನ್ನು ಕುರಿತು ಮನೋಜ್ಞವಾದ ಚಿತ್ರರೂಪಕ್ತೆ ಹಾಸ್ಯವನ್ನು ಉಂಟುಮಾಡಿ ವಿಜ್ಞಾನ ವಿಷಯದ ಮೇಲೆ ಗಾಂಭೀರ್ಯವನ್ನು ನೀಡುವುದು

ತ್ತದೆ. ಅದಕ್ಕೆ ಸಹಾಯಕವಾಗುವಂತೆ ರೇಖಾಚಿತ್ರಗಳನ್ನು ಸ್ವತಃ ಲೇಖಕರೇ ಬಿಡಿಸಿದ್ದಾರೆ. ಅಷ್ಟೇ ಅಲ್ಲ ಬರವಣಿಗೆಯಲ್ಲಿ ಬಣ್ಣಿಸಿದಂತೆ ಕಣ್ಣಿಗೆ ಕಟ್ಟುವ ಸುಂದರ ವೈಜ್ಞಾನಿಕ ಕಲಾತ್ಮಕ ಚಿತ್ರಗಳು ಪೂರಕವಾಗುವಂತೆ ಮಾಡಿದ್ದಾರೆ. ಆದ್ದರಿಂದ ಇದು ನಿಜವಾಗಿಯೂ ಸಚಿತ್ರ ಗ್ರಂಥ ವೆನ್ನಬೇಕು. ಇಲ್ಲಿ ಬರುವ ಯಾವ ವರ್ಣನೆಯೂ ಅತ್ಯುಕ್ತಿ ಎಂದು ನನಗನಿಸುವುದಿಲ್ಲ. ಉದಾಹರಣೆಗೆ ಈ ಸನ್ನಿವೇಶ ಗಮನಿಸೋಣ—

"ಮುಂದೆ ಮುಂದೆ ಹೋದಂತೆಲ್ಲಾ ಕಾಲುದಾರಿಯು ಅಗಲ ಕಿರಿಯದಾಗಿ ಕೊನೆಗೆ ಅದೂ ಕಾಣದೆ ಹೋಯಿತು. ಎದುರಿಗೆ ಮರ ಬೇರುಗಳನ್ನು ಬೆಳಸಿಕೊಂಡಿದ್ದ ದೊಡ್ಡ ಮರ ಅಡ್ಡವಾಗಿ ನಿಂತಿತ್ತು. ಗಾರ್ಡೂ ವೆಳತ್ತಪಿಳ್ಳೆಯೂ ನಮ್ಮ ಹಿಂದೆ ಬರುತ್ತಿದ್ದರಾದ್ದರಿಂದ ನಮಗೆ ದಾರಿ ತಿಳಿಯದೆ ಅಲ್ಲಿಯೇ ನಿಂತುಕೊಂಡು ಆ ಮರದ ಬೇರುಗಳನ್ನು ನೋಡುತ್ತಿದ್ದೆವು. ಚಿದಂಬರ ಉದ್ದೇಶವಿಲ್ಲದೆ ಬೇರುಗಳನ್ನು ಸವರುತ್ತಿದ್ದಾಗ ಒಂದೂವರೆ ಅಡಿ ಉದ್ದದ ಹಗ್ಗದಂತಿದ್ದ ವಸ್ತುವನ್ನು ತುದಿಯಿಂದ ಹಿಡಿದುಕೊಂಡು 'ಶಿಂಗ ನಿನ್ನ ಜುಟ್ಟು ಕಟ್ಟಿಕೊಳ್ಳುವುದಕ್ಕೆ ತಗೋ ನಿನಗೊಂದು ಪ್ರಸೆಂಟ್' ಎಂದು ಅವನ ಮುಖದಲ್ಲಿ ಹಿಡಿದ. ಶಿಂಗ ಬೆಚ್ಚಿಬಿದ್ದು 'ಅಯ್ಯೋ ಚಿಪ್ಪಮುಂಡೆದೇ...ಹಾವನ್ನು ಹಿಡಿದುಕೊಂಡಿದ್ದೀಯಲ್ಲೋ' ಎಂದು ಬೊಬ್ಬೆ ಹಾಕಿದ. ಚಿದಂಬರ ಗಾಬರಿಗೊಂಡು ಹಿಡಿತವನ್ನು ಸಡಿಲಿಸದೆ ಕೈಯನ್ನು ಪಕ್ಕಕ್ಕೆ ಬೀಸಿ ಕಿಟಾರೆಂದು ಕೂಗಿಕೊಳ್ಳುತ್ತಾ ತಕತಕ ಕುಣಿಯತೊಡಗಿದ. ಏನಾಯಿತು ಎಂದು ಕೇಳಿದರೆ ಅದು ಅವನ ಕಿವಿಗೆ ಬೀಳದು. ಕಣ್ಣು ಗುಡ್ಡೆಗಳನ್ನು ಹಿಗ್ಗಿಸಿ ಕಣ್ಣಾಲಿಗಳನ್ನು ಹೊರದೂಡಿ ಹೊ ಹೊ ಎಂದು ಕೂಗಾಡುತ್ತಿದ್ದ. ಗಾರ್ಡ್ ಬಂದು ಇವನ ಹಾವು ಹಿಡಿತದ ಕೈಯನ್ನು ಭದ್ರವಾಗಿ ಹಿಡಿದುಕೊಂಡು 'ಚಿದೂ ಹಾವು ಸತ್ತುಹೋಗಿದೆ. ಹಿಡಿತವನ್ನು ಸಡಲಿಸು ಕೆಳಕ್ಕೆ ಬಿದ್ದುಹೋಗುತ್ತದೆ.' ಎಂದು ಅವನ ಕಿವಿಯಲ್ಲಿ ಗಟ್ಟಿಯಾಗಿ ಹೇಳಿದ. ಮೈಮೇಲೆ ಆವೇಶ ನಿಂತು ಪ್ರಜ್ಞೆ ತಿಳಿದವನಾಗಿ ಚಿದಂಬರ ಮುಷ್ಟಿಯನ್ನು ಸಡಲಿಸಿದ. ಹಾವು ಸತ್ತಿದ್ದೆ...ನಿಶ್ಚೇತನವಾಗಿ ಕೆಳಕ್ಕೆ ಬಿತ್ತು..."

ಇಂಥ ನಿರೂಪಣೆಯನ್ನು ಪುಟ ಪುಟಕ್ಕೂ ಕಾಣಬಹುದು. ಹುಡುಗಾಟಿಕೆಯೂ ಒಂದು ಅರ್ಥ ಪೂರ್ಣ ನರಿಂಜಿ ಸಸ್ಯವನ್ನು ಹುಡುಕುತ್ತಾ ಹೋಗುವಲ್ಲಿ ಐವರು ಹುಡುಗಿಯರು ಆನೆಯನ್ನು ಹಿಡಿಯುವುದಕ್ಕಾಗಿ ತೋಡಿದ್ದ ಕಂದಕದಲ್ಲಿ ಬಿದ್ದಾಗಿನ ಪ್ರಸಂಗದಲ್ಲಿ ಬೇರೊಂದು ಗುಂಪು ಕೇಳುವ ಪ್ರಶ್ನೆಗಳು.

"ಆನೆ ಇವರನ್ನು ಕಟ್ಟಿಕೊಂಡು ಹೋಗಿಬಿಟ್ಟಿತಾ?"

"ಎಷ್ಟು ಆನೆಗಳು ಬಂದಿದ್ದುವೋ?"

"ಒಂದೇ ಆನೆ ಐವರನ್ನೂ ಹೆಗಲಮೇಲೆ ಕೂಡಿಸಿಕೊಂಡು ಹೋಗಿರಬೇಕು."

"ಇಲ್ಲ ಹಳ್ಳದಲ್ಲಿದ್ದ ಆನೆ ಇವರನ್ನು ಸೆಳೆದುಕೊಂಡಿರಬೇಕು."

"ಆನೆ ತೋಡಿದ್ದ ಹಳ್ಳ ಇವರ ಕಣ್ಣಿಗೆ ಬೀಳಲಿಲ್ಲವೆ?"

ಇತ್ಯಾದಿ ಇತ್ಯಾದಿ. ಸ್ವಾಮಿಯವರು ಒಂದು set pattern ಅನುಸರಿಸಿ ಹಾಸ್ಯೋತ್ಪತ್ತಿ ಮಾಡುವಂತೆ ಅನಿಸುತ್ತದೆ.

ಅಲ್ಲದೆ ಯಾವುದೋ ಒಂದು ಮರವನ್ನೋ ಬಳ್ಳಿಯನ್ನೋ ಗಿಡವನ್ನೋ ವರ್ಣಿಸುವಾಗ ಅದರ ಆಮೂಲಾಗ್ರ ಸಮೀಕ್ಷೆ ನಡೆಸುವುದು ಸ್ವಾಮಿಯವರ ವೈಶಿಷ್ಟ್ಯ. ಬೇರಿನಿಂದ ತುದಿಯಲ್ಲಿರುವ ಮೊಗ್ಗಿನವರೆಗೆ ಆ ಸಸ್ಯದ ವಿವರಣೆ; ಅದನ್ನು ಯಾವ ಯಾವ ಕಾವ್ಯದಲ್ಲಿ ಹೇಗೆ ಅಲಂಕಾರಕ್ಕೋ ಉಪಮೆಗೋ ಬಳಸಿಕೊಳ್ಳಲಾಗಿದೆ ಎಂಬುದರ ಮಾಹಿತಿ. ಅದಕ್ಕೆ ಸಂಬಂಧಿಸಿದ ಕವಿಸಮಯ ಮುಂತಾದವುಗಳನ್ನು ವಿಸ್ತಾರಪೂರ್ಣವಾಗಿ ನೀಡುತ್ತಾರೆ. ಮಾತ್ರವಲ್ಲದೆ ಹಲವಾರು ವೈದ್ಯಶಾಸ್ತ್ರಗಳಲ್ಲಿ ಆ ಸಸ್ಯವನ್ನು ಹೇಗೆ ಉಪಯೋಗಿಸಲಾಗುತ್ತದೆ ಎಂಬುದರ ವಿವೇಚನೆ. ಇತ್ತೀಚಿನ ಸಂಶೋಧನೆಗಳಿಂದ ಕಂಡುಬಂದ ಅಂಶಗಳ ವಿಮರ್ಶೆ ನೀಡುತ್ತಾರಲ್ಲದೆ ತಮ್ಮದೆ ಕೆಲವು ಸಿದ್ಧಾಂತವನ್ನೂ ಮಂಡಿಸಿದ್ದಾರೆ. ಇವು ಮನಸ್ಸಿಗೆ ಮಾತ್ರವಲ್ಲದೆ ಈ ದಿಶೆಯಲ್ಲಿ ಹೆಚ್ಚಿನ ಚಿಂತನೆಗೆ ಸಂಶೋಧನೆಗೆ ಅವಕಾಶವಿದೆ. ಮಾವಿನ ಮರ ಕಂಡಾಗ ತಮಿಳಿನ ಅಹನಾನೂರು ಕಾವ್ಯ, ಪಂಪನ ಶಾಂತಿಪುರಾಣ, ಕಾವ್ಯಾವಲೋಕನ, ಸೂಕ್ತಿಸುಧಾರ್ಣವಂ, ರಂ.ಶ್ರೀ. ಮುಗಳಿ

ಇವರ ವರ್ಣನೆಯನ್ನು ನೆನಪಿಗೆ ತಂದುಕೊಡುತ್ತಾರೆ. ಕಮಲದ ಹೂವನ್ನು ಕಂಡು ಒಂದೇ ಗಿಡಕ್ಕೆ ಹಲವು ಹತ್ತು ಹೆಸರು ಕೊಟ್ಟು ಫಜೀತಿಗೆಬ್ಬಿಸಿದ ಕವಿಗಳಿಗೆ ಶಾಪ ಹಾಕುತ್ತಾರೆ. ಶಿಲ್ಪಕಲೆ, ಚರಿತ್ರೆಯಲ್ಲಿ ತಮ್ಮ ಮೂಗು ಚಾಚಿ ಪರಪ್ಪದ ಮೊಹರುಗಳಲ್ಲಿರುವ ಎಲೆ ಅರಳೀ ಗಿಡದ್ದೇ ಎಂದು ಖಚಿತವಾಗಿ ಹೇಗೆ ನಂಬುತ್ತೀರಿ ಎಂದು ಇತಿಹಾಸಕಾರರನ್ನು ಸಂಶೋಧಕರನ್ನು ಪ್ರಶ್ನಿಸುತ್ತಾರೆ. ಜಾಯಿಕಾಯಿ ಹೇಗೆ 'ಕಾಯಿ'ಯಲ್ಲ ಜಾಪತ್ರೆ ಹೇಗೆ 'ಪತ್ರೆ'ಯಲ್ಲ ಎಂಬುದನ್ನು ವಿಶದೀಕರಿಸಿ ತಪ್ಪು ಗ್ರಹಿಕೆಯನ್ನು ನಿವಾರಿಸಲು ಯತ್ನಿಸಿದ್ದಾರೆ.

ಸಮಾಧಾನದ ಮಾತೆಂದರೆ ಸ್ವಾಮಿಯವರು ಗೊಂಡಾರಣ್ಯಕ್ಕೆ ಕರೆದೊಯ್ದರೂ ದಿಕ್ಕು ತಪ್ಪಿಸುವುದಿಲ್ಲ...ಕಾಡು ಮೇಡಿನ ಅಪಾರ ಸಂಪತ್ತನ್ನು ಮಾನವನ ಕಲ್ಯಾಣಕ್ಕಾಗಿ ಉಪಯೋಗಿಸಿಕೊಳ್ಳಲು ಬೇಕಾದ ಪ್ರಮಾಣದಲ್ಲಿ ಪ್ರಯತ್ನ ನಡೆದಿಲ್ಲ ಎಂಬುದು ಲೇಖಕರ ಕೊರಗು. ಸ್ವಾಮಿಯವರ ಕೃತಿಗೆ ಪ್ರಶಸ್ತಿ ಕೊಡುವುದಕ್ಕಿಂತಲೂ ಅವರ ಬುದ್ಧಿವಾದಕ್ಕೆ ಓಗೊಟ್ಟು ಸರಿಯಾದ ಸರ್ವೆ ನಡೆಸಬೇಕಾಗಿರುವುದು ದೇಶದ ಹಿತ ದೃಷ್ಟಿಯಿಂದ ಜರೂರು ಆಗಬೇಕಾದ ಕಾರ್ಯ.

ಒಟ್ಟಿನಲ್ಲಿ ಹೇಳುವುದಾದರೆ ಹಲವಾರು ವೈಶಿಷ್ಟ್ಯಗಳಿಂದ ಕೂಡಿರುವ ಈ ವಿಶಿಷ್ಟ ಕೃತಿ ಜನಪ್ರಿಯ ವಿಜ್ಞಾನ ಸಾಹಿತ್ಯಕ್ಕೆ ಮಾದರಿಯಾಗಿ ನಿಲ್ಲಬಲ್ಲದು. ಇಂಥ ಕೃತಿಗಳು ಕನ್ನಡಕ್ಕೆ ಹೆಚ್ಚು ಬೇಕು. ಹಾಗೆಯೇ ಸಾಮಾನ್ಯ ಓದುಗನಿಗೆ ಉಪಯುಕ್ತವಾಗಬೇಕಾದರೆ, ಎಟಕಬೇಕಾದರೆ ಸುಲಭ ಬೆಲೆಯ 'ಹಸಿರು ಹೊನ್ನು'ನ ಪ್ರಕಟನೆಯೂ ಬರಬೇಕು. ✡

(ಈ ಸಲ ಕೇಂದ್ರ ಸಾಹಿತ್ಯ ಅಕಾಡಮಿ ಬಹುಮಾನ ಪಡೆದ ಗ್ರಂಥ ಶ್ರೀ ಬಿ. ಜಿ. ಎಲ್. ಸ್ವಾಮಿಯವರ 'ಹಸಿರು ಹೊನ್ನು'. ಇತ್ತೀಚೆ ಧಾರವಾಡದಲ್ಲಿ ಅನ್ವೇಷಣ ಕೂಟದ ಪರವಾಗಿ ಈ ಕೃತಿಯ ಬಗ್ಗೆ ನಡೆದ ವಿಚಾರಸಂಕಿರಣದಲ್ಲಿ ಓದಲಾದ ಲೇಖನವಿದು.)

ಸಾಮಾನ್ಯ ಜನ–ಮಹಾಪುರುಷ

ಸಾಮಾನ್ಯ ಜನಗಳು ಸೊಡಲಿನ ದೀಪಗಳ ಹಾಗೆ; ಕಣ್ಣು ಕಾಣುವಷ್ಟು ಬೆಳಕಾಗಬೇಕಾದರೆ, ಅಂಥ ಹಲವು ದೀಪಗಳು ಬೇಕಾಗಬಹುದು. ಆದರೆ ತೇಜಶ್ಶಾಲಿಯೂ, ಶೀಲಸಂಪನ್ನನೂ ಆದ ಮಹಾಪುರುಷನು ಚಂದ್ರಸೂರ್ಯರಂತೆ ಒಬ್ಬೊಬ್ಬನೇ ಕತ್ತಲೆಯನ್ನು ಕಳೆದು ಬೆಳಕನ್ನೂ ಉಲ್ಲಾಸವನ್ನೂ ಉಂಟುಮಾಡಿಯಾನು.

ಇತರರ ಅಜ್ಞಾನ

ನಮ್ಮ ಅಜ್ಞಾನ, ಅವಿವೇಕ, ಬುದ್ಧಿಮಾಂದ್ಯ, ಮೌಢ್ಯ ಇವುಗಳಿಂದ ಕೆಲವು ವೇಳೆ ನಮಗೆ ಕಷ್ಟಗಳು ಒದಗಬಹುದು. ಆದರೆ ಮಿಕ್ಕ ಕೆಲವು ವೇಳೆ ಇತರರ ಅಜ್ಞಾನ ಅವಿವೇಕಾದಿಗಳಿಂದಲೂ ನಾವು ಕಷ್ಟಕ್ಕೆ ಸಿಕ್ಕುತ್ತೇವೆ.

– ಎ. ಆರ್. ಕೃಷ್ಣಶಾಸ್ತ್ರಿಗಳ

'ವಚನ ಭಾರತ' ಪೀಠಿಕೆಯಿಂದ

ಅವನು ಹಾವಿಗಾಗಿ ಸತ್ತ

ವಾಲ್ಟರ್ ಲಾಸ್ರಾದೋ

ಹೆದರಿಕೆ, ಅಜ್ಞಾನ, ದುರಾಸೆ ಇತ್ಯಾದಿಗಳ ಪರಿಣಾಮವಾಗಿ ಜನಕ್ಕೆ ಸಹಕಾರಿಯಾಗಿಯೇ ಬಾಳುವ ಹಾವುಗಳನ್ನು ನಿಷ್ಕಾರಣ ನಾಶಪಡಿಸಲಾಗುತ್ತಿದೆ.

ಮಹಾರಾಷ್ಟ್ರದ ಠಾಣೆ ಜಿಲ್ಲೆಯ ವಸಯಿ ಎಂಬ ಊರಿನ ಫ್ರಾನ್ಸಿಸ್ ದೊಮಿನಿಕ್ ಫ್ರಾನ್ಸಿಕಾ ಎಂಬ ನಿವಾಸಿ ಕಳೆದ ವರ್ಷ ೬ ಅಡಿ ಉದ್ದದ ನಾಗರ ಹಾವಿನ ಜೀವ ಉಳಿಸಲು ಹೋಗಿ ದುಃಖಕಾರಕ ರೀತಿಯಲ್ಲಿ ಮರಣಹೊಂದಿದ. ಅದಕ್ಕೆ ಕಾರಣ ಬೇಜವಾಬ್ದಾರಿ ಅಜ್ಞಾನಿ ಜನರೇ ಎಂಬುದು ನಿಸ್ಸಂಶಯ.

ವಸಯಿಯಲ್ಲಿಯ ಸೈಂಟ್ ಎಲಿಜಾಬೆತ್ ಕಾನ್ವೆಂಟ್ ಶಾಲೆಯ ಆವಾರದಲ್ಲಿ ಆಡುತ್ತಿದ್ದ ಮಕ್ಕಳು ಪೊದೆಯಲ್ಲಿದ್ದ ಸರ್ಪವನ್ನು ಕಂಡರು. ಮಕ್ಕಳ ಕಿರುಚಾಟ ಕೇಳಿ ಸಿಸ್ಟರ್ಸ್ ಓಡಿಬಂದರು. ಅವರು ತಕ್ಷಣ ಫ್ರಾನ್ಸಿಸನನ್ನು ಕರೆದರು.

ಅವನಿಗೆ ಹಾವುಗಳ ಮೇಲೆ ಬಹಳ ಪ್ರೀತಿ. ಬಹುಶಃ ಅವನ ಮತ್ತು ಸರ್ಪಗಳ ನಡುವೆ ಏನೋ ಒಂದು ಬಗೆಯ ನಿಕಟ ಬಾಂಧವ್ಯವೇ ಇತ್ತು. ತನ್ನ ಜೀವನದಲ್ಲಿ ಅದುವರೆಗೆ ಅವನು ೩೦ ನಾಗರಹಾವುಗಳನ್ನು ಹಿಡಿದಿದ್ದ. ಇದು ೩೧ನೆ ಹಾವಾಗಿದ್ದಿತು.

ಮರಣ ದಂಡನೆ

ಪೊದೆಯಲ್ಲಿ ಸೇರಿಕೊಂಡಿದ್ದ ಅಪಕಾರಿಯಾದ ಮತ್ತು ತಟ್ಟನೆ ಕೋಪದಿಂದ ಸಿಡಿದೇಳಬಲ್ಲ ಈ ನಾಗರಹಾವನ್ನು ಹಿಡಿಯಲು ಅವನಿಗೆ ಒಂದು ಗಂಟೆ ತಾಗಿತು. ಅಷ್ಟರಲ್ಲಿ ಅವನ ಸುತ್ತ ಕೂಡಿದ ಜನರ ದೊಡ್ಡ ಗುಂಪು ಹಾವನ್ನು ಕೊಂದು ಹಾಕುವಂತೆ ಕಿರುಚತೊಡಗಿತು. ಅದನ್ನು ಹಾಫ್ ಕಿನ್ ಇನ್‌ಸ್ಟಿಟ್ಯೂಟಿಗೆ* ಒಪ್ಪಿಸಲು ಫ್ರಾನ್ಸಿಸ್ ನಿರ್ಧರಿಸಿದ್ದ. ಆದರೆ ಜನರಿಗೆ ಈ ಹಾವನ್ನು ಕೊಂದುಬಿಡುವ ಆತುರ. ಫ್ರಾನ್ಸಿಸನು ಎಷ್ಟು ತಿಳಿಸಿ ಹೇಳಿದರೂ ಜನ ತಮ್ಮ ಹಟ ಬಿಡಲಿಲ್ಲ. ಫ್ರಾನ್ಸಿಸ್ ಹೋದ ಹೋದಲ್ಲಿ ಜನರ ಗುಂಪು ಗಲಾಟೆ ಮಾಡುತ್ತ ಹಿಂಬಾಲಿಸಿತು.

ಅಪಾಯಕಾರಿ ಕಡಿತ

ಈ ಗಲಾಟೆಯಿಂದ ನಾಗರಹಾವು ಕೆರಳಿತು. ಅಲ್ಲದೆ ಈ ಘಟನೆಗಳಿಂದ ಫ್ರಾನ್ಸಿಸನ ಮನಸ್ಸಿನ ಮೇಲೆ ತೀವ್ರ ಪರಿಣಾಮವಾಗಿತ್ತು. ಅವನು ಹಾವನ್ನು ದಾರದಿಂದ ಕಟ್ಟುವ ಪ್ರಯತ್ನ ಮಾಡು

---

* ಮುಂಬಯಿಯಲ್ಲಿರುವ ಈ ಸಂಸ್ಥೆಯು ದೇಶದ ಅಗ್ರಮಾನ್ಯ ವೈದ್ಯಕೀಯ ಸಂಶೋಧನ ಸಂಸ್ಥೆಗಳಲ್ಲೊಂದು. ಹಲವಾರು ಬಗೆಯ ರೋಗ ನಿರೋಧಕ ಲಸಿಕೆಗಳನ್ನು ಇಲ್ಲಿ ತಯಾರಿಸಿ ಪೂರೈಸಲಾಗುವುದಲ್ಲದೆ ಹಾವುಗಳ – ಅದರಲ್ಲೂ ನಾಗರಹಾವಿನ — ವಿಷದಿಂದ ವಿಷಾರಿ ಹಾವು ಕಚ್ಚಿದಾಗ ಜನರಿಗೆ ಉಪಯುಕ್ತವೆನಿಸುವ ಔಷಧಿಯನ್ನೂ ತಯಾರಿಸುತ್ತದೆ.

ವಾಗ ಅದು ಮುಷ್ಟಿಯಿಂದ ಜಾರಿ ಅವನನ್ನು ಕಚ್ಚಿಬಿಟ್ಟಿತು.

ಅವನ ಗೆಳೆಯರು ಅವನನ್ನು ತಕ್ಷಣ ಒಂದು ಮೈಲು ದೂರವಿದ್ದ ಆಸ್ಪತ್ರೆಗೆ ಕರೆದುಕೊಂಡು ಹೋದರು. ಫ್ರಾನ್ಸಿಸನು ಮಾತ್ರ ಸರ್ಪವನ್ನು ಬಿಟ್ಟಿರಲಿಲ್ಲ. ಆಸ್ಪತ್ರೆಯ ಹೊರಗೆ ಒಂದು ಕೊಕ್ಕೆಗೆ ಸರ್ಪವನ್ನು ಕಟ್ಟಿ ಅವನು ಚಿಕಿತ್ಸೆಗಾಗಿ ಒಳಗೆ ಹೋದನು. ಆಸ್ಪತ್ರೆಯಲ್ಲಿದ್ದ ಸ್ತ್ರೀವೈದ್ಯಳು ಫ್ರಾನ್ಸಿಸನ ಮೊರೆಗೆ ಕಿವಿಗೊಡದೆ ಸರ್ಪವನ್ನು ಕೊಲ್ಲಲು ಆದೇಶ ಕೊಟ್ಟಳು. ಸರ್ಪದ ಮರಣದಿಂದ ಅವನ ಹೃದಯಕ್ಕೆ ಘೋರ ಆಘಾತವಾಯಿತು. ಅವನ ಮೇಲೆ ಚಿಕಿತ್ಸೆ ಏನೂ ಪರಿಣಾಮ ಮಾಡಲಿಲ್ಲ. ಸಮಯ ಕಳೆದಂತೆ ಅವನ ಪರಿಸ್ಥಿತಿ ಚಿಂತಾಜನಕವಾಗತೊಡಗಿತು. ಹೊರಗಿನಿಂದ ಬೇರೆ ವೈದ್ಯರನ್ನು ಕರೆಸಿದರೂ ಪ್ರಯೋಜನವಾಗಲಿಲ್ಲ. ನಂತರ ಅವನನ್ನು ಬಾಂಬೆ ಹಾಸ್ಪಿಟಲ್‌ಗೆ ಸಾಗಿಸಲಾಯಿತು. ಅಲ್ಲಿ ಹೋದರೂ ಚೇತರಿಸಿಕೊಳ್ಳದ ಫ್ರಾನ್ಸಿಸ್ ಅಲ್ಲೇ ಕೊನೆಯುಸಿರೆಳೆದನು.

ಯಾರು ಹೊಣೆ ?

ಫ್ರಾನ್ಸಿಸನ ಮರಣಕ್ಕೆ ನಾಗರಹಾವು ಖಂಡಿತವಾಗಿ ಜವಾಬ್ದಾರಿ ಅಲ್ಲ. ಅಜ್ಞಾನಿ ಜನರೇ ಅದಕ್ಕೆ ಕಾರಣ. ನಾಗರಹಾವು ವಿಷಕಾರಿಯೂ ಹೌದು, ಅಪಾಯಕಾರಿಯೂ ಹೌದು. ಆದರೆ ಅದನ್ನು ಕೆಣಕದೆ ಇದ್ದರೆ ಅದು ಏನೂ ಮಾಡದು. ಅಲ್ಲದೆ ಅದು ಮನುಷ್ಯನಿಗೆ ತುಂಬ ಪ್ರಯೋಜನಕಾರಿಯಾದ ಜೀವಿ. ಆದರೆ ಸುಶಿಕ್ಷಿತ ವೈದ್ಯರಿಗೆ ಇದು ಗೊತ್ತಿಲ್ಲದಿರುವದು ಆಶ್ಚರ್ಯಕರ ಸಂಗತಿ.

ನಾಗರಹಾವಿನ ವಿಷದಿಂದ ಕ್ಯಾನ್ಸರ್, ಕುಷ್ಠ, ಸಂಧಿವಾತ. ಇತ್ಯಾದಿ. ರೋಗಗಳಿಗೆ ಔಷಧಿ ತಯಾರಿಸುತ್ತಾರೆ. ಅದರ ಗಲ್ಲವನ್ನು ನಾಜೂಕಾಗಿ ಒತ್ತಿದರೆ ಅದರ ವಿಷ ಹೊರಗೆ ಬರುತ್ತದೆ. ಹೀಗೆ ವಿಷ ತೆಗೆದರೆ ಹಾವಿಗೆ ಏನೂ ಹಾನಿ ಇಲ್ಲ. ಒಮ್ಮೆ ಖಾಲಿ ಮಾಡಿದ ವಿಷದ ಚೀಲ ೧೫ ದಿವಸಗಳಲ್ಲಿ ಪುನಃ ತುಂಬುತ್ತದೆ.

ನಾಗರಹಾವು ಮತ್ತು ಇತರ ವಿಷಕಾರಿ ಮತ್ತು ಅವಿಷಕಾರಿ ಹಾವುಗಳಿಂದ ಇಲಿಗಳ ಸಂತಾನ ಕಡಿಮೆಯಾಗುತ್ತದೆ. ನಮ್ಮ ದೇಶದಲ್ಲಿ ಬೆಳೆದ ಧಾನ್ಯದ ೨೦% ರಷ್ಟು ಇಲಿಗಳಿಂದ ನಾಶವಾಗುತ್ತದೆ. ಒಂದು ಅಂದಾಜಿನ ಪ್ರಕಾರ ನಮ್ಮ ದೇಶದಲ್ಲಿ ಒಬ್ಬ ಮನುಷ್ಯನ ಹಿಂದೆ ಐದು ಇಲಿಗಳು ಇವೆಯಂತೆ. ನಾಶವಾಗುವ ದವಸಧಾನ್ಯ ರಕ್ಷಿಸಿದರೆ ನಮ್ಮ ದೇಶದ ಆಹಾರ ಕೊರತೆ ನೀಗಿ ಇನ್ನೂ ಉಳಿಯಬಹುದಂತೆ!

ಹೀಗಿರುವಾಗ ಮನುಷ್ಯನಿಗೆ ಜೀವಿಸಲು ಸಹಾಯಕವಾಗುವ ಹಾವುಗಳನ್ನು ಜನರು ಅಜ್ಞಾನದಿಂದ ಮತ್ತು ಹಣದ ದುರಾಸೆಯಿಂದ ಕೊಲ್ಲುತ್ತಾರೆ. ಹಾವುಗಳ ಚರ್ಮಕ್ಕೆ ಪರದೇಶಗಳಲ್ಲಿ ಒಳ್ಳೆಯ ಮಾರುಕಟ್ಟೆ ಇರುವುದರಿಂದ ಜನರು ಹಾವುಗಳನ್ನು ಕೊಲ್ಲುತ್ತಾರೆ. ಹಾವುಗಳ ಚರ್ಮವನ್ನು ಮಾರಿ ಜೀವಿಸುವ ಮೂರು ಸಾವಿರ ಕುಟುಂಬಗಳು ಇರುವಾಗ ಪ್ರತಿದಿನ ಎಷ್ಟು ಹಾವುಗಳ ನಿರ್ಮೂಲನ ಆಗುತ್ತದೆಂಬುದನ್ನು ನಾವು ಊಹಿಸಬಹುದು. ಕ್ರಮೇಣ ಹಾವುಗಳ ಸಂತಾನವೇ ನಾಶವಾಗಿ ಮನುಷ್ಯಕುಲಕ್ಕೆ ಹಾನಿಯಾಗಬಹುದು. ಆದುದರಿಂದ ಅವುಗಳ ಕೊಲ್ಲುವುದಕ್ಕೆ ಸರಕಾರ ತಡೆಹಾಕಬೇಕು. ಹಾಗೆಯೇ ಅಜ್ಞಾನಿ ಜನರಿಗೆ ಹಾವುಗಳ ನಿಜ ಸ್ವರೂಪವನ್ನು ತೋರಿಸಿ ಅವರ ಹೃದಯದಲ್ಲಿ ನೆಲೆಸಿದ ಹೆದರಿಕೆಯನ್ನು ದೂರ ಮಾಡಬೇಕು. ✿

ಕುರುಡು ತೋಟ

ನ್ಯೂಯಾರ್ಕ್ ಬಳಿಯ ಬ್ರೂಕ್‌ಲಿನ್‌ನಲ್ಲಿ ಕುರುಡರಿಗಾಗಿಯೇ ಬೆಳೆಸಲ್ಪಟ್ಟ ತೋಟವೊಂದಿದೆ. ಅಲ್ಲಿಯ ಬೊಟಾನಿಕ್ ಗಾರ್ಡನ್ ಸೆಂಟರಿನಲ್ಲಿ ಕುರುಡರಿಗೆ ಹೂವುಗಳನ್ನು ಕಣ್ಣಿನಿಂದ ನೋಡದೇ ಕೇವಲ ವಾಸನೆಯಿಂದ ಮತ್ತು ಸ್ಪರ್ಶದಿಂದ ಅದು ಯಾವ ಹೂವು ಎಂಬುದನ್ನು ತಿಳಿದುಕೊಳ್ಳಲು ವ್ಯವಸ್ಥೆ ಇದೆ. ಬ್ರೈಲ್ ಲಿಪಿಯಲ್ಲಿ ಪ್ರತಿ ಹೂವಿನ ಕುಂಡದ ಮೇಲೆ ಅದು ಯಾವ ಹೂವು ಎಂಬುದನ್ನು ಬರೆಯಲಾಗಿರುತ್ತದೆ.

ಕೇಳುವ 'ಕಿವಿಗಳ'
ಕಥೆಯನು ಕೇಳಿ

ಶ್ರವಣೇಂದ್ರಿಯೋಪಾಖ್ಯಾನ

ಡಾ. ಎಂ. ದಯಾಕರ

ಇಂದ್ರಿಯಗಳು ಜ್ಞಾನದ್ವಾರಗಳು. ಜ್ಞಾನಾರ್ಜನೆಯಲ್ಲಿ ಶ್ರವಣೇಂದ್ರಿಯದ ಪಾತ್ರ ಹೆಚ್ಚು.

"ನಾದೇನವ್ಯಜ್ಯತೇ ವರ್ಣಃ
ಪದಂವರ್ಣಾತ್ಪದಾದ್ವಚಃ ।
ವಚಸೋ ವ್ಯವಹಾರ್ಯೋಯಂ
ನಾದಾಧೀನಮತೋ ಜಗತ್ ॥"

ಅಂದರೆ ನಾದದಿಂದ ಅಕ್ಷರ, ಅಕ್ಷರದಿಂದ ಪದ, ಪದದಿಂದ ವಾಕ್ಯ, ವಾಕ್ಯದಿಂದ ವ್ಯವಹಾರ. ಆದ್ದರಿಂದ ಜಗತ್ತು ನಾದಾಧೀನ. ಹುಟ್ಟುಗಿವುಡಿರುವ ಮಗುವಿಗೆ ಮಾತು ಬಾರದು. ಭಾಷೆ ಜ್ಞಾನವಿನಿಮಯದ ಮಾಧ್ಯಮವಾದುದರಿಂದ ಹುಟ್ಟುಕಿವುಡರು ಮೂಕರಾಗಿಯೂ ದಡ್ಡರಾಗಿಯೂ ಬೆಳೆಯುತ್ತಾರೆ. ಕೇಳಿಕೆಯಿಂದ ದೂರದ ಜ್ಞಾನ ಉಂಟಾಗುತ್ತದೆ. ದೂರದಲ್ಲಿ ರೈಲಿನ ಕೂಗು ಕೇಳಿಸಿದಾಗ ಅದು ಕಾಣಿಸದಿದ್ದರೂ ಹಿಂದಿನ ಅನುಭವದಿಂದ ಅದು ರೈಲು ಎಂದು ತಿಳಿಯುವುದು. ಎರಡು ಕಿವಿಗಳಿರುವುದರಿಂದ ಶಬ್ದದ ದಿಕ್ಕು ಮತ್ತು ದೂರ ತಿಳಿಯುತ್ತವೆ. ಯುದ್ಧ, ಬೇಟೆ ಮುಂತಾದವುಗಳಲ್ಲಿ ಕೇಳಿಕೆಯ ಪಾತ್ರ ಬಹುಮುಖ್ಯ.

ಶಬ್ದದ ಭೌತಿಕ ವಿಚಾರ

ಶಬ್ದೋತ್ಪಾದಕ ವಸ್ತುವಿನ ಕಂಪನದಿಂದ ವಾಯುವಿನಲ್ಲಿ ಉತ್ಪಾದಿತ ಅಲೆಗಳುಂಟಾಗಿ ಅವು ಅದರ ಸುತ್ತ ಟೊಳ್ಳು ಗೋಳಗಳಂತೆ ದೊಡ್ಡವಾಗುತ್ತ ಎಲ್ಲಾ ದಿಕ್ಕುಗಳಲ್ಲೂ ಹರಡುತ್ತವೆ. ಈ ಅಲೆಗಳು ಕಿವಿಗೆ ಬಡಿದಾಗ ಕೇಳುವುದಾಗುತ್ತದೆ. ವಾಯುರಹಿತ ಶೂನ್ಯದಲ್ಲಿ ಶಬ್ದೋತ್ಪತ್ತಿಯಾಗಲಾರದು. ವಾಯುವೇ ಶಬ್ದವಾಹಕ ಮಾಧ್ಯಮ. ಶಬ್ದದ ವೇಗ ಸೆಕೆಂಡಿಗೆ ೩೪೦ ಮೀಟರುಗಳು, ತರಂಗದ ಉದ್ದ ೧೭ ಮಿಲಿಮೀಟರುಗಳಿಂದ ೧೭ ಮೀಟರುಗಳವರೆಗೆ ಇರಬಹುದು. ತರಂಗದ ಉದ್ದ ತಗ್ಗಿದಷ್ಟೂ ಶ್ರುತಿ ಹೆಚ್ಚುತ್ತದೆ. ಒಂದು ಸೆಕೆಂಡಿನಲ್ಲಾಗುವ ತರಂಗಗಳ ಸಂಖ್ಯೆಗೆ ಆವರ್ತನವೆನ್ನುತ್ತಾರೆ. ೨೦ ರಿಂದ ೨೦೦೦೦ ಆವರ್ತಗಳವರೆಗೂ ಮನುಷ್ಯ ಕೇಳಬಲ್ಲ. ಇವಕ್ಕಿಂತ ಕಡಿಮೆ ಅಥವಾ ಹೆಚ್ಚು ಆವರ್ತಗಳನ್ನು ಕೇಳಲಾರ. ೨೦೦೦೦ಕ್ಕಿಂತ ಹೆಚ್ಚು ಆವರ್ತಗಳ ಡಾಲ್ಟನ್ ಸೀಟಿಯ ಧ್ವನಿ ಮನುಷ್ಯನಿಗೆ ಕೇಳಿಸದೆ ನಾಯಿಗೆ ಕೇಳಿಸುವ

ದರಿಂದ ಆಕ್ರಮಣಕಾರಿಗಳಿಗೆ ತಿಳಿಯದಂತೆ ದಣಿ ಪೀಪಿ ಊದಿದಾಗ ನಾಯಿ ಅವನ ರಕ್ಷಣೆಗೆ ಓಡಬಲ್ಲುದು. ಪ್ರತಿ ಸೆಕೆಂಡೂ ಒಂದೇ ಸಂಖ್ಯೆಯಲ್ಲಿ ಸಮ ಹಾಗೂ ಕ್ರಮವಾದ ಅಲೆಗಳಾದರೆ ನಾದವುಂಟಾಗುತ್ತದೆ; ಅಸಮ ಮತ್ತು ಅಕ್ರಮ ಅಲೆಗಳಿಂದ ಗದ್ದಲವುಂಟಾಗುತ್ತದೆ. ಬರೀ ನಾದಗಳಿಂದ ಮಾತ್ರ ಸಂಗೀತವಾಗುತ್ತದೆ. ಸಪ್ತ ಸ್ವರಗಳ ಶ್ರೇಣಿಗೆ ಸ್ಥಾಯಿ ಎನ್ನುತ್ತಾರೆ. ಅಂತಾರಾಷ್ಟ್ರೀಯ ಒಪ್ಪಿಗೆಯ ಪ್ರಕಾರ ಮಧ್ಯಸ್ಥಾಯಿಯ ಷಡ್ಜಸ್ವರದ ಆವರ್ತಗಳ ಸಂಖ್ಯೆ ೨೫೬. ಇದರ ಮೇಲಿನ ಷಡ್ಜದಲ್ಲಿ ೫೧೨ ಆವರ್ತಗಳಿರುವುವು. ಮಂದ್ರಸ್ಥಾಯಿಗೆ ೧೨೮ ರಿಂದ ೫೧೨ ಆವರ್ತಗಳು. ತಾರಸ್ಥಾಯಿಗೆ ೫೧೨ ರಿಂದ ೧೦೨೪ ಆವರ್ತಗಳು, ಷಡ್ಜ ೨೫೬ ಆದರೆ ರಿಷಭ ಅದರ ೧.೦೬ ರಷ್ಟು ಅಂದರೆ ೨೭೧. ಹೀಗೆಯೇ ಶಂಕರಾಭರಣ ರಾಗದಲ್ಲಿ ಇತರ ಸ್ವರಗಳೂ ಹಿಂದಿನ ಸ್ವರದ ೧.೦೬ರಷ್ಟಿರುತ್ತವೆ. ಹೀಗೆ ಪ್ರಮಾಣಯುತವಾಗಿರುವ ಸ್ವರಗಳಿಂದ ಸಂಗೀತವಾಗುತ್ತದೆ. ಸಪ್ತಸ್ವರಗಳೆಂದರೂ ಸಂಗೀತದ ಪ್ರತಿಸ್ಥಾಯಿಯಲ್ಲಿ ೧೨ ಸ್ವರಗಳಿವೆ. ಇವುಗಳಲ್ಲಿ ಕೆಲವು ಸ್ವರಗಳಿಂದ ಪ್ರತಿರಾಗವಾಗುತ್ತದೆ. ರಾಗಗಳ ಸಂಖ್ಯೆಗೆ ಮಿತಿಯಿಲ್ಲ.

ನಾದದ ಭೌತಿಕ ವಿಚಾರಗಳಲ್ಲಿ ಕಂಪನ ವೇಗ, ಚಿಕ್ಕ ಅಥವಾ ದೊಡ್ಡ ಧ್ವನಿ ಮತ್ತು ನಾದ ಗುಣ ಎಂಬುವುವಿವೆ. ಕಂಪನ ವೇಗ ಹೆಚ್ಚಿದಷ್ಟೂ ಶ್ರುತಿ ಏರುತ್ತದೆ. ಕಂಪನ ವೈಶಾಲ್ಯ ಹೆಚ್ಚಿದಷ್ಟೂ ಧ್ವನಿ ದೊಡ್ಡದಾಗುತ್ತದೆ. ಸಂಗೀತವಾದ್ಯ ಅಥವಾ ಇತರ ಶಬ್ದೋತ್ಪಾದಕವನ್ನು ನಾವು ನೋಡದದೆ ಕೇಳುವುದರಿಂದಲೇ ಇಂತಹುದೆಂದು ನಾದಗುಣದಿಂದ ಹೇಳಬಲ್ಲೆವು. ಹೀಗೆಯೇ ಪರಿಚಯವಿರುವವರು ಕಾಣಿಸದಿದ್ದಾಗಲೂ ಅವರ ಕಂಠದಿಂದ ಅವರನ್ನು ಗುರುತಿಸಬಲ್ಲೆವು.

ವಾದ್ಯತಂತಿಯ ಉದ್ದ ಅಥವಾ ದಪ್ಪ ಹೆಚ್ಚಿದಷ್ಟೂ ಇಲ್ಲವೇ ಬಿಗಿ ತಗ್ಗಿದಷ್ಟೂ ಶ್ರುತಿ ತಗ್ಗುತ್ತದೆ. ತಂತಿಯನ್ನು ಮೀಟಿದಾಗ ಮೊದಲು ಕಂಪನವೈಶಾಲ್ಯ ಹೆಚ್ಚಿರುವುದರಿಂದ ನಾದ ಗಟ್ಟಿಯಾಗಿ ಕೇಳಿಸಿ ವೈಶಾಲ್ಯ ಕಡಮೆಯಾದಂತೆ ನಾದ ಮೆತ್ತಗಾಗುತ್ತ ಕೊನೆಗೆ ನಿಲ್ಲುತ್ತದೆ. ೨೫೬ ಆವರ್ತಗಳಿಗೆ ಶ್ರುತಿ ಮಾಡಿದ ತಂತಿ, ಅದರ ದಪ್ಪ ಮತ್ತು ಬಿಗಿಗಳು ವ್ಯತ್ಯಾಸಗೊಳ್ಳದೆ ಉದ್ದ ಅರ್ಧವಾದರೆ ಶ್ರುತಿ ಎರಡರಷ್ಟು ಅಂದರೆ ೫೧೨ ಆವರ್ತಗಳಿಗೇರುತ್ತದೆ.

೧೮೬೩ರಲ್ಲಿ ಹೆಲ್ಮ್‌ಹೋಲ್ಟ್‌ಜನ ಅನುರಣನವಾದ ಹುಟ್ಟಿತು. ಎರಡು ಅಥವಾ ಹೆಚ್ಚು ತಂತಿಗಳ ಶ್ರುತಿ ಒಂದೇ ಆಗಿದ್ದರೆ, ಒಂದನ್ನು ಮೀಟಿದಾಗ ಮಿಕ್ಕವೂ ಕಂಪಿಸಿ ಅದೇ ನಾದ ಕೊಡುತ್ತವೆ. ಇದೇ ಅನುರಣನ. ಶ್ರುತಿಗಳು ಕಂಪಿಸುವ ತಂತಿಯ ಶ್ರುತಿಯ ಗುಣಗಳಷ್ಟು ಕಡಿಮೆ ಅಥವ ಹೆಚ್ಚಿದ್ದರೂ ಅನುರಣನವಾಗುತ್ತದೆ. ಪಿಯಾನೊ ವಾದ್ಯದಲ್ಲಿ ಬೇರೆ ಬೇರೆ ಶ್ರುತಿಗಳ ತಂತಿಗಳಿರುವಂತೆ ಕಿವಿಯಲ್ಲೂ ಸೂಕ್ಷ್ಮ ತಂತುಗಳು (ಸುಮಾರು ೨೫೦೦೦) ಇದ್ದು ಆಚೆ ನಾದದ ಶ್ರುತಿಗೆ ಸರಿಹೊಂದಿದ ತಂತು ಅನುರಣಿಸಿ ಕಿವಿ ನರ ತಂತುಗಳಲ್ಲಿ ಅದೇ ಆವರ್ತಗಳ ವಿದ್ಯುತ್ ಪ್ರವಹಿಸಿ ಮಿದುಳನ್ನು ಸೇರಿ ಶ್ರವಣಾನುಭವ ಉಂಟಾಗುತ್ತದೆ.

ಶಬ್ದದ ತೀವ್ರತೆ ಅದರ ಅಲೆಗಳಲ್ಲಿರುವ ಶಕ್ತಿಯನ್ನು (ಒತ್ತಡ) ಅನುಸರಿಸುತ್ತದೆ. ಈ ಶಕ್ತಿಯ ಅಳತೆಯ ಏಕಾಂಶಕ್ಕೆ ಒಂದು ಬಾರ್ ಎನ್ನಲಾಗಿದೆ. ಇದು ವಾಯುಭಾರದ ೧೦೦೦೦೦೦ ಭಾಗದಷ್ಟಿದೆ. ಸಾಧಾರಣವಾಗಿ ಶಬ್ದದ ತೀವ್ರತೆಯನ್ನು ಡೆಸಿಬೆಲ್‌ಗಳಲ್ಲಿ ಸೂಚಿಸುತ್ತಾರೆ. ೧.೫ ಮೀಟರ್ ದೂರದಲ್ಲಿ ಪಿಸುಮಾತಿನ ತೀವ್ರತೆ ೧೦ ಡೆಸಿಬೆಲ್‌ಗಳಷ್ಟು, ಕೈಗಡಿಯಾರದ ಶಬ್ದ ೨೦ ಡೆ. ಬೆ., ಸಾಧಾರಣ ಸಂಭಾಷಣೆ ೬೦ ಡೆ. ಬೆ., ಅರಚುವುದು ೮೦ ಡೆ. ಬೆ., ದೊಡ್ಡ ವಾದ್ಯಗೋಷ್ಠಿ ೧೦೦ ಡೆ. ಬೆ., ಗುಡುಗು ೧೨೦ ಡೆ. ಬೆ., ಹತ್ತಿರದ ಬಾಂಬು ಶಬ್ದದಿಂದ ಕಿವಿ ಒಡೆಯಬಹುದು, ಎದೆಯೆಲುಬು ಮುರಿದು ಪ್ರಾಣ ಹೋಗಬಹುದು. ಧ್ವನಿ ದೊಡ್ಡದಾಗುತ್ತಿದ್ದರೆ ಕಿವಿನೋವು ಪ್ರಾರಂಭಿಸುವುದು ಅಲೆಗಳ ಒತ್ತಡ ಅರಿವು. ಇದಾಗಲೂ ಒತ್ತಡ ಸುಮಾರು ೧೦೦೦ ಬಾರ್ (೧ ಚದುರ ಸೆ. ಮೀ. ಮೇಲೆ ೧ ಗ್ರೈನ್ ತೂಕ) ಗಳಷ್ಟಿರಬೇಕು.

ಶ್ರವಣೇಂದ್ರಿಯ ವಿಕಾಸ

ಅಂತ್ಯ ಶ್ರವಣಾಂಗ ಸ್ತನಿಗಳಲ್ಲಿ ಮಾತ್ರ ಪೂರ್ಣವಾಗಿದೆ. ಮೂಳೆಯಿಲ್ಲದ ಪ್ರಾಣಿಗಳಲ್ಲಿ ರೆಕ್ಕೆ ಹುಳುಗಳು ಮಾತ್ರ ಕೆಲವು ಧ್ವನಿ ಕಂಪನಗಳನ್ನು ಗ್ರಹಿಸಬಲ್ಲ ವಿಚಿತ್ರ ಶ್ರವಣಾಂಗಗಳನ್ನು ಹೊಂದಿವೆ. ಕಶೇರುಕಗಳಲ್ಲಿ ತಲೆಪಕ್ಕದಲ್ಲಿ ಒಳಗಿವಿ ಬೆಳೆಯಲು ಪ್ರಾರಂಭಿಸುತ್ತದೆ. ಮೀನಿನಲ್ಲಿ ಶ್ರವಣಾಂಗವು ಸರಳವಾಗಿ ಚಿಕ್ಕ ಗುಳಿಯಂತೆ ಕಾಣಿಸಿಕೊಂಡು ಗುಳಿಯ ಬಾಯಿ ಕ್ರಮೇಣ ಮುಚ್ಚಿಕೊಂಡು ಕೋಶವಾಗಿ ತಲೆಬುರುಡೆಯಲ್ಲಿ ಹೂತುಕೊಂಡು ಒಳಗಿವಿಯ ಮೂಲ ರೂಪವಾಗುತ್ತದೆ. ಪರಸ್ಪರ ಲಂಬ ಕೋನಗಳಲ್ಲಿರುವ ಮೂರು ಸಮತಲಗಳಲ್ಲಿ ಮೂರು ಅರ್ಧ ಚಕ್ರನಾಳಗಳು ಬೆಳೆದು ದೇಹದ ಸಮತೋಲದ ಅಂಗವಾಗಿ ನೀರಿನಲ್ಲಿ ಮೀನಿಗೆ ತನ್ನ ನೆಲೆ ತಿಳಿಯುತ್ತದೆ. ಶ್ರವಣಕೋಶದ ತಳದಿಂದ ಒಂದು ಚಿಕ್ಕ ಕೊಂಬು ಬೆಳೆಯುತ್ತದೆ. ಕಪ್ಪೆ ಮತ್ತು ಹಲ್ಲಿ ಜಾತಿಗಳಲ್ಲಿ ಈ ಚಿಕ್ಕ ಕೊಂಬಿನ ಉದ್ದ ಸ್ವಲ್ಪ ಹೆಚ್ಚಿಗಿರುತ್ತದೆ. ಪಕ್ಷಿಗಳಲ್ಲಿ ಅದು ಇನ್ನೂ ಸ್ವಲ್ಪ ಉದ್ದವಾಗುವುದಲ್ಲದೆ ಬಾಗುತ್ತದೆ. ಸ್ತನಿಗಳಲ್ಲಿ ಚಿಕ್ಕ ಕೊಂಬಿನ ಉದ್ದ ಬಹುಪಾಲು ಹೆಚ್ಚಿ ಬಸವನ ಹುಳುವಿನ ಶಂಖದಂತೆ ಸುರಳಿಯಾಗಿ ನಿಜಶ್ರವಣಾಂಗ(ಕರ್ಣಶಂಖ)ವಾಗಿದೆ. ಇದರಲ್ಲಿ ೧।। ಯಿಂದ ೫ ಸುತ್ತುಗಳಿರಬಹುದು. ಮನುಷ್ಯನಲ್ಲಿ ೨।। ದಿಂದ ೨।।। ಸುತ್ತುಗಳಿವೆ. ಸುತ್ತುಗಳು ಹೆಚ್ಚಿದಷ್ಟು ಶ್ರವಣಶಕ್ತಿ ಹೆಚ್ಚು. ಐದು ಸುತ್ತುಗಳಿರುವ ಜಿಂಕೆಯ ಶ್ರವಣ ಶಕ್ತಿ ಇನ್ನೂ ಹೆಚ್ಚು. ಸ್ತನಿಗಳಲ್ಲಿ ಹೊರ, ನಡು ಮತ್ತು ಒಳಕಿವಿಗಳಿವೆ. ಸ್ತನಿಗಳನ್ನು ಹೊರತುಪಡಿಸಿದರೆ ಇತರ ಪ್ರಾಣಿಗಳಲ್ಲಿ ಹೊರಕಿವಿಯಿಲ್ಲ, ಮೀನಿನಲ್ಲಿ ಒಳಗಿವಿ ಮಾತ್ರ ಇದೆ. ಶ್ರವಣಶಕ್ತಿಗೆ ಕಿವಿ ಮಾತ್ರ ಬೆಳೆದರೆ ಸಾಲದು; ಅದಕ್ಕೆ ತಕ್ಕಂತೆ ಮಿದುಳೂ ಬೆಳೆದು ವಿವೇಚನಾಶಕ್ತಿ ಹೆಚ್ಚಬೇಕು.

ಕಪ್ಪೆಗಳು ೫೦ ರಿಂದ ೧೫೦೦೦ ಆವರ್ತಗಳಿಗೆ ಪ್ರತಿಕ್ರಿಯೆ ತೋರಿಸುತ್ತವೆ. ಹಲ್ಲಿಗಳಿಗೆ ೮೦೦೦ ಆವರ್ತಗಳವರೆಗೆ ಶಬ್ದ ತಿಳಿದರೆ, ಪಕ್ಷಿಗಳಿಗೆ ೧೦೦೦೦ ಆವರ್ತಗಳವರೆಗೂ ತಿಳಿಯುತ್ತದೆ.

ಶ್ರವಣಾಂಗಗಳು

ಹೊರ, ನಡು, ಒಳಕಿವಿಗಳು, ಕಿವಿ ನರ, (೮ನೇ ತಲೆ ನರ) ಮತ್ತು ಮಿದುಳಿನ ಕೆಲವು ಭಾಗಗಳು ಶ್ರವಣಕ್ರಿಯೆಗೆ ಬೇಕಾದವು. ಹೊರಗಿವಿ ಶಬ್ದ ತರಂಗ ಸಂಗ್ರಹಕ್ಕೂ ನಡುಗಿವಿ ಕಂಪನಗಳ ಸಾಗಾಟಕ್ಕೂ, ಒಳಗಿವಿ ಶಬ್ದವಿಶ್ಲೇಷಣೆಗೂ ಅವಶ್ಯ.

ಹೊರಗಿವಿ

ಚಾಚು ಕಿವಿ (ಶಂಕುಲಿ) ಮತ್ತು ಕಿವಿಗೂಡು ಇದರ ಭಾಗಗಳು. ಶಂಕುಲಿಯು ಶಬ್ದತರಂಗಗಳನ್ನು ಆತು ಗೂಡಿನೊಳಕ್ಕೆ ದೂಡುತ್ತದೆ. ೨೫ ಮಿ. ಮೀ. ಉದ್ದ, ೮ ಮಿ.ಮೀ ವ್ಯಾಸವುಳ್ಳ ಗೂಡಿನ ಒಳಕೊನೆಯಲ್ಲಿ ಹೊರಮೈ ಕೆಳಮುಖವಾಗಿ ಬೆಳಗೆ ಮಿರುಗುತ್ತ ಬಟ್ಟಲಂತಿರುವ ಕರ್ಣಪಟಲವು ಶಬ್ದಕ್ಕೆ ಸರಿಯಾಗಿ ಅದರುತ್ತದೆ. ಇದರ ವ್ಯಾಸ ೮ ಮಿ. ಮೀ. ಇದರ ಚಲನೆ ೦.೦೦೫ ಮಿ. ಮೀ. ಗಿಂತ ಹೆಚ್ಚಿಲ್ಲ. ಅದು ಮಾತಿಗೆ ಇದರ ಕಂಪನವು ಸೂಕ್ಷ್ಮದರ್ಶಕದಲ್ಲೂ ಕಾಣುವುದಿಲ್ಲ.


ನಡುಗಿವಿ

ಇದು ೧೫ ಮಿ.ಮೀ. ವ್ಯಾಸವುಳ್ಳ ಅಕ್ಕಪಕ್ಕಕ್ಕೆ ೪ ಮಿ.ಮೀ. ಇರುವ ಇಕ್ಕಟ್ಟು ಕುಹರ. ಕರ್ಣಪಟಲದ ಕೇಂದ್ರ ಭಾಗವು ಶಂಕುವಿನ ತುದಿಯಂತೆ ಒಳಚಾಚಿರುವದರಿಂದ ಮತ್ತು ಒಳ ಭಿತ್ತಿಯ ಮಧ್ಯಭಾಗ ಕರ್ಣಶಂಖದ ಮೊದಲ ಸುತ್ತಿನಿಂದ ಉಬ್ಬಿರುವುದರಿಂದ ಮಧ್ಯದಲ್ಲಿ ಕುಹರದ ಅಗಲ ೨ ಮಿ.ಮೀ. ಕುಹರದ ಭಿತ್ತಿಗಳಿಗೆ ಕೆಂಪು ಲೋಳ್ಪೊರೆ ಅಂಟಿಕೊಂಡಿದ್ದು ಕಿವಿ ಗಂಟಲು ನಾಳದ ಮೂಲಕ ಒಳ ನುಗ್ಗುವ ವಾಯು ಅದರಲ್ಲಿದೆ. ಹೀಗೆ ಕಿವಿದಮಟೆಯ ಹೊರಗೂ ಒಳಗೂ ವಾಯು ಇದ್ದು ಅದು ಕಂಪಿಸಲು ಸಾಧ್ಯವಾಗುತ್ತದೆ. ನೆಗಡಿ ಅತಿಯಾದಾಗ ಕಿವಿ ಗಂಟಲು ನಾಳ ಮುಚ್ಚಿಕೊಳ್ಳುವುದರಿಂದ ನಡುಗಿವಿಯಲ್ಲಿ ವಾಯು ಕಡಮೆಯಾಗಿ ಕರ್ಣ

ಪಟಲ ಪೂರ್ಣ ಕಂಪಿಸಲು ಸಾಧ್ಯವಿಲ್ಲದೆ ಅರೆಗಿವುಡಾಗುತ್ತದೆ. ಮೂಗು ಸೀದಿದಾಗ ಅಥವಾ ಉಗುಳು ನುಂಗಿದಾಗ ಕಿವಿ ಗಂಟಲು ನಾಳದ ಮೂಲಕ ಒತ್ತಡದಿಂದ ವಾಯು ನುಗ್ಗಿ ಸ್ವಲ್ಪ ಹೊತ್ತು ಕೇಳುವಂತಾಗಬಹುದು; ಒತ್ತಡ ಹೆಚ್ಚಿದರೆ ಕರ್ಣಪಟಲ ಆಚೆ ಉಬ್ಬಿ ನೋವಾಗಬಹುದು. ದೊಡ್ಡ ದನಿಯಿಂದ ಅಪಾಯ ತಪ್ಪಿಸಲು ಮತ್ತು ಕರ್ಣಪಟಲವನ್ನು ಬಿಗಿ ಮಾಡಲು ಅದನ್ನು ಒಳಕ್ಕೆ ಎಳೆಯುವ ಸಣ್ಣ ಪೇಶಿಯಿದೆ.


ನಡುಗಿವಿಯಲ್ಲಿ ಸುತ್ತಿಗೆ (ಮುದ್ಗರಾಸ್ಥಿ), ಅಡಿಗಲ್ಲು (ಸ್ಥೂಣಾಸ್ಥಿ) ಮತ್ತು ರಿಕಾಪು ಎಂಬ ಕಿರು ಮೂಳೆಗಳು ಮೇಲಿನ ಬಂಧನಗಳಿಂದ ನೇತಾಡುತ್ತ ಕೂಡಿಕೊಂಡು ಸನ್ನೆಯಂತಾಗಿ ಕರ್ಣಪಟಲದ ಕಂಪನಗಳನ್ನು ಒಳಭಿತ್ತಿಯ ಮಧ್ಯದಲ್ಲಿರುವ ಅಂಡ ರಂಧ್ರದ ಮೂಲಕ ಒಳಕಿವಿಗೆ ಸಾಗಿಸುತ್ತದೆ. ತಲೆ ಬುರುಡೆಯ ಕಿವಿಗೂಡಿನ ಒಳಕೊನೆಯಲ್ಲಿ ಕಾಣಿಸುವುದು ನಡುಕಿವಿಯ ಒಳಭಿತ್ತಿ, ರಿಕಾಪಿನ ಪಾದಫಲಕ ಒಳಕ್ಕೆ ಸರಿದಾಗ ಪತ್ತಿರವೇ ಇರುವ ಗುಂಡು ರಂಧ್ರದ ಪೊರೆ ಹೊರಕ್ಕುಬ್ಬಿ ಫಲಕ ಹೊರಕ್ಕೆ ಸರಿದಾಗ ಪೊರೆ ಒಳಕ್ಕುಬ್ಬಿ ಒಳಕಿವಿಯ ಜಲದ ಒತ್ತಡ ಏರುಪೇರಿಲ್ಲದೆ ಒಂದೇ ಆಗಿರುತ್ತದೆ. ರಿಕಾಪಿನ ಕಂಪನ ವೈಶಾಲ್ಯ ಕರ್ಣಪಟಲದ ಕಂಪನ ವೈಶಾಲ್ಯದ ಮುಕ್ಕಾಲರಷ್ಟಿದೆ. ರಿಕಾಪಿನ ಪಾದಕ್ಕಿಂತ ಕರ್ಣಪಟಲದ ೧೭ ರಷ್ಟು ದೊಡ್ಡದು. ರಿಕಾಪು ಪಾದದ ಸಲೆ ೩.೨ ಚದುರ ಮಿ. ಮೀ. ಕರ್ಣಪಟಲದ ಸಲೆ ೫೫ ಚದುರ ಮಿ. ಮೀ. ಇದರಿಂದ ಶಬ್ದ ಕಂಪನಗಳ ಒತ್ತಡ ೨೨ ಸಲ ಹೆಚ್ಚಿ ವಾಯುವಿಗಿಂತ ಹೆಚ್ಚು ಜಡವಾಗಿರುವ ಒಳ ಕಿವಿಜಲದಲ್ಲಿ ಅಲೆಗಳನ್ನುಂಟು ಮಾಡಲು ಶಕ್ತಿ ಹೆಚ್ಚಿ ಧ್ವನಿ ವರ್ಧನವಾಗುತ್ತದೆ.

ಕರ್ಣಪಟಲ, ಕಿರು ಮೂಳೆಗಳು ಮತ್ತು ಬಂಧನಗಳು ೭೦೦ ರಿಂದ ೧೪೦೦ ಆವರ್ತಗಳ ಕಂಪನಗಳಿಗೆ ಶ್ರುತಿಗೊಂಡಿವೆ. ೧೨೦೦ ಆವರ್ತಗಳ ಸಾಗಾಟ ಸುಗಮ. ಹೊರಕಿವಿಯಲ್ಲಿ ವಾಯುವೇ ಸಾಗಾಟದ ಸಾಧನ. ನಡುಗಿವಿಯಲ್ಲಿ ಕಿರು ಮೂಳೆಗಳು ಕಂಪನ ವಾಹಕಗಳು. ಶ್ರವಣಾಸ್ಥಿಗಳಿಲ್ಲದಾಗ ನಡುಗಿವಿಯಲ್ಲಿರುವ ವಾಯುವಿನಲ್ಲಿ ಶಬ್ದ ವಹನವಾಗಬಹುದಾದರೂ ಕೇಳಿಕೆ ಕಡಿಮೆ. ಕಿವಿಗೂಡಿನ ವಾಯುವಿನ ಶ್ರುತಿ ೩೦೦೦ ಆವರ್ತಗಳಾದರೆ ೬೦೦ ರಿಂದ ೬೦೦೦ ಆವರ್ತಗಳು ಒಳಗಿವಿಯನ್ನು ಸೇರಬಲ್ಲವು. ಗಟ್ಟಿ ಶಬ್ದದಿಂದ ಒಳಗಾಗುವ ಅಪಾಯ ತಪ್ಪಿಸಲು ಮುದ್ಗರಾಸ್ಥಿಯ ಪೇಶಿ ಅದನ್ನು ಒಳಕ್ಕೂ ರಿಕಾಪಿನ ಪೇಶಿ ರಿಕಾಪನ್ನು ಹೊರಕ್ಕೂ ೧/೨೫ ಸೆಕೆಂಡಿನೊಳಗೆ ಎಳೆಯುತ್ತವೆ. ಮಾತು ೧೦೦೦೦ ಆವರ್ತಗಳಿಗಿಂತ ಹೆಚ್ಚಿರುವುದರಿಂದ ಕಡಿಮೆ ಆವರ್ತಗಳ ಧ್ವನಿ ಹೆಚ್ಚು ಕೇಳಿಸುವುದಿಲ್ಲ. ಸುತ್ತಿಗೆ ರಿಕಾಪು



ಚಿತ್ರ : ೧

ಹೊರ ನಡು ಒಳ ಕಿವಿಗಳು (ಅಪ್ರಮಾಣಯುತ) ೧ ಶಂಕುಲಿ, ೨ ಕಿವಿಗೂಡು ೩ ಕರ್ಣಪಟಲ, ೪ ಸುತ್ತಿಗೆ, ೫ ಅಡಿಗಲ್ಲು, ೬ ರಿಕಾಪು, ೭ ಗುಂಡು ರಂಧ್ರ, ೮ ಮೇಲಿನ ಅರ್ಧ ಚಕ್ರನಾಳ, ೯ ಕರ್ಣ ಶಂಖ (ಒಂದು ಕಡೆ ಕತ್ತರಿಸ ಲಾಗಿದೆ) ೧೦ ಟಿಂಪನಾಳ, ೧೧ ಶ್ರುತಿ ಪೊರೆ, ೧೨ ಶ್ರವಣನಾಳ, ೧೩ ರೈಸ್ನರ್ ಪೊರೆ, ೧೪ ವೆಸ್ಟಿಬ್ಯೂಲ್ ನಾಳ, ೧೫ ಸುರಳಿ ಚಜ್ಜ, ೧೬ ಸಮತೂಕನರ, ೧೭ ಶ್ರವಣನರ, ೧೮ ಎಂಟನೇ ತಲೆನ



ಚಿತ್ರ : ೨.

ಕರ್ಣ ಶಂಖದ ಸೀಳು ನೋಟ:

೧ ಶಂಖನಾಳ, ೨ ಟಿಂಪನಾಳ, ೩ ವೆಸ್ಟಿಬ್ಯೂಲ್‌ನಾಳ, ೪ ಶ್ರವಣ ನಾಳ, ೫ ಸುರಳಿ ಚಜ್ಜ, ೬ ಶ್ರುತಿ ಪೊರೆ, ೭ ರೈಸ್ನರ್ ಪೊರೆ, ೮ ಶ್ರವಣ ನರ, ೯ ಶಂಖಾಕ್ಷ.

ಗಳ ಪೇಶಿಗಳಿಂದ ವ್ಯಕ್ತಿಯ ಧ್ವನಿ ತನಗೇ ಹೆಚ್ಚು ಕೇಳಿಸದಂತಾಗುತ್ತದೆ.


ಒಳಗಿವಿ

ಇದು ಚಕ್ರಭೀಮನ ಕೋಟೆಯಂತಿರುವ ಸಂಕೀರ್ಣಾಂಗ. ಸಂಕೀರ್ಣ ಅಸ್ಥಿಕೋಶದಲ್ಲಿ ಅದರಂತೆಯೇ ಸಂಕೀರ್ಣವಾಗಿರುವ ಪೊರೆ ಅಂಗವೇ ಶ್ರವಣೇಂದ್ರಿಯದ ಅಂತ್ಯಾಂಗ. ಇದರ ಮೂರು ಅರ್ಧಚಕ್ರನಾಳಗಳಲ್ಲಿ ದೇಹದ ಸಮತೂಕವನ್ನು ಇಡುವ ಅಂತ್ಯಾಂಗಗಳಿವೆ. ಅಪ್ಪಾಲೆ ತಿಪ್ಪಾಲೆ ಆಡಿನಿಂತ ಮೇಲೆ ತಲೆ ತಿರುಗುವಂತಾಗುವುದು ಇವುಗಳಲ್ಲಿರುವ ದ್ರವದ ಚಲನೆಯ ಮುಂದುವರಿಕೆಯಿಂದ. ಸುರುಳಿನಾಳವಾದ ಕರ್ಣಶಂಖವೇ ಶಬ್ದಗ್ರಾಹಿಯಾದ ನಿಜಶ್ರವಣಾಂಗ. ಶಬ್ದದ ವಿವಿಧ ಗುಣಗಳನ್ನು ಬೇರ್ಪಡಿಸುವುದರಿಂದ ಇದು ಧ್ವನಿ ವಿಶ್ಲೇಷಕ. ಶಂಖದ ಬುಡದ ವ್ಯಾಸ ೯ ಮಿ.ಮೀ. ಬುಡದಿಂದ ತುದಿಯವರೆಗೆ ೫ ಮಿ. ಮೀ. ಶಂಖನಾಳದ ಉದ್ದ ೩೦ ಮಿ.ಮೀ. ಬುಡದ ಕಡೆ ಇದರ ವ್ಯಾಸ ೩ ಮಿ. ಮೀ. ಶಂಖನಾಳವನ್ನು ನೆಟ್ಟಗೆ ಮಾಡಬಹುದಾದರೆ ಅದರಲ್ಲಿರುವ ನಾಲ್ಕು ಸುರಳಿನಾಳಗಳ ಸಂಬಂಧ ತಿಳಿಯುವುದು ಸುಲಭ. ಶಂಖದ ಬುಡದ ಕಡೆಗಿರುವ ಟಿಂಪನಿನಾಳ.

ನಾಳ

ಶಂಖದ ತುದಿಯಲ್ಲಿರುವ ತುದಿ ತೂತಿನ ಮೂಲಕ ವೆಸ್ಟಿಬ್ಯೂಲ್ ನಾಳದೊಡನೆ ಅವಿಚ್ಛಿನ್ನವಾಗಿದೆ. ಅಂಡ ರಂಧ್ರದ ಮೂಲಕ ರಿಕಾಪು ಸಾಗಿಸಿದ ಶಬ್ದ ಕಂಪನಗಳು ವೆಸ್ಟಿಬ್ಯೂಲ್‌ನಾಳ, ತುದಿ ತೂತು ಮತ್ತು ಟಿಂಪನಿನಾಳಗಳಲ್ಲಿರುವ ದ್ರವದ ಮೂಲಕ ಹಾದು ಗುಂಡು ರಂಧ್ರದ ಪೊರೆಯನ್ನು ಅದುರಿಸುತ್ತವೆ. ರಿಕಾಪು ಮತ್ತು ಗುಂಡು ರಂಧ್ರ ಪೊರೆಗಳು ಸೀಸಾ ತೂಗು ಹಲಗೆಯಂತಾಗುವುದರಿಂದ ಒಳ ಒತ್ತಡ ಸಮವಾಗಿರುತ್ತದೆ. ಶಂಖದ ಅಕ್ಷದಲ್ಲಿ ತುದಿಯಲ್ಲಿ ಸಣ್ಣದಾಗುವ ಗೂಟದಂತೆ ಮೂಳೆಯ ಶಂಖಾಕ್ಷ

ಚಿತ್ರ : ೩.




ಶಂಖನಾಳ ನೆಟ್ಟಗಾದರೆ ಕಾಣಬಹುದಾದ ನೋಟ:

೧ ಅಂಡ ರಂಧ್ರ, ೨ ಗುಂಡು ರಂಧ್ರ, ೩ ಸುರುಳಿ ಚಜ್ಜ ೪ ರೈಸ್ನರ್ ಪೊರೆ, ೫ ಶ್ರುತಿ ಪೊರೆ, ೬ ಕಾರ್ಟಿ ಸುರಂಗ, ೭ ವೆಸ್ಟಿಬ್ಯೂಲ್‌ನಾಳ, ೮ ಟಿಂಪನಾಳ, ೯ ಶ್ರವಣನಾಳ, ೧೦ ತುದಿತೂತು.

ಇದೆ. ಇದರ ಸುತ್ತ ೨॥–೨।॥ ಸುತ್ತುಗಳಿರುವ ಮೂಳೆಯ ಸುರಳಿ ಚಿಪ್ಪಿದೆ. ಟಂಪನ, ವೆಸ್ಟಿಬ್ಯೂಲ್‌ನಾಳಗಳ ನಡುವೆ ಗೂಡುವ ಕದೆ ಸುರುಳಿ ಚಿಪ್ಪಿನ ಹೊರಗಡೆ ಶ್ರವಣನಾಳವು ಇದೆ. ವೆಸ್ಟಿಬ್ಯೂಲ್ ಮತ್ತು ಶ್ರವಣನಾಳಗಳನ್ನು ರೈಸ್ನರ್ ಪೊರೆ ಪ್ರತ್ಯೇಕಿಸುತ್ತದೆ. ಶ್ರವಣ ಮತ್ತು ಟಂಪನನಾಳಗಳ ನಡುವೆಯಿರುವ ಶ್ರುತಿ ಪೊರೆ ಮುಖ್ಯವಾದುದು. ಇದರ ಮೇಲೆ ಶ್ರವಣನಾಳದೊಳಕ್ಕುಬ್ಬಿರುವ ಕಾರ್ಟಿನಾಳ (ಸುರಂಗ)ವಿದೆ. ಶ್ರುತಿ ಪೊರೆಯಲ್ಲಿ ಬೇರೆ ಬೇರೆ ಆವರ್ತನಗಳಿಗೆ ಕಂಪಿಸುವ ಸುಮಾರು ೨೦೦೦೦ ಬಿಗಿ ಸ್ಥಿತಿಸ್ಥಾಪಕ ತಂತುಗಳಿವೆ. ತುದಿತೂತಿನ ಕಡೆಯಿರುವ ತಂತುಗಳ ಉದ್ದ ಹೆಚ್ಚಿದ್ದು ಇವು ತಗ್ಗು ಶ್ರುತಿಗಳಿಗೆ ಕಂಪಿಸುತ್ತವೆ. ಕಾರ್ಟಿ ಸುರಂಗದ ಗೋಡೆಗಳಲ್ಲಿ ಒಂದೊಂದು ಸಾಲು ಹೊರ ಮತ್ತು ಒಳಕಂಬದ ಕರ್ಣಗಳಿವೆ. ಒಳ ಕಂಬ ಕಣಗಳಿಗೂ ಸುರುಳಿ ಚಿಜ್ಜಕ್ಕೂ ನಡುವೆ ಒಂದು ಸಾಲು ಲೋಮ ಕಣಗಳಿವೆ. ಹೊರಕಂಬಗಳಿಂದಾಚೆ ನಾಲ್ಕು ಸಾಲು ಲೋಮ ಕರ್ಣಗಳಿವೆ. ಇವುಗಳ ಸ್ಥಾನಬದ್ಧತೆಗೆ ಆಧಾರ ಕಣಗಳಿವೆ. ಸುಮಾರು ೩೫೦೦ ಒಳ ಮತ್ತು ೨೦೦೦೦ ಹೊರ ಲೋಮಕಣಗಳಿವೆ. ಶಂಖಾಕ್ಷ ಮತ್ತು ಸುರುಳಿ ಚಿಜ್ಜದ ಮೂಲಕ ತೂರುವ ಶ್ರವಣ ನರತಂತುಗಳ ಶಾಖೆಗಳು ಅವನ್ನು ಸುತ್ತುವರಿದಿವೆ. ಸುರುಳಿ ಚಿಜ್ಜದ ಒಳ ಅಂಚಿನಲ್ಲಿ ೩೦,೦೦೦ ದ್ವಿಧ್ರುವ ನರ ಕಣಗಳಿರುವ ಸುರುಳಿ ನರಗ್ರಂಥಿಯಿದೆ.

ಶ್ರವಣ ನರತಂತುಗಳು ಮೆದುಳುಕಾಂಡದೊಳಗೆ ಪ್ರತಿ ಪಕ್ಕ ಇರುವ ಎರಡು ಶ್ರವಣಗುಂಪುಗಳಲ್ಲಿ ಕೊನೆಗೊಳ್ಳುತ್ತವೆ. ಗುಂಪುಗಳಿಂದ ಎರಡನೇ ತಂಡದ ತಂತುಗಳು ಎದುರು ಪಕ್ಕಕ್ಕೆ ದಾಟಿ ಮಿದುಳು ಕಾಂಡದಲ್ಲಿ ಎಂ ತೆಲಮೆಸ್‌ನ ಒಳ ಜಾನುಕಾಯದಲ್ಲಿ ಅಂತ್ಯವಾಗುತ್ತವೆ. ಕೆಲವು ತಂತುಗಳು ಮಧ್ಯ ಮಿದುಳಿನ ಕೆಳಗುಪ್ಪೆಗಳನ್ನು ಸೇರುವುದರಿಂದ ಕೇಳಿಕೆಗೆ ತ್ವರಿತ ಪ್ರತಿಕ್ರಿಯೆಯಾಗಲು ಅನುಕೂಲವಾಗುತ್ತದೆ. ಮೂರನೇ ತಂಡದ ತಂತುಗಳು ಜಾನುಕಾಯದಿಂದ ಹೊರಟು ಮಹಾಮಸ್ತಿಷ್ಕದ ಕೆಳ ಹಾಲೆಯಲ್ಲಿರುವ ಶ್ರವಣ ಕೇಂದ್ರವನ್ನು ಸೇರುತ್ತವೆ. ಅವಕಾಶ ದೊರೆತಾಗ ಸಂಶೋಧಕರು ಈ ಕೇಂದ್ರದ ಕೆಲವು ಭಾಗಗಳನ್ನು ಸೂಕ್ಷ್ಮ ವಿದ್ಯುತ್‌ಧ್ರುವಗಳಿಂದ ಸ್ಫುರಿಸಲಾಗಿ ಹಿಂದೆ ಕೇಳಿ ಮರೆತು ಹೋದ ಧ್ವನಿಗಳೂ ಕೇಳಲಾದವು.

ಕರ್ಣಾಸ್ಥಿಯಲ್ಲಿ ಕರ್ಣಶಂಖ ಹುದುಗಿರುವುದರಿಂದ ಗಾಳಿಯಲ್ಲಿ ಸಾಗುವ ಶಬ್ದ ತರಂಗಗಳು ಮೂಳೆಯ ಮೂಲಕ ಸಾಗುವುದು ಕಷ್ಟ. ಶಬ್ದಕರಣೆಯುನ್ನು ನೇರವಾಗಿ ಕಿವಿ ಹಿಂದಿನ ಮೂಳೆ ಮೇಲಿಟ್ಟರೆ ಹೆಚ್ಚು ಕೇಳಿಸುವುದು. ವಾಯುಮಾಧ್ಯಮ ಶ್ರವಣ ಕುಗ್ಗಿದಂತೆ ಅಸ್ಥಿಮಾಧ್ಯಮ ಶ್ರವಣ ದೀರ್ಘಗೊಳ್ಳುವುದು. ಒಂದು ಕಿವಿಯಲ್ಲಿ ವಾಯು ಮಾಧ್ಯಮ ಶ್ರವಣವಿಲ್ಲದಾಗ ಝೇಂಕಾರ ಚಿಮುಟದ ಕಾಂಡವನ್ನು ನೆತ್ತಿಯ



ಚಿತ್ರ : ೪.

ಕಾರ್ಟಿ ಅಂಗ: ೧ ಸುರಳಿ ಚಿಜ್ಜ, ೨ ಶ್ರವಣನರ ತಂತುಗಳು, ೩ ಒಳಲೋಮ ಕಣ, ೪ ಒಳಕಂಬಕಣ, ೫ ಕಾರ್ಟಿ ಸುರಂಗ, ೬ ಹೊರ ಕಂಬಕಣ, ೭ ಹೊರ ಲೋಮಕಣಗಳು, ೮ ಆಧಾರ ಕಣಗಳು, ೯ ಶ್ರುತಿ ಪೊರೆ, ೧೦ ಅಚ್ಛಾದನ ಪೊರೆ, ೧೧ ವೆಸ್ಟಿಬ್ಯೂಲ್ ನಾಳ, ೧೨ ಟಂಪನನಾಳ, ೧೩ ಶ್ರವಣನಾಳ (ಸೂಕ್ಷ್ಮವರ್ತನ)

ಮೇಲಿಟ್ಟರೆ ಪಾಡಿರುವ ಕಿವಿಯಲ್ಲಿ ನಾದ ಹೆಚ್ಚು ಕೇಳಿಸುತ್ತದೆ. ಇದಕ್ಕೆ ಕಾರಣ ವಾಯುವಿನಲ್ಲಿ ಸಾಗುವುದಕ್ಕಿಂತ ಘನ ಮಾಧ್ಯಮದಲ್ಲಿ ಶಬ್ದ ತರಂಗಗಳು ಸಾಗುವುದು [illegible] ಧ್ವನಿವರ್ಧಕ ಶಬ್ದ ಸಾಗಾಟದ [illegible] ಕಿವಿಯ [illegible] [illegible] ಹಸನಾಗುತ್ತದೆ.

ಶ್ರವಣ ವಿಶ್ಲೇಷಕದಲ್ಲಿ ಇಂದ್ರಿಯ ಗೋಚರ ವಿದ್ಯುದ್ಘಟನೆಗಳು

೧೯೩೦ರ ದಶಕದಲ್ಲಿ ವೆಬರ್ ಮತ್ತು ಬ್ರೇ ಎಂಬುವರು ಮಹಾಮಸ್ತಿಷ್ಕ ತೆಗೆದು ಹಾಕಿದ ಬೆಕ್ಕಿನ ಶಂಖನಾಳದ ವಿದ್ಯುತ್ ಸ್ಥಿತಿ ಶಕ್ತಿಯ ಏರುಪೇರುಗಳನ್ನು ಪರಿವರ್ಧಕ (ಆಂಪ್ಲಿಫೈಯರ್) ಮತ್ತು ದೂರವಾಣಿಗಳ ಸಹಾಯದಿಂದ ಬೆಕ್ಕಿನ ಕಿವಿಗೆ ಸೇರುವ ಧ್ವನಿಯನ್ನು ಮರುಉತ್ಪಾದಿಸಲಾಗಿ ಧ್ವನಿಯ ಶ್ರುತಿ, ನಾದ ಗುಣ ಮತ್ತು [illegible] ಕೇಳಿ ಬಂದವು. ಗುಂಡು ರಂಧ್ರದ ವಿದ್ಯುತ್ ಸ್ಥಿತಿ ಶಕ್ತಿಗಳ ಅಧ್ಯಯನ ಮಾಡಲಾಗಿ ಶಂಖನಾಳದ ಪರಿಚಯ ಹೆಚ್ಚು ಚೆನ್ನಾಗಿ ಆಯಿತು; ಸುಪ್ತ (ಲೇಟೆಂಟ್) ಕಾಲ ಬಹಳ ಕಡಮೆ (೦.೦೦೧ ಸೆಕೆಂಡು); ಅರಿವಳಿಕೆಗಳ, ಆಯಾಸದ ಮತ್ತು ಶಂಖನಾಳ ಶೈತ್ಯದ ಪರಿಣಾಮ ಹೆಚ್ಚಿರಲಿಲ್ಲ. ಶಂಖನಾಳವು ಮೈಕ್ರೋಫೋನಿನಂತೆ ಕೆಲಸಮಾಡುವುದು ತಿಳಿಯಿತು. ಇದು ಸೂಕ್ಷ್ಮವಾಣಿ ಶಂಖನಾಳ ಪರಿಣಾಮ. ವಿದ್ಯುತ್ ಧ್ರುವಗಳನ್ನು ಶ್ರವಣನರ ಮತ್ತು ಶ್ರವಣ ಕೇಂದ್ರಗಳ ಮೇಲಿಟ್ಟಾಗಲೂ ಇಂತಹ ಸಂಗತಿಯೇ ನಡೆಯುತ್ತದೆ.

ಕಂಪನ ವೇಗ ಮತ್ತು ಶಬ್ದ ತೀವ್ರತೆ

೫೦೦ರಿಂದ ೩,೦೦೦ ಆವರ್ತನಗಳ ಕಂಪನ ವೇಗಗಳಲ್ಲಿ ಸಾವಿರಕ್ಕೆ ಮೂರು ಆವರ್ತಗಳ ವ್ಯತ್ಯಾಸವು ನಮಗೆ ತಿಳಿಯುತ್ತದೆ. ಮತ್ತು ೦.೦೯ ಸೆಕೆಂಡ್ ಕಾಲದ ಶಬ್ದವೂ ತಿಳಿಯುತ್ತದೆ; ಸೂಕ್ಷ್ಮ ಕಿವಿಗಳಿಗೆ ೧೦೦೦ ಮತ್ತು ೧೦೦೧ ಆವರ್ತಗಳ ವ್ಯತ್ಯಾಸವೂ ತಿಳಿಯುತ್ತದೆ. ೨೦೦ ಆವರ್ತಗಳಿಗಿಂತ ಕಡಿಮೆಯಿರುವ ಶಬ್ದಗಳ ಶ್ರುತಿಮಾಪನಾಟು ೩-೪ ಆವರ್ತಗಳಷ್ಟಿದ್ದರೆ ತಿಳಿಯುತ್ತದೆ. ೧೦೦೦ ಆವರ್ತಗಳಷ್ಟಿರುವಾಗ ಶ್ರುತಿವ್ಯತ್ಯಾಸ ತಿಳಿಯಬೇಕಾದರೆ ೧೨ ಅಲೆಗಳ ವ್ಯತ್ಯಾಸವಿರಬೇಕು; ೧೦೦೦೦ ಆವರ್ತಗಳಿಗಿಂತ ಹೆಚ್ಚಿದ್ದಾಗ ೨೫೦ ಕಂಪನಗಳ ವ್ಯತ್ಯಾಸವಿದ್ದರೆ ಮಾತ್ರ ತಿಳಿಯುತ್ತದೆ.

ಧ್ವನಿಯ ದೊಡ್ಡಸ್ತಿಕೆ ಮತ್ತು ತೀವ್ರತೆಗಳಿಗಿರುವ ವ್ಯತ್ಯಾಸವು ಕ್ಲಿಷ್ಟವಾದುದು. ದೊಡ್ಡಸ್ತಿಕೆ ವ್ಯಕ್ತಿಯ ಅನುಭವ. ತೀವ್ರತೆ ವಾಸ್ತವಿಕ; ಇದನ್ನು ಶಬ್ದತರಂಗಗಳ ಒತ್ತಡ ಹಾಗೂ ಕಂಪನ ವೇಗಗಳ [illegible] ಅಳೆಯಬಹುದು. ತೀವ್ರತೆ ಮತ್ತು ಶ್ರುತಿ ಏರಿದಾಗ ಧ್ವನಿ ದೊಡ್ಡದಾಗುತ್ತದೆ. ತೀವ್ರತೆ ಒಂದೇ ಇದ್ದು ಶ್ರುತಿ ಒಂದೇ ಅಲ್ಲದ ಧ್ವನಿಗಳು ಸಮನಾಗಿ ಗಟ್ಟಿಯಾದವಲ್ಲ. ಮಧ್ಯಮ ತೀವ್ರತೆಯಲ್ಲಿ ಶ್ರುತಿ ವ್ಯತ್ಯಾಸವಾದರೆ ಸುಮಾರು ೧೫೦೦ ಬದಲಾವಣೆಗಳು ತಿಳಿಯುತ್ತವೆ. ತೀವ್ರತೆ ಮಾತ್ರ ವ್ಯತ್ಯಾಸಗೊಂಡರೆ ಧ್ವನಿಯ ಗಟ್ಟಿ ಗುಣದಲ್ಲಿ ಸುಮಾರು ೩೨೫ ಬದಲಾವಣೆಗಳು ತಿಳಿಯುತ್ತವೆ. ಶ್ರವಣ ವ್ಯಾಪ್ತಿಯಲ್ಲಿ ಸುಮಾರು ೪೦೦೦೦ ಸ್ವರ ವ್ಯತ್ಯಾಸಗಳು ತಿಳಿಯುತ್ತವೆ.

ಕೇಳಿಕೆಯ ಒಗ್ಗುವಿಕೆ ಮತ್ತು ಸುಸ್ತು

ಶಬ್ದ, ವ್ಯತ್ಯಾಸಕ್ಕೆ ತಕ್ಕಂತೆ ಶ್ರವಣ ಸೂಕ್ಷ್ಮತೆ ವ್ಯತ್ಯಾಸಗೊಳ್ಳುತ್ತದೆ; ತೀವ್ರ ಅಥವಾ ಹೆಚ್ಚು ಕಾಲದ ಶಬ್ದದಿಂದ ಕೇಳಿಕೆಯ ಚುರುಕು ತಗ್ಗುತ್ತದೆ; ನಿಶ್ಶಬ್ದತೆಯಲ್ಲಿ ಚುರುಕು ಹೆಚ್ಚುತ್ತದೆ. ನಿಶ್ಶಬ್ದದ ಒಗ್ಗುವಿಕೆಯಾದಾಗ ಗಟ್ಟಿಯಾಗಿಯೂ ಗದ್ದಲದಲ್ಲಿ ಮೆತ್ತಗೂ ಒಂದೇ ಶಬ್ದ ಕೇಳಿಬರುತ್ತದೆ. ಗದ್ದಲ ನಿಂತಾಗ ೧೦–೧೫ ಸೆಕೆಂಡುಗಳಲ್ಲಿ ಕೇಳಿಕೆಯ ದಣಿವಾರಿ ಚುರುಕು ಹೆಚ್ಚುತ್ತದೆ. ಒಂದು ಸ್ವರದ ಕೇಳಿಕೆ ಮಂದವಾದಾಗ ಅಕ್ಕ ಪಕ್ಕದ ಸ್ವರಗಳೂ ಮಂದವಾಗುತ್ತವೆ. ಒಂದೇ ಕಿವಿಯ ಮೇಲೆ ಶಬ್ದದ ಪ್ರಭಾವವಿದ್ದಾಗಲೂ ಮುಚ್ಚಿದ

ಕಿವಿ ಮಂದವಾಗುತ್ತದೆ; ಮಿದುಳಿನಲ್ಲಿ ಇಕ್ಕೆಲ ಶ್ರವಣ ಕೇಂದ್ರಗಳು ಒಂದೇ ಕಿವಿ ಕೇಳಿಕೆಯಿಂದ ಆಯಾಸಗೊಳ್ಳುವುದು ಇದಕ್ಕೆ ಕಾರಣ. ಗಂಟೆಗಳ ಕಾಲದ ಗಲಾಟೆಯಿಂದಾದ ಶ್ರವಣಾಂಗವ್ಯಾಪದ ಬಳಲಿಕೆ ಶಮನಗೊಳ್ಳಲು ಹೆಚ್ಚು ಕಾಲಬೇಕು; ಇದಕ್ಕೆ ನಿಶ್ಶಬ್ದ ಸಹಾಯಕ. ತಿಂಗಳು ಅಥವಾ ವರ್ಷಗಳ ಕಾಲದ ಕೈಗಾರಿಕೋದ್ಯಮಗಳ ಗದ್ದಲದಿಂದ ದಣಿವಾದರೆ ಆಯಾ ಶ್ರುತಿಗಳ ಕಾರ್ಬಿಕರಣಗಳು ನಶಿಸಿ ಕ್ರಿಯಾಹೀನ ಅಥವಾ ಕಿವುಡುಂಟಾಗಬಹುದು.

ಮರಸಿಗೆ

ಗದ್ದಲದಲ್ಲಿ ಮಾತು ಕೇಳಿಸುವುದಿಲ್ಲ. ದೊಡ್ಡ ಶಬ್ದಗಳು ಚಿಕ್ಕವನ್ನು ಮುಳುಗಿಸುತ್ತವೆ; ಹೆಚ್ಚು ಗಟ್ಟಿಧ್ವನಿಗಳೂ ಅಸ್ಪಷ್ಟವಾಗುತ್ತವೆ. ಉದಾಹರಣೆಗೆ ೮೦೦ ಆವರ್ತಗಳ ಶಬ್ದವು ೭೦೦, ೯೦೦ ಮತ್ತು ೧೦೦೦ ಆವರ್ತಗಳ ಶಬ್ದಗಳನ್ನು ಮುಚ್ಚುತ್ತದೆ. ಗಲಾಟೆ ಬೀದಿಗಳಲ್ಲಿ ೩೦ ಡೆಸಿಬೆಲ್‌ಗಳಿಗಿಂತ ಹೆಚ್ಚಾಗಿ ಮರಸಿಕೆಯಾಗುತ್ತದೆ.

ಶಬ್ದದ ದಿಕ್ಕು ದೂರಗಳ ನಿರ್ಣಯ

ಎರಡು ಕಿವಿಗಳ ನಡುವೆ ತಲೆ ಅಡ್ಡವಾಗಿರುವುದರಿಂದ ಶಬ್ದ ಬರುವ ದಿಕ್ಕು ತಿಳಿಯುತ್ತದೆ. ಒಕೊಂದರೆ ಶಬ್ದದ ಕಡೆಗಿರುವ ಕಿವಿಗೆ ಹೆಚ್ಚು ಕೇಳಿಸುತ್ತದಲ್ಲದೆ ಎರಡು ಕಿವಿಗಳನ್ನು ಮುಟ್ಟುವ ಶಬ್ದ ತರಂಗಗಳ ಮಜಲುಗಳಲ್ಲಿ ವ್ಯತ್ಯಾಸವಿರುತ್ತದೆ. ಶಬ್ದ ತರಂಗದ ಉದ್ದ ಹೆಚ್ಚಿದಷ್ಟೂ ತಲೆಯ ದಪ್ಪ ಹೆಚ್ಚು ಪರಿಣಾಮಕಾರಿಯಾಗದು. ತೀವ್ರತೆ ಹೆಚ್ಚಿದಷ್ಟೂ ತರಂಗಗಳ ಉದ್ದ ಕಡಿಮೆಯಾಗಿ ಎರಡು ಕಿವಿಗಳ ಕೇಳಿಕೆಯಲ್ಲಿ ವ್ಯತ್ಯಾಸವುಂಟಾಗಿ ದಿಙ್ನಿರ್ಣಯವಾಗುತ್ತದೆ. ಆದರೆ ಮಾನವ ಕಿವಿಗಳು ಮಂದಸ್ವರಗಳ ದಿಕ್ಕನ್ನು ಗುರುತಿಸಬಲ್ಲವು. ೭೦೦ ಆವರ್ತಗಳ ತರಂಗದ ಉದ್ದ ೪೮ ಸೆ.ಮೀ. ೮೦೦ ಆವರ್ತಗಳ ತರಂಗದ ಉದ್ದ ೪೨.೫ ಸೆ.ಮೀ. ಈ ಉದ್ದಗಳ ವ್ಯತ್ಯಾಸ ಕಡಿಮೆಯಿರುವುದರಿಂದ ಆ ಎರಡು ಸ್ವರಗಳೂ ಒಂದೇ ಬಾರಿ ಕಿವಿಗಳಿಗೆ ಬಿದ್ದರೆ ದಿಙ್ನಿರ್ಣಯ ಕಷ್ಟವಾಗುತ್ತದೆ. ಆದರೂ ಎರಡು ಕಿವಿಗಳಿಗೆ ತಗಲುವ ಆ ತರಂಗಗಳ ಮಜಲುಗಳಲ್ಲಿ ವ್ಯತ್ಯಾಸವಿರುವದರಿಂದ ದಿಙ್ನಿರ್ಣಯ ಸಾಧ್ಯವಾಗುತ್ತದೆ. ಇದು ಜೊತೆ ಕಿವಿಗಳ ಮಜಲು ಪರಿಣಾಮ. ಒಂದು ಕಡೆ ಕಿವುಡಿದ್ದರೆ ದಿಙ್ನಿರ್ಣಯ ಕಷ್ಟ ಸಾಧ್ಯ. ಹಿಂದಿನ ಅನುಭವದಿಂದ ಶಬ್ದದ ದೂರ ನಿರ್ಣಯ ಸಾಧ್ಯ. ಇದಕ್ಕೆ ಎರಡು ಕಡೆಯ ಮಹಾಮಸ್ತಿಷ್ಕಾರ್ಧಗೋಳಗಳು ನೆಟ್ಟಗಿರಬೇಕು.

ಆಧುನಿಕ ಯುದ್ಧಗಳಲ್ಲಿ ದಿಙ್ನಿರ್ಣಯ ಮುಖ್ಯವಾದುದು. ದಿಙ್ನಿರ್ಣಯ ಯಂತ್ರಗಳಿಂದ ವಿಮಾನ, ಫಿರಂಗಿ, ಜಲಾಂತರ್ಗಾಮಿ ಇತ್ಯಾದಿಗಳ ದಿಕ್ಕು ಕಂಡುಹಿಡಿಯಲಾಗುವುದು. ಗಾಳಿಗಿಂತ ನೀರಲ್ಲೂ ನೀರಿಗಿಂತ ಗಟ್ಟಿಯಾದ ನೆಲದಲ್ಲೂ ಶಬ್ದತರಂಗಗಳು ಹೆಚ್ಚು ದೂರ ಸಾಗುತ್ತವೆ. ಕಾಡಿನಲ್ಲಿ ಜನರು ಕಾಡುಪ್ರಾಣಿಯ ಇರವನ್ನು ನೆಲಕ್ಕೆ ಕಿವಿಗೊಟ್ಟು ಕೇಳುತ್ತಾರೆ.

ಕೇಳಿಕೆ ಹಾಗೂ ಒತ್ತಡದ ಅರಿವಿನ ಮಟ್ಟಗಳು

ಸಹಜ ವಾಯುಭಾರದ ಹತ್ತು ಲಕ್ಷಗಳ ಭಿನ್ನಾಂಶ ಒಂದು ಬಾರ್. ಇದರಲ್ಲಿ ಸಾವಿರದಲ್ಲಿ ಒಂದು ಭಿನ್ನಾಂಶದಷ್ಟು ಶಬ್ದ ತರಂಗಗಳ ಒತ್ತಡವಿದ್ದರೆ ೧೦೦೦ ದಿಂದ ೪೦೦೦ ಆವರ್ತಗಳ ಶಬ್ದಗಳು ಕಿವಿಗೆ ಕೇಳುತ್ತವೆ. ಕೇಳುವ ಶಬ್ದ ಕರ್ಣಪಟಲಕ್ಕೆ ತರುವ ಒತ್ತಡವನ್ನು ಮಾಪ ದೂರವಾಣಿಯಿಂದ ಅಳೆದರೆ ಕೇಳಿಕೆಯ ಮಟ್ಟ ಗೊತ್ತಾಗುತ್ತದೆ. ಶಬ್ದದ ತೀವ್ರತೆಯನ್ನು ಹೆಚ್ಚಿಸುತ್ತಿದ್ದರೆ ಒಂದು ಮಿತಿಯಲ್ಲಿ ಒತ್ತಡದ ಅ ವುಂಟಾಗಿ ಕಿವಿ ನೋಯುತ್ತದೆ. ತೀವ್ರ ಧ್ವನಿ ತಗ್ಗು ಶ್ರುತಿಗಳ ಕಂಪನಸೇರಿದರೆ ಕೆಲ ರಲ್ಲಿ ಅರ್ಧ ಚಕ್ರನಾಳಗಳ ಚೋದನೆಯಿಂದ ತ ಸುತ್ತುತ್ತದೆ. ವಿಮಾನ ಪ್ರಯಾಣದಲ್ಲಿ ಕೆ ವರಿಗೆ ಓಕರಿಕೆ ವಾಂತಿಯಾಗುತ್ತದೆ. ಕಿವಿಗಳಿಗೂ ಹೊಟ್ಟೆ ಅಂಗಗಳಿಗೂ ನರಸಂಬಂಧವಿರುವು ರಿಂದ ಹೀಗಾಗುವುದು. ಹೊರ ಕಿವಿಗೆ ಪಿಚಕಾ ಹೊಡೆಯುವುದರಿಂದ ಕೆಲವರಲ್ಲಿ

ನಿಲ್ಲಬಹುದು. ಹೊರ ಕಿವಿಯ ತುರಿಕೆಯಿಂದ ಕೆಲವರಲ್ಲಿ ಉಬ್ಬಸರೋಗವಿರಬಹುದು. ಸುಮಾರು ೧೦೦೦೦ ಬಾರ್ ಅಂದರೆ ೧ ಚದುರ ಸೆ. ಮೀ. ಸಲೆಯ ಮೇಲೆ ೧ ಗ್ರೈನ್ ತೂಕ ಒತ್ತಡದ ಅರಿವಿನ ಮಟ್ಟ. ಇದಕ್ಕೂ ಕೆಳಕೇಳಿಕೆಯ ಮಟ್ಟಕ್ಕೂ ನಡುವೆ ಶ್ರವಣ ವ್ಯಾಪ್ತಿಯಿದೆ. ವಯಸ್ಸಾದಂತೆ ೧೦೦೦೦ಕ್ಕಿಂತ ಹೆಚ್ಚು ಆವರ್ತಗಳ ಶಬ್ದ ಕೇಳುವುವುದು ಕಷ್ಟ; ಕೆಳಶ್ರುತಿಗಳು ಕೇಳಿಸುತ್ತವೆ.

ಕಿವುಡು (೧) ಸಾಗಾಣಿಕೆ ಕಿವುಡು

ಇದು ಶಬ್ದ ತರಂಗಗಳನ್ನು ಒಳಕಿವಿಗೆ ಸಾಗಿಸುವ ವ್ಯವಸ್ಥೆ ಹದಗೆಟ್ಟಾಗುವ ವಾಯುಮಾಧ್ಯಮ ಶ್ರವಣದ ನ್ಯೂನತೆ. ಇದರಲ್ಲಿ ಅಸ್ಥಿ ಶ್ರವಣವಿದ್ದು ವಾಯು ಮಾಧ್ಯಮ ಶ್ರವಣ ಕುಗ್ಗಿದಂತೆ ಅಸ್ಥಿ ಶ್ರವಣದ ಕಾಲ ಹೆಚ್ಚುತ್ತದೆ. ಒಂದು ಕಿವಿಯಲ್ಲಿ ವಾಯು ಶ್ರವಣವಿಲ್ಲದಾಗ ನಾದಕರಣೆಯನ್ನು ನೆತ್ತಿಯ ಮೇಲಿಟ್ಟಾಗ ಸರಿಯಿರುವ ಕಿವಿಯಲ್ಲಿ ಹೆಚ್ಚು ಕೇಳಿಸುತ್ತದೆ. ಸಾಧಾರಣವಾಗಿ ಒಂದು ವ್ಯಕ್ತಿಯಲ್ಲಿ ಎರಡೂ ಕಿವಿಗಳ ಚುರುಕು ಸಮವಿರುವುದಿಲ್ಲ; ಒಂದು ಕಡೆ ಅರೆಗಿವುಡಿರಬಹುದು. ಪೂರ್ಣ ಕಿವುಡು ಒಂದು ಅಥವಾ ಎರಡೂ ಕಡೆಯಿರಬಹುದು.

(೨) ನರ ಕಿವುಡು

ಇದರಲ್ಲಿ ಅಸ್ಥಿಶ್ರವಣವೂ ಇರುವುದಿಲ್ಲ. ಇದಕ್ಕೆ ಕಾರಣಗಳು: (ಅ) ಕರ್ಣ ಶಂಖದ ಕುಂದು, (ಆ) ಶ್ರವಣನರ ದೌರ್ಬಲ್ಯ ಅಥವಾ ಪೂರ್ಣ ನಾಶ, (ಇ) ಮಿದುಳು ಕಾಂಡದಲ್ಲಿ ಶ್ರವಣ ತಂತುಗಳ ನಾಶ, (ಈ) ಶ್ರವಣ ಕೇಂದ್ರಕ್ಕೆ ಹಾನಿ.

ಕಿವುಡಿಗೆ ಕಾರಣಗಳು

(೧) ನೆಗಡಿಯಾದಾಗ ಕ್ರಿಮಿಯುತ ಕಿವಿ ಗಂಟಲು ನಾಳದ ಮೂಲಕ ಹರಡಿ ನಡುಗಿವಿಯಲ್ಲಿ ಕೀವು ತುಂಬಿ ಕರ್ಣಪಟಲಕ್ಕೆ ತೂತು ಬಿದ್ದು ಬಹು ಕಾಲ ಕಿವಿಯಿಂದ ಕೀವು ಸೋರುತ್ತ ಶ್ರವಣಾಸ್ಥಿಗಳ ಕೀಲುಗಳು ಕಟ್ಟಿಕೊಳ್ಳುವುವು; ಹೀಗಾಗುವುದು ಬಾಲ್ಯದಲ್ಲಿ ಹೆಚ್ಚು, (೨) ಕ್ರಿಮಿಯುತ, ಕಿವಿಮೂಳೆ ಮುರಿತ, ಪೆಟ್ಟಿನ ಹೊಡೆತ, ಸ್ಫೋಟದಿಂದಾದ ಒಳ ರಕ್ತ ಸೋರಿಕೆ ಇತ್ಯಾದಿಗಳಿಂದ ಒಳ ಕಿವಿನಾಶ; (೩) ಹುಟ್ಟು ಕಿವುಡು: ಒಳ ಕಿವಿಯ ಅಪೂರ್ಣವೃದ್ಧಿ ಅಥವಾ ಅವೃದ್ಧಿ; (೪) ಮಿದುಳು ಪೊರೆಗಳ ಕ್ರಿಮಿಯುತ, ಮಂಪ್ಸ್ ಮುಂತಾದ ವೈರಸ್ ರೋಗಗಳು; (೫) ಮದ್ಯ, ಕ್ವಿನೀನ್, ಹೊಗೆಸೊಪ್ಪುಗಳ ದೀರ್ಘಕಾಲದ ಅಮಿತ ಸೇವನೆಯಿಂದ ಶ್ರವಣನರದ ನಾಶ. ಕೆಲವರಲ್ಲಿ ಸ್ಟ್ರೆಪ್ಟೊಮೈಸಿನ್ ಚುಚ್ಚು ಮದ್ದಿನಿಂದ ಕಿವುಡುಂಟಾಗುತ್ತದೆ. (೬) ದೇಹದಲ್ಲಿ ಎಲ್ಲಿಯಾದರೂ ಬಹುಕಾಲ ಕೀವಿರುವುದರಿಂದ ನಂಜಾಗಿ ಒಳ ಕಿವಿ ಕೆಡಬಹುದು; (೭) ಶ್ರವಣ ನರದ ಹಿಡಿಗಂತಿ (ಟ್ಯೂಮರ್) (೮) ಮುಪ್ಪಿನಿಂದ ಮಿದುಳಿನ ನರ ಕಣಗಳು ನಾಶಗೊಂಡು ಅರಳುಮರುಳಾಗಿ ಕಿವುಡುಂಟಾಗಬಹುದು. ರಕ್ತನಾಳ ಭಿತ್ತಿಗಳು ದಪ್ಪವಾಗಿ ರಕ್ತಚಲನೆಗೆ ಅಡ್ಡಿಯಾಗುವುದರಿಂದಲೂ ಮಿದುಳು ಕೇಂದ್ರಗಳು ನಾಶವಾಗಬಹುದು; (೯) ಗದ್ದಲ ಕಿವುಡಿನಲ್ಲಿ ಗದ್ದಲದ ಶ್ರುತಿಗಳು ಕೇಳುವುದಿಲ್ಲ, ಇದು ದೀರ್ಘಕಾಲದ ಗದ್ದಲದಿಂದಾಗುವ ಶ್ರುತಿ ಪೊರೆಯ ಕೆಲವು ತಂತುಗಳನಾಶದಿಂದಾಗುತ್ತದೆ. ಒಳಕಿವಿನಾಶ ಅಥವಾ ನರನಾಶವಾಗಿದ್ದರೆ ಕಿವುಡಿಗೆ ಚಿಕಿತ್ಸೆ ಫಲಿಸದು. ✡

ಮನೋರೋಗಿ: ಸಾಮಾನ್ಯ ಜನರ ಹಾಗೆ ಮುಂದೆ ನಡೆಯುದ ಘಟನೆಗಳ ಬಗೆಗೆ ಚಿಂತಿಸಿದ್ದರೆ ಹಿಂದೆ ಜರುಗಿದ ಘಟನೆಗಳ ಬಗೆಗೆ ಸದಾಕಾಲ ಚಿಂತಿಸುವವನು.

ವಿಮರ್ಶಕ: ಅತಿ ಒಳ್ಳೆಯದರಲ್ಲಿ ಸ್ವಲ್ಪವಾದರೂ ಕೆಟ್ಟದ್ದನ್ನು ಕಾಣುವವನು.

ಹೋಟೆಲು ರೂಮು: ಬ್ರಹ್ಮಚಾರಿಗಳಿಗೆ ಬಂದೀವಾಸ; ಗೃಹಸ್ಥರಿಗೆ ಶಾಂತಿ ಧಾಮ.

ನಗೆಮಲ್ಲಿಗೆ

ಮುಂಬೈ ಬೀದಿಯಲ್ಲಿ ಗೆಳತಿಯರಿಬ್ಬರು ಭೇಟಿಯಾದರು. ಆಕೆ "ಏನೇ, ಆ ಇಂಜನಿಯರ್ ಶ್ಯಾಂ ಜತೆ ನಿನ್ನ ಮದ್ವೆ ನಿಶ್ಚಯ ಆಯ್ತೂಂತ ಕೇಳ್ದೆ. ತುಂಬಾ ಸಂತೋಷ. ಅಂದ್ಹಾಗೆ ಯಾವಾಗ ಮದ್ವೆ?" ಅಂದಳು ಒಂದೇ ಉಸುರಲ್ಲಿ.

"ಆಯ್ತು. ಮುರಿದೂ ಹೋಯ್ತು" ಈಕೆ ಚುಟುಕಾಗಿ ಭಾರವಾದ ಮನಸ್ಸಿನಿಂದ ಹೇಳಿದಳು.

"ಯಾಕೆ?"

"ನಾನು ಪ್ರತಿವರ್ಷ ಡ್ರೆಸ್‌ಡಿಸೈನರ್‌ಗೆ ಎಷ್ಟು ಕೊಡ್ತೀನೀಂತ ಅವರಿಗೆ ಗೊತ್ತಾಗೂತ್ಲೂ ಆಕೇನ್ನೇ ಮದ್ವೆಯಾಗ್ತೀನಿ ಅಂದ್ರು."

*

ರಿಟೈರ್‌ಮೆಂಟಿಗೆ ಬಂದಿರೋ ರಾಜಾರಾಯರು ಸಿಟಿ ಸ್ಟೇಶನ್ನಿನ ಬುಕ್‌ಶಾಪಿನಲ್ಲಿ ಹೊಸದೊಂದು ಪುಸ್ತಕ ಖರೀದಿಸಿದರು. ಮನೆಗೆ ಬಂದು ಮಜವಾಗಿ ಓದುತ್ತ ಮಲಗಿದರು ಮಂಚದ ಮೇಲೆ. ಮನೆಯಾಕೆ ಅದನ್ನು ನೋಡಿದವ್ರೇ ಗುಡುಗಿದರು: "ಯಾಕೆ, ಮತ್ತೊಂದು ಮದ್ವೆಯಾಗೋ ಯೋಚ್ನೇನಾ ನಿಮ್ಗೆ?".

*

ಸಿನೆಮಾ ನಿರ್ದೇಶಕರೊಬ್ಬರಿಗೆ ತಮ್ಮ ಹೆಂಡತಿ ತಾವು ಕೊಟ್ಟ ಸಂತೋಷದ 'ತಂತಿ' ಓದಿಯೂ ಕೆಂಡವಾಗಿ ಶೂಟಿಂಗ್ ನಡೆದಿರೋ ಜಾಗಕ್ಕೆ ಧಾವಿಸಿ ತಮ್ಮ ಮಂತ್ರಪುಷ್ಪ ಮಂಗಳಾರತಿ (ಮುಖಕ್ಕೆ) ಏಕೆ ಮಾಡಿದರೆಂಬುದು ತಿಳಿಯಲೇ ಇಲ್ಲ, ಬಹಳ ಹೊತ್ತು. ಅರ್ಧ ದಿನ ವಿಚಾರ ಮಾಡಿದ ಮೇಲೆ ತಮ್ಮ ತಪ್ಪಿನರಿವು ಆಯಿತು. ಅವರು ಕೊಟ್ಟ ತಂತಿಯಲ್ಲಿ, 'ಬಹಳ ಸುಖವಾಗಿದೀನಿ. ನಿನ್ನ ನೆನಪೂ ಆಗದಷ್ಟು ಸುಖವಾಗಿದೀನಿ' ಅಂತ ಬರೆದದ್ದು.

*

ಗುಂಡೂರಾಯ ಹೆಂಡತಿಯೊಡನೆ ಜಗಳಾಡಿದ. ಬರಿ ಬಾಯಿಂದಲ್ಲ, ಕೈಯಿಂದ ಕೂಡ. ಪರಿಣಾಮ ಆತನ ಬಲಗೈ ಮುರಿಯಿತು. ಆಸ್ಪತ್ರೆಗೆ ಹೋದ. ಬ್ಯಾಂಡೇಜ್ ಮಾಡಿ ಕೋಣೆಯೊಂದರಲ್ಲಿ ಮಲಗಿಸಲಾಯ್ತು.

ಸ್ವಲ್ಪ ಹೊತ್ತಿನ ಮೇಲೆ ಮತ್ತೊಬ್ಬನನ್ನು ಆ ಕೋಣೆಯಲ್ಲೇ ತಂದು ಮಲಗಿಸಲಾಯಿತು. ಎರಡೂ ಕೈಗಳಿಗೂ ಬ್ಯಾಂಡೇಜು ಮಾಡಲಾಗಿತ್ತು. ಗುಂಡೂರಾಯ ಅಂದುಕೊಂಡ: 'ಸದ್ಯ ಅವನ ಹಾಗೆ ನನಗೆ ಇಬ್ಬರು ಹೆಂಡಿರಿಲ್ಲವಲ್ಲ...'

*

ಬಸ್ಸು ಭರ್ತಿಯಾಗಿತ್ತು. ಕಂಡಕ್ಟರ್ ಟಿಕೆಟ್ ಶೀಟ್ ಕ್ಲೋಸ್ ಮಾಡಿಸಿಕೊಂಡು ಬರಡು ಬರಲು ಹೋಗಿದ್ದ. ಅಷ್ಟರಲ್ಲೇ ಧಡೂತಿ ಹೆಂಗಸೊಬ್ಬಳು ಕಷ್ಟಪಟ್ಟು ಬಸ್ಸು ಹತ್ತಿದಳು. ಕೂಡಲು ಜಾಗವಿಲ್ಲ. ಕೂಡದಿದ್ದರೆ ತೊಂದರೆ, ನಿಂತುಕೊಂಡು ಹೋಗುವ ಹಾಗೂ ಇಲ್ಲ. ಎಲ್ಲರನ್ನೂ ನೋಡಿ ಕೇಳಿದಳು. "ಯಾರಾದ್ರೂ ಸ್ವಲ್ಪ ಜಾಗಾ ಬಿಡ್ತೀರಾ?"

ಇಬ್ಬರು ಸದ್ಗೃಹಸ್ಥರು ಎದ್ದು, "ಬನ್ನಿ ಸ್ವಲ್ಪ ಜಾಗಾ ಬಿಡುತ್ತಿದ್ದೇವೆ" ಎಂದರು.

ಆಕೆ ಆ ಸೀಟಿನ ಮೇಲೆ ಕೂತುಕೊಳ್ಳುತ್ತ, "ಇನ್ನೂ ಸ್ವಲ್ಪ ಜಾಗಾ ಇದೆ..." ಅಂದಳು.

*

ಆಕೆ ಗಂಡನಿಗೆ ಹೇಳಿದಳು: "ನೋಡಿ, ಆಫೀಸಿಗೆ ಹೋಗುತ್ಲೂ ನಿಮ್ಮ ಇಲೆಕ್ಟ್ರೀಶಿಯನ್‌ನ ಕಳಿಸಿಕೊಡಿ. ಕಾಲಿಂಗ್ ಬೆಲ್ ಕೆಟ್ಹೋಗಿದೆ. ರಿಪೇರಿ ಮಾಡಬೇಕು."

"ಹೂಂ" ಅಂದ ಸಾಹೇಬರು ಆಫೀಸಿಗೆ ಹೋದರು. ಸಂಜೆ ನಾಲ್ಕಾಯಿತು. ಐದಾಯಿತು. ಆಫೀಸು ಬಿಡುವ ಹೊತ್ತಾ

ಆಯಿತು. ಇಲೆಕ್ಟ್ರೀಶಿಯನ್ ಬರಲೇ ಇಲ್ಲ. ಆಕೆ ಸಿಟ್ಟಿನಿಂದ ಫೋನು ತಿರುವಿದರು. ಯಜಮಾನರಿರಲಿಲ್ಲ. ಇಲೆಕ್ಟ್ರೀಶಿಯನ್ನನ್ನೇ ಕರೆದಳು. ಆತ ಬಂದ. ಈಕೆ ರೇಗಿದಳು. "ಬರಲಿಲ್ಲ ಯಾಕೆ?" ಕೇಳಿದಳು.

"ಬಂದಿದ್ದೆ ಅಮ್ಮಾವ್ರೆ" ಅಂದ ಆತ.

"ಸುಳ್ಳು ಹೇಳ್ತಿಯಾ? ನೀನು ಬಂದೇ ಇಲ್ಲ ಅಂದಳು."

"ಸುಳ್ಳಲ್ಲ ಅಮ್ಮಾವ್ರೆ, ಬಂದೆ. ಎರಡೂವರೆ ಸುಮಾರಿಗೆ. ಮೂರರವರೆಗೂ ಬೆಲ್ ಒತ್ತಿದರೂ ನೀವು ಏಳಲೇ ಇಲ್ಲ. ಹಾಗೇ ಮರಳಿದೆ" ಅಂದ ಆ ಭೂಪ.

*

ಐದು ವರ್ಷದ ಮೊಮ್ಮಗ(ಮಗಳ ಮಗ)ನನ್ನು ಅಜ್ಜನ ಮನೆಗೆ ಕರೆತರಲಾಯಿತು. ಪಾಪ, ತಾಯಿಯಿಂದ ಬಹಳ ದಿನ ದೂರವಿರಲಾರದ ಮಗು ಅಳತೊಡಗಿತು. ಅಜ್ಜ ತನ್ನ ದೂರದೂರಿನ ಮಗಳಿಗೆ ಫೋನು ಹಚ್ಚಿದ. "ಹಲೋ, ಗೌರಿ- ನಿನ್ನ ಮಗಾ ಭಾಳ ಅಳತಾನ. ಅವನ್ನ ಯಾವಾಗ ಕರಕೊಂಡ ಹೋಗ್ತಿ?"

"ಈಗೇನವಸ್ರಾ? ಅವಂಗ ಹದ್ನಾರು ತುಂಬಲಿ ಮತ್ತೆಲ್ಲೂ ಕಳಸೂದುಲ್ಲ" ಎಂದು ಗೌರಮ್ಮ ಫೋನು ಕುಕ್ಕಿಬಿಟ್ಟಳು.

■

ಒಂದು ದಿನ ಭಿಕ್ಷುಕನೊಬ್ಬ ರಸ್ತೆಯಲ್ಲಿ ಮೂರ್ಛೆಹೋಗಿ ಬಿದ್ದ. ಸುತ್ತ ಜನ ಸೇರಿದರು. ತಲೆಗೊಬ್ಬರು ಒಂದೊಂದು ಮಾತಾಡತೊಡಗಿದರು.

"ನೀರು ತಂದ್ಕೊಡಿ... ನೀರು."

"ಗಾಳಿ ಬಿಡಿ-ಗಾಳಿ."

ಆಗ ಶ್ರೀಮಂತ ಮುದುಕಿಯೊಬ್ಬಳು, "ಪಾಪ, ಹೊಟ್ಟೆಗೆ ತಂಪಾದ್ರೆ ಆರಾಮಾಗ್ತದೆ ಕೋಲಾ ತಂದ್ಕೊಡಿ..." ಅಂದಳು.

"ಬ್ಯಾಡ-ನೀರು ಸಾಕು" ಮತ್ತೊಬ್ಬ ಹೇಳಿದ.

"ಕೋಲಾ ತಂದ್ಕೊಡಿ" ಮುದುಕಿಯ ಪುನರುಚ್ಚಾರ.

"ಆಸ್ಪತ್ರೆಗೆ ಸಾಗ್ಸಿ."

"ಬ್ಯಾಡ-ಕೋಲಾ ತಂದ್ಕೊಡಿ" ಮತ್ತೆ ಹೇಳಿದಳು ಮುದುಕಿ. ಹೀಗೇ ವಾದ ಸಾಗಿತು.

ಆಗ. "ಆ ಅಜ್ಜಿಯ ಮಾತಿಗಾದ್ರೂ ಬೆಲೆ ಕೊಡಬಾರ್ದಾ?" ಎಂದು ರೇಗಿ ಎದ್ದು ಕುಳಿತ ಬಿದ್ದ ಭಿಕ್ಷುಕ.

■

'ಬಿಜಿ'ಯಾಗಿರುತ್ತಿದ್ದ ಭೀಮಣ್ಣ ಬೊಂಬಾಯಿಯಿಂದ ಬಮ್ಮನಹಳ್ಳಿಗೆ ಪತ್ರ ಬರೆದ: "ಬೀರಣ್ಣ, ಇಲ್ಲಿ ಭಾಳಾ ಸಂತೋಷವಾಗಿದೀನಿ. ಸ್ವಲ್ಪಾದರೂ ಅವಕಾಶವಿಲ್ಲ. ಬರಿ ಪಾರ್ಟಿಗಳು-ಮೀಟಿಂಗುಗಳು. ಅದ್ದರಿಂದ ಬೇಗ ಬಾ ಸ್ವಲ್ಪವಾದರೂ ಬೇಸರ ಬರುವಂತೆ ಮಾಡು..."

■

ಇಪ್ಪತ್ತರ ತರುಣಿ ಹದಿನೇಳರ ಹುಡುಗಿಯೊಂದಿಗೆ ಮಾತಾಡುತ್ತಿದ್ದಳು.

"ನಿನ್ನ ಹಾಗೆ ಇರೋದೇ ಒಳ್ಳೆಯದು."

"ಯಾಕೆ? ನನಗೂ ನಿನಗೂ ಏನಂತರ? ವಯಸ್ನಲ್ಲಿ ಮೂರೇ ವರ್ಷ ದೊಡ್ಡೋಳು..."

"ಅಂತರ ಇದೆ."

"ಏನು?"

"ನನ್ನಂತೆ ಗಂಡ-ಮಕ್ಕಳ ಜವಾಬ್ದಾರಿ ಇಲ್ದೇ ಇರೋದು."

*

ನಲವತ್ತರ ಕನ್ಯೆ ತನ್ನ ಗೆಳತಿಗೆ, "ನಾನೀಗ ಮದುವೆ ಕಾಣಿಕೆ, ಮಕ್ಕಳಿಗೆ ಹುಟ್ಟಿದ ಹಬ್ಬದ ಕಾಣಿಕೆಗಳನ್ನು ಕಳಿಸೋದು ನಿಲ್ಲಿಸಿಬಿಟ್ಟಿದೀನಿ," ಅಂದಳು.

"ಯಾಕೆ?"

"ಅವು ತಿರುಗಿ ನನಗೆ ಸಿಗೋ ಭರವಸೆ ಕಳಕೊಂಡಿರೋದ್ರಿಂದ."

ನಿಮ್ಮ ಮಕ್ಕಳನ್ನು
ಇದರಿಂದ ರಕ್ಷಿಸಿ

ನಾಯಿಕೆಮ್ಮು

ಡಾ. ಡಿ. ಕೆ. ಮಹಬಲರಾಜು

ಹಸುಳೆಗಳಿಗೆ ಬರುವ ಎಡೆಬಿಡದ ಕೆಮ್ಮು, ಕೆಮ್ಮಿನ ಧ್ವನಿ ನಾಯಿಯ ಬೊಗಳುವಿಕೆಯನ್ನು ಹೋಲುತ್ತದೆ. ಈ ಕೆಮ್ಮಿಗೆ ನಾಯಿ ಕೆಮ್ಮು ಎನ್ನುತ್ತಾರೆ. ಉತ್ತರ ಕರ್ನಾಟಕದಲ್ಲಿ ಕೋಡಿಗೆ ಕೆಮ್ಮು ಎಂದೂ ಹೇಳುತ್ತಾರೆ. ಇಂಗ್ಲೀಷಿನಲ್ಲಿ ಇದಕ್ಕೆ Whooping cough ಎನ್ನಲಾಗುತ್ತದೆ. ಈ ವ್ಯಾಧಿ ಸಾಮಾನ್ಯವಾಗಿ ಮೂರು ವರ್ಷದ ಒಳಗಿನ ಮಕ್ಕಳಿಗೆ ತಗಲುತ್ತದೆ. ಮೂರು ತಿಂಗಳ ಒಳಗಿನ ಹಸುಳೆಗಳಿಗೆ ಬಲು ಬೇಗ ಈ ಕಾಯಿಲೆ ಅಂಟುತ್ತದೆ. ಎಲ್ಲಾ ವಯಸ್ಸಿನವರಿಗೂ ಈ ಕಾಯಿಲೆ ತಗಲುವುದಾದರೂ ಹತ್ತು ವರ್ಷದ ನಂತರ ಮಾತ್ರ ತೀರಾ ವಿರಳ.

ನಾಯಿಕೆಮ್ಮು ಒಂದು ಸಾಂಕ್ರಾಮಿಕ (ಅಂಟು) ರೋಗ. ಹೀಮೋಫಿಲಿಸ್ ಪರ್ಟುಸಿಸ್ ಎಂಬ ರೋಗಾಣುಗಳು ಇದಕ್ಕೆ ಕಾರಣ. ರೋಗಿಯು ಕೆಮ್ಮಿದಾಗ ದೊಡ್ಡ ಸಂಖ್ಯೆಯಲ್ಲಿ ರೋಗಾಣುಗಳು ಗಾಳಿಗೆ ಸೇರುತ್ತವೆ. ಆರೋಗ್ಯವಂತ ಮಕ್ಕಳು ಈ ಗಾಳಿಯನ್ನು ಸೇವಿಸಿದಾಗ ಅವರಿಗೂ ಈ ರೋಗ ತಗಲುತ್ತದೆ. ಕೊಳಚೆ ಪ್ರದೇಶದಲ್ಲಿ ವಾಸಿಸುವ ಮಕ್ಕಳು ಬಲು ಬೇಗ ಈ ವ್ಯಾಧಿಗೆ ತುತ್ತಾಗುತ್ತಾರೆ. ಮಕ್ಕಳು ಆಡುವಾಗ. ಶಾಲೆಗಳಲ್ಲಿ. ಈ ಕಾಯಿಲೆ ಬಲು ಬೇಗ ಒಬ್ಬರಿಂದ ಒಬ್ಬರಿಗೆ ಅಂಟಿಕೊಳ್ಳುತ್ತದೆ.

ನಾಯಿಕೆಮ್ಮು ಮುಖ್ಯವಾಗಿ ಶ್ವಾಸಕೋಶದ ಕಾಯಿಲೆ. ರೋಗಾಣುಗಳು ಶ್ವಾಸನಾಳದಲ್ಲೂ ಶ್ವಾಸಕೋಶದಲ್ಲೂ ಅಧಿಕ ಸಂಖ್ಯೆಯಲ್ಲಿ ಬೆಳೆಯುತ್ತವೆ. ಬಾರ್ಡೆಟ್ ಮತ್ತು ಗೆಂಗು ಎಂಬ ವಿಜ್ಞಾನಿಗಳು ೧೯೦೬ರಲ್ಲಿ ಈ ರೋಗಾಣುಗಳನ್ನು ಕಂಡುಹಿಡಿದರು.

ರೋಗ ಲಕ್ಷಣ


ರೋಗಾಣುಗಳು ಶ್ವಾಸಕೋಶ ಸೇರಿದ ವೇಳೆಯಿಂದ ಹತ್ತು ದಿನಗಳೊಳಗೆ ಮಗು ಸಣ್ಣದಾಗಿ ಕೆಮ್ಮಲು ಪ್ರಾರಂಭಿಸುತ್ತದೆ. ಸ್ವಲ್ಪ ಸ್ವಲ್ಪ ಜ್ವರವೂ ಬರುತ್ತಿರುತ್ತದೆ. ಈ ಅವಧಿಯಲ್ಲಿ ತಾಯಂದಿರು ಶೀತದಿಂದ ಹೀಗಾಗಿರಬಹುದೆಂದು ಅಲಕ್ಷಿಸುವುದು ಸರ್ವೇಸಾಮಾನ್ಯ. ದಿನೇ ದಿನೇ ಕೆಮ್ಮು ಹೆಚ್ಚುತ್ತಾ ಹೋಗುತ್ತದೆ.

ಜ್ವರ ಏರುತ್ತದೆ. ಹಗಲಿಗಿಂತ ಸಂಜೆ ಮತ್ತು ರಾತ್ರಿ ಕೆಮ್ಮು ಹೆಚ್ಚಾಗಿ ತೋರುತ್ತದೆ. ಮಕ್ಕಳು ಉಸಿರುಗಟ್ಟಿ ಕೆಮ್ಮಲು ಪ್ರಾರಂಭಿಸುತ್ತಾರೆ. ಈಗ ಕೆಮ್ಮಿನ ಧ್ವನಿ ಸ್ವಲ್ಪ ನಾಯಿಯ ಬೊಗಳುವಿಕೆಯನ್ನು ಹೋಲುತ್ತದೆ. ಕೆಮ್ಮಿ ಕೆಮ್ಮಿ ಶ್ವಾಸಕೋಶದ ಗಾಳಿಯೆಲ್ಲಾ ಖಾಲಿಯಾದ ನಂತರ ಮಗು ದೀರ್ಘ ಶ್ವಾಸವನ್ನು ಎಳೆದುಕೊಳ್ಳುತ್ತದೆ. ಈ ಧ್ವನಿ ಕೊಳವೆಯಲ್ಲಿ ಗಾಳಿಯೂದಿದರೆ ಬರುವಂತಹ ಧ್ವನಿಯಂತಿರುತ್ತದೆ. ಕೆಮ್ಮು ಹೆಚ್ಚಾಗಿ ಮಗು ವಾಂತಿ ಮಾಡಲು ಪ್ರಾರಂಭಿಸುತ್ತದೆ. ಆಹಾರ ನಿದ್ರೆಯನ್ನು ತೊರೆದು ಹಗಲು ರಾತ್ರಿ ಎನ್ನದೇ ಕೆಮ್ಮು ವಾಂತಿಯ ತೊಂದರೆಯಿಂದ ಕೊರಗುತ್ತದೆ. ಈ ಅವಧಿಯಲ್ಲಿ ಮಕ್ಕಳು ಗಾಳಿಗಾಗಿ ಬಾಯಿ ತೆರೆದುಕೊಂಡೇ ಇರುತ್ತವೆ. ನಾಲಿಗೆ ಹೊರಚಾಚಿರುತ್ತದೆ. ಕಣ್ಣು ಗುಡ್ಡೆ ಹೊರಗೆ ಉಬ್ಬುತ್ತವೆ. ಕಣ್ಣಲ್ಲಿ ನೀರು ಬರುತ್ತಿರುತ್ತದೆ. ಕುತ್ತಿಗೆಯ ನರಗಳು ಉಬ್ಬಿ ಮುಖ ನೀಲಿ ಬಣ್ಣಕ್ಕೆ ತಿರುಗುತ್ತದೆ. ಮಗು ಹೆಚ್ಚಾಗಿ ಬೆವರುತ್ತದೆ. ಮೂಗಿನಿಂದ ಸಿಂಬಳ, ಬಾಯಿಂದ ಜೊಲ್ಲು ಹೊರಬರುತ್ತಿರುತ್ತದೆ. ಒಮ್ಮೊಮ್ಮೆ ಕೆಮ್ಮುವಾಗ ಮಕ್ಕಳು ಉಚ್ಚೆ ಹೊಯ್ದುಕೊಳ್ಳುವುದು, ಭೇದಿಮಾಡಿಕೊಳ್ಳುವುದು, ನಾಲಿಗೆ ಕಚ್ಚಿಕೊಳ್ಳುವುದು ಸಾಮಾನ್ಯ.

ದುಷ್ಪರಿಣಾಮಗಳು

ಕೆಮ್ಮು ಅಧಿಕವಾಗಿದ್ದಾಗ ಕಣ್ಣಿನೊಳಗೆ ರಕ್ತಸ್ರಾವವಾಗುತ್ತದೆ. ಕಿವಿಯ ತಮಟೆ ಹರಿಯುತ್ತದೆ. ಮೂಗು ಬಿಚ್ಚಿ ರಕ್ತಸ್ರಾವವಾಗುತ್ತದೆ. ಶ್ವಾಸಕೋಶದ ನ್ಯುಮೋನಿಯ, ಶ್ವಾಸನಾಳದ ಉರಿಯೂತ ಉಂಟಾಗುತ್ತದೆ. ಶ್ವಾಸಕೋಶಗಳಲ್ಲಿ ಗಾಳಿ ಹೋಗಿ ಬರಲು ತಡೆಯುಂಟಾಗಿ ಶ್ವಾಸಕೋಶ ಕುಸಿಯುತ್ತದೆ. ಆಗ ಶ್ವಾಸಕೋಶದ ಆ ಭಾಗ ನಾಶವಾಗುತ್ತಾ ಹೋಗುತ್ತದೆ. ಶ್ವಾಸಕೋಶದ ಹೊರ ಆವರಣದೊಳಗೆ ಗಾಳಿ, ನೀರು ಅಥವಾ ಕೀವು ತುಂಬಿಕೊಳ್ಳಬಹುದು. ಶ್ವಾಸನಾಳಗಳು ಅಗಲವಾಗುತ್ತವೆ. ಹೃದಯ ನಿಃಶಕ್ತಗೊಂಡು ಬಲಭಾಗದ ಹೃದಯ (ಹೃತ್ಕುಕ್ಷಿ) ದೊಡ್ಡದಾಗುತ್ತದೆ. ಗುದನಾಳ ಗುದದ್ವಾರದಿಂದ ಹೊರಚಾಚುತ್ತದೆ. ನಾಲಿಗೆಯನ್ನು ಕಚ್ಚಿಕೊಳ್ಳುವುದರಿಂದ ಹುಣ್ಣಾಗುತ್ತದೆ. ಒಮ್ಮೊಮ್ಮೆ ಮಕ್ಕಳಿಗೆ ಸೆಟೆ ರೋಗ ತಗಲುತ್ತದೆ. ಬುದ್ಧಿಮಾಂದ್ಯ, ದೃಷ್ಟಿ ವ್ಯತ್ಯಾಸ, ಕಿವುಡು ಉಂಟಾಗುತ್ತವೆ. ಮೆದುಳಿನಲ್ಲಿ ರಕ್ತಸ್ರಾವವಾದಲ್ಲಿ ಶಾಶ್ವತವಾಗಿ ಇಲ್ಲವೇ ತಾತ್ಕಾಲಿಕವಾಗಿ ಲಕ್ವ ಹೊಡೆದು ಕೈಕಾಲುಗಳು ಉಪಯೋಗಕ್ಕೆ ಬಾರದಂತಾಗುತ್ತವೆ. ಹೊಟ್ಟೆಯ ಕರಳು ಹೊರಬರಲು ಪ್ರಯತ್ನಿಸುವುದರಿಂದ ಹರ್ನಿಯಾ ಉಂಟಾಗುತ್ತದೆ.

ಸಾಮಾನ್ಯವಾಗಿ ಈ ಕೆಮ್ಮು ಒಮ್ಮೊಮ್ಮೆ ಮಕ್ಕಳ ಜೀವಕ್ಕೆ ಅಥವಾ ದೇಹಕ್ಕೆ ಅಪಾಯ ಒಡ್ಡುವುದು. ವಯಸ್ಸಾದ ನಂತರವೂ ನರಳಬೇಕಾದಂತೆ ಕಿವುಡು, ಸೆಟೆರೋಗ, ಲಕ್ವ, ಹೃದಯದ ಶಕ್ತಿಹೀನತೆ, ಗುದನಾಳ ಇಳಿ ಬೀಳು



ವುದು, ಶ್ವಾಸಕೋಶ ನಶಿಸಿಹೋಗುವುದು. ಮುಂತಾದ ತೊಂದರೆಗಳಿರುವುದರಿಂದ ಈ ನಾಯಿ ಕೆಮ್ಮನ್ನು ಅಲಕ್ಷಿಸುವುದು ಬಹಳ ಅಪಾಯ ಕರ.

ಮೂಢನಂಬಿಕೆ

ನಾಯಿಕೆಮ್ಮು ಒಂದು ಅಂಟುರೋಗವೆಂದು ಓಂದೆಯೆ ಹೇಳಿದೆ. ನಮ್ಮಲ್ಲಿ ಅಂಟು ಜಾಡ್ಯಗಳು ದೇವತೆಗಳು ಮುನಿಸಿಕೊಂಡಾಗ, ದೆವ್ವ ಭೂತ ಪೀಡೆ, ಪಿಶಾಚಿಗಳಿಂದ ಬರುತ್ತವೆ ಎಂಬ ನಂಬಿಕೆ ಇನ್ನೂ ಇರುವುದರಿಂದ ಹಳ್ಳಿಗಳಲ್ಲಿ ವ್ಯಾಧಿ ಅಧಿಕ ವಾದರೂ ಇಂಥ ಮಕ್ಕಳಿಗೆ ಔಷಧೋಪಚಾರ ನೀಡದೇ ದೇವರು, ದೆವ್ವಕ್ಕೆ ಮೊರೆ ಹೋಗಿ ಮಕ್ಕಳನ್ನು ಬಲಿ ಕೊಡುತ್ತಾರೆ. ವೈದ್ಯಕೀಯ ವಿಜ್ಞಾನದ ಬೆಳವಣಿಗೆಯಿಂದ ಅನೇಕ ರೋಗಗಳು ಹೇಳ ಹೆಸರಿಲ್ಲದಂತೆ ಅಳಿಸಿವೆ. ಸಾಂಕ್ರಾಮಿಕ ರೋಗಗಳಿಂದ ಉಂಟಾಗುವ ಸಾವಿನ ಪ್ರಮಾಣ ತೀರ ಇಳಿಮುಖವಾಗಿದೆ. ಸಾಕಷ್ಟು ಕೋಳಿ, ಕುರಿ ಬಲಿ ಯಜ್ಞ ಹೋಮಗಳಿಗೆ ಜಗ್ಗದೇ ಕುಣಿದ ಮಾರಿಯಮ್ಮ (ಸಿಡುಬು) ಇಂದು ಎಡ್ವರ್ಡ್ ಜನ್ನರ್ ಲಸಿಕೆಯಿಂದ ತೆಪ್ಪಗಾಗಿದ್ದಾಳೆ. ಇದು ವೈದ್ಯಕೀಯ ವಿಜ್ಞಾನದ ದಿಗ್ವಿಜಯದ ಪ್ರಥಮ ಹೆಜ್ಜೆ.

ಚಿಕಿತ್ಸೆ

ನಾಯಿಕೆಮ್ಮಿನ ಮಕ್ಕಳನ್ನು ಅಲಕ್ಷಿಸದೆ ಆಸ್ಪತ್ರೆಗೆ ಸೇರಿಸಬೇಕು. ಮಗುವಿಗೆ ವಿಶ್ರಾಂತಿ ಬಹಳ ಮುಖ್ಯ. ವಾಂತಿಯಾಗುವುದರಿಂದ ತೆಳುವಾದ ಆಹಾರಗಳನ್ನು (ಹಾಲು, ಗಂಜಿ, ಎಳನೀರು) ಆಗಾಗ್ಗೆ ಸ್ವಲ್ಪ ಸ್ವಲ್ಪ ಕೊಡಬೇಕು. ಕೆಲವೊಮ್ಮೆ ರಕ್ತನಾಳದ ಮೂಲಕ ಗ್ಲೂಕೋಸ್ ಕೊಡಬೇಕಾಗುತ್ತದೆ. ಪ್ರಾಣವಾಯುವಿನ ಅವಶ್ಯಕತೆಯೂ ಬೀಳಬಹುದು. ಜೀವಾಣುಗಳನ್ನು ಕೊಲ್ಲಲು ಪ್ರತಿಜೈವಿಕಗಳನ್ನು ಕೊಡುತ್ತಾರೆ. ಇದನ್ನು ಕೊಡಲು ಪ್ರಾರಂಭಿಸಿದ ನಂತರ ರೋಗಾಣುಗಳು ಕೊಲ್ಲಲ್ಪಟ್ಟು ರೋಗ ಆಶ್ಚರ್ಯಕರ ರೀತಿಯಲ್ಲಿ ಮಾಯವಾಗುತ್ತದೆ. ಕೆಲವೊಮ್ಮೆ ಕೆಮ್ಮು ನಿಲ್ಲುವ ಹಾಗೂ ನಿದ್ರೆ ತರುವ ಮಾತ್ರೆಗಳ ಅವಶ್ಯಕತೆಯೂ ಇದೆ. ಒಮ್ಮೆ ನಾಯಿಕೆಮ್ಮು ಬಂದು ವಾಸಿಯಾದರೆ ಜೀವಮಾನದಲ್ಲಿ ಮತ್ತೊಂದೂ ಬರುವುದಿಲ್ಲ. ರೋಗದ ಅವಧಿಯಲ್ಲಿ ಮಕ್ಕಳನ್ನು ಇತರೇ ಮಕ್ಕಳಿಂದ ದೂರವಿರಿಸುವುದು ಅಗತ್ಯ.

ನಿವಾರಣೆ

ರೋಗ ಬಂದ ನಂತರ ನಿವಾರಿಸುವುದಕ್ಕಿಂತ ರೋಗ ಬಾರದಂತೆ ತಡೆಗಟ್ಟುವುದು ಬಹಳ ಮುಖ್ಯ. ಅದಕ್ಕಾಗಿ ನಾಯಿಕೆಮ್ಮಿನ ಲಸಿಕೆಗಳಿವೆ. ಇದನ್ನು ಮಗು ಮೂರು ತಿಂಗಳದಿದ್ದಾಗ ಒಂದು ಸಿ.ಸಿ.ಯಷ್ಟು ಕೊಡುತ್ತಾರೆ. ನಂತರ ನಾಲ್ಕು ಹಾಗು ಐದನೇ ತಿಂಗಳಲ್ಲಿ ಒಂದೊಂದು ಬಾರಿ, ಒಟ್ಟಿಗೆ ಮೂರು ಇಂಜೆಕ್ಷನ್ ಕೊಡಿಸಬೇಕು. ನಂತರ ಎರಡು ಅಥವಾ ಮೂರು ವರ್ಷಕೊಮ್ಮೆಯಂತೆ ಮಗು ಹತ್ತು ವರ್ಷದ್ದಾಗುವವರೆಗೆ ಕೊಡಬೇಕು. ಇಂಜೆಕ್ಷನ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಲು ಈಗ ನಾಯಿಕೆಮ್ಮಿನ ಲಸಿಕೆಯೊಂದಿಗೆ ಡಿಫ್ತೀರಿಯ ಮತ್ತು ಸೆಟೆರೋಗದ ಲಸಿಕೆಯನ್ನೂ ಸೇರಿಸಿ ತಯಾರಿಸಿದ (D. P. T.) ಲಸಿಕೆಗಳು ದೊರೆಯುತ್ತಿವೆ. ಒಟ್ಟಿಗೆ ಮುಂಜಾಗ್ರತೆಯಿಂದ ಮಕ್ಕಳಿಗೆ ಲಸಿಕೆ ಹಾಕಿಸುವುದು ಅಗತ್ಯ. ✡

ಊರೊಳಗೊಬ್ಬ ದೇವ, ಮಡುವಿನಲೊಬ್ಬ ದೇವ,
ಅಡವಿಯಲೊಬ್ಬ ದೇವ, ಮಡಿಲಲೊಬ್ಬ ದೇವ.
ನೀರು ನೀರ ಕೂಡಿ, ಬಯಲು ಬಯಲ ಕೂಡಿ,
ನರನೆಂಬ ದೇವ ತಾ ನಿರಾಳವೊ!
ಲಿಂಗವೆಂಬುದು ಅನಂತ ಹೆಸರು,
ಗುಹೇಶ್ವರನೆಂಬುದದೇನೊ?

– ಅಲ್ಲಮಪ್ರಭು

ಬಿಸ್ರಾ ಗಾದೆಗಳು

ಓಟಿಗೆ ನಿಂತಾಗ ಇಲಿ; ಗೆದ್ದಮೇಲೆ ಹುಲಿ.

* * *

ಪರೀಕ್ಷೆಗೆ ಕೂಡದೇನೆ ಫಸ್ಟ್ ಕ್ಲಾಸು ಪಡೆದ.

* * *

ಜಾತ್ಯತೀತ ರಾಷ್ಟ್ರದಲ್ಲಿ ಜಾತಿಗೆ ಮನ್ನಣೆ ಕೊಟ್ಟ ಹಾಗೆ.

* * *

ಸ್ವದೇಶದಲ್ಲೂ ಹೆಂಡತಿ; ಪರದೇಶದಲ್ಲೂ ಹೆಂಡತಿ.

* * *

ಹೊಸಲು ದಾಟದ ಹೆಣ್ಣಿಗೆ ಪಾರ್ಕಾದರೇನು, ಹೋಟಲಾದರೇನು ?

* * *

ಪುಢಾರಿ ಮಂತ್ರೀನ್ನ ಆಡಿಸಿದ ಹಾಗೆ.

* * *

ಪೆನ್ಸಿಲಿನ್ ಅಂತ ಕೊಟ್ಟು ಪ್ರಾಣ ಕಳೆದ.

* * *

ಉಗುರುಸುತ್ತಿಗೂ ಆಪರೇಷನ್ ಮಾಡಿದಹಾಗೆ.

* * *

ಅಯೋಗ್ಯರಿಗೆ ಅಧಿಕಾರ; ಅಪಾತ್ರರಿಗೆ ದಾನ.

* * *

ಎಲ್ಲಿ ನೋಡಿದರೂ ಹೋಟಲು; ಎಲ್ಲಿ ನೋಡಿದರೂ ಸಿನಿಮಾ.

* * *

ಭೂಕಂಪ ಆದಮೇಲೆ ಬಾನುಲೀಲಿ ಎಚ್ಚರಿಸಿದಹಾಗೆ.

* * *

ಸರಕಾರಿ ಬಸ್ಸು ಸಾರ್ವಜನಿಕರ ಕಕ್ಕಸ ನೋಡೋರು ಯಾರು ?

* * *

ಪಾಠ ಹೇಳೋಕೆ ಬರದೆ ಇರೋನು ಪ್ರೊಫೆಸರಾದ.

* * *

ಮಂಕು ಬಡ್ಡಿ ಮಕ್ಕಳು ಮನ್ನಣೆ ಪಡೆದ ಹಾಗೆ

* * *

ಮಕ್ಕಳ ಮಾತು ನಂಬುವಂತಿಲ್ಲ; ಮಂತ್ರೀ ಮಾತೂ ನಂಬುವಂತಿಲ್ಲ.

ಬಿ. ಎಸ್. ರಾಮಾಚಾರ್ ಗುಡಿಬಂಡೆ

272-11

ಒಂದು ಶರತ್ಕಾಲದ ರಾತ್ರಿ

ಮೂಲ : ಮ್ಯಾಕ್ಸಿಂ ಗಾರ್ಕಿ
ಕನ್ನಡಕ್ಕೆ : ಎಚ್. ಎಸ್. ಶ್ರೀಪಾದಭಟ್ಟ

ಒಮ್ಮೆ ಶರತ್ಕಾಲದಲ್ಲಿ ನಾನು ಯಾತನೆಯ ರಾತ್ರಿಯೊಂದನ್ನು ಕಳೆದೆ. ಆಗಷ್ಟೇ ನಾನು ಆ ಪಟ್ಟಣಕ್ಕೆ ಬಂದಿಳಿದಿದ್ದೆ. ಅಪರಿಚಿತರ ನಡುವೆ, ಜೇಬಿನಲ್ಲಿ ಒಂದು ಕೊಪೆಕ್* ಕೂಡಾ ಇಲ್ಲದೇ ಹಾಗೇ ಸಾಗಿದ್ದೆ. ಒಂದೆರಡು ದಿನ ನನ್ನ ಬಳಿಯಿದ್ದ ಬಟ್ಟೆಗಳನ್ನು ಮಾರಿ ಹೊಟ್ಟೆ ತುಂಬಿಕೊಂಡೆ. ಆದರೆ ಅದೂ ಅಸಾಧ್ಯ ಅನ್ನಿಸಿದಾಗ, ಅನಿವಾರ್ಯವಾಗಿ, ಪಟ್ಟಣದಿಂದ ಅನತಿದೂರದಲ್ಲಿದ್ದ ಆವಿಬೋಟು ಗಳ ಬಂದರು ಯೇಸ್ಟ್ ಎಂಬಲ್ಲಿಗೆ ಹೋದೆ. ಅಬ್ಬಾ, ಅದೊಂದು ಪ್ರಯಾಸಕರ ಸ್ಥಳ. ಮರು ಭೂಮಿಯ ನೀರವತೆಯನ್ನು ಮೀರಿಸುವಷ್ಟು ಶಾಂತವಾಗಿದ್ದ ಪ್ರದೇಶ ಅದು.

ಹಸಿದ ಹೊಟ್ಟೆಯನ್ನು ತಣಿಸುವ ಹಂಬಲು ಹೊತ್ತು, ದಾರಿಯುದ್ದಕ್ಕೂ ಕಾಲೆಳೆದು, ಆಹಾರ ಎಲ್ಲಿಯಾದರೂ ಕಾಣುತ್ತದೆಯೇ ಎಂದು ಪರೀಕ್ಷಿಸುತ್ತ ನಡೆದಿದ್ದೆ. ಮರುಳುಗಾಡಿನ ಮನೆಗಳು ಮತ್ತು ಉಗ್ರಾಣಗಳ ಸಾಲಿನಲ್ಲಿ ಹೊಟ್ಟೆ ತುಂಬಿಸುವ [illegible] ಊಟ ಮಾಡಿಕೊಂಡು ಹೊಟ್ಟೆ [illegible]ತ್ತಿದ್ದೆ.

ಸಂಜೆ ಸಮೀಪಿಸುತ್ತಿದ್ದ ಹಾಗೆ, ರಭಸದ ಗಾಳಿಯೊಡನೆ [illegible] ಮಳೆ ಬೀಳತೊಡಗಿತು. [illegible] ಮೋಡಗಳು. [illegible] ನುಗ್ಗತೊಡಗಿತು. ಪ್ರವಾ[illegible] ಕಿಟಕಿಯ ಗಾಜುಗಳು ಗಾಳಿಗೆ ಬಡಿದುಕೊಂಡು ಒಡೆದು [illegible]ತೊಡಗಿದವು. [illegible] ಯಲ್ಲಿ ಪೂರವಾಗಿ ಹಂದು, ನೊರೆ-[illegible] ತೆರೆಗಳೊಂದಿಗೆ ಮರಳ ದಡೆಗಪ್ಪಳಿಸಿ [illegible]ಗಿತು. ಮಳೆ-ಮಳೆ. [illegible] ಗೋಳೆ. ಭಯಂಕರ ಕತ್ತಲೆ. [illegible] ನೀರತೊರೆ. [illegible] ಮುಂದೊಂದು ತರೆ ಕೆಳಗಾಗಿ [illegible] ದೋಣಿ ಕಾಣಿಸಿತು ಮಸುಮಸುಕಾಗಿ. ದಾರಿಗಡ್ಡಲಾಗಿ ಬಿದ್ದುಕೊಂಡ ದೋಣಿ. ನನ್ನಂತೆ ಒಂಟಿಯಾಗಿ, ಅನಾಥವಾಗಿ ಬಿದ್ದುಕೊಂಡಿದೆ. ನನಗೂ ಅದರಂತೆ ಒಮ್ಮೆ ಶೀತಲ ಸಾವು ಬರುವುದು.......

ಆಗ ನನಗಿನ್ನೂ ಹದಿನೆಂಟು ವರ್ಷ. ಒಳ್ಳೆಯ

* ಎರಡು ಪೈಸೆ ಬೆಲೆಯ ರಶಿಯನ್ ನಾಣ್ಯ.



ಕಾಲ! ಆಶೆಗಳ ವಯಸ್ಸು. ತೋಯ್ದುಹೋದ ಮರಳಿನ ಮೇಲೆ ನಾನು ನಡೆಯುತ್ತಿದ್ದಂತೇ ನನ್ನ 'ಹರಟೆಯ ಹಲ್ಲುಗಳು' ಥಂಡಿ ಮತ್ತು ಹಸಿವಿನಿಂದ ಕಂಗೆಟ್ಟು ಉಲಿಯತೊಡಗಿದವು. ಹೊಟ್ಟೆಗೊಂದಿಷ್ಟು ತುಂಬಲು ಏನಾದರೂ ಸಿಗುವುದೇ ಎಂದು ಮೈಯೆಲ್ಲಾ ಕಣ್ಣಾಗಿ ಹೊರಟಾಗ ಎದುರಿಗೆ ನೆಲಕ್ಕೆ ಬಾಗಿದ ಹೆಂಗಸಿನ ಆಕೃತಿ! ಸೂಕ್ಷ್ಮವಾಗಿ ನೋಡಿದೆ. ಹೌದು, ಅವಳೊಬ್ಬ ಹೆಂಗಸು. ವಸ್ತ್ರವೆಲ್ಲಾ ಒದ್ದೆಯಾಗಿ ದುಂಡು ಮೈ ತಬ್ಬಿಕೊಂಡುಬಿಟ್ಟಿತ್ತು. ಏನು ಮಾಡುತ್ತಿರಬಹುದು? ನೋಡಿದೆ. ತನ್ನ ಸುಕೋಮಲ ಕೈಗಳಿಂದ ಮರಳ ಕಂದರದೊಳಗೆ ಏನೋ ಅಗೆಯುತ್ತಿರುವಂತೆ ಕಂಡಿತು. ಆ ಮೂಕಿಯ ಹಿಂದೆ

ಸಮೀಪಿಸಿದೆ. ಬಾಗಿ, "ಏನು ಮಾಡುತ್ತಿದ್ದೀ?" ಎಂದು ಕೇಳಿದೆ.

ಗಾಬರಿಯಾಗಿ ಚೀರಿ, ನನ್ನತ್ತ ನೋಡಿ, ಮತ್ತೆ ಮೊಳಕಾಲುಗಳ ಮೇಲೆ ಮಸ್ತಕವಿಟ್ಟು ಕುಳಿತುಕೊಂಡಳು. ಅವಳ ಬೂದುಕಣ್ಣುಗಳ ಆಲಿಯಲ್ಲಿನ್ನೂ ಭಯ ತುಂಬಿತ್ತು. ನನ್ನ ವಯಸ್ಸಿನವಳೇ. ಸುಂದರವಾದ ಮುಖ. ಆದರೆ ನತದೃಷ್ಟೆ ಅನ್ನುವಂಥ ಮೂರು ನೀಲಿ ಮಚ್ಚೆಗಳು ಎರಡು ಕಣ್ಣುಗಳ ಕೆಳಗೆ. ಮತ್ತೊಂದು ಸ್ವಲ್ಪ ದೊಡ್ಡದು, ಮೂಗಿನ ನೇರಕ್ಕೆ ಹಣೆಯ ಮಧ್ಯದಲ್ಲಿ. ಬಾಪ್‌ರೆ, ಕಲಾಕಾರನೊಬ್ಬ ಮಾನವ ಮುಖಲಕ್ಷಣ ಶಾಸ್ತ್ರವನ್ನೇ ಸುಳ್ಳಾಗಿಸಿ ಚಿತ್ರಿಸಿದಂಥ ಕಲೆಗಳು.

ಕ್ಷಣಗಳೆರಡು ಉರುಳಿದವು. ಆಕೆಯ ಬಟ್ಟಲು



ಗಣ್ಣುಗಳಲ್ಲಿದ್ದ ಭೀತಿ ಮಾಯವಾಯಿತು. ಕೈಗಳಿಂದ ಮತ್ತೆ ಮರಳನ್ನು ಅಗೆದು, ಅದೇ ಕೈಯಿಂದ ತಲೆಗೆ ಕಟ್ಟಿದ್ದ ನೂಲಿನ ಮಫ್ಲರನ್ನು ಸರಿಮಾಡಿಕೊಂಡು ನಡಗುವ ಧ್ವನಿಯಲ್ಲಿ ಕೇಳಿದಳು.

"ನಿನಗೂ ಹಸಿವೆಯೆ? ಹಾಗಿದ್ದರೆ ಹುಡುಕು. ನನ್ನ ಕೈಗಳು ಸೋತುಹೋಗಿವೆ. ಆದೋ ಅಲ್ಲಿ–ಕಂದಕದೊಳಗೆ...ಅಲ್ಲಿ ಖಂಡಿತವಾಗಿ ತಿನ್ನಲು ರೊಟ್ಟಿಗಳು ಸಿಗುತ್ತವೆ... ಸಾಸೇಜುಗಳೂ..."

ನಾನು ಕೂಡಲೇ ಅಗೆಯಲು ಪ್ರಾರಂಭಿಸಿದೆ. ಸ್ವಲ್ಪ ಸಮಯದ ನಂತರ ಅವಳು ನನ್ನ ಹಿಂದೆ ಕುಳಿತು ಅಗೆಯಲು ಸಹಾಯ ಮಾಡತೊಡಗಿದಳು. ಎಷ್ಟೋ ಸಮಯ ಹಾಗೆಯೇ ಹುಡುಕಿದೆವು ನನಗಂತೂ ಆಗ ಬೇರಾವುದೂ ಈ ಜಗತ್ತಿನಲ್ಲಿ ನಾನು ಮಾಡಬೇಕಾದ್ದೇನೂ ಇಲ್ಲವೆಂಬಷ್ಟು ತಲ್ಲೀನತೆ ಉಂಟಾಗಿತ್ತು ಅಗೆಯುವಿಕೆಯಲ್ಲಿ.

ಕತ್ತಲು ಹೆಚ್ಚತೊಡಗಿತು. ನಮ್ಮ ಸುತ್ತಮುತ್ತ ಮಂಜುಗೋಡೆಯೇರತೊಡಗಿತು. ಮಾಳಿಗೆಗಳ ಹಲಗೆಗಳ ಮೇಲೆ ಬೀಳುವ ಹಿಮದ ಶಬ್ದ ಭಯಂಕರವಾಗಿತ್ತು. ಎಲ್ಲಿಂದಲೋ ರಾತ್ರಿ ಕಾವಲುಕಾರನ ಕೂಗು ಕಿವಿಗೆ ಬಿತ್ತು.

"ಇದಕ್ಕೆ ತಳ ಇದೆಯೊ...?" ಆಕೆ ರಾಗವೆಳೆದಳು.

ನನಗರ್ಥವಾಗಿದ್ದರೆ ಉತ್ತರ ಕೊಟ್ಟು ಬಿಡಬಹುದಿತ್ತು ಹೊತ್ತಾಗುತ್ತಿತ್ತೋ ಏನೋ. ನನ್ನ ಮೌನದಿಂದಾಗಿ ಆತಂಕಗೊಂಡು ಆಕೆ, "ಈ ಮಂಕರಿಗೆ ತಳಬುಡ ಇಲ್ಲವೇ? ಹಾಗೇನಾದರೂ ಇದ್ದರೆ ಅದನ್ನೇ

ಒಡೆದರಾಯಿತು. ಏಷ್ಟಂತ [illegible] ತೋರುವುದು? ಬೇಗವೊಡೆದರೆ ಸಾಕು..."

ಒಳ್ಳೊಳ್ಳೆ ವಿಚಾರಗಳು ಅಪರೂಪಕ್ಕೊಮ್ಮೆ ಹೆಂಗಸರ ತಲೆಯಲ್ಲಿ ಬರುತ್ತವೆ ಎಂಬುದು ತಟ್ಟನೆ ದಿಟ ಎನಿಸಿತು. ಬೇಗದತ್ತ ಬಾಗಿದೆ. ಆಕೆಯೂ ಬಾಗಿದಳು. ಆದರೆ–ಕಾಲು ಜಾರಿ ಮಂಕರಿಯೊಳಗೆ ಹಾವಿನಂತೆ ಸರ್ರನೆ ಇಳಿದಳು. ಅಲ್ಲಿಂದಲೇ, "[illegible]–ಗೆಳೆಯಾ–" ಎಂದು ಕೂಗಿಕೊಂಡಳು. ಆ ಧ್ವನಿ ಎಷ್ಟೋ ದೂರದಿಂದ ಬಂದಂತೆ ಭಾಸವಾಯಿತು.

"ಅಲ್ಲಿ ಏನಾದರೂ ಇದೆಯೇ?" ಕುತೂಹಲ [illegible] ಕೇಳಿದೆ.

"ಇದೆ..." ಅಂದಳು. "[illegible] [illegible] [illegible] [illegible], [illegible]. [illegible] [illegible]. [illegible] [illegible] ಕೊಳೆಗ..."

ಆದರೆ [illegible] [illegible] ಯೋಗ್ಯ [illegible]ಗಳಲ್ಲ. ನಿರಾಶೆಯಿಂದ ನಿಂತಿದ್ದಂತೆಯೇ,

"ಓಹ್–ಇಲ್ಲಿದೆ!" ಅಂದಳು.

"ಏನು?"

"ರೊಟ್ಟಿ...ಒಂದು ಪಾತ್ರೆ...ತೋಯ್ದು ಹೋಗಿವೆ. ತೊಗೋ" ಎಂದು ಪಾತ್ರೆಯನ್ನು ಎತ್ತಿ [illegible]. [illegible] ಬಾಗಿ ತೆಗೆದುಕೊಳ್ಳುತ್ತ [illegible] [illegible] [illegible] [illegible] [illegible]ಲ್ಲಿಟ್ಟು ಜಗಿಯತೊಡಗಿದೆ.

"ನಾವಿಲ್ಲಿ ನಿಲ್ಲಕೂಡದು; ಎಲ್ಲಿಯಾದರೂ ಹೋಗೋಣ" ಅಂದಳು ಮೇಲೇರುತ್ತ.

ಸುತ್ತ ಕಾರ್ಗತ್ತಲು...ನೀರು...ಛೀಕರತೆ.

"[illegible] [illegible] [illegible] [illegible] [illegible] [illegible] [illegible]."

"ಸರಿ, ನಡೆ."

ಸರಸರನೇ ರೊಟ್ಟಿಯನ್ನೆಲ್ಲ ಇಬ್ಬರೂ ಬಾಯಲ್ಲಿ ತುರುಕಿಕೊಂಡು, ಸ್ವಲ್ಪ ಕೈಯಲ್ಲಿ ಹಿಡಿದು ಅಲ್ಲಿಂದ ಹೊರಟೆವು. ಭಯಂಕರವಾಗಿ ಘೋರ್ಗರೆಯುವ ನದಿ. ಎಲ್ಲಿಂದಲೋ ಗೇಲಿಮಾಡುತ್ತಿರುವಂತೆ ಕೇಳಿ ಬರುವ ಶಿಳ್ಳೆಗಳು, ಕರಾಳ ಶರತ್ಕಾಲದ ರಾತ್ರಿಯಲ್ಲಿ ನಾವಿಬ್ಬರೂ ಎಂಟೆದೆಯ ಬಂಟರು. ಹೊಟ್ಟೆಗಿಷ್ಟು ಬಿದ್ದುದರ ಪರಿಣಾಮವೇನೋ ಏನೋ [illegible] ಸಾಗಿದೆ. ಆಕೆ ಕೂಡ ನನ್ನ ಎಡಕ್ಕೆ ಹೆಜ್ಜೆಗೆ ಸಮಹೆಜ್ಜೆಯಾಗಿ ನಡೆದಿದ್ದಳು.

"ನಿನ್ನ ಹೆಸರೇನು?" ಅವಳನ್ನು ಕೇಳಿದೆ–ಬೇರೆನೂ ಮಾತನಾಡಲೂ ತಿಳಿಯದೇ.

"ನತಾಷಾ" ಚುರುಕಾಗಿ ಉತ್ತರಿಸಿದಳು–ರೊಟ್ಟಿಯನ್ನು ಅಗಿಯುತ್ತ. ಅವಳನ್ನು ಸಮೀಪಿಸಿದೆ. ನನ್ನ ಹೃದಯ ನೋವಿನಿಂದ ಕೂಡಿತ್ತು. ಎದುರಿಗೆ ಮಂಜುಗುಡ್ಡ. ನನ್ನ ಪ್ರಾರಬ್ಧವೇ ಗಟ್ಟಿಗೊಂಡು ಕ್ರೂರವಾಗಿ ನಗುತ್ತ ನಿಂತಿರುವಂತೆ ಕಾಣುವ ಮುಂಜುಗುಡ್ಡ.

ಮಳೆ. ಧೋ ಧೋ ಸುರಿಯುತ್ತಿದ್ದ ಮಳೆ. ಎಂಥ ಗಾಳಿಗೂ ಅಲ್ಲಾಡೆವು ಎಂಬ ಛಲದ ಮರಮುಟ್ಟುಗಳನ್ನು ನಿರ್ದಾಕ್ಷಿಣ್ಯವಾಗಿ ಒರಗುವಂತೆ ಮಾಡುತ್ತಿದ್ದ ಗಾಳಿಯೊಂದಿಗಿನ ಮಳೆ. ದೋಣಿ ಸಮೀಪಿಸಿದೆವು. ಅದರ ಮರೆಯಲ್ಲಿ ಕುಳಿತುಕೊಳ್ಳ ಹೋದರೆ ತಳದಲ್ಲುಂಟಾಗಿದ್ದ ತೂತೊಂದರಿಂದ ತೂರಿಬಂದ ಗಾಳಿ ಸಿಳ್ಳೆ ಹಾಕಿ ನಮ್ಮೆದೆಗಳನ್ನು ನಡುಗಿಸಿತು. ದಡದಲ್ಲಿ ಅಪ್ಪಳಿಸುತ್ತಿದ್ದ ತೆರೆಗಳು ಹೇಳಬೇಕಾದ್ದನ್ನು ಹೇಳದೇ ಮುಂದೆ ಬಂದು ಹಿಂದೇಟು ಹಾಕುತ್ತಿದ್ದವು. ಅಬ್ಬಾ ಅವುಗಳ ಆರ್ಭಟ! ಶರತ್ಕಾಲದ ಶಾಪದಿಂದ ಅಲ್ಲಿಯದೆಲ್ಲವೂ ಜರ್ಜರಿತವಾಗಿದ್ದಂತೆ ತೋರಿಬಂತು. ನೊರೆಯು ನದಿಯ ಮೇಲೆ ಮೊರೆಯುವ ಗಾಳಿ ವ್ಯಾಕುಲತೆಯ ರಾಗ ಹಾಡುವಂತಿತ್ತು. ನಾವು ದೋಣಿಯ ತಳಭಾಗದಲ್ಲಿ ಆಶ್ರಯ ಪಡೆಯಲೆಂದು ಬಂದರೆ ಇಲ್ಲಿಯೂ ಗಾಳಿ–ಮಳೆಗಳ ಕಾಟ. ನಾವು ಸುಮ್ಮನೆ ಕುಳಿತಿದ್ದೆವು. ಚಳಿಯಿಂದ ನಮ್ಮ ದೇಹ ಕಂಪಿಸುತ್ತಿತ್ತು. ಮಲಗಬೇಕೆಂದಿದ್ದ ನನ್ನ ಆಸೆಗೆ ಜ್ಞಾಪಕ ಬಂತು. ನತಾಷಾ ತನ್ನ ತಿಕಗಳನ್ನು ದೋಣಿಯ ಕಟ್ಟೆಗೆ ಇಟ್ಟು–ಬೆನ್ನಾತು ಕುಳಿತು ನಂತರ ಮೊಳಕಾಲುಗಳಲ್ಲಿ ಮುಖ ಮುದುಗಿಸಿ ನಡುಗತೊಡಗಿದಳು. ನಮ್ಮಿಬ್ಬರ ನಡುವೆ ಮನೆಮಾಡಿದ್ದ ಮೌನದಿಂದಾಗಿ ನನಗೆ ಬೇಸರ.

"ಛೆ, ಎಷ್ಟು ಹೇಯವಾದ ಜೀವನ!" ಉದ್ಗರಿಸಿದಳು ನತಾಷಾ. ನಾನು ಕೇಳಿಸಲಿಲ್ಲವೆಂಬಂತೆ, [illegible]ಚಲನಾಗಿ ಸುಮ್ಮನಿದ್ದೆ.

"ನಾವು ಕರ್ಕಶವಾಗಿ ಅರಚಿದರೆ...ಏನಾಗುತ್ತದೆ?"

ಈ ಬಾರಿ ಧ್ವನಿ ಅರಚಿಕೊಂಡಂತೇ ಇತ್ತು. ಜೀವನದ ಉದ್ವೇಗಕರ ಘಟನೆಗಳನ್ನು, ಅಪಹಾಸ್ಯಕ್ಕೀಡಾಗುವ ಆ ಘಟನೆಗಳನ್ನು ತಮಗೆ ತಾವೇ ಹತ್ತಿಕ್ಕಿಕೊಳ್ಳುವ ಅಪೂರ್ವ ವ್ಯಕ್ತಿಗಳ ಸಾಲಿಗೆ ಈ ಹುಡುಗಿ ಸೇರಿರುವಳೆಂದು ನನಗೆ ಮನವರಿಕೆಯಾಯಿತು.

ನನಗೆ ಅಳು ಬರಬಹುದು—ನಿನ್ನ ಬಗ್ಗೆ ನಾನೇ ವಿಚಾರ ಮಾಡಿದರೆ. ಆದರೆ ಹೀಗೆ ಒಬ್ಬ ಹೆಣ್ಣನೆದುರು ಅಳುವುದು ನಾಚಿಕೆಗೇಡು. ಅಲ್ಲದೇ ಅವಳೇ ಅಳದಿರುವಾಗ...ಅವಳೊಡನೆ ಮಾತನಾಡಲು ನಿರ್ಧರಿಸಿದೆ.

"ನಿನ್ನನ್ನು ಹೊಡೆದವರು ಯಾರು?" ಬೇರೇನೂ ತಿಳಿಯದೇ ಕೇಳಿದೆ.

"ಪಾಷ್ಕಾ, ದುಷ್ಟ".

"ಪಾಷ್ಕಾ? ಯಾರವ?"

"ನನ್ನ ಪ್ರೇಮಿ. ರೊಟ್ಟಿ ಮಾರುವ ವೃತ್ತಿಯವ..."

"ಆಗಾಗ್ಗೆ ಹೊಡೆಯುತ್ತಿದ್ದನೆ?"

"ಹುಂ—ಕುಡಿದಾಗೆಲ್ಲಾ..."

ನಂತರ ನನ್ನೆಡೆಗೆ ತಿರುಗಿ ಆಕೆ ತನ್ನ ಹಾಗೂ ಪಾಷ್ಕಾನ ಅನ್ಯೋನ್ಯ ಸಂಬಂಧಗಳ ಕುರಿತು ಮಾತಾಡತೊಡಗಿದಳು. ಪಾಷ್ಕಾ—ಕೆಂಪು ಮೀಸೆಯ ತರುಣ. ರೊಟ್ಟಿ ಮಾರುವವನಾದರೂ 'ಬಾಂಜೋ'* ನುಡಿಸುವುದರಲ್ಲಿ ನಿಪುಣ. ಯಾವಾಗಲೂ ಉಲ್ಲಾಸದಿಂದಿರುವವ. ಶುಭ್ರವಸ್ತ್ರಧಾರಿ. ಆತನ ರೂಪಕ್ಕೆ ಮರುಳಾದವಳು ಈ ಹುಡುಗಿ, ನತಾಷಾ. ಪ್ರೇಮಿಸಿದಳು. ತನುಮನದ ಜೊತೆಗೆ ಅವಶ್ಯವಿದ್ದಾಗ ಹಣವನ್ನೂ ಕೊಟ್ಟಳು. ನತಾಷಾ ಸಕ್ಕರೆ ಮಿಠಾಯಿ ಮಾರಿ ಬಂದ ಹಣ ಪಾಷ್ಕಾನ ಹೊಟ್ಟೆಗೆ ಮದ್ಯವಾಗಿ ಸೇರುತ್ತಿತ್ತು. ಮತ್ತು ಏರುತ್ತಿತ್ತು. ನತಾಷಾಳ ಮೈಮೇಲೆಲ್ಲ ಬಲವಾದ ಹೊಡೆತಗಳು ಪಾಷ್ಕಾ ನೀಡುತ್ತಿದ್ದ ಬಹುಮಾನ. ಇವಳೆದುರಿಗೇ ಬೇರೆ ಬೆಲೆವೆಣ್ಣುಗಳ ಬೆನ್ನು ಹತ್ತಿದ್ದೂ ಇದೆ.

"ಇದು ನನಗೆ ಅವಮಾನವಲ್ಲವೆ? ನಾನು ಕೆಟ್ಟವಳಲ್ಲ...ಮೊನ್ನೆ ಡಿಮ್ಕಾಳೊಂದಿಗೆ ಬಿದ್ದುಕೊಂಡಿದ್ದ. ನನಗೆ ತಡೆಯಲಾಗಲಿಲ್ಲ. 'ಸ್ಕೌಂಡ್ರೆಲ್' ಎಂದೆ. ಎದ್ದು ಬಂದವನೇ ನನ್ನನ್ನು ನೆಲಕ್ಕೊಗೆದು ಒದ್ದ. ಹೊಡೆದ-ಬಡಿದ...ನನ್ನ ದೇಹವನ್ನು ನಾಶ ಮಾಡಿದ. ಕೊನೆಗೆ ಕೈಬಿಟ್ಟ...ನನ್ನ ಐದು ರೂಬಲ್ ಬೆಲೆಬಾಳುವ ಜಾಕೀಟನ್ನೂ ಚಿಂದಿಮಾಡಿ ಒಗೆದ..." ಆಕೆ ರೋಷದಿಂದ ಹೇಳಿದಳು.

ಒಮದಿಂದ ತಣ್ಣನೆಯ ಗಾಳಿ ಬೀಸುತ್ತಿತ್ತು. ನನ್ನ ಹಲ್ಲುಗಳು ತಕತಕ ನೃತ್ಯ ಶುರುಮಾಡಿದುವು. [illegible] ಹಾಗೆ [illegible] [illegible]! [illegible]

* Bonjo – ತಂತಿವಾದ್ಯ.



"ಹೆಂಡತಿಯನ್ನು ಸಾಕಲಾರದ ಗಂಡ ಸಾಯಬಾರದೇ ಅನ್ನುತ್ತಿರುತ್ತೀಯಲ್ಲಾ, ಬೇಗನೆ ಸ್ಟೂಲನ್ನು ಆಚೆ ದೂಡಿಬಿಡು."

ಹಿಂಡಿ ಹಿಪ್ಪೆ ಮಾಡಿ ಒಗೆದು ಹೋಗುತ್ತಿರಿ... ನಿಮಗೆ ದೇಹವೊಪ್ಪಿಸುವ ನಾವೇ ಮೂರ್ಖರು."

ಆಕೆಯ ಮಾತು ನನ್ನನ್ನು ಯಾವುದೇ ಪ್ರಸಿದ್ಧ ಸಾಹಿತಿಯ ಉಕ್ತಿಗಿಂತಲೂ ಹೆಚ್ಚು ಯೋಚನಾಶೀಲನನ್ನಾಗಿಸಿತು. ನಾನು ಗಡಗಡ ತಡುಗಿದೆ. ಚಳಿಯಿಂದಲ್ಲ–ಆಕೆಗಾದ ದುಃಖದ ಅನುತಾಪದಿಂದ. ಅಷ್ಟರಲ್ಲಿ ಎರಡು ಕೈಗಳು ನನ್ನ ಹತ್ತಿರ ಬಂದು–ಒಂದು ಕುತ್ತಿಗೆಯನ್ನು, ಮತ್ತೊಂದು ಮುಖವನ್ನು ಸ್ಪರ್ಶಿಸಿದುವು. ಜತೆಗೆ ಆ ಗಡುಸಾದ–ಸ್ನೇಹಯುತವಾದ ಧ್ವನಿ.

"ಏಕೆ? ಏನು ಪೀಡಿಸುತ್ತಿದೆ ನಿನ್ನನ್ನು?"

ನನಗಚ್ಚರಿಯಾಯಿತು. ಇಷ್ಟು ಹೊತ್ತಿನವರೆಗೆ ಗಂಡಸರನ್ನು ವಾಚಾಮಗೋಚರ ಬೈದ ನತಾಷಾ ನನ್ನನ್ನು ಹೀಗೆ ಪ್ರಶ್ನಿಸುತ್ತಿದ್ದಾಳೆಯೆ?

"ಚಳಿಯೇ? ಅಸಹ್ಯ ಯಾತನೆ? ಕೊಳೆತು ನಾರುತ್ತಿರುವ್ರವರ ವಾಸನೆಯೆ? ಅರೆ, ಗೊಂಬೆಯಂತೇಕೆ ಕುಳಿತುಬಿಟ್ಟೆ? ಬಾ...ನೆಲದ ಮೇಲೆ ಮಲಗು. ಸೆಟೆದುಕೋ...ನಾನೂ ಮಲಗುತ್ತೇನೆ. ಅಲ್ಲಿ! ಹೇಗಿದೆ ಉಪಾಯ? ಹಾಂ–ಬಾ, ಹಾಗೆ, ಮಲಗು. ಇಕೊ ಈಗ ನಿನ್ನ ಬಲಿಷ್ಠ ತೋಳುಗಳಿಂದ ನನ್ನನ್ನು ಬಳಸಿಕೋ... ಇನ್ನೂ ಬಿಗಿಯಾಗಿ ...ಈಗ ಬೆಚ್ಚಗನಿಸುವುದಿಲ್ಲವೆ? ಹಾಂ...ಸ್ವಲ್ಪ–ಹಾಗೇ ಇರು. ನಂತರ ಮಗ್ಗಲು ಬದಲಿಸೋಣ. ಹೀಗೆ ರಾತ್ರಿ ಬಹುಬೇಗ ಕಳೆದುಹೋಗುತ್ತದೆ. ಹೌದೋ ಅಲ್ಲವೋ ಪರೀಕ್ಷಿಸಿ ನೋಡು. ಒಂದು ಪ್ರಶ್ನೆ...ನೀನೂ ಕುಡಿದಿದ್ದಿಯೋ ಹೇಗೆ ಮತ್ತೆ? ಎಲ್ಲಿ ಮುಖ ತಿರುಗಿಸು. ಇಲ್ಲ–ಪರವಾಗಿಲ್ಲ." ಎನ್ನುತ್ತ ಆಕೆ ಮತ್ತಷ್ಟು ಒತ್ತಿಕೊಂಡಳು.

ನಾನು ಮೂರನೆಯ ಬಾರಿಗೆ ಶಾಪಗ್ರಸ್ತನಾದೆ. ಅಪವಿತ್ರದೇಹದ ಒಡತಿಯೊಬ್ಬಳಿಂದ ಪವಿತ್ರ ದೇಹದ ನಾನು ಅಪವಿತ್ರನಾಗುವಂತಾಯಿತು.

ಹೋ–ಇದೊಂದು ಸುಂದರವಾದ–ನಂಬಲಾರದ ಕನಸೆಂದು ನಾನು ಭಾವಿಸಬಲ್ಲೆ.

ಆದರೆ ಹಾಗೆ ಯೋಚಿಸಲಾರೆ. ಯಾಕಂದರೆ ನನ್ನ ಮೈ ಮೇಲೆ ಬಿದ್ದ ಹನಿಗಳನ್ನು ಆ ಹುಡುಗಿ ಒರಸುತ್ತಿದ್ದಾಳೆ. ಮೈ ಒತ್ತುತ್ತಿದ್ದಾಳೆ. ಆಕೆಯ ಬಿಸಿಯುಸಿರು ನನ್ನ ಮುಖಕ್ಕೆ ತಾಗುತ್ತಿದೆ, 'ವೋಡ್ಕಾ'ದ ನೆನಪು ತರಿಸುತ್ತ. ಬೀಸುಗಾಳಿ ಕೋಪಗೊಂಡಿದೆ. ನಾವಿಬ್ಬರೂ ಒಬ್ಬರನ್ನೊಬ್ಬರು ಅಪ್ಪಿ...

ನತಾಷಾ ಈ ಹೊತ್ತಿನಲ್ಲಿಯೂ ಕರುಣಾಮಯಿಯಾಗಿ ಬಿಡುವಿಲ್ಲದೆ ಮಾತನಾಡುತ್ತಿದ್ದಳು. ಅದುವರೆಗಿನ ನನ್ನ ದುಃಖವನ್ನೆಲ್ಲ ಅಂದು ನತಾಷಾ ತನ್ನ ಕಾಣಿಕೆಯಿಂದ ದೂರಮಾಡಿಬಿಟ್ಟಳು. "ನಿನಗೆ ಮತ್ತೆ ಒಳ್ಳೆಯ ಕಾಲ ಬರುತ್ತದೆ" ಎಂದಂದು ಮತ್ತೆ ಮತ್ತೆ ಚುಂಬಿಸಿದಳು. ನನಗೆ ಇವು ಹೆಂಗಸಿನಿಂದ ಬಂದ ಮೊದಲ ಮುತ್ತುಗಳು. ಎಂದೂ ಮರೆಯಲಾಗದ ಚುಂಬನಗಳು.

"ಬಾ–ಮುಜುಗರ ಬೇಡ. ನಾಳೆಯವರೆಗೂ ನಿನ್ನೊಂದಿಗಿರುತ್ತೇನೆ." ಮತ್ತೆ ಚುಂಬನ.

ಅರುಣೋದಯದವರೆಗೂ ಅಲ್ಲಿಯೆ ಮಲಗಿದ್ದೆವು. ಬಿಸಿಲು ಚೀಳತೊಡಗಿದಾಗ ಇಬ್ಬರೂ ಎದ್ದೆವು. ನಂತರ ಪಟ್ಟಣಕ್ಕೆ ಹೋಗಿ ಸ್ನೇಹಪೂರ್ವಕವಾಗಿ ಬೀಳ್ಕೊಂಡೆವು, ಮತ್ತೆ ಆರು ತಿಂಗಳ ನಂತರ ಭೇಟಿಯಾಗುವ ಭರವಸೆಯೊಂದಿಗೆ.

ಆದರೆ ಆ ನತದೃಷ್ಟೆ, ಕರುಣಾಳು 'ನತಾಷಾ'ಳಿಗಾಗಿ ನಾನು ಎಲ್ಲೆಡೆ ಹುಡುಕಿದೆ. ಆದರೆ......

ಅವಳು ಈಗಾಗಲೇ ಸತ್ತಿದ್ದರೆ–ಅವಳು ಮನಶ್ಶಾಂತಿಯಿಂದ ವಿಶ್ರಾಂತಿ ಪಡೆಯುತ್ತಿರುತ್ತಾಳೆ ಒಂದು ವೇಳೆ ಬದುಕಿದ್ದರೆ..."ಅವಳ ಆತ್ಮಕ್ಕೆ ಚಿರಶಾಂತಿ ಸಿಗಲಿ" ಎಂದು ಹಾರೈಸುತ್ತೇನೆ.

ಅಮೇರಿಕದ ಬೋಸ್ಟನ್ ನಗರದಲ್ಲಿ ಆ್ಯದಂ ಸ್ಮಿತ್ ಎಂಬ ಒಂದೇ ಹೆಸರಿನ ಇಪ್ಪತ್ತೊಂದು ಓಣಿಗಳಿವೆ.

ಇಂಗ್ಲೀಷಿನಲ್ಲಿ ಕ್ಲೀವ್ ಎಂದರೆ ಒಂದಕ್ಕೊಂದು ಅಂಟಿಕೊಳ್ಳು ಎಂದು ಅರ್ಥ. ಹಾಗೆಯೆ ಒಂದಕ್ಕೊಂದು ಅಂಟಿಕೊಂಡಿದ್ದನ್ನು ಬಿಡಿಸುಎನ್ನುವ ಅರ್ಥವೂ ಇದಕ್ಕುಂಟು.

ಸ್ಪಾನಿಷ್ ಭಾಷೆಯಲ್ಲಿ ಎಸ್ಪೋಸಾ ಎಂಬ ಶಬ್ದಕ್ಕೆ ಎರಡು ಅರ್ಥಗಳು ಒಂದು ಹೆಂಡತಿ ಇನ್ನೊಂದು ಕೈಕೋಳ. ಹಾಗೆ ನೋಡಿದರೆ ಇವೆರಡೂ ಸಮಾನಾರ್ಥವೇ ಅನ್ನಿ.

ನಾವು ಪ್ರತಿಯೊಂದು ಶಬ್ದವನ್ನು ಉಚ್ಚರಿಸುವಾಗಲೂ ೭೨ ನರಗಳನ್ನು ಉಪಯೋಗಿಸುತ್ತೇವೆ.

ಶಬ್ದಬ್ರಹ್ಮನ ಗುಮ್ಮಟದೊಳಿದ್ದು ಗದ್ದಲಕಂಜಿದೊಡೆಂತಯ್ಯ ?

– ಎಸ್. ರಾಮಪ್ರಸಾದ

ಗದ್ದಲ ಮಾಡಬೇಡಿ ಎಂದೆನ್ನುವವರಿಗೆ ಆಧುನಿಕ ವಚನಕಾರರ ಸಮಜಾಯಿಷಿ ಇದು. ಧ್ವನಿ ವಿಜ್ಞಾನದಲ್ಲಿ ಗದ್ದಲ ಎಂಬ ಪದವನ್ನು ಯಾವುದೇ ಅನಪೇಕ್ಷಿತ ಶಬ್ದ ಎಂದು ವ್ಯಾಖ್ಯಿಸಲಾಗಿದೆ. ರೇಡಿಯೋ ಮತ್ತು ಎಲೆಕ್ಟ್ರಾನಿಕ್ ಸಾಧನಗಳಿಗೆ ಸಂಬಂಧಿಸಿದಂತೆ ಅಂಥಾ ಸಾಧನಗಳಲ್ಲಿ ತಲೆದೋರುವ ಗೊಂದಲವೇ ಗದ್ದಲ. ಈ ವ್ಯಾಖ್ಯಾನುಸಾರ ಕ್ರೈಸ್ತ ಧರ್ಮಾವಲಂಬಿಯಾದವನಿಗೆ ಅಪ್ಯಾಯವೆನಿಸುವ ಚರ್ಚಿನ ಗಂಟೆಯ ಘೋಷ ತದೇಕಚಿತ್ತದಿಂದ ತನ್ನ ಪಾಠಪ್ರವಚನಗಳಲ್ಲಿ ಮಗ್ನನಾಗಿ, ಮುಂಬರುವ ಪರೀಕ್ಷೆಯನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳುತ್ತಿರುವ ವಿದ್ಯಾರ್ಥಿಯೊಬ್ಬನಿಗೆ ಗದ್ದಲವಾಗಿ ಪರಿಣಮಿಸಬಹುದು. ಆತ್ಮಘೋಷ ಸಂಗೀತ ಕಾರ್ಯಕ್ರಮ ನಡೆಯುತ್ತಿರುವಲ್ಲಿಯೋ ಭಾಷಣಮಂದಿರಗಳಲ್ಲಿಯೋ ರಂಗಭೂಮಿಯಲ್ಲೋ ಬರುವ ಶಬ್ದದ ತೀಕ್ಷ್ಣತೆ ಸಭಿಕರ ಅನವಶ್ಯಕ ವ್ಯಾಖ್ಯಾನಗಳಿಂದ ಇಲ್ಲವೆ ಪಿಸುಮಾತುಗಳಿಂದ ಜೇರೆಯುವರಿಗೆ ಸರಿಯಾಗಿ ಪರಿಣಾಮ ಬೀರದೆ ಗ್ರಹಿಕೆ ಕಷ್ಟವಾದಾಗ ವ್ಯಾಖ್ಯಾನಗಳು ಪಿಸುಮಾತುಗಳಾದರೂ ಅವು ಗದ್ದಲವಾಗಿ ಪರಿಣಮಿಸುತ್ತವೆ. ಅರುಣೋದಯ ಸಮಯದ ಹೊತ್ತಿಗೆ ಮಸೀದೆಯ ಧ್ವನಿವರ್ಧಕದ ಮೂಲಕ ಬರುವ ಅಲ್ಲಾನ ಪ್ರಾರ್ಥನೆಯಾಗಲೀ ರಾಮಮಂದಿರದ ಧ್ವನಿವರ್ಧಕದ ಮೂಲಕ ಹೊರಹೊಮ್ಮುವ ಸುಪ್ರಭಾತ ಸ್ತೋತ್ರವಾಗಲೀ ಉಷಃಕಾಲದ ನಿದ್ರೆಯ ಮಜಬೂತು ಗುಂಗಿನಲ್ಲಿರುವವರಿಗೆ ಗದ್ದಲವಲ್ಲದೆ ಇನ್ನೇನು? ಸಂಗೀತಾಭ್ಯಾಸಿಗಳ ಮನೆಯ ಬಳಿಯೇ ಉಂಡೆಸೌದೆಯನ್ನು ಸೀಳುವವನಿಗೆ, ಉಷಃಕಾಲದ ಸಂಗೀತಾಭ್ಯಾಸಿಯ ಸಾ…ನೀ…ದ…ಪಗಳು ಸಣ್ಣಾ…ದಪ್ಪಾಗಳಾಗಿ ಪರಿಣಮಿಸಿ ಅವನ ತಾಳ್ಮೆಗೆ ಧಕ್ಕೆ ತರಬಹುದು. ಗಂಡಹೆಂಡಿರ ಮಧ್ಯಾಹ್ನದ ಭೋಜನೋತ್ತರದ ಖಾಸಗೀ ಸರಸಲ್ಲಾಪಕ್ಕೆ ಅವರ ಪುಟ್ಟ ಮಗುವಿನ ತೊದಲು ನುಡಿಗಳಾಗಲೀ ಅಳುವಿನ ಶಬ್ದಗಳಾಗಲೀ ಗದ್ದಲವಾಗಬಹುದು. ಪ್ರಹ್ಲಾದನ ನಾರಾಯಣ ನಾಮೋಚ್ಚಾರ ಹಿರಣ್ಯಕಶಿಪುವಿಗೆ ಕರ್ಣಕಠೋರವಾಗಿತ್ತಂತೆ. ತನ್ನ ಸಮಸ್ತ ಬಂಧುಬಾಂಧವರನ್ನೆಲ್ಲ ಕಳೆದುಕೊಂಡು ಯುದ್ಧ

ರಂಗದಲ್ಲಿ ಹೆಣಗಳ ನಡುವೆ ಬರುತ್ತಿದ್ದ ದುರ್ಯೋಧನನಿಗೆ ಅಲ್ಲಿದ್ದ ಮರುಳುಗಳ ವಾಸ್ತವ ನುಡಿಗಳೆಲ್ಲ "ಕರ್ಣಕಠೋರಂ ಪಿಶಾಚದ ನುಡಿ" ಯಾಗಿ (ಶ್ರೀ ರನ್ನನವರ 'ಗದಾಯುದ್ಧ ನಾಟಕ') ಪರಿಣಮಿಸಿದುವಂತೆ. ವಿವಾಹದ ಗಹನ ಮಾತುಗಳಾಗಲೀ ಗಂಭೀರವಾದ ಸಂಭಾಷಣೆಗಳಾಗಲೀ ಮನೆಯೊಳಗೆ ನಡೆಯುತ್ತಿರುವಾಗ, ಬೀದಿಯಲ್ಲಿ ಸೀಮೆಎಣ್ಣೆ ಡ್ರಮ್ಮನ್ನು ಉರುಳಿಸುತ್ತ ಹೋಗುವಾತ ಉಂಟುಮಾಡುವ ಶಬ್ದವಾಗಲೀ ಗೂಡೆಮಾರಮ್ಮನನ್ನು ಹೊತ್ತುಕೊಂಡು ಡೋಲನ್ನು ಡರ್ರಾಬುರ್ರಾ ಎಂದು ಬಡಿಯುವ ಶಬ್ದವಾಗಲೀ ಬೀದಿ ವ್ಯಾಪಾರಗಾರರ ಕರ್ಕಶ ಕೂಗಾಟದ ಶಬ್ದವಾಗಲೀ ರಾತ್ರಿವೇಳೆಯಲ್ಲಿ ಮುಸುಕು ಹಾಕಿಕೊಂಡು ಅಪ್ಪಾಜಿಯ ಅಮೃತಾಯಿ ಗುಮ್ಮಗಳ ಅಮಲಿನ ಕಿರಿಚಾಟಗಳಾಗಲೀ ಮಾತುಕತೆಯಲ್ಲಿ ಮಗ್ನರಾಗಿರುವವರಿಗೆ ಕಠೋರ ಯಾತನೆಯನ್ನು ಉಂಟುಮಾಡುತ್ತವೆ. ಸೀಮೆಎಣ್ಣೆಗಾಗಿಯೇ ಹಾತೊರೆಯುತ್ತಿರುವ ಅಂತರಾಳಗೃಹದ ಮನೆಯಾಕೆಗೆ ಡ್ರಮ್ಮನ್ನು ಬಡಿಯುವಾತನ ಆ ಶಬ್ದ ಜೇತೋಹಾರಿಯೇ ಸರಿ. "ಅಮ್ಮ" ಬಂದು ಹಾಸಿಗೆ ಹಿಡಿದು ಮಲಗಿರುವ ಮಗುವಿನ ತಾಯಿಯ ಪಾಲಿಗೆ ಗೂಡೆಮಾರಮ್ಮ ಬಂತೆಂದರೆ ಅದು ಪ್ರತ್ಯಕ್ಷ ದೈವ ಕಟಾಕ್ಷವೇ. ನಾಗರಿಕತೆ ಮುಂದುವರಿದ ನಗರದ ಬೀದಿಗಳಲ್ಲಿ ಓಡಾಡುವ ಆಟೋರಿಕ್ಷಾ, ಕಾರುಗಳ, ಮತ್ತು ರಸ್ತೆಗಳಲ್ಲಿ ಓಡಾಡುವ ಲಾರಿ ಬಸ್ಸುಗಳ ಹಾರನ್ ಶಬ್ದಗಳಂತೂ ಅವು ಕೇವಲ ಶಬ್ದ ಮಾತ್ರವಲ್ಲ: ಮಹಾಭಾರತ ಯುದ್ಧದ ಆರಂಭವನ್ನು ಸಾರಿದ ಶ್ರೀಕೃಷ್ಣನ ಪಾಂಚಜನ್ಯ ಶಂಖನಾದವನ್ನೂ ಮೀರಿಸಿ, ಒಬ್ಬ ದ್ರೋಣನನ್ನು ಏಕೆ ಹಲವಾರು 'ದ್ರೋಣ'ರ ಕಿವಿಗಳನ್ನು ಹಾಳು ಮಾಡುವ ಸಾಮರ್ಥ್ಯವನ್ನು ಅವು ಪಡೆದಿರುತ್ತವೆ. ನಗರದ ಆಸ್ಪತ್ರೆಗಳಿರುವೆಡೆ ಹಾಕಿರುವ 'ಸೈಲೆನ್ಸ್ ಜೋನ್' 'ನೋ ಹಾರನ್' ಎಂಬ ದುಂಡು ಫಲಕಗಳು ಹಾರನ್ ಬಾರಿಸುವವರಿಗೆ ಎಚ್ಚರಿಕೆ ನೀಡುವುದರ ಜೊತೆಗೆ ಅವರ ಕಣ್ಣು ಕುಕ್ಕುವ ಬೋರ್ಡುಗಳಾಗುತ್ತವೆ. ಕುಡಿದು ಅಮಲೇರಿದವ ನಡುರಾತ್ರಿಯ ವೇಳೆ ತನ್ನದೇ ಆದ 'ಸ್ವರ್ಗ'ದಲ್ಲಿ ವಿಹರಿಸುತ್ತ ತನಗೆ 'ಸರಿ' ಎನಿಸಿದ ಎಲ್ಲ ಬಗೆಯ ಮಾತುಗಳನ್ನೂ ಕಷ್ಟಕಾರ್ಪಣ್ಯಗಳನ್ನೂ ಖುಷಿ ಬಂದಾಗ 'ಭಾವಗೀತೆ'ಗಳನ್ನೂ ಹೇಳಿಕೊಂಡು ಹೋಗುವುದು ಅವನಿಗೆ ದೈವೀಸಂಗೀತ. ಆದರೆ ಉಂಡು ಹಾಯಾಗಿ ಹಂಸತೂಲಿಕಾತಲ್ಪದಲ್ಲಿ ಪವಡಿಸಿರುವವರಿಗೆ ಆ ಸಂಗೀತಸುಧೆ ತಲೆನೋವು. ಅವರು ಕೋಪೋದ್ರಿಕ್ತರಾಗಿ ಅವರ ಮೈ ಕಾವೇರುತ್ತದೆ. ಮುಂದೆ ಸೆಣಸಾಟ ಇತ್ಯಾದಿ.

ಒಟ್ಟಿನಲ್ಲಿ ಗದ್ದಲ ಮನುಷ್ಯನ ಮೇಲೆ ನಾಲ್ಕು ರೀತಿಯ ಪರಿಣಾಮಗಳನ್ನು ಉಂಟು ಮಾಡಬಹುದು: (೧) ಅದು ಅವನಿಗೆ ಕೋಪ ಬರಿಸಬಹುದು. (೨) ಅವನ ನಿದ್ರೆಯನ್ನು ಹಾಳು ಮಾಡಬಹುದು. (೩) ಮತ್ತೊಬ್ಬರೊಡನೆ ಸಂಭಾಷಣೆ ನಡೆಸುವ ಅವನ ಸಾಮರ್ಥ್ಯವನ್ನು ಕ್ಷೀಣಿಸಬಹುದು. ಮತ್ತು (೪) ಅವನ ಶ್ರವಣಸಾಮರ್ಥ್ಯವನ್ನು ಹಾಳು ಮಾಡಬಹುದು. ಗದ್ದಲ ಎನ್ನುವ ಶಬ್ದ ಸಾಪೇಕ್ಷ ಸ್ವರೂಪದ್ದು. ಒಬ್ಬನಿಗೆ ಗದ್ದಲವಾದದ್ದು ಮತ್ತೊಬ್ಬನಿಗೆ ಹಿತವೆನಿಸಬಹುದು. ಏನೇ, ಆದರೂ ಬೇಡವಾದ, ಅನಪೇಕ್ಷಿತ, ಅಹಿತವಾದ ಸಿಟ್ಟಿಗೇಳಿಸುವ ಯಾವ ಶಬ್ದವೇ ಆದರೂ ಅದು ಗದ್ದಲವೇ. ಗದ್ದಲದಿಂದ ಪರಿಸರದ ಶಾಂತಿಗೆ ಭಂಗ ಬರುತ್ತದೆ. ಪರಿಸರ ಕಲುಷಿತವಾಗುತ್ತದೆ. ಪರಿಸರಮಾಲಿನ್ಯಕ್ಕೆ ಗದ್ದಲ ಪೋಷಕಾಂಶ. ಗದ್ದಲದಿಂದ ಮನಶ್ಶಾಂತಿಗೆ ಧಕ್ಕೆ. ರೇಡಿಯೋ ಧ್ವನಿವರ್ಧಕಗಳ ಹಾವಳಿಯಿಂದ ತಪ್ಪಿಸಿಕೊಂಡು ಊರ ಹೊರಗೆ ಹೋಗಿ ಯಾದರೂ ಕೊಂಚ ಹೊತ್ತು ಹಾಯಾಗಿ ಇದ್ದು ಬರೋಣವೆಂದರೂ ಊರ ಹೊರಗಿನ ಗಿರಣಿಗಳ ಕಾರ್ಖಾನೆಗಳ ಸೈರನ್ ಶಬ್ದಗಳೂ ಉಷ್ಣಶಕ್ತಿ ಉತ್ಪಾದನಾ ಠಾಣ್ಯಗಳ ಯಂತ್ರಶಬ್ದಗಳು ಹಳಿಗಳ ಮೇಲೆ ಓಡಾಡುವ ರೈಲುಬಂಡಿಯ ಕರ್ಕಶ ಸಿಳ್ಳಿನ ಶಬ್ದವೂ ಆಕಾಶದಲ್ಲಿ ಹಾರಾಡಬಹುದಾದ ವಿಮಾನ ಹೆಲಿಕಾಪ್ಟರುಗಳ ಶಬ್ದಗಳೊ ಯಾವುವೇ ರೀತಿಯಲ್ಲೂ ಶಾಂತಿಪಾಲನೆಗೆ ಸಹಾಯಕವಾಗುವುದಿಲ್ಲ. ಶಾಂತಿ ಬಯಸಿ ಊರ ಹೊರಗೆ ಹೋದವನಿಗೂ ಗದ್ದಲದ ಕಾಟ ತಪ್ಪಿದ್ದಲ್ಲ. ಭಾರತದ ಅನೇಕ ದೊಡ್ಡ ನಗರಗಳಲ್ಲಿ ಉಂಟಾಗುವ ಗದ್ದಲದ ಈ ದಿನಗಳ ಸರಾಸರಿ ಮಟ್ಟ ಕಳೆದ ಎರಡು

ದಶಕಗಳ ಹಿಂದೆ ಇದ್ದುದಕ್ಕಿಂತ ನಾಲ್ಕು ಪಟ್ಟು ಹೆಚ್ಚಿದೆ ಎಂದು ಧ್ವನಿವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ.

ಹಾಗಾದರೆ ಈ ಗದ್ದಲಕ್ಕೆ ಶಬ್ದವೇ ಕಾರಣ ವೆಂದಾಯಿತು. ಶಬ್ದಕ್ಕೆ ಯಾವುದು ಕಾರಣ? ಅದು ಎಲ್ಲಿತ್ತು? ಕ್ರೈಸ್ತಧರ್ಮೀಯರ ಪವಿತ್ರ ಪುರಾಣ 'ಜೆನಿಸಿಸ್'ನಲ್ಲಿ ಒಂದು ಮಾತಿದೆ ...and God said, let there be light.

ಕೊಂಚ ಹಿಂದಕ್ಕೆ ಹೋಗಿ ನೋಡಿದರೆ, ಇಲ್ಲಿ ಪ್ರಾರಂಭವಾಗುವ ಚುಕ್ಕಿಗಳಿಗೇನು ಅರ್ಥ ಎಂಬುದನ್ನು ಯಾರೇ ಆದರೂ ಕೇಳಬಹುದು. ಶಂಕರಾಚಾರ್ಯ ವಿರಚಿತ 'ಮೀನಾಕ್ಷಿ ಸ್ತೋತ್ರ'ದಲ್ಲಿ ಬರುವ "ಶಬ್ದಬ್ರಹ್ಮಮಯಿ, ಚರಾಚರಮಯಿ, ಜ್ಯೋತಿರ್ಮಯಿ, ವಾಙ್ಮಯಿ......" ಇತ್ಯಾದಿಗಳನ್ನು ಗಮನಿಸಿದಾಗ ಜೆನಿಸಿಸ್‌ನಲ್ಲಿ ನಿರೂಪಣೆಯಾಗಿರುವ ಬೆಳಕಿಗೆ ಮುಂಚಿತವಾಗಿ ದೇವರು "ಶಬ್ದ" ಇರಲಿ ಎಂದಿರಬೇಕು, ಅಲ್ಲವೆ? ಅಂದರೆ ಈ ಜಗತ್ತು ಮೊದಲಿಗೆ ಶಬ್ದಮಯವಾಗಿತ್ತು; ಶಬ್ದಬ್ರಹ್ಮದ ಗುಮ್ಮಟವಾಗಿತ್ತು. ಅನಂತರ ಚರಾಚರವಸ್ತುಗಳು ಬಂದವು. ಆ ಮೇಲೆ ಬೆಳಕು ಕಾಣಿಸಿಕೊಂಡಿತು, ಮಾತು ಹೊಮ್ಮಿತು, ಇತ್ಯಾದಿ. ಹೀಗಾಗಿ ಎಲ್ಲದಕ್ಕೂ ಮೊದಲು ಶಬ್ದ ಸೃಷ್ಟಿಯಾಯಿತು ಎನ್ನಬಹುದು. ಶಬ್ದ ದೈವನಿರ್ಮಿತ. ಅದು ಅವಿನಾಶಿ. ಗದ್ದಲ ಮನುಷ್ಯಕೃತ. ಬೇಡವಾದಲ್ಲಿ ಪ್ರಯತ್ನಿಸಿದರೆ ಅದನ್ನು ನಾಶಗೊಳಿಸಬಹುದು. 'ಧರ್ಮೋ ರಕ್ಷತಿ ರಕ್ಷಿತಃ' ಎನ್ನುವಂತೆ 'ಶಬ್ದೋ ರಕ್ಷತಿ ರಕ್ಷಿತಃ' ಎಂದೂ ಹೇಳಿ ಹೊರಟಾಗ ಶಬ್ದವನ್ನು ರಕ್ಷಿಸುವ ಪ್ರಶ್ನೆ ತಾನಾಗಿಯೇ ಉದ್ಭವಿಸುತ್ತದೆ. ನೆರಳನ್ನೀಯುವ ಮರಗಳನ್ನೂ ಹೂಬಿಡುವ ಗಿಡಗಳನ್ನೂ ಬೆಳೆಸಿ ಪಾಲಿಸಿ ಪೋಷಿಸಿ-ಕೊಂಡು ಬರುವುದರಿಂದ, ಹುಚ್ಚು ಹಿಡಿ-ಸುವ ಅಚ್ಚ ಹಸಿರಿನಿಂದ ಧ್ವನಿತರಂಗಗಳು ಸೆರೆಹಿಡಿಯಲ್ಪಡುತ್ತವಾಗಿ ಗದ್ದಲದ ತೀವ್ರತೆಯ ಪ್ರಭಾವವನ್ನು ೧೦ ಡೆಸಿಬೆಲ್‌ಗಳಷ್ಟು ಕಡಿಮೆ ಮಾಡಬಹುದು ಎಂದು ಧ್ವನಿವಿಜ್ಞಾನಿಗಳು ಲೆಕ್ಕ ಹಾಕಿದ್ದಾರೆ. ನಾದವನ್ನು ರಕ್ಷಿಸಿದರೆ, ಅದು ನಮ್ಮನ್ನು (ಅರ್ಥಾತ್ ಗದ್ದಲದಿಂದ ನಮ್ಮ ಕಿವಿಗಳನ್ನು) ರಕ್ಷಿಸುತ್ತದೆ.

ಈಗ ಶಬ್ದಘೋಷದ ಬಗ್ಗೆ [illegible] ಕೊಂಚ ವಿಚಾರ ಮಾಡೋಣ. ಶಬ್ದಘೋಷದ ಏರಿಳಿತಗಳು ಮನುಷ್ಯನ ಕಿವಿಯನ್ನು [illegible] ಶಬ್ದದ ತೀವ್ರತೆಯು [illegible]. ಘೋಷ ವ್ಯಕ್ತಿನಿಷ್ಠವಾದದ್ದು; ತೀವ್ರತೆ ವಸ್ತುನಿಷ್ಠವಾದದ್ದು. ಶಬ್ದದ ತೀವ್ರತೆಯನ್ನು [illegible] ಉಂಟುಮಾಡುವ [illegible] ಶಕ್ತಿಯ ಪ್ರಮಾಣದ [illegible]. ಕಿವಿಯ ಮೇಲೆ ಶಬ್ದ ಬಿದ್ದಾಗ ಅದರಿಂದ ಉಂಟಾಗುವ [illegible] ಒಂದು [illegible]. ಅದೇ [illegible] ಅವಲಂಬಿಸಿರುತ್ತದೆ ಎಂದು ಧ್ವನಿವಿಜ್ಞಾನಿಗಳು ತಿಳಿಸಿದ್ದಾರೆ. ಕಿವಿಗೆ ಗ್ರಾಹ್ಯ [illegible] ಶಬ್ದತೀವ್ರತೆಗೆ [illegible] (ಥ್ರೆಷೋಲ್ಡ್ ಆಫ್ ಹಿಯರಿಂಗ್) ಎಂದು ಹೆಸರು. [illegible] ಒಂದು ಪರಿಮಿತಿಯ [illegible] ಉಂಟಾಗುತ್ತದೆ. ಆ [illegible] (ಥ್ರೆಷೋಲ್ಡ್ ಆಫ್ ಪೇನ್) ಎಂದು ಹೆಸರು. [illegible] ಬಂದಿಗಳನ್ನು ಯಾತನೆಗೆ ಈಡುಮಾಡುವ ಸಲುವಾಗಿ ಅವರನ್ನು ಒಂದೆಡೆಗೆ ಕಟ್ಟಿ, ಅವರ ತಲೆಯ ಮೇಲಿಂದ ಒಂದು ದೊಡ್ಡ ಗಂಟೆಯನ್ನು ಕತ್ತಿನವರೆಗೂ ಇಳಿಯಬಿಟ್ಟು, ಆಮೇಲೆ ಘಂಟಾಘೋಷಮೇರ್ಪಡಿಸಿದಾಗ ಅದರಿಂದ ಬಂದಿಯ ಕಿವಿಗೆ ಆಘಾತವಾಗಿ ಎರಡು ಕಿವಿಯ ದಮ್ಮಟೆಗಳೂ ಒಡೆದುಹೋಗಿ ಕಿವಿಯಿಂದ ರಕ್ತ ಹೊರ ಬರುತ್ತಿತ್ತಂತೆ. ಆಗ ಅವನಿಗೆ ಆಗುತ್ತಿದ್ದ ವೇದನೆಯನ್ನು ಶಬ್ದಬ್ರಹ್ಮನು ಕೂಡಾ ಹೋಗಲಾಡಿಸಲಾಗುತ್ತಿರಲಿಲ್ಲ. ಕನಿಷ್ಠ ಪ್ರಮಾಣದೇಹಲಿಗಿಂತ [illegible] ಶಬ್ದವಾಗಲೀ ವೇದನ [illegible] ಕಿವಿಯ ಮೇಲೆ ಬಿದ್ದಾಗ ಶಬ್ದದ ಗ್ರಹಿಕೆ ಸರಿಯಾಗಿ ಆಗದೆ ಹೋಗುವುದು ಮಾತ್ರವಲ್ಲ, [illegible] ಕೆಟ್ಟು ಹೋಗುವ ಅಪಾಯವೂ ಉಂಟು. ಪರಿ

ತರು ನೀಡಿರುವ ಒಂದು ವರದಿಯ ರೀತ್ಯ ಅತ್ಯಧಿಕ ಗದ್ದಲದಿಂದ ಗರ್ಭಸ್ಥಶಿಶುವಿನ ಮೇಲೆ ಅಧಿಕ ಪರಿಣಾಮವಾಗುತ್ತದಂತೆ. ಒಂದು ಲೆಕ್ಕಾಚಾರದ ಪ್ರಕಾರ ೯೦ ಡೆಸಿಬೆಲ್‌ಗಳಿಗಿಂತ ಹೆಚ್ಚಿನ ತೀವ್ರತೆಯ ಗದ್ದಲ ಕಿವುಡನ್ನು ಉಂಟುಮಾಡುತ್ತದಲ್ಲದೆ ಅಂತಿಮವಾಗಿ ತೀವ್ರತೆ ೧೬೦ ಡೆಸಿಬೆಲ್‌ಗಳಷ್ಟಿದ್ದಾಗ ಬುದ್ಧಿಭ್ರಮಣೆಗೂ ಎಡೆ ಮಾಡಿಕೊಡುತ್ತದೆ ಎನ್ನಲಾಗಿದೆ.

ಗದ್ದಲವನ್ನು ಕುರಿತಂತೆ ಜೆ. ಜೆ. ಮಾರ್ಗನ್. ಇ. ಜೆ. ಬೋರಿಂಗ್, ಎಂ. ಎಸ್. ವೈಟಲಿಸ್ ಮೊದಲಾದ ಖ್ಯಾತ ಮನಶ್ಶಾಸ್ತ್ರಜ್ಞರೂ ವಿಜ್ಞಾನಿಗಳೂ ವಿಶೇಷ ಅಧ್ಯಯನ ನಡೆಸಿದ್ದಾರೆ. ಅನೈಚ್ಛಿಕ ದೈಹಿಕ ಕ್ರಿಯೆಗಳಿಗೆ ಗದ್ದಲ ಅಡ್ಡಿಯಾಗುತ್ತದೆಂಬುದಕ್ಕೆ ಯಾವ ಪ್ರಾಯೋಗಿಕ ಸಾಕ್ಷ್ಯವೂ ದೊರೆತಿಲ್ಲ. ಆದರೆ ಬಲು ತೀವ್ರನಿರಂತರವೂ ಆದ ಕರ್ಕಶ ಶಬ್ದಗಳಿಂದ ಅನೈಚ್ಛಿಕ ದೈಹಿಕ ಕ್ರಿಯೆಗಳ ಮೇಲೂ ದುಷ್ಪರಿಣಾಮ ಉಂಟಾಗಬಹುದು. ಗದ್ದಲವಿದ್ದಾಗ ಮನಸ್ಸು ಚಟುವಟಿಕೆಯಿಂದ ಕೆಲಸ ಮಾಡಬಹುದು. ಏಕಾಗ್ರತೆ ಕೆಡುತ್ತದೆ. ಗದ್ದಲದ ಪ್ರತಿಘಾತವನ್ನು ಮೀರಿ ಕೆಲಸ ಮಾಡಲು ಮನುಷ್ಯ ಹೆಚ್ಚು ಹೆಣಗಬೇಕಾಗುತ್ತದೆ. ಓದುವ ಮಕ್ಕಳು ನರಳುವ ರೋಗಿಗಳು ಗದ್ದಲವನ್ನು ಸಹಿಸರು. ಆಗೊಮ್ಮೆ ಈಗೊಮ್ಮೆ ಉಂಟಾಗುವ ಗದ್ದಲಕ್ಕೆ ಯಾರೂ ದೈಹಿಕವಾಗಿ ಮಾನಸಿಕವಾಗಿ ಸಿದ್ಧರಾಗಿರುವುದಿಲ್ಲ. ಗದ್ದಲ ನಿರಂತರವಾಗಿದ್ದಲ್ಲಿ(ಯಾವುದೇ ಯಂತ್ರ ವಿಭಾಗದಲ್ಲಿ ತಲೆದೋರುವ ಶಬ್ದ) ಅಭ್ಯಾಸ ಬಲದಿಂದ ಮನುಷ್ಯನು ಸ್ವಲ್ಪಮಟ್ಟಿಗೆ ಅದಕ್ಕೆ ಹೊಂದಿಕೊಳ್ಳಬಲ್ಲ ಮಾತ್ರ. ತೀವ್ರತರನಾದ ಗದ್ದಲಕ್ಕೆ ಕೊಂಚ ಹೊತ್ತು ಕಿವಿಗೊಟ್ಟರೆ ತಾತ್ಕಾಲಿಕ ಕಿವುಡು ಉಂಟಾಗುತ್ತದೆ. ಬಹಳ ಹೊತ್ತು ಕಿವಿಗೊಟ್ಟದ್ದಾದರೆ ಗುಂಡಿಗೆ ಮತ್ತು ರಕ್ತನಾಳಗಳಿಗೆ ಸಂಬಂಧಿಸಿದ ಸಮತೋಲ ಏರುಪೇರಾಗುತ್ತದೆ. ಇದಲ್ಲದೆ ದೇಹದ ಅಂತಃಸ್ರಾವ, ನರಸಂಬಂಧಿ ಮುಂತಾದ ಕ್ರಿಯಾಚಟುವಟಿಕೆಗಳಲ್ಲಿ ಅಸ್ಥಿರತೆಯನ್ನು ಗದ್ದಲ ಉಂಟುಮಾಡಬಲ್ಲದು. ಅತ್ಯಧಿಕ ಗದ್ದಲದಿಂದ ತಲೆನೋವು ಮಾತ್ರವಲ್ಲದೆ, ಸುಸ್ತು, ತಲೆ ತಿರುಗು, ಅಸಾಮರ್ಥ್ಯ, ಅಧಿಕ ರಕ್ತ ಒತ್ತಡ, ಮಾಂಸಖಂಡಗಳ ಸೆಟೆತ, ಅಸಾಮಾನ್ಯ ಗುಂಡಿಗೆ ಬಡಿತ, ಮುಂತಾದವು ಉಂಟಾಗಬಹುದು ಎಂದು ವೈದ್ಯತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಯಾವ ಬಗೆಯ ಶಬ್ದ ನಮ್ಮ ಕಿವಿಯ ಮೇಲೆ ಬೀಳುತ್ತದೆ, ಕೇಳಿಸಿಕೊಳ್ಳುವಾತ ಯಾವ ಬಗೆಯದಾದ ಕೆಲಸವನ್ನು ಮಾಡುತ್ತಿರುತ್ತಾನೆ, ಎಷ್ಟರ ಮಟ್ಟಿಗೆ ಆ ಕೆಲಸದಲ್ಲಿ ಅತ ತಲ್ಲೀನನಾಗಿರುತ್ತಾನೆ ಎಂಬ ಅಂಶಗಳು ಗದ್ದಲ ಮುಖಶಬ್ದದ (ಗೋಮುಖವ್ಯಾಘ್ರ ಎಂಬಂತೆ) ಪರಿಣಾಮವನ್ನು ಎತ್ತಿ ತೋರಿಸುತ್ತವೆ. ಕಿವಿಯ ಮೇಲೆ ಬೀಳುವ ಶಬ್ದ ಗದ್ದಲವೋ ಅಲ್ಲವೋ ಎಂಬುದನ್ನು ನಿರ್ಧರಿಸುವುದು ಮುಖ್ಯವಾಗಿ ನಮ್ಮ ಮನಸ್ಸು ಎಂದೇ ದಾಸರೆಂದರು "ಬುದ್ಧಿಯಲ್ಲಿ ತನು ಮನವ ತಿದ್ದಿಕೊಳ್ಳಲೆ ಬೇಕು" ಎಂದು. ಎರಡು ಪರಿಮಿತಿಗಳ ಅಂತರದಲ್ಲಿ ಶಬ್ದದ ತೀವ್ರತೆ ಇದ್ದು ಮತ್ತೊಬ್ಬರಿಗೆ ಎಷ್ಟೇ ಅಪ್ಯಾಯಮಾನವಾಗಿದ್ದರು ಸಹ, ಬೇಡವಾದ 'ಶಬ್ದ' ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಂತೆ' ಎನ್ನುವಂತೆ ಆಗಿ ಗದ್ದಲವೇ ಆಗುತ್ತದೆ. ಆದಕ್ಕೆ ಹೇಳುವುದು '—ನ ಬ್ರೂಯಾತ್ ಶಬ್ದಮಪ್ರಿಯಂ' ಎಂದು. ✡

ಪ್ರಾರ್ಥನೆ

ಕುರುಡನ್ನ ಮಾಡೀಯುಯ್ಯಾ, ತಂದೆ
ಕಿವುಡನ್ನ ಮಾಡಿಗೀಡಿ, ನನ್ನನ್ನ
ಮೂಕನ್ನ ಮಾಡೀಯುಯ್ಯಾ......
ಕಾಂಬಲಿಕೆ ಬ್ಯೂಟಿಯುನು, ಕೇಳಲಿಕೆ ಮ್ಯೂಜಿಕ್ಕು
ಹಾಡಲಿಕೆ ಸಾಂಗುಗಳ — ಆಪರೇಶನ್ನೇ ಗತಿ...
ಬಹಳ ಎಕ್ಸ್‌ಪೆನ್ಸಿಯ್ಯು, ಪೆದ್ದಲಿಂಗ. -ಗೋವಾ

ಕಪ್ಪು ಜೇನ್ನೊಣದಿಂದ ಅವರಿಗೆಲ್ಲ ಕುರುಡು.

ಮೆಕ್ಸಿಕೋದಲ್ಲೊಂದು ಅಂಧಪುರ

ಗೋಪಾಲ ವಾಜಪೇಯಿ

ಮೆಕ್ಸಿಕೋದ ಸನಿಹದಲ್ಲಿನ ದ್ವೀಪವೊಂದರಲ್ಲಿ ಟುಲಪ್ಟಿಕ್ ಎಂಬುದೊಂದು ಹಳ್ಳಿ. ಸುಮಾರು ಏಳೆಂಟು ನೂರು ರೆಡ್ ಇಂಡಿಯನ್ನರು ಅಲ್ಲಿ ವಾಸಿಸುತ್ತಾರೆ. ಗೋವಿನಜೋಳದ ಪದಾರ್ಥಗಳು, ಅವರೆ ಕಾಳಿನ ತಿಂಡಿಗಳು ಇವರ ಮುಖ್ಯ ಆಹಾರ. ಜೊತೆಗೆ ಹಣ್ಣು-ಹುಪಲು. ಹಾಲು ಅಲ್ಲದೇ ಮಾಂಸವನ್ನೂ ಸೇವಿಸುವುದುಂಟು. ಬೇಸಾಯವೆ ಇವರ ಮುಖ್ಯ ಕಸಬು. ಕಲ್ಲು ಹಾಸಿಗೆಯ ಮೇಲೆ ರಾತ್ರಿ ಕಳೆಯುವ ಈ ಜನ ಒಂದು ರೀತಿಯಲ್ಲಿ ಇನ್ನೂ ಶಿಲಾಯುಗದವರೇ ಎನ್ನಬೇಕು. ಏಕೆಂದರೆ ಬೇಸಾಯಕ್ಕೆ ಬಳಸುವ ಬಹುತೇಕ ಉಪಕರಣಗಳು ಹಾಗೂ ಮನೆಯಲ್ಲಿನ ನಿತ್ಯೋಪಯೋಗಿ ಪಾತ್ರೆಗಳು ಕಲ್ಲಿನಿಂದಲೇ ತಯಾರಾದವುಗಳು. ಈ ಗ್ರಾಮದ ವೈಶಿಷ್ಟ್ಯ ಇಷ್ಟಕ್ಕೇ ಸೀಮಿತವಾಗಿಲ್ಲ. ಈ ಜನರೆಲ್ಲರೂ ಅಂಧರೆನ್ನುವುದೊಂದು ವಿಶೇಷ.

ಟುಲಪ್ಟಿಕ್ ಗ್ರಾಮದಲ್ಲಿ ಜನಿಸುವ ಪ್ರತಿ ಮಗುವೂ ಹುಟ್ಟಿದಾಗ ದೃಷ್ಟಿಯುಳ್ಳದ್ದಾಗಿರುತ್ತದೆ. ಆದರೆ ಬೆಳೆಯುವ ಮಗುವಿನ ಬಾಳು ಕೆಲವೇ ವಾರಗಳಲ್ಲಿ ಕುರುಡಾಗುತ್ತದೆ. ಟುಲಪ್ಟಿಕ್‌ದಲ್ಲಿರುವ ಮನುಷ್ಯಮಾತ್ರರಷ್ಟೇ ಅಲ್ಲ, ಇನ್ನುಳಿದ ಜೀವಿಗಳೂ ಇದಕ್ಕೆ ಹೊರತಾಗಿಲ್ಲ.

ಈ ಹಳ್ಳಿಯಲ್ಲಿ ಒಂದೇ ಒಂದು ಓಣಿಯಿದೆ. ರಸ್ತೆಯ ಇಕ್ಕೆಲಗಳಲ್ಲೂ ಕಿಟಕಿ ಬಾಗಿಲುಗಳಿರದ ಗುಡಿಸಲುಗಳಿವೆ. ಗುಡಿಸಲಿನ ಒಳಹೊರಗೆ ಕಲ್ಲು ಹಾಸಿಗೆಗಳು. ನಸುಕಿನಲ್ಲಿ ಕುರುಡು ಹಕ್ಕಿಗಳು ಹಾಡತೊಡಗಿದ ಕೂಡಲೇ ಇವರಿಗೆಲ್ಲ ಬೆಳಗು. ಅಂಧರ ನಿತ್ಯಕರ್ಮ ಪ್ರಾರಂಭ. ಗಂಡಸರೆಲ್ಲ ದುಡಿತಕ್ಕೆ ಹೊರಡುತ್ತಾರೆ. ಅವರ ಹೆಂಡುದಿರು ಮನೆಯ ಕೆಲಸಕ್ಕೆ ತೊಡಗುತ್ತಾರೆ. ಮಕ್ಕಳು ಕಾಲು ಸವರುತ್ತ ಒಂದೊಂದೇ ಹೆಜ್ಜೆಯಿರಿಸಿ ನಡೆಯುವುದನ್ನು ರೂಢಿಸಿಕೊಳ್ಳುತ್ತಾರೆ.


ಹಗಲಿಡೀ ದುಡಿದು ದಣಿದು ಹಳ್ಳಿಗೆ ಹಿಂತಿರುಗುವ ಗಂಡಸರಿಗೆ ಸಂಜೆ ಒಂದೆಡೆ ಸೇರಿ ಹರಟೆ ಹೊಡೆದು ನಕ್ಕು ನಲಿದರಾಯಿತು, ದಣಿವೆಲ್ಲ

ಹಾಳುಹೋಗುತ್ತವೆ. ಆದರೆ ಇಂಥ ಸಂದರ್ಭಗಳಲ್ಲಿ ಜಗಳ, ಹೊಡೆದಾಟಗಳಾಗುವುದೂ ಉಂಟು. ಇಲ್ಲಿ ಕುಳಿತಾಗ ರಬ್ಬರ್ ಹಾಲಿನಿಂದ ತಯಾರಿಸಿದ ಸರಾಯಿಯನ್ನು ಕುಡಿದು ಮತ್ತೇರಿಸಿಕೊಂಡು ನಂತರ ಮನೆಗೆ ಹೋಗಿ ಊಟ ಮಾಡಿ ಮಲಗಿ ಬಿಡುವ ಗಂಡಸರೇ ಬಹಳ.

ಈ ಅಂಧಪುರವನ್ನು ಮೊತ್ತ ಮೊದಲ ಬಾರಿಗೆ ಭೇಟಿಮಾಡಿ ಈ ಜನರ ಅಂಧತ್ವಕ್ಕೆ ಕಾರಣ ಹುಡುಕುವ ಯತ್ನಕ್ಕೆ ಕೈ ಹಾಕಿದವರು ಮೆಕ್ಸಿಕೋದ ಹೆಸರಾಂತ ಸಮಾಜ ಶಾಸ್ತ್ರಜ್ಞರಾದ ಡಾ. ಗ್ಯಾಮೋನ್. ೧೯೨೭ರಲ್ಲಿ ಅಲ್ಲಿಗೆ ಹೋಗಿ ಉಳಿದು ವಿಶೇಷ ಅಧ್ಯಯನ ನಡೆಸತೊಡಗಿದ ಡಾ. ಗ್ಯಾಮೋನ್ ಕೆಲವೇ ದಿನಗಳಲ್ಲಿ ಅಲ್ಲಿಂದ ತಮ್ಮ ಗಂಟು ಮೂಟೆ ಕಟ್ಟಬೇಕಾಯಿತು. ವಾರವೊಂದರಲ್ಲೇ ಅವರಿಗೆ ಅಂಧತ್ವದ ಲಕ್ಷಣಗಳು ಕಾಣಿಸತೊಡಗಿದವು.

ಹದಿನೇಳನೆಯ ಶತಮಾನದಲ್ಲಿ ಈ 'ಅಂಧಪುರ'ದ ಬಗ್ಗೆ ಅರಿತುಕೊಂಡವರು ಸ್ಪೇನಿನ ಜನ. 'ಲಾವರ್ ಢೋಯಿಜಾ' ಎಂಬ ಹಳೆಯ ಕಾಲದ ಮರವೊಂದು ಟುಲಪ್ಟಿಕ್‌ನಲ್ಲಿದೆ; ಅದನ್ನು ದೃಷ್ಟಿಸಿ ನೋಡಿದ ಜೀವಿಗಳೆಲ್ಲಾ ಕಣ್ಣು ಕಳೆದುಕೊಳ್ಳುತ್ತವೆ ಎಂಬುದೊಂದು ಟುಲಪ್ಟಿಕ್ ಹಳ್ಳಿಯ ಸುತ್ತಲ ಊರುಗಳಲ್ಲಿರುವ ನಂಬಿಕೆ. ಆದರೆ ಈ ನಂಬಿಕೆಗೆ ಆಧಾರವಿಲ್ಲವೆನ್ನುವುದು ಸ್ವಯಂಸಿದ್ಧ.

ಅನೇಕ ವರ್ಷಗಳ ಅನ್ವೇಷಣೆಯ ನಂತರ ಕೆಲ ವಿಜ್ಞಾನಿಗಳು ಈ ಜನರ ಬಗ್ಗೆ ಒಂದು ಅಭಿಪ್ರಾಯಕ್ಕೆ ಬಂದಿದ್ದಾರೆ. ಅವರ ಶೋಧನೆಯ ಪ್ರಕಾರ ಇನ್‌ಕರ್‌ಸ್ಟಾಸ್ ಎಂಬ ಜೇನ್ನೊಣವೊಂದು ಈ ಜನರ ಕುರುಡಿಗೆ ಕಾರಣ. ಈ ಜೇನ್ನೊಣದ ರೆಕ್ಕೆ ಕಾಲುಗಳಲ್ಲಿ ಬೆಳೆಯುವ ಒಂದು ಬಗೆಯ ಕ್ರಿಮಿಗಳಿಂದಾಗಿ ಕುರುಡುತನ ಹರಡುತ್ತದೆ. ಇನ್‌ಕರ್‌ಸ್ಟಾಸ್ ಒಂದೂವರೆ ಅಂಗುಲ ಉದ್ದದ ಕಪ್ಪು ಜೇನ್ನೊಣ. ✡



ಕೈರೋದ ಅಖ್‌ಬಾರ ಎಲ್‌ಯೋಮ್ ಪತ್ರಿಕೆ ಇಜಿಪ್ತ ದೇಶದಲ್ಲಿರುವ ಕುರುಡು ನಂಬಿಕೆಗಳ ಬಗ್ಗೆ ವಿವರಗಳನ್ನು ಸಂಗ್ರಹಿಸಿ ಆ ದೇಶದ ೪ ಸಾವಿರ ಗ್ರಾಮಗಳಲ್ಲಿ ಪ್ರತಿಯೊಂದರಲ್ಲೂ ಕನಿಷ್ಠ ಒಬ್ಬ ಮಂತ್ರವಾದಿಯಾದರೂ ಇದ್ದಾನೆಂದೂ, ಇಜಿಪ್ಶಿಯನ್ನರಲ್ಲಿ ಈಗ ೩೬೪೧ ಕುರುಡು ನಂಬಿಕೆಗಳಿವೆ ಎಂದೂ ಪ್ರಕಟಿಸಿದೆ.

ಆ ಪ್ರಕಾರ ಸೂರ್ಯಾಸ್ತದ ಬಳಿಕ ಒಬ್ಬ ಕನ್ಯೆ ಕನ್ನಡಿ ನೋಡಿದರೆ ಅವಳು ಜೀವನ ಪೂರ್ತಿ ಅವಿವಾಹಿತಳಾಗಿಯೇ ಉಳಿಯುವಳೆಂಬ, ತಾಯಿ ಮದುಮಗಳ ತಲೆಯ ಮೇಲೆ ವಿವಾಹದ ಸಮಯದಲ್ಲಿ ಕತ್ತರಿ ಬಿಡಿಸಿ ಹಿಡಿದರೆ ಮಗಳ ವೈವಾಹಿಕ ಜೀವನ ಸುಖಮಯವಾಗುವುದೆಂಬ, ಕುದುರೆ ಲಾಳಗಳನ್ನು ರೈತರು ತಮ್ಮ ಕೋಣಗಳ ಕುತ್ತಿಗೆಗೆ ಕಟ್ಟಿದರೆ ಅವುಗಳಿಗೆ ಯಾವ ಬಾಧೆಯೂ ಬರುವದಿಲ್ಲವೆಂಬ, ತನ್ನ ಎರಡನೇ ಹೆಂಡತಿಯನ್ನು ತ್ಯಜಿಸಬೇಕಾದರೆ ಸತ್ತ ಮನುಷ್ಯನೊಬ್ಬನ ಹಲ್ಲನ್ನು ತೆಗೆದು ಪುಡಿಮಾಡಿ ಎರಡನೇ ಹೆಂಡತಿಯ ತವರು ಮನೆಯ ಹೊಸ್ತಿಲ ಮೇಲೆ ಚೆಲ್ಲಬೇಕೆಂಬ ಮೂಢನಂಬಿಕೆಗಳು ಇಲ್ಲಿ ಪ್ರಚಲಿತವಾಗಿವೆ.

-ಯು. ಎಸ್. ಶ್ರೀನಿವಾಸರಾವ್


ದೃಕ್‌ಸಿದ್ಧಾಂತದ
ಮೊಟ್ಟಮೊದಲ ಪಂಚಾಂಗ

ಬಗ್ಗೋಣ ಪಂಚಾಂಗ

ಎಂ. ವಿ. ಶರ್ಮಾ, ತದ್ದಲಸೆ

ಗಗನ ಮಂಡಲದಲ್ಲಿರುವ ಗ್ರಹಗಳು ತಮ್ಮ ಕಕ್ಷಾಪಥದಲ್ಲಿ ಸಂಚರಿಸುವಾಗ ರಾಶಿ ನಕ್ಷತ್ರಗಳ ನಿರ್ದಿಷ್ಟ ಬಿಂದುವಿಗೆ ಅವುಗಳ ಸಂಬಂಧ ಬಂದಾಗ ಸೃಷ್ಟಿಯ ಮೇಲೆ ಆಗುವ ವಿಶಿಷ್ಟ ಪರಿಣಾಮಗಳನ್ನು ಗಮನಿಸಿ ಆಯಾ ಕಾಲದ ಶುಭ ಅಶುಭ ಮುಹೂರ್ತಗಳನ್ನು ಪ್ರತಿಪಾದಿಸುವ ಪ್ರಯತ್ನವು ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. ಗ್ರಹಗಳ ಸಂಚಾರವು ಪ್ರತಿ ಮಾನವ ಜೀವಿಯ ಮೇಲೆ ನಿತ್ಯವೂ ಎಷ್ಟರ ಮಟ್ಟಿಗೆ ಪರಿಣಾಮ ಉಂಟುಮಾಡುವುದೆಂದು ಅರಿಯುವ ಆತುರ ಭಾರತೀಯರಲ್ಲಿ ಬಹಳವಾಗಿ ಇದೆ. ದಿನದ ಪ್ರತಿ ನಿಮಿಷದ ಶುಭ-ಅಶುಭ ಮುಹೂರ್ತಗಳ ಪರಿಜ್ಞಾನ ಪಡೆಯುವುದು ಅತ್ಯ ಕರ್ತ-ವ್ಯವಾಗಿದೆ. ವೈದಿಕ ಸಂಸ್ಕಾರ ಕರ್ಮಗಳಿಗಷ್ಟೇ ಅಲ್ಲ, ಕೃಷಿ ಶಿಲ್ಪ ಪ್ರಯಾಣ ವಾಣಿಜ್ಯ ವ್ಯವಹಾರಗಳಿಗೂ ಮುಹೂರ್ತಗಳು ಮಹತ್ವದ್ದೆನಿಸಿವೆ. ಜನಸಮುದಾಯದ ಈ ಅಪೇಕ್ಷೆಯನ್ನು ಲಕ್ಷಿಸಿ ಪಂಡಿತೋತ್ತಮರು ಪರಿಶ್ರಮಪೂರ್ವಕವಾಗಿ ಮುಹೂರ್ತಗಳನ್ನು ನಿರ್ಧರಿಸಿದರು. ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳನ್ನೊಳಗೊಂಡ ಪಂಚಾಂಗಗಳನ್ನು ಪ್ರಕಟಿಸಿ ಪರೋಪಕಾರಿಗಳಾದರು.

ಮುದ್ರಣ ಯಂತ್ರಗಳ ನೆರವು ಇಲ್ಲದಿರುವ ಕಾಲದಲ್ಲಿ ಕೂಡ ಕೈಬರಹದ ಪಂಚಾಂಗಗಳು ಪ್ರಸಾರವಾಗಿವೆ. ಉತ್ತರ ಕನ್ನಡ ಜಿಲ್ಲೆಯ 'ಬಗ್ಗೋಣ' ಪಂಚಾಂಗವು ಹಸ್ತಪ್ರತಿಯಾಗಿಯೇ ಹಳ್ಳಿಗಳಲ್ಲಿ ಪ್ರಚಲಿತವಲ್ಲಿದ್ದದ್ದು ತಿಳಿದು ಬರುತ್ತದೆ. ಕುಮಟಾ ತಾಲೂಕಿನ ಬಗ್ಗೋಣ ಹೆಸರಿನ ಊರಿನ ಪಂಡಿತರು ಪ್ರತಿ ವರ್ಷದ ಪಂಚಾಂಗದ ಪ್ರತಿಗಳನ್ನು ಕೈ ಬರಹದಲ್ಲಿ ಸಿದ್ಧಪಡಿಸಿ ಊರೂರುಗಳಿಗೆ ಸ್ನೇಹಿತರಿಗೆ ಕಳುಹಿಸುತ್ತಿದ್ದರು. ಅಲ್ಲಿಯ ಆಸುಪಾಸಿನ ಜನರು ಆ ಹಸ್ತಪ್ರತಿ ಇರುವವರ ಮನೆಗೆ ಹೋಗಿ ತಿಥಿಗಳನ್ನು, ಹಬ್ಬ ಹುಣ್ಣಿಮೆಗಳನ್ನು ತಿಳಿದುಕೊಳ್ಳುತ್ತಿದ್ದರು. [illegible] ಬರುವ ವರೆಗೂ ಹಸ್ತಪ್ರತಿಗಳ ಹಂಚುವಿಕೆ ನಡೆಯಿತು. ಮುದ್ರಣ ಯಂತ್ರಗಳು ಬಂದ ನಂತರ ಬಗ್ಗೋಣ ಪಂಚಾಂಗಗಳ ಮುದ್ರಣ ಶುರುವಾಯಿತು. ಈಗ್ಗೆ ೮೮ ವರುಷಗಳ ಹಿಂದೆ ಕ್ರಿ.ಶ. ೧೮೯೦ ರಲ್ಲಿ



ಈಶ್ವರ ಸಂವತ್ಸರದಲ್ಲಿ ಪ್ರಥಮ ಮುದ್ರಿ
ಬಗ್ಲೋಣ ಪಂಚಾಂಗ ಮಾರುಕಟ್ಟೆಗೆ ಬಂತು
ಆಗ ಕೇವಲ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾತ್
ಈ ಪಂಚಾಂಗ ಪರಿಚಿತವಾಯಿತು. ಆ ಕಾ
ದಲ್ಲಿ ಎರಡು ಜಿಲ್ಲೆಬೆಲೆಯ ಮೂರು ಸಾವಿ
ಪ್ರತಿಗಳು ಮಾರಾಟವಾಗುತ್ತಿದ್ದವು. ಮುಂ
ಪ್ರಸಾರ ಸಂಖ್ಯೆ ಐದು ಸಾವಿರಕ್ಕೇರಿತು. ಬೆಲೆಯು
ಎರಡೂವರೆ ಜಿಲ್ಲೆಯಾಯಿತು. ಪರಿಶುದ್ಧ ಪರಿಷ್ಕಾ
ದಿಂದಾಗಿ ಪಂಚಾಂಗವು ಎಂಟು ಸಾವಿರ ಪ್ರತಿಯೊ
ದಿಗೆ ಜಿಲ್ಲೆಯ ಗಡಿ ದಾಟಿತು. ಆದರೆ ಮುದ್ರ
ವೆಚ್ಚ ಹೆಚ್ಚಾಗಿ ಪಂಚಾಂಗದ ಬೆಲೆ ಎಂಟ
ಆಣೆಗೆ ಏರಿತು. ದಿನದಿಂದ ದಿನಕ್ಕೆ ಪಂಚಾಂ
ಜನಪ್ರಿಯವೆನಿಸಿ ಪ್ರಸಾರ ಹನ್ನೆರಡು ಸಾವಿ
ಮುಟ್ಟಿತು. ಹೆಚ್ಚಿನ ಲಾಭಾಪೇಕ್ಷೆ ಇಲ್ಲದ
ಜನಾನುಕೂಲಕ್ಕಾಗಿ ಪಂಡಿತರು ಪಂಚಾಂಗ

← ಕಲ್ಲಚ್ಚಿನಲ್ಲಿ ಪ್ರಕಟವಾಗುತ್ತಿದ್ದ
ಪಂಚಾಂಗದ ಮುಖಪು

ರಚನೆಯನ್ನು ಮುಂದುವರಿಸಿಕೊಂಡು ಹೋದದ್ದು
ಗಮನಾರ್ಹ.

ವಿದ್ಯಾಮಾಧವ **ಪಂಡಿತರು** ಬಗ್ಲೋಣ
ಪಂಚಾಂಗದ ಮೂಲ ಪುರುಷರು. ಇವ
ಜೀವಿತ ಕಾಲ ಸುಮಾರು ನಾಲ್ಕು ನೂರು ವರ್ಷ
ಗಳ ಹಿಂದೆ. 'ಮುಹೂರ್ತ ಮಾಧವಿ' ಎಂಬ
ಅಪೂರ್ವ ಹೋರಾ ಗ್ರಂಥವನ್ನು ರಚಿಸಿದರು
ಗುಣವಂತೆಯೆಂಬ ಗ್ರಾಮದಲ್ಲಿ ಜನಿಸಿ
ಇವರು] ತಮ್ಮ ಕುಲದೈವ ಶ್ರೀ ಮಹಾ
ಗಣಪತಿಯ ಉಪಾಸನೆಯಿಂದಾಗಿ ಸ್ವಾಧೀ
ವಾಗ್‌ಬ್ರಹ್ಮರೆನಿಸಿದ್ದರು. ಕಾವ್ಯ- ಶಾಸ್ತ್ರಗಳ
ಪರಿಶುದ್ಧ ಪಾಂಡಿತ್ಯವುಳ್ಳವರಿದ್ದು ಬ
ವಾಸಿಯ ಆಸ್ಥಾನ ಪಂಡಿತರಾಗಿದ್ದರೆಂಬುದಕ
ಸಾಕಷ್ಟು ಆಧಾರಗಳಿವೆ. ಆ ಕಾಲದಲ್ಲಿ ಅ
ಮನೆಯಲ್ಲಿ ಪಂಚಾಂಗದ ನಿತ್ಯಶ್ರವಣ ರೂ
ಯಲ್ಲಿತ್ತು. ಮಾಧವ ಪಂಡಿತರಿಗೆ ಈ ಹೊ
ಹೊರಿಸಲ್ಪಟ್ಟಿತ್ತು. ಒಂದು ದಿನ ಅನಾನುಕೂ
ದಿಂದಾಗಿ ಅವರು ತಮ್ಮ ಮಗನನ್ನು ಅರಮನ


ಕಳಿಸಬೇಕಾಯಿತಂತೆ. ಆ ಹುಡುಗನಿಗೆ ರಾಜರು ಹಲವಾರು ಪ್ರಶ್ನೆಗಳನ್ನು ಕೇಳಿದರಂತೆ. ತಬ್ಬಿಬ್ಬಾದ ಆತ 'ಅಷ್ಟಮಿ ದಿನ ಗ್ರಹಣವಾಗುತ್ತದೆ' ಎಂದು ಹೇಳಿಬಿಟ್ಟನಂತೆ. ಮುಂದೆ ವಂಶದ ಮಾನವನ್ನುಳಿಸುವದಕ್ಕಾಗಿ ಮಾಧವ ಪಂಡಿತರು ಸೂರ್ಯದೇವನನ್ನು ಕುರಿತು ತಪಸ್ಸು ಮಾಡಿ, ತಮ್ಮ ಪುಣ್ಯ ಫಲವನ್ನೆಲ್ಲ ಧಾರೆಯೆರೆದು ಅದರ ಫಲವಾಗಿ ಅಷ್ಟಮಿ ದಿನವೇ ಗ್ರಹಣವು ಗೋಚರಿಸುವಂತೆ ಮಾಡಿ, ತಮ್ಮ ಮಾನ ಜೀವ ಎರಡನ್ನೂ ಪಣಕ್ಕೆ ಹಚ್ಚಬೇಕಾಗಿ ಬರುವ ಇಂಥ ರಾಜರ ಆಶ್ರಯ ಲೇಸಲ್ಲ ಎಂದು ಆಸ್ಥಾನವನ್ನೇ ತ್ಯಜಿಸಿ ಬಂದರು ಎಂಬುವಾಗಿ ಮುಹೂರ್ತ ಮಾಧವೀ ಗ್ರಂಥದಲ್ಲಿ ಆಖ್ಯಾಯಿಕೆಯಿದೆ. ಇದರ ಸತ್ಯಾಂಶ ಏನೇ ಇರಲಿ, ಮಾಧವ ಪಂಡಿತರು ಮಹಾ ವಿದ್ವಾಂಸರಾಗಿದ್ದರು, ಆಸ್ಥಾನ ಪಂಡಿತರಾಗಿದ್ದರು ಎಂಬ ಮಾತಂತೂ [illegible]. ಈಗಲೂ [illegible]



ಮುದ್ರಣಗೊಂಡ ಪಂಚಾಂಗದ ಮುಖಪುಟ —

[illegible] 'ಅಷ್ಟಮಿ ದಿನ ಗ್ರಹಣ' [illegible] ಎಂದು [illegible] ಮಾಧವ [illegible] ಜ್ಯೋತಿಶ್ಶಾಸ್ತ್ರದ [illegible] (ಗಣಿತ–ಮುಹೂರ್ತ–ಫಲ) ಗಳಲ್ಲೂ ಪರಿಣತರಾಗಿದ್ದರು. ಇದೇ ವಂಶದ ಕೇಶವ ಪಂಡಿತರೆಂಬುವರು 'ಮುಹೂರ್ತ ಶತಕ' ಎಂಬ ಗ್ರಂಥ ಬರೆದರು. ಶ್ರೀ ಮಾಧವ ಪಂಡಿತರಿಂದ ಆರಂಭವಾದ ಪಂಚಾಂಗ ರಚನೆಯ ಪರಿಪಾಠವು ಈಗ ಪರಿಶ್ರಮಪೂರ್ಣವಾಗಿ ಪ್ರಯೋಜನಕರವಾಗಿ ಮುಂದುವರಿಯುತ್ತಾ ಸಾಗಿದೆ.

ಮಾಧವ ಪಂಡಿತರಿಗೆ ರಾಜಾಶ್ರಯದ ನೆಲೆ ತಪ್ಪಿದ ನಂತರ ಅವರು ತಮ್ಮ ಜನ್ಮಸ್ಥಳವಾದ ಗುಣವಂತೆ, ಇಡಗುಂಜಿ ಅಗ್ರಹಾರಗಳಲ್ಲಿ [illegible] ಅಘನಾಶಿನೀ ಮತ್ತು ಗೋಕರ್ಣಗಳಲ್ಲಿ ವಾಸ್ತವ್ಯ [illegible]



ದರು. ಜ್ಯೋತಿಶ್ಶಾಸ್ತ್ರದಲ್ಲಿನ ತಮ್ಮ ತಿಳುವಳಿಕೆಯನ್ನು ಮನೆತನದ ಮಾನ – ಗೌರವಗಳ ಮಾಧ್ಯಮವನ್ನಾಗಿಟ್ಟುಕೊಂಡು ತಾವು ನೆಲೆಗೊಂಡ ಊರು ಸೀಮೆಗಳಲ್ಲಿ ಅಗ್ರಗಣ್ಯ ಪ್ರತಿಭಾಶಾಲಿಗಳಾಗಿ ಬಾಳಿದರು. ಪಂಡಿತರ ಮನೆತನಕ್ಕೆ ಗೋಕರ್ಣದ ಶ್ರೀ ಮಹಾಬಲೇಶ್ವರ ಸಂಸ್ಥಾನದಲ್ಲಿ ಯಾಜಮಾನ್ಯ ಮತ್ತು ಬ್ರಹ್ಮತ್ವಗಳ ಉಪಾಧಿಯು ಈಗಲೂ ಇದೆ. 'ಬ್ರಹ್ಮಾಪಾಯ' ವೆಂಬ ಕೊಡುಗೆ ೧೯೭೨ರ ತನಕ ಬರುತ್ತಿತ್ತು. ಶ್ರೀ ರಾಮಚಂದ್ರಾಪುರ ಮಠ, ಶ್ರೀ ಸ್ವರ್ಣವಲ್ಲೀ ಮಠ ಸಂಸ್ಥಾನಗಳಲ್ಲಿ ವಿಶೇಷ ಮಾನ್ಯತೆಯಿತ್ತು. ಆದರೆ ಈ ಪಂಡಿತ ಪರಂಪರೆಗೆ ಪಂಚಾಂಗ ರಚನೆಯಿಂದ ಆರ್ಥಿಕವಾಗಿ ಯಾವ ಅನುಕೂಲತೆಯೂ ಆಗದೇ ಜೀವನ ನಿರ್ವಹಣೆ ಕಷ್ಟದ್ದಾಯಿತು. ಇವರ ಪಾಲಿಗೆ ಕೇವಲ

← ಮುದ್ರಣಾರಂಭದ ನಂತರ ಪಂಚಾಂಗದ ಹಿಂಬದಿಯ ಪುಟ

ಗುರುಗೌರವದ ಸದ್ಭಾವನೆಯಷ್ಟೇ ಸಂಪಾದ್ಯವಾಯಿತು.

ಮಾಧವ ಪಂಡಿತರ ವಂಶಜರೇ ಆದ ಬಗ್ಗೋಣದ, ರಾಮಾ ತಿಮ್ಮಣ್ಣ ಪಂಡಿತರ ಹಿಂದಿನವರ ಚರಿತ್ರೆ ಅಷ್ಟು ಸ್ಪಷ್ಟವಾಗಿಲ್ಲ. ಅವರು ಮೂರು ವರ್ಷದವರಿರುವಾಗಲೇ ತಂದೆಯನ್ನು ಕಳೆದುಕೊಂಡು ಸೋದರಮಾನವನಲ್ಲಿ ಬೆಳೆದರು. ಅವರ ಚಿಕ್ಕಪ್ಪ ಮಲೆಯಾಳಕ್ಕೆ ಹೋಗಿ, ಪರಿಷ್ಕೃತ ಗಣಿತ ಗ್ರಂಥ, ಸದ್ರತ್ನಮಾಲಾ ಮುಂತಾದವುಗಳನ್ನಲ್ಲದೇ ಫಲ ಮುಹೂರ್ತ ಗ್ರಂಥಗಳ ಅಧ್ಯಯನವನ್ನು ಕೈಗೊಂಡಿದ್ದರು. ತಮ್ಮ ಜಾತಕದ ಮೇಲಿಂದ ತಾನು ಹೆಚ್ಚು ಕಾಲ ಬದುಕುವುದಿಲ್ಲವೆಂದು ತಿಳಿದ ಅವರು ತಮಗಂತೂ ಮಕ್ಕಳಿಲ್ಲ, ತನ್ನ ಅಣ್ಣನ ಮಗನಲ್ಲಾದರೂ (ರಾಮ ಪಂಡಿತನಲ್ಲಿ) ಈ ವಿದ್ಯೆ ಮುಂದುವರಿಯುವಂತಾಗಲೆಂದು ಅಪೇಕ್ಷಿಸಿದರು. ಅಲ್ಲದೆ ತಮ್ಮ ಗುರುಗಳಾದ ಮಲೆಯಾಳದ ಸುವಿಖ್ಯಾತ ಪಂಡಿತರಾದ ಶ್ರೀರಾಮ ಮದುವಾ

ತನ್ನ ಊರಿಗೆ ಹೋಗಿ ಬಾಲಕ ರಾಮನಿಗೆ ಜ್ಯೋತಿಷ್ಯದ ಸರ್ವ ರಹಸ್ಯವನ್ನು ಕಲಿಸಿ ಕೊಡಬೇಕೆಂದು ವಿನಂತಿಸಿಕೊಂಡರು. ಕೆಲ ದಿನಗಳಲ್ಲಿಯೇ ಅವರು ಕಾಲವಾದರು. ಪಂಡಿತ ಮುದುವಾಳ ಸೋದರರಿಬ್ಬರೂ ಶಿಷ್ಯ ವಾತ್ಸಲ್ಯದಿಂದ ಬಗ್ಗೋಣಕ್ಕೆ ಬಂದು ಕೆಲಕಾಲ ಉಳಿದು ಬಾಲಕ ರಾಮ ಪಂಡಿತನಿಗೆ ಗ್ರಹಗಣಿತಾದಿಗಳ ಪರಿಷ್ಕೃತ ಪರಿಜ್ಞಾನ ಮಾಡಿಕೊಟ್ಟು ಜ್ಯೋತಿಶ್ಶಾಸ್ತ್ರದ ಭದ್ರ ಪಂಚಾಂಗ ಹಾಕಿ ಹೋದರು. ನಂತರ ಶ್ರೀ ರಾಮ ಪಂಡಿತರು ಸತತ ಪರಿಶ್ರಮ ಅಧ್ಯಯನಗಳಿಂದ ಪಂಚಾಂಗ ರಚನೆಯಲ್ಲಿ ಪ್ರತಿಭಾವಂತರಾಗಿ ತಮ್ಮ ಪೂರ್ವಜರಿಂದ ಬಂದ ಪಂಚಾಂಗ ರಚನೆಯನ್ನು ಮುಂದುವರಿಸಿದರು.

ಆ ಕಾಲದಲ್ಲಿ ಬಗ್ಗೋಣದ ಸನಿಹವೇ ಆದ ಕೆಕ್ಕಾರು, ಊರಕೇರಿಗಳಲ್ಲೂ ಪಂಚಾಂಗವನ್ನು ಕೆಲ ವಿದ್ವಾಂಸರು ತಯಾರಿಸತೊಡಗಿದ್ದರು. ಅವೆಲ್ಲ ಸೂರ್ಯಸಿದ್ಧಾಂತದಂತೆ ಬರೆಯಲ್ಪಟ್ಟವು. ಒಮ್ಮೊಮ್ಮೆ ಅವುಗಳಲ್ಲಿ ಗ್ರಹಣ ಬರೆದಿದ್ದರೂ ಗ್ರಹಣವು ಕಾಣಿಸಿಕೊಳ್ಳುತ್ತಿದ್ದಿಲ್ಲ! ಆದರೆ ಅಷ್ಟರಲ್ಲಾಗಲೇ ಬಗ್ಗೋಣ ರಾಮ ಪಂಡಿತರು ಪರಹಿತ, ಸದ್ರತ್ನಮಾಲಾ ಮುಂತಾದ ಪರಿಷ್ಕೃತ ತತ್ಕಾಲೀನ ದೃಕ್‌ಗಣಿತ ಗ್ರಂಥಗಳನ್ನು ಅನುಸರಿಸಿ ಪಂಚಾಂಗ ರಚಿಸುತ್ತಿದ್ದ ಕಾರಣ ಬಗ್ಗೋಣ ಪಂಚಾಂಗದಲ್ಲಿ ಬರೆದ ಗ್ರಹಣಗಳೆಲ್ಲವೂ ಸ್ಪಷ್ಟವಾಗಿ ಸಮಯಕ್ಕೆ ಸರಿಯಾಗಿ ಗೋಚರಿಸುತ್ತಿದ್ದವು. ಜನರ ಒಲವೂ ಅಭಿಮಾನವೂ ತಾನಾಗಿಯೇ ಬಗ್ಗೋಣ ಪಂಚಾಂಗದ ಬಗೆಗೆ ಬೆಳೆಯಿತು. ಇದೇ ಸಮಯದಲ್ಲಿ ಮಹಾರಾಷ್ಟ್ರ, ಇಂದೂರು, ಕಾಶಿ ಹಲವು ಕಡೆಗಳಲ್ಲಿ ಹಳೆ ಹೊಸ ಪಂಚಾಂಗವಾದಿಗಳ ವಾದ ವಿವಾದ, ವಿಚಾರ ವಿಮರ್ಶೆಗಳು ಬಹಳವಾಗಿ ನಡೆಯಿತು. ಲೋಕಮಾನ್ಯ ಟಿಳಕರು ಹೊಸ ದೃಕ್ ಸಿದ್ಧಾಂತ ಪಂಚಾಂಗದ ಸಮರ್ಥಕರಲ್ಲಿ ಅಗ್ರಗಣ್ಯರಾಗಿದ್ದರು. ಕೇಸರಿ ಪತ್ರಿಕೆಯಲ್ಲಿ ಪಂಚಾಂಗಗಳ ಪರಿಸ್ಥಿತಿ, ಪರಿಷ್ಕಾರಗಳ ಬಗೆಗೆ ಲೇಖನಗಳನ್ನು ಬರೆದರು. "ಸೂರ್ಯಸಿದ್ಧಾಂತಾದಿ ಹಳೆಯ ಗಣಿತ ಗ್ರಂಥಗಳನ್ನಾಧರಿಸಿ ತಯಾರಿಸಿದ ಪಂಚಾಂಗಗಳು ಪ್ರತ್ಯಕ್ಷಕ್ಕೆ ಸರಿ ಬರುವುದಿಲ್ಲ. ದೃಕ್ ಪ್ರತ್ಯಯಕ್ಕೆ ಸರಿ ಬರುವಂಥ ಪರಿಷ್ಕೃತ ಗಣಿತ ಗ್ರಂಥಗಳನ್ನೇ ಆಧರಿಸಿ ತಯಾರಿಸಿದ ಪಂಚಾಂಗಗಳೇ ದೃಕ್ ಪ್ರತ್ಯಯಕ್ಕೆ ಸರಿ ಬರುವವು. ಅವುಗಳನ್ನೇ ಅನುಸರಿಸಿ ಧರ್ಮ ಕರ್ಮಾಚರಣೆಗೆ ಮಾಡಬೇಕು" ಎಂದು ಸ್ಪಷ್ಟವಾಗಿ ತಮ್ಮ ಲೇಖನ, ಭಾಷಣ, ಸಭೆ ಸಮ್ಮೇಲನಗಳಲ್ಲಿ ಪ್ರತಿಪಾದಿಸಿದರು. ಪುಣೆಯ ಛತ್ರೆ, ರಘುನಾಥ ಪಂತ, ಲಕ್ಷ್ಮಣ ದಫ್ತರಿ, ಬಾಪೂಜಿ ಕೇತಕರ, ಇಂದೂರಿನ ದೀನಾನಾಥ ಶಾಸ್ತ್ರಿ ಚುಲೆಟ್ ಮುಂತಾದ ಪ್ರಸಿದ್ಧ ಜ್ಯೋತಿರ್ವಿದ್ವಾಂಸರು ಗ್ರಹ ಗಣಿತವನ್ನು ಪರಿಷ್ಕರಿಸಿ ಅದರಂತೆ ಪಂಚಾಂಗ ತಯಾರಿಸಲು ಆರಂಭಿಸಿದರು. ಲೋಕಮಾನ್ಯ ಟಿಳಕರು ದೃಕ್ ಪಂಚಾಂಗವನ್ನೇ ಎತ್ತಿ ಹಿಡಿದಿದ್ದರಿಂದ ಪಂಚಾಂಗ ಕರ್ತರಿಗೆ ಹೊಸ ಸ್ಫೂರ್ತಿ ಬಂದಿತು. ದಕ್ಷಿಣ ಕನ್ನಡದಲ್ಲಿ ಯರ್ಮುಂಜೆ ಶಂಕರ ಜೋಯಿಸರು ದೃಕ್ ಪಂಚಾಂಗವನ್ನು ತಯಾರಿಸಿ ಲೇಖನ ಪ್ರಕಟಣೆ, ಭಾಷಣ, ಪತ್ರ ವ್ಯವಹಾರಗಳನ್ನು ಆರಂಭಿಸಿದರು. ಬಗ್ಗೋಣದ ರಾಮ ಪಂಡಿತರಿಗೆ ಸೂಕ್ಷ್ಮವಾಗಿಯೂ ದೃಕ್ ಪ್ರತ್ಯಯಕ್ಕೆ ಸರಿಯಾಗಿ ಬರುವ ಪಂಚಾಂಗ ಮಾಡಬೇಕೆಂದಿದ್ದರೂ ಅದನ್ನು ಸರಿಯಾಗಿ ತಿಳಿಸಿ ಹೇಳುವವರು ಸಿಕ್ಕಿರಲಿಲ್ಲ. ಇದೇ ಕಾಲ ಬಾಪೂ ವೆಂಕಟೇಶ ಕೇತರಕರ ಮುದ್ರಿತ ಜ್ಯೋತಿರ್ಗಣಿತದ ಒಂದು ಪ್ರತಿ ರಾಮ ಪಂಡಿತರಿಗೆ ದೊರಕಿತು. ರಾಮ ಪಂಡಿತರ ಬಂಧುಗಳಾದ ಗೋಕರ್ಣದ ವೆಂಕಟರಮಣ ಪಂಡಿತರು ಜ್ಯೋತಿಷ್ಯ ಗ್ರಹ ಗಣಿತಗಳಲ್ಲಿ ಶ್ರೀ ರಾಮ ಮುದುವಾಳರ ಕೈಯಲ್ಲಿ ತರಬೇತುಗೊಂಡು ರವಿಸ್ಫುಟ, ಚಂದ್ರಸ್ಫುಟಾದಿಗಳಲ್ಲಿ ಪರಿಣತರಾಗಿದ್ದರು. ಸಮಗ್ರ ಪಂಚಾಂಗ ಗಣಿತವನ್ನೇ ಪರಿಷ್ಕಾರವಾಗಿಸಿಕೊಂಡು ಪಂಚಾಂಗ ತಯಾರಿಸುವ ಹೆಬ್ಬಯಕೆ ಅವರದು. ಅದಕ್ಕಾಗಿ ಸ್ವತಃ ಪರಿಶ್ರಮದಿಂದ 'ಕರಣ ಕಲ್ಪಲತಾ' ಮತ್ತು 'ಜ್ಯೋತಿರ್ಗಣಿತ' ಎಂಬ ನೂತನ

ದೃಗ್ಗಣಿತಗಳ ಸಹಾಯದಿಂದ ಪಂಚಾಂಗವನ್ನು ತಯಾರಿಸಿಕೊಂಡು ಬಗ್ಲೋಣೆಗೆ ಹೋಗಿ ಶ್ರೀ ರಾಮ ಪಂಡಿತರಿಗೆ ತೋರಿಸಿದರು. ರಾಮ ಪಂಡಿತರಿಗೆ ಅರಸುತ್ತಿದ್ದ ಬಳ್ಳಿ ಕಾಲಿಗೇ ತೊಡಕಿದಂತಾಯಿತು. ವೆಂಕಟ ರಮಣ ಪಂಡಿತರಂಥ ಪ್ರತಿಭಾಶಾಲಿಗಳ ಸಹಾಯ ಬಗ್ಲೋಣ ರಾಮ ಪಂಡಿತರಿಗೆ ಆವಶ್ಯವಾಗಿತ್ತು. ಇಬ್ಬರೂ ಜೊತೆಗೂಡಿದರು. ಇದು ಇಂದಿಗೆ ಸುಮಾರು ೫೨ ವರುಷಗಳ ಹಿಂದೆ ನಡೆದದ್ದು. ಇಬ್ಬರು ಸೇರಿ ಆಗಲೇ ಒಂದು ಪ್ರಕಟಣೆ ಕೊಟ್ಟರು. 'ಹಳೆಯ ಗಣಿತ ಪದ್ಧತಿಗಳಿಂದ ತಯಾರಿಸಿದ ಪಂಚಾಂಗಗಳು ದೃಕ್ ಪ್ರತ್ಯಯಕ್ಕೆ ಸರಿಬಾರದಿರುವ ಕಾರಣ ನಾವು ಮುಂದಿನ ವರ್ಷದಿಂದ ಸೂಕ್ಷ್ಮ ದೃಗ್ಗಣಿತವನ್ನು ಅನುಸರಿಸಿ ಪಂಚಾಂಗ ತಯಾರಿಸುತ್ತೇವೆ. ನಾಡಿನ ವಿದ್ವಾಂಸರು ಇದನ್ನು ಮನ್ನಿಸುವಿರೆಂದು ನಂಬಿದ್ದೇವೆ' ಬಹುಸಂಖ್ಯಾ ಜನತೆಯ, ವಿದ್ವಾಂಸರು ಅನುಮೋದನೆಯ ಮೇರೆಗೆ ಮರುವರುಷದಿಂದಲೇ ದೃಕ್ ಗಣಿತ ಸಿದ್ಧ ಪಂಚಾಂಗದ ಪ್ರಕಟಣೆ ಪ್ರಾರಂಭವಾಯಿತು. ಸೂರ್ಯ ಸಿದ್ಧಾಂತವಾದಿಗಳಾಗಿದ್ದ ಪರ್ಕಳ ಶ್ರೀ ಕರ್ಕಿ ಸೂರಿ ಕೃಷ್ಣಭಟ್ಟರು, ಕೆಕ್ಕಾರು ಶಿವ ಭಟ್ಟರು, ಕಟ್ಟೆ ಗಣಪ ಭಟ್ಟರು, ದಕ್ಷಿಣ ಕನ್ನಡದ ರಾಮಪ್ಪ ಅಡಿಗ ಮತ್ತು ಭಾಸ್ಕರ ಅಡಿಗರು ಮುಂತಾದ ಮಹನೀಯರು ಬಗ್ಲೋಣ ಪಂಚಾಂಗವನ್ನು ಪ್ರತಿಭಟಿಸತೊಡಗಿದರು. ದೃಗ್ಗಣಿತ ಪಾಶ್ಚಾತ್ಯರದು. ಅದನ್ನನುಸರಿಸಿದ ಪಂಚಾಂಗವು ಅಶಾಸ್ತ್ರೀಯ, ಧರ್ಮಕರ್ಮಾಚರಣೆಗೆ ಅಯೋಗ್ಯ ಎಂದು ವಾದಿಸಿದರು. ಆವಾಗ ವೆಂಕಟರಮಣ ಪಂಡಿತರು [illegible] ಅವರ ವಾದಗಳಿಗೆ ಸಮಾಧಾನ ನೀಡಿದರು. ಅಷ್ಟೇ ಅಲ್ಲ, 'ಅಯನ ಮೀಮಾಂಸಾ' ಎಂಬ ಗ್ರಂಥವನ್ನು ಪ್ರಬುದ್ಧ ತರ್ಕಬದ್ಧವಾದ ವಿಚಾರವನ್ನು ಸರಳ [illegible] ದೇಶದ ವಿದ್ವಾಂಸರಿಗೆಲ್ಲ ಕಳಿಸಿಕೊಟ್ಟರು. ಕೆಲವು ದಿನಗಳಲ್ಲಿಯೇ [illegible] ಗ್ರಂಥವನ್ನು [illegible] ರೆದುರು ಇಟ್ಟರು. ಈ ಎರಡು ಗ್ರಂಥಗಳ ಕುರಿತು ವಾಸಿಷ್ಠ ಗಣಪತಿ ಮುನಿಗಳಂಥ ಅಪ್ರತಿಮ ವಿದ್ವಾಂಸರು, ದೇಶದ ಬೇರೆ ಬೇರೆ ಭಾಗಗಳಲ್ಲಿ ಪಂಡಿತರು ತುಂಬಾ ಪ್ರಶಂಸೆ ವ್ಯಕ್ತಪಡಿಸಿದರು. ಪ್ರತಿ ವರ್ಷದ ಪಂಚಾಂಗದ ಪ್ರಸ್ತಾವನೆಯಲ್ಲೂ ದೃಕ್ಪಂಚಾಂಗದ ಕುರಿತು ಶಾಸ್ತ್ರೀಯವಾದ ಸಮರ್ಥನೆಗಳನ್ನು ವೆಂಕಟ ರಮಣ ಪಂಡಿತರು ಬರೆದರು. ಇದರಿಂದಾಗಿ ನಾಡಿನ ವಿದ್ವಾಂಸರು, ಸಾಮಾನ್ಯ ಜನತೆಯೂ ಬಗ್ಲೋಣ ಪಂಚಾಂಗವನ್ನೇ ಮಾನ್ಯಮಾಡಿ ಧರ್ಮ ಕರ್ಮಾಚರಣೆಗೆ ಪ್ರಮಾಣವಾಗಿ ಅಂಗೀಕರಿಸಿದರು. ಆ ಕಾಲದಲ್ಲೇ ಶಿವಮೊಗ್ಗ ಮತ್ತು ಮೈಸೂರುಗಳಲ್ಲಿ ಅಖಿಲ ಕರ್ನಾಟಕ ಜ್ಯೋತಿಷ್ಯ ಸಮ್ಮೇಳನಗಳು ಜರುಗಿದವು. ಆ ಎರಡೂ ಸಮ್ಮೇಳನಗಳಲ್ಲಿ ಈ ಎರಡೂ ಬಗೆಯ ಪಂಚಾಂಗಗಳ ಶಾಸ್ತ್ರಶುದ್ಧತೆಯ ಬಗೆಗೆ ಅಪರಿಮಿತವಾದ ವಿವಾದಗಳು ನಡೆದು ದೃಕ್ಪಂಚಾಂಗವೇ ಶಾಸ್ತ್ರೀಯ; ಅದನ್ನನುಸರಿಸಿಯೇ ಸಕಲ ಧರ್ಮ ಕರ್ಮಾಚರಣೆಗಳನ್ನು ಮಾಡಬೇಕು ಎಂದು ಬಹುಮತದ ಗೊತ್ತುವಳಿಗಳು ಸ್ವೀಕೃತವಾದವು. ಬಗ್ಲೋಣ ಪಂಚಾಂಗದ ಹಿರಿಮೆ ಹೆಚ್ಚಿತು. ಪಂಚಾಂಗಕರ್ತರಾದ ಶ್ರೀ ರಾಮ ಪಂಡಿತರು ಮತ್ತು ವೆಂಕಟರಮಣ ಪಂಡಿತರು ನವ ಚೈತನ್ಯಶಾಲಿಗಳಾಗಿ ತುಂಬ ಯಶಸ್ವಿಯಾಗಿ ಪಂಚಾಂಗ ರಚನೆ, ಪ್ರಕಟಣೆ ಮತ್ತು ವಿವರಣೆಯನ್ನು ವಿಸ್ತರಿಸಿದರು. (೧೬–೧೧–೧೮೯೪ರಂದು ವೆಂಕಟರಮಣ ಪಂಡಿತರು ಜನಿಸಿ ೩–೪–೧೯೬೧ರಂದು ನಿಧನರಾದರು.) ಬಾಳಿನ ಉದ್ದಕ್ಕೂ ಬಡತನವನ್ನೇ ಅನುಭವಿಸಿ ಪ್ರಪ್ರಥಮವಾಗಿ ದೃಕ್ಪಂಚಾಂಗವನ್ನು ಪ್ರಚುರಪಡಿಸಿ ಅದಕ್ಕೆ ಬಂದ ತೊಡಕು ತೊಂದರೆಗಳನ್ನು ಸಮರ್ಥವಾಗಿ ಎದುರಿಸಿ ಕರ್ನಾಟಕಕ್ಕೆ ಕೀರ್ತಿ ತಂದರು. ಅವರು ತಮ್ಮ ಮರಣಕ್ಕಿಂತ ಎರಡು ವರ್ಷ ಮೊದಲೇ ಕ್ಷಯಾಧಿ ಮಾಸ[illegible] ವಿವೇಚನೆ ಮಾಡಿ ಅದನ್ನು ಯಾವ ರೀತಿಯಾಗಿ ಬರೆಯಬೇಕೆಂಬುದನ್ನು ಪ್ರಸಿದ್ಧ ಪಂಚಾಂಗ ಕರ್ತರಾದ ಶ್ರೀಪತಿ ಹಾಗೂ ವೈ[illegible]

ಪಂಚಾಂಗ ಸಂಪಾದಕರಿಗೂ ಸೊಲ್ಲಾಪುರದ ಶ್ರೀ ದಾತೆ ಪಂಚಾಂಗಕರ್ತರಿಗೂ ತಿಳಿಸಿದ್ದರು. ಅವರ ಈ ಬಗೆಯ ಮುಂಧೋರಣೆಯ ಮಾರ್ಗದರ್ಶನದಿಂದಾಗಿ ಬಗ್ಗೋಣ ಪಂಚಾಂಗ ಪರಂಪರೆಯು ಪಂಡಿತನ್ವಯಕ್ಕೂ ಅನುಕೂಲವಾಯಿತು. ದಿ. ರಾಮ ಪಂಡಿತರು ತಮ್ಮ ಮಕ್ಕಳಾದ ಗಣಪತಿ ಮತ್ತು ನಾರಾಯಣರಿಗೆ ಪಂಚಾಂಗ ಗಣಿತವನ್ನು ಕಲಿಸಿದ್ದರು. ಅದರಂತೆ, ದಿ. ವೆಂಕಟರಮಣ ಪಂಡಿತರು ಮಕ್ಕಳಾದ ರಾಮ ಮತ್ತು ಮಹೇಶ್ವರರಿಗೆ ಗ್ರಹ ಗಣಿತವನ್ನು ಧಾರೆ ಎರೆದರು. ಅವರು ಕಾಲವಶರಾದ ನಂತರ ಮಕ್ಕಳ ಹೆಗಲಿಗೆ ಬಗ್ಗೋಣ ಪಂಚಾಂಗದ ಹೊಣೆ ಏರಿತು. ಆದರೆ ಗಣಪತಿ ಪಂಡಿತರು ಆಕಸ್ಮಿಕವಾಗಿ ನಿಧನರಾಗಿ ಪಂಚಾಂಗ ಸಂಶೋಧನೆ ಕಾರ್ಯ ಕಷ್ಟ ಪರಿಸ್ಥಿತಿಗೊಳಗಾಯಿತು. ಆದರೂ [illegible] ವೆಂಕಟರಮಣ ಪಂಡಿತರ ಮಗ ರಾಮ ಪಂಡಿತರು ಮತ್ತು ನಾರಾಯಣ ಪಂಡಿತರು ಸಕಲ ಸಂಕಷ್ಟಗಳನ್ನೆದುರಿಸಿ ಪ್ರಕಟಿಸಲೇಬೇಕೆಂದು ಛಲ ತೊಟ್ಟರು. ಗಣಪತಿ ಪಂಡಿತರು ಆಕಸ್ಮಿಕವಾಗಿ ಅಸ್ವಸ್ಥರಾದಾಗ, 'ಈ ತನಕ ನಾವು ಪಂಚಾಂಗ ತಯಾರಿಸುತ್ತ ಬಂದೆವು. ಈಗ ಹಿರಿಯರೂ ಗತಿಸಿದರು. ಇನ್ನು ನಾವು ಪಂಚಾಂಗ ಪ್ರಕಟಣೆಯನ್ನು ನಿಲ್ಲಿಸಿಬಿಡುವದೇ ಶ್ರೇಯಸ್ಕರ' ಎನ್ನುವಷ್ಟು ಸ್ಥಿತಿಗೆ ಬಂದು ಮುಟ್ಟಿದ್ದರು.

ಆದರೆ ಬಗ್ಗೋಣ ಪಂಚಾಂಗದ ಸಂಸ್ಥಾಪಕರ ಪುಣ್ಯಬಲ, ಪಂಚಾಂಗದ ಆಯುರ್ಬಲಗಳೆರಡು ದೃಢವಾಗಿದ್ದವು. ಈಗ ಶ್ರೀಮತ್ ಕಾಂಚಿ ಕಾಮಕೋಟಿ ಪೀಠಾಧಿಪತಿಗಳಂತಹ ಹಲವಾರು ಮಠಾಧಿಪತಿಗಳ ಹಾಗೂ ನಾಡಿನ ವಿದ್ವಜ್ಜನರ ಸಹಾನುಭೂತಿ, ಸಕ್ರಿಯ ಸಹಕಾರದಿಂದ ಬಗ್ಗೋಣ ಪಂಚಾಂಗ ಪರಂಪರೆ ಅವಿಚ್ಛಿನ್ನವಾಗಿ ಮುನ್ನಡೆಯುತ್ತಿದೆ. ●

ಗಾಳಿಯ ಹಕ್ಕಿಯಂತೆ ಹಾರಾಡುವುದನ್ನು ನಾವು ಕಲಿತಿದ್ದೇವೆ. ನೀರಿನಲ್ಲಿ ಮೀನಿನಂತೆ ಈಜುವುದನ್ನೂ ಕಲಿತಿದ್ದೇವೆ. ಆದರೆ ಮನುಷ್ಯನಾಗಿ ಇರಲು ಇತರರನ್ನು ಇರಗೊಡಲು ಕಲಿಯುವುದು ಯಾವಾಗ?

- ವೆಸ್ಲೆಯಾನ್ ಕ್ರಿಶ್ಚಿಯನ್

ಈಸ್ಟ್ ಇಂಡೀಜಿನ ಆರ್ಚರ್ ಮೀನ್ ತನ್ನ ಬೇಟೆಯನ್ನು ದೂರದಿಂದಲೇ ಕೊಲ್ಲುತ್ತದೆ. ಕಪ್ಪೆ ಮತ್ತು ಕ್ರಿಮಿಗಳನ್ನು ತಿನ್ನುವ ಇದು ದೂರದಿಂದಲೇ ಅವುಗಳನ್ನು ತಿನ್ನುವ ಇದು ದೂರದಿಂದಲೇ ಅವುಗಳತ್ತ ಜೋರಾಗಿ ನೀರನ್ನು ಪಿಚಕಾರಿಯಂತೆ ಉಗುಳುತ್ತದೆ. ಆ ಹೊಡೆತಕ್ಕೆ ಬೇಟೆ ಮುಕ್ಕಾಲು ಪಾಲು ನಿರ್ಜೀವವಾಗಿ ಬಿಡುತ್ತದೆ.

ನಾಳೆ'ಗಾಗಿ ಗಳಿಸಿ-ಉಳಿಸುವುದಕ್ಕಾಗಿ ನಾವೆಷ್ಟು ಹೋರಾಟ ನಡೆಸಿದ್ದೇವೆಂದರೆ 'ಇಂದು' ಆಗಬೇಕಾದ್ದರ ಚಿಂತೆಯೇ ನಮಗಿಲ್ಲ.

-ಓಲಿನ್ ಮಿಲರ್



ಜತೀನನಿಗೆ ಸಾಹೇಬರೊಡನಾ [illegible] ನಡೆದುಹೋಯಿತು. ಆಫೀಸಿನಲ್ಲಿ. ಅವರೇನೋ ತನ್ನ [illegible] ವ್ಯಕ್ತಿಯಾಗಿ [illegible] ಇಲ್ಲ. ಆದರೆ ಶ್ರೀ [illegible] ತಮ್ಮ ಭಾವನೆಗಳನ್ನು [illegible] ವ್ಯಕ್ತಿ ಅಲ್ಲವೇ ಅಲ್ಲ. ಹಂಚು ಹಾರಿಹೋಗುವ ಹಾಗೆ ವಿರುದನಿಯಲ್ಲಿ ಅವರು ಕೂಗಿದರು:

"ಮೆಟ್ರಿಕ್ ಆದ ಸಣ್ಣ ಹುಡುಗನೂ ಸುಲಭವಾಗಿ ಮಾಡುವಂಥ ಈ ಕೆಲ್ಸ ನಿನ್ನಿಂದ ಆಗ್ಲಿಲ್ಲಾ ಅಂದ್ರೆ, ನಿನ್ನ ಕಟ್ಟಿಕೊಂಡು ಏನು ಮಾಡ್ಲಿ ನಾನು? ನಿನ್ನ ಮುದ್ದು ಮುಖ ನೋಡಿಕೊಂಡು ಸುಮ್ನಿದ್ದುಬಿಡ್ಲೋ?" ಅವರ ಮಾತಿನಲ್ಲಿ ಇಂಗ್ಲೀಷು–ಬಂಗಾಲಿಗಳ ಕಲಬೆರಕೆ!

ಸ್ವಲ್ಪ ಹೊತ್ತಾದ ಮೇಲೆ, ವ್ಯಂಗ್ಯವಾಗಿ ನಕ್ಕು ಅವರು ಮಾತು ಮುಂದುವರೆಸಿದರು:

"ನೋಡು ಇನ್ನು ಮೇಲೆ ಈ ಇಂಪಾರ್ಟೆಂಟ್ ಫೈಲು ಯಾವುದೂ ನೋಡಬೇಡ. ನೀನು ನನ್ನ ಮುಂದೆ ಕುರ್ಚಿಯಲ್ಲಿ ಮೋಳೆ ಹೊಡೆದುಕೊಂಡು ಕೂತ್ಕೋ. ನಾನೇ ಎಲ್ಲ ಮಾಡಿ ಮುಗಿಸ್ತೀನಿ. ಜನ ಹೇಳೋದು ಸರಿಯಾಗೇ ಇದೆ– ಕೆಟ್ಟ ಹಸು ಕಟ್ಕೋಳೋದಕ್ಕಿಂತ [illegible]!"

ಇಷ್ಟೆಲ್ಲ ವಾಗ್ಬಾಣಗಳಾದ ಮೇಲೆ ಜತೀನ ಹೇಳಿದ– "ಸರ್, ನನ್ನ ತಪ್ಪನ್ನ ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದೀನಿ. ನಿಜಕ್ಕೂ ನನಗೆ [illegible] ದುಃಖ ಆಗ್ತಿದೆ. ಆದರೆ ತಾವು [illegible] ಇಂಥ [illegible] ಕೋಪ, ಕಠಿಣವಾದ ಮಾತು ಬಳಸ್ಬೇಡಿ ಸರ್!"

[illegible] ಮತ್ತಷ್ಟು ಕೆರಳಿ ಗಟ್ಟಿಯಾಗಿ ಚೀರಿದರು: "[illegible]! ನಂಗೇ ನೀತಿ ನಡವಳಿಕೆ ಕಲ್ಸೋದಕ್ಕೆ [illegible]. ಮತ್ತೆ ಮತ್ತೆ ತಪ್ಪು ಮಾಡ್ತಾನೆ [illegible]. [illegible] ಮೇಲೆ [illegible] 'ಥ್ಯಾಂಕ್ಯೂ ಸರ್!' ಅಂದುಬಿಡ್ತೀಯ. ನೋಡು ಹೇಳಿದೀನಿ. ನಿನ್ನ ಹರಳೆಣ್ಣೆ ಮುಖ ನೀನೇ ಇಟ್ಕೊ. ಇನ್ನು ಮುಂದೆ ಇಂತಹ ಎಕ್ಸ್‌ಕ್ಯೂಸ್‌ಗಳೆಲ್ಲ ನಡೆಯೋದಿಲ್ಲ...ಗೋ!"

ಜತೀನನಿಗೆ ಸರಿಯಾದ ಉತ್ತರ ಹೊಳೆಯಲಿಲ್ಲ. ಹಿಂದೆ ನಡೆದುಹೋದ ಅಂಥ ಎಷ್ಟೋ ಘಟನೆಗಳಿಗಿಂತ ಇದು ಕ್ರೂರ ಎನಿಸಿತು ಅವನಿಗೆ. ಮನುಷ್ಯನ ಸ್ವಭಾವ ಅವನು ಬಲ್ಲ. ತನಗಾದ ತೇಜೋವಧೆಯಿಂದ, ತನ್ನ ಸಹೋದ್ಯೋಗಿಗಳಿಗೆಲ್ಲ ಎಂಥ ಖುಷಿಯಾಗ್ತಿದೆ ಎಂದು ಊಹಿಸಿ ಬೇಸರಗೊಂಡ.

ಎಲಾ! ಸಾಕಷ್ಟು ವಯಸ್ಸಾಗಿದೆ, ವಿದ್ಯಾವಂತರು, ಆದರೆ ಈ ಸಾಹೇಬ [illegible] ಮಾತು ಆಡ್ತಾರಲ್ಲಾ. [illegible] ಒಂದು ಸಣ್ಣ ತಪ್ಪು ಕಂಡುಬಂತು. [illegible] ಕೆಲಸದ [illegible]. [illegible] ಕ್ಷಮಾಪಣೆ ಕೇಳಿ ಆಯ್ತಲ್ಲ. ಏನು [illegible] ತಪ್ಪು ಮಾಡಿದ್ದು! ತನ್ನ ಜೂನಿಯರ್‌ಗಳು ಮಾಡಿದ ಎಷ್ಟೋ ತಪ್ಪುಗಳನ್ನು [illegible] ಕೊಟ್ಟಿರಲಿಲ್ವೆ [illegible]. ಹಾಗೆ [illegible] ಎಷ್ಟು ವಿನಯದಿಂದ, ಮೃದುವಾದ ಮಾತಿನಲ್ಲಿ ಹೇಳಿರಲಿಲ್ವೆ? ತನಗೆ ಮಾತ್ರ ಇದಕ್ಕ ಪೂರ್ತಿ ವಿರುದ್ಧವಾದ ಶಿಕ್ಷೆ. ಒಳ್ಳೆ ಏಳು ವರ್ಷದ ಹುಡುಗನ್ನ ಬಯ್ಯೋ ಹಾಗೆ ಬಯ್ತಾನೆ! ಆಫೀಸಲ್ಲಿ ಇಷ್ಟು ಒರಟು ವರ್ತನೆ ಸರಿಯಲ್ಲ! ಹೊರಗೆ ನಾಲ್ಕು ಜನದ ಮಧ್ಯೆ ಇರೋ ಹಾಗೆ ಆಫೀಸಿನಲ್ಲೂ ತನ್ನ ಜೂನಿಯರ್‌ಗಳಿಗೆ ಮಾನ–ಮರ್ಯಾದೆ ಇದೆ ಅನ್ನೋದು ಈ ಸಾಹೇಬನಿಗೆ ಅರ್ಥ ಆಗಬೇಕಿತ್ತು....ಹೀಗೆಲ್ಲ ಯೋಚಿಸುವಾಗ ಹೇಳಲಾಗದ ಅಸಹಾಯಕತೆ, ದುಗುಡ. ಅವನ ಹೃದಯವನ್ನು ತುಂಬಿಬಿಟ್ಟಿತು.

■

ಆಫೀಸು ಮುಗಿಯಿತು. ಜತೀನ ಹೊರಗೆ ಬಂದ. ಟ್ರಾಮಿನ ಮೊದಲ ನಿಲ್ದಾಣದಲ್ಲಿ ವಿಪರೀತ ರಷ್ ಇದ್ದದ್ದು ನೋಡಿದ. ಮೊದಲೇ

ಮನಸ್ಸು ತೀರ ಉದಾಸವಾಗಿತ್ತು. ಜನಗಳ ಗುಂಪು ನೋಡಿ ಹಾಗೇ ಹೆಜ್ಜೆ ಹಾಕಲು ಯತ್ನಿಸಿದ. ಎಷ್ಟೋ ಹೊತ್ತಾದ ಮೇಲೆ ಮನಸ್ಸು ಸ್ವಲ್ಪ ಹತೋಟಿಗೆ ಬಂದಿತು. ಒಂದಲ್ಲ ಒಂದು ಟ್ರಾಮು ಹಿಡಿಯಲು ಯತ್ನಿಸಿದ. ಯಾವುದೂ ಸಿಗಲಿಲ್ಲ. ಬಸ್ಸುಗಳು ಹೇದಕ್ಕೂ ಕೇಡು. ಸಾಕಷ್ಟು ದೂರ ನಡೆದಾಗಿತ್ತು. ನಾರ್ತ್ ಕಲ್ಕತ್ತಾದ ತನ್ನ ಮನೆಯವರೆಗೂ ನಡೆದೇಬಿಡುವುದು ಎಂದು ನಿಶ್ಚಯಿಸಿದ.

ಹೌದು, ಮನಸ್ಸಿನ ಉದ್ವೇಗ ಕಡಿಮೆಯಾಗಲು ಇದೇ ದಾರಿ. ಒಂದು ಮುಖ್ಯವಾದ ನಿಲ್ದಾಣ ದಾಟುವಾಗ, ಮನಸ್ಸು ಸರಿ ಇಲ್ಲದುದರಿಂದ ಒಬ್ಬ ಮುದುಕನನ್ನು ಹಾಯ್ದುಬಿಟ್ಟ. ಅವರು ವ್ಯಂಗ್ಯವಾಗಿ ಚುಚ್ಚಿ ನುಡಿದರು– "ಏನು ಸ್ವಾಮಿ, ತಲೆ ನೆಟ್ಟಗಿದೆಯಾ? ಅಥವಾ ಸರಿಯಾಗಿ… [illegible]?"

ಕ್ರೂರವಾಗಿ ಒಮ್ಮೆ ತನ್ನ ಕಡೆ ನೋಡಿ ಮುದುಕ ಮುಂದೆ ನಡೆದ. ತನ್ನ ಆ ಭಯಂಕರ ಬಾಸ್ ಇದ್ದ ಹಾಗೇ ಇವನೂ! ಸಿಟ್ಟು ಬಂದ ಮನುಷ್ಯ ಎಷ್ಟು ಅಸಹ್ಯವಾಗಿ ಕಾಣಿಸ್ತಾನೆ! ಜತೀನನಿಗೆ ಆಶ್ಚರ್ಯವಾಯಿತು.

ಹಾದಿಯಲ್ಲಿ ಪಾದಚಾರಿಗಳು, ಕಾರು, ಲಾರಿಗಳಿಗೆ ಅಡ್ಡವಾಗಬಾರದು ಎಂದು ತುಂಬ ಎಚ್ಚರದಿಂದ ನಡೆಯತೊಡಗಿದ. ಅಪರೂಪಕ್ಕೆ ತೀರ ತಡವಾಗಿ ಮನೆ ತಲುಪಿದ. ಆಫೀಸು ಹಾಗೂ ಮನೆ ಇಷ್ಟು ದೂರ ಎಂದೂ ನಡೆದಿಲ್ಲ. ಮಾನಸಿಕವಾಗಿ, ದೈಹಿಕವಾಗಿ ತೀರ ಸೋತು ಹೋಗಿದ್ದ.

ನಾರ್ತ್ ಕಲ್ಕತ್ತಾದ ಒಂದು ಸಣ್ಣ ಗಲ್ಲಿಯಲ್ಲಿ ಮೊದಲು ಮಾಳಿಗೆಯ ಎರಡು ಕೋಣೆಗಳ ಹಳೇ ತರಹದ ಮನೆ ಅವನದು. ಅದರಲ್ಲಿ ಒಂದು ಕೋಣೆ ಅವನ ಅಜ್ಜಿಗೆ–ಅಲ್ಲಿಯೇ ಅವನ ತಮ್ಮ, ಇಬ್ಬರು ತಂಗಿಯರು ಹೇಗೋ ಜಮಾಯಿಸಿದ್ದರು.

ಎರಡನೆ ಕೋಣೆ, ಜತೀನ ಹಾಗೂ ಅವನ ಹೆಂಡತಿಗೆ ಮೀಸಲು. ಅದರ ತುಂಬ ಮನೆಯ ವಿವಿಧ ಸಾಮಾನುಗಳ ರಂಪ. ಒಟ್ಟಿನಲ್ಲಿ ಎರಡೂ ಕೋಣೆಗಳಲ್ಲಿ ವಾಸಕ್ಕೆ ದೊರೆಯುತ್ತಿದ್ದ ಜಾಗ ಅಷ್ಟಕ್ಕಷ್ಟೆ.

ತನ್ನ ಕೋಣೆಗೆ ಹೋಗುತ್ತಿದ್ದಂತೆಯೇ ಜತೀನನ ಕಿವಿಗೆ ಬಿದ್ದ ವೇದನೆಯ ಧ್ವನಿ: "ಅಮ್ಮಾ! ತಡೆಯೋದು ಸಾಧ್ಯ ಇಲ್ಲ. ತಲೆ ಸಿಡಿದು ಹೋಗ್ತಾ ಇದೆ."

ಕಳೆದ ಕೆಲವು ದಿನಗಳಿಂದ, ತಮ್ಮ ಸುಬೋಧ ಜ್ವರದಿಂದ ನರಳುತ್ತಿದ್ದ. ಈಗ ಈ ನೋವಿನ ನರಳಿಕೆಯಿಂದ ಜತೀನನ ಮನಸ್ಸಿಗೆ ತುಂಬ ಬೇಸರವಾಯಿತು. ಕೋಣೆ ಬಾಗಿಲನ್ನು ಜೋರಾಗಿ ತಳ್ಳಿ ಒಳ ನುಗ್ಗಿದ. ಅಮ್ಮ ಸುಬೋಧನ ತಲೆ ಬಳಿ ಕುಳಿತು ಗಾಳಿ ಬೀಸುತ್ತಿದ್ದಳು. ಒಬ್ಬಳು ತಂಗಿ ಅವನ ಕಾಲು ನೀವುತ್ತಿದ್ದಳು. ತನ್ನ ಹೆಂಡತಿ ತಟ್ಟೆಯಲ್ಲಿ ಊಟ ಹಿಡಿದು ಅವನಿಗಾಗಿ ಕಾಯುತ್ತಿದ್ದಳು. ಇದೆಲ್ಲ ನೋಡುತ್ತಿದ್ದಂತೆಯೇ ಒರಟು ದನಿಯಲ್ಲಿ ಜತೀನ ಕೇಳಿದ: "ಏನು ವಿಷಯ?"

ಜತೀನನ ಕರುಣೆಯನ್ನು ಯಾಚಿಸುವ ಆಸೆಯಿಂದ ಕ್ಷೀಣ ದನಿಯಲ್ಲಿ ಸುಬೋಧ ಹೇಳಿದ: "ದಾದಾ, ವಿಪರೀತ ತಲೆ ನೋವು! ಅಮ್ಮಾ ತಡೆಯೋದಕ್ಕೇ ಆಗೋಲ್ಲ!"

ಜತೀನ ಇನ್ನೂ ಕರ್ಕಶ ಧ್ವನಿಯಲ್ಲಿ ಕೂಗಿದ: "ಹುಷ್! ನಿನ್ನದು ಯಾವಾಗಲೂ ಅತಿ. ನಾಚಿಕೆಯೇ ಇಲ್ಲದ ನಾಟಕ ನಿನ್ನದು!"

ಸುಬೋಧನಿಗೆ ಏನೂ ಉತ್ತರ ಹೊಳೆಯಲಿಲ್ಲ. ಅವನು ಸುಮ್ಮನಾಗಿಬಿಟ್ಟ. ಅಮ್ಮ ಹೇಳಿದಳು: "ಜತೂ, ನಿನ್ನ ಈ ಹಯವರಟು ಮಾತು ಸಾಕು ಮಾಡು. ಹೀಗೆಲ್ಲ ಆಡಬಾರದು. ಅವನಿಗೆ ಮೈಯೆಲ್ಲ ಕೆಂಡ ಆಗಿದೆ. ಕೆಲವೇ ನಿಮಿಷದ ಮೊದಲು ನೂರಾ ನಾಲ್ಕು ಡಿಗ್ರಿ ತೋರಿಸ್ತಾ ಇತ್ತು… ಯಾಕೋ ಇವತ್ತು ಹೀಗಿದೀ ಜತೀನ?"

ಜತೀನನಿಗೆ ಇನ್ನೂ ಕಿರಿಕಿರಿಯಾಗಿ ಬೇಸರದಿಂದ ಸಿಡಿದ: "ಅಮ್ಮಾ! ಮೊದಲು ನೀನು ಸುಮ್ಮನಾಗು. ಅವನಿಗೆ ವರ್ಷಕ್ಕೆ ಹನ್ನೆರಡು ಸಲ ಜ್ವರ ಬಂದರೆ ನಾನೇನು ಮಾಡಲಿ, ಹೇಳು."

•

ಹೀಗೆ ಹೇಳುತ್ತಾ ಜತೀನ ಬೇಗ ಬೇಗ

ತನ್ನ ಕೋಣೆಗೆ ಹೋದ. ಇಡಿಯ ವಾತಾವರಣದಲ್ಲಿ ತನ್ನ ವ್ಯಕ್ತಿತ್ವವೇ ಕುಸಿದುಹೋಗಿತ್ತು. ಅವನು [illegible] ಏಕಾಂತದಲ್ಲಿ [illegible].

ಗಂಡನ ಹೆಜ್ಜೆಯನ್ನೇ [illegible] ಲಾವಣ್ಯ ಸಹ ಕೋಣೆಗೆ ಬಂದಳು. ಗಂಡನ [illegible] ಉಪಚಾರಗಳಿಂದ ಅವಳಿಗೆ [illegible] ಆಘಾತ ವಾಗಿತ್ತು. ಕುಪಿತಳಾಗಿ ಕೇಳಿದಳು:

"ಯಾಕೆ ಹೀಗೆಲ್ಲ ಆಡ್ತಿದೀರಿ?"

ಇಷ್ಟು ಹೇಳುವಾಗಲೇ ಅವಳ ತುಟಿ ಸಾಕಷ್ಟು ಅದುರುತ್ತಿತ್ತು. ಅವಳಿಗೆ ಸ್ವಲ್ಪ ಉಗ್ಗು ಇದ್ದುದೂ ನಿಜವೇ! ಆದರೆ ಉದ್ವೇಗ ಹೆಚ್ಚಿದಾಗ ಈ ಉಗ್ಗು ಇನ್ನೂ ಹೆಚ್ಚುತ್ತಿತ್ತು.

ಜತೀನ ಅವಳ ಮಾತನ್ನೇ ಅಣಕವಾಡುತ್ತಾ ಹಂಗಿಸಿದ: "ನಿನ್ನ ಉಗ್ಗು ರಿಪೇರಿ ಮಾಡಿಕೊಂಡ ಹೊರತು ನಾನು ನಿನ್ನ ಜೊತೆ ಮಾತಾಡೋಲ್ಲ."

ಜತೀನನ ಅಣಕದ ಮಾತು ಕೇಳುತ್ತಿದ್ದಂತೆಯೇ, ಅವನ ತಂಗಿ ಸೀತಾ ಪಕ್ಕದ ಕೋಣೆಯಿಂದ ಗವಗಹಿಸಿ ನಕ್ಕಳು. ಅಮ್ಮ ತಕ್ಷಣ ಕಣ್ಣು ಕೆಂಪಗೆ ಮಾಡಿಕೊಂಡು– "ಲೇ ಸುಮ್ನಿರೇ ಸಾಕು! ಹುಚ್ಚು ಹುಚ್ಚಾಗಿ ನಗೋ ಹೊತ್ತೇನೇ ಇದು?" ಎಂದಳು.

ಗಂಡನ ಮುಂಗಚೇಷ್ಟೆ ಕಂಡು ಲಾವಣ್ಯ ತುಂಬ ನಾಚಿದಳು. [illegible] ನಾಲ್ಕು [illegible] ಮೌನವಾಗಿದ್ದಳು. ಸ್ವಲ್ಪ ಹೊತ್ತಾದ ಮೇಲೆ ಜತೀನನ ಕಡೆ ಅಚ್ಚರಿಯ ನೋಟ ಎಸೆದು ಪುನಃ ಅದೇ ಪ್ರಶ್ನೆ ಕೇಳಿದಳು. ಆದರೆ ಈ [illegible] ಮಾತು ಮೃದುವಾದ ಅಕ್ಕರೆಯಿಂದ ತುಂಬಿತ್ತು.

"ನಿಮಗೇನಾಗಿದೆ ಇವತ್ತು? ಹೇಳ್ತೀರಾ? ನಿಮ್ಮ ದಮ್ಮಯ್ಯ!"

ಎಷ್ಟೋ ಗಂಟೆಗಳ ಮೇಲೆ ಇದೀಗ, ಮೊದಲ [illegible] ಅಕ್ಕರೆಯ [illegible] ನಾಲ್ಕು ಮಾತು ಕೇಳಿದ ಜತೀನ. ದೀರ್ಘಕಾಲ ಕ್ರೂರವಾದ [illegible] ಒಳಗಾಗಿದ್ದ ಅವನ ಮನಸ್ಸು ಈಗ [illegible] ಮೋಹಗೊಂಡಿತು. ಬೇಗ ಎಚ್ಚೆತ್ತುಕೊಂಡ. [illegible] ಬಂಧುಗಳೊಡನೆ ಇಷ್ಟು [illegible] ಕೊಂಡದ್ದಕ್ಕೆ ಅವನಿಗೇ ಲಜ್ಜೆ ಉಂಟಾಯಿತು.

ಲಾವಣ್ಯಳಿಗೆ ಅವನ ಮನಸ್ಸು ಚೆನ್ನಾಗಿ ಅರ್ಥವಾಯಿತು. ಮನೆ ಕೆಲಸಕ್ಕೆಂದು [illegible] ಒಳಗೆ ಹೊರಟಿದ್ದಳು. ಜತೀನ ತಕ್ಷಣ ಸೆರಗಿನ ಅಂಚು ಹಿಡಿದು ಎಳೆಯುತ್ತಾ ಅವಳನ್ನು ತಡೆದ. ಲಾವಣ್ಯ ಸಿಹಿಯಾದ ಮಂದಹಾಸವನ್ನು ಮುಖದ ಮೇಲೆ ತಂದುಕೊಂಡು ಕೇಳಿದಳು:

"ಏನು ಸಮಾಚಾರ!"

ಅದೇ ಮುಗುಳ್ನಗೆಯನ್ನು [illegible] ಜತೀನ [illegible]:

"[illegible]?"

"[illegible]!"

[illegible] ಸಂತಸದಿಂದ [illegible] ಹೋಯಿತು. [illegible]:


"[illegible] ಶ್ರೀಪಾದಪಾಯೂ ಆಗಿಬಿಟ್ಟಿದ್ದೆ. ನಾನು ಎಷ್ಟೇ ಚೆನ್ನಾಗಿ [illegible] ಮಾಡಿದರೂ ಅವರನ್ನು [illegible] ಆಗಲಿಲ್ಲ. [illegible] ನನಗಿಂತ ತುಂಬ [illegible]– ಈ ಮಾತು [illegible] ತಪ್ಪಲ್ಲ [illegible] ಅವರನ್ನ ನಾನೆಂದೂ [illegible]!"

✡

~~~~~~~~~~~~~

ಬ್ರಿಟಿಶ್ ಹೌಸ್ ಆಫ್ ಕಾಮನ್ಸ್‌ನಲ್ಲಿ ಭಾಷಣಮಾಡುತ್ತಿದ್ದ ಲೇಬರ್ ಸದಸ್ಯರೊಬ್ಬರಿಗೆ ವಿನ್‌ಸ್ಟನ್ ಚರ್ಚಿಲ್ಲರು ಮುಖ ಕೆಳಗೆ ಹಾಕಿ ನಿಶ್ಚಲರಾಗಿ ಕುಳಿತಿದ್ದುದು ಲಕ್ಷ್ಯಕ್ಕೆ ಬಂದಕೂಡಲೇ, "ಕಾರ್ಯಕಲಾಪಗಳು ನಡೆವಾಗ ಮಾನ್ಯ ಸದಸ್ಯರು ಹೀಗೆ ನಿದ್ದೆ ಮಾಡುವುದು ಖಂಡಿತವಾಗಿಯೂ ಸರಿಯಲ್ಲ" ಎಂದು ಗುಡುಗಿದರಂತೆ. ಮುಖ ಕೆಳಗೆ ಹಾಕಿಕೊಂಡು ಕುಳಿತಿದ್ದರೂ ಭಾಷಣವನ್ನು ತದೇಕ ಚಿತ್ತರಾಗಿ ಆಲಿಸುತ್ತಿದ್ದ ಚರ್ಚಿಲ್ಲರು ತಟಕ್ಕನೆ ಮೇಲೆದ್ದು, "ದೇವದೇವಾ!! ನೀವು ಹೇಳಿದಹಾಗೆಯೇ ಆಗಿದ್ದರೆ ಎಷ್ಟು ಚೆನ್ನಾಗಿರುತ್ತಿದಲ್ಲಾ!" ಎಂದು ಉದ್ಗರಿಸಿದರು.
~~~~~~~~~~~~~

ನನಗೆ ಸಿಂಗರ್ ಹೊಲಿಗೆ ಮೆಷೀನನ್ನು
ಉಡುಗೊರೆಯಾಗಿ ಕೊಟ್ಟಿದ್ದರು.
ಇಂದು ನಾನು ನನ್ನ ಮಗಳಿಗೆ
ಸಿಂಗರ್‌ನವರ ಮೆಷೀನನ್ನು ಕೊಡುತ್ತಿದ್ದೇನೆ.




ಮೆರಿಟ್*

ಹೊಲಿಗೆ ಮೆಶೀನು

ಜೀವನವಿಡೀ ಬಾಳಿಕೆ ಬರುವ ಉಡುಗೊರೆ

...ಏಕೆಂದರೆ, ಸಿಂಗರ್‌ನವರು ಉತ್ಕೃಷ್ಟತೆಯ ಬಗ್ಗೆ ಮಾಡುವ ಪರೀಕ್ಷಣಗಳು ಪ್ರತಿಯೊಂದು ಮೆಶೀನು 4000 ನಿರಂತರ ಗಂಟೆಗಳ ಕಾಲ ಕೆಲಸ ಮಾಡುತ್ತದೆ ಎಂದು ಖಾತ್ರಿಪಡಿಸುತ್ತವೆ.



ಅನೇಕ ತಲೆಮಾರುಗಳಿಂದ ಸಿಂಗರ್‌ನವರ ಹೊಲಿಗೆ ಮೆಶೀನು ಮದುವೆಗಳಲ್ಲಿಯೂ, ವಾರ್ಷಿಕೋತ್ಸವಗಳಲ್ಲಿಯೂ ಉಡುಗೊರೆಯಾಗಿ ಕೊಡಲು ಅತ್ಯುತ್ತಮವಾದದ್ದು ಎಂದು ಪರಿಗಣಿಸಲ್ಪಡುತ್ತಿದೆ. ಅಧಿಕಾಧಿಕ ಜನರು ಸಿಂಗರ್‌ನ್ನೇ ಏಕೆ ಆಯ್ದುಕೊಳ್ಳುತ್ತಾರೆ ಎಂಬುದಕ್ಕೆ ಇವೀಗ ಕೆಲವು ಕಾರಣಗಳು:

ಅನುಭವ

ಜಗತ್ತಿನಲ್ಲಿ ಪ್ರಪ್ರಥಮ ವ್ಯಾವಹಾರಿಕ ಹೊಲಿಗೆ ಮೆಶೀನನ್ನು ಸಾದರಪಡಿಸಿದವರು ಸಿಂಗರ್‌ನವರೇ. ಅದರರ್ಥವೆಂದರೆ 125ಕ್ಕಿಂತಲೂ ಹೆಚ್ಚು ವರ್ಷಗಳ ಅನುಭವ ಅವರಿಗಿದೆ. ಇಂದು ಭಾರತದಲ್ಲಿನ ಎಲ್ಲಕ್ಕಿಂತ ಹಳೆಯ ಹೊಲಿಗೆ ಮೆಶೀನುಗಳು ಸಿಂಗರ್‌ನವರದ್ದೆ. ಅವುಗಳಲ್ಲಿ ಕೆಲವನ್ನಾದರೂ ನೀವು ಕಂಡಿರಬಹುದು.

ಶ್ರೇಣಿ

ವಿವಿಧ ಹೊಲಿಗೆ ಮೆಶೀನುಗಳ ಶ್ರೇಣಿಯಿಂದ ನಿಮಗೆ ಬೇಕಾದದ್ದನ್ನು ನೀವು ಆಯ್ದುಕೊಳ್ಳಬಹುದು. ಅವುಗಳಲ್ಲಿ ಪ್ರತಿಯೊಂದು ಅವಶ್ಯಕತೆಗೂ ಸೂಕ್ತವಾಗುವ ಮಾಡೆಲ್ ಇದ್ದೇ ಇದೆ. ಬೆಲೆ ಕೂಡ ಎಲ್ಲರಿಗೂ ಅನುಕೂಲವಾಗುವಂತಹದೇ.

ಯೋಜನೆಗಳು

ಸಿಂಗರ್‌ನವರು ಅನುಕೂಲವಾದ ಕಂತುಗಳಲ್ಲಿ ಕೊಳ್ಳುವ ಯೋಜನೆಗಳನ್ನು ಸಹ ಏರ್ಪಡಿಸಿದ್ದಾರೆ. ಆದ್ದರಿಂದ ಪೂರ್ತಿ ಹಣವನ್ನು ಒಂದೇ ಸಲ ಕೊಡುವುದು ನಿಮಗೆ ಸಾಧ್ಯವಿಲ್ಲದಿದ್ದರೆ ನೀವು ಸುಲಭ ಕಂತುಗಳಲ್ಲಿ ಸಲ್ಲಿಸಬಹುದು.

ಉಳಿತಾಯ



ಮನೆಜನರಿಗೆಲ್ಲ ನೀವೇ ಬಟ್ಟೆ ಹೊಲಿಯುವುದಾದರೆ ನಿಮಗೆ ಎಷ್ಟು ಉಳಿತಾಯವಾಗುತ್ತದೆ ನೋಡಿ, ಇಂದಿನ ದಿನಗಳಲ್ಲಿ ದರ್ಜಿಗಳ ಮಜೂರಿ ಬಹಳ ಹೆಚ್ಚು ಇರುವಾಗ. ನೀವು ಮೆಶೀನಿಗೆ ಕೊಟ್ಟ ಹಣ ನಿಮಗೆ 2 ವರ್ಷಕ್ಕಿಂತಲೂ ಕಡಿಮೆ ಸಮಯದಲ್ಲಿ ಹಿಂದೆ ಬರುತ್ತದೆ ಎಂದು ನಿಮಗೆ ಗೊತ್ತಾಗುವುದು.

ಅಂಗಡಿಗಳು

ಸಿಂಗರ್‌ಗೆ ದೇಶದಾದ್ಯಂತ ಹರಡಿರುವ ವ್ಯಾಪಾರಿಗಳಿದ್ದಾರೆ. ನಿಮ್ಮ ಮನೆಯ ಹತ್ತಿರ ಸಿಂಗರ್ ಅಂಗಡಿಯಾಗಲೀ, ಅಥವಾ ವ್ಯಾಪಾರಿಯಾಗಲೀ ಇರುವುದು ಖಂಡಿತ.

ಸೇವೆ

ಸಿಂಗರ್‌ನವರ ಹೊಲಿಗೆ ಮೆಶೀನು ದೀರ್ಘಕಾಲ ಬಾಳಿಕೆ ಬರುವಂತೆ ರಚಿಸಲ್ಪಡುತ್ತದೆ. ಮತ್ತು, ನಿಮ್ಮ ಮೆಶೀನು ಯಾವಾಗಲೂ ಸಮರ್ಪಕವಾಗಿ ಕೆಲಸ ಮಾಡುವ ಸ್ಥಿತಿಯಲ್ಲಿ [illegible] ವ್ಯಾಪಕವಾಗಿ ಹರಡಿರುವ [illegible] ಮತ್ತು ವ್ಯಾಪಾರಿಗಳಲ್ಲಿ [illegible] ದಕ್ಷ ಸೇವೆ ಖಾತ್ರಿಯಾಗಿ ದೊರೆಯುತ್ತದೆ. ಹೀಗಾಗಿ, ನಿಮಗೆ ನಿಮ್ಮ ಮೆಶೀನಿನಿಂದ [illegible] ಪರ್ಯಂತ ಸೇವೆ ದೊರೆಯುತ್ತದೆ

ಒಂದು ನಿಮಿಷಕ್ಕೆ 1000 ಹೊಲಿಗೆಗಳು

ಮೆರಿಟ್ ಹೊಲಿಗೆ ಮೆಶೀನು ಪ್ರತಿ ನಿಮಿಷಕ್ಕೆ 1000 ಹೊಲಿಗೆಗಳನ್ನು ಹಾಕುವ ಪರೀಕ್ಷಣದಲ್ಲಿ ಯಶಸ್ವಿಯಾಗಿದೆ. ಮೆರಿಟ್ ಹೊಲಿಗೆ ಮೆಶೀನ್‌ನಲ್ಲಿ ಅವಶ್ಯವಾಗುವ ಎಲ್ಲಾ ಭಾಗಗಳನ್ನು ಸಿಂಗರ್‌ನವರು ಪರೀಕ್ಷಿಸುತ್ತಾರೆ. ಪ್ರತಿಯೊಂದು ಮೆಶೀನೂ ಸಮರ್ಪಕವಾಗಿ ಕೆಲಸ ಮಾಡುತ್ತಿರುವಂತೆ ಮತ್ತು ಜೀವನ ಪರ್ಯಂತ ಬಾಳಿಕೆ ಬರುವಂತೆ ರಚಿಸಲ್ಪಡುತ್ತದೆ.



ಒಂದು ಹೊಲಿಗೆಯೂ ತಪ್ಪುವದಿಲ

ಮೆರಿಟ್ 4000 ನಿರಂತರ ಗಂಟೆಗಳ [illegible]

ಸಿಂಗರ್ ಅವರ

ಮೆರಿಟ್ ಹೊಲಿಗೆ ಮೆಶೀನು

ಮದುಮಗಳಿಗೆ ಉಡುಗೊರೆ

* ಸಿಂಗರ್ ಕಂಪೆನಿಯ ಟ್ರೇಡ್ ಮಾರ್ಕ್.

ಎಂ. ಜಿ. ರಂಗನಾಥರಾವ್

ಸಾಮಾನ್ಯವಾಗಿ ಒಬ್ಬ ಮನುಷ್ಯ ತನ್ನ ಜೀವಮಾನದ ಆರು ಸಂಪೂರ್ಣ ವರ್ಷಗಳನ್ನು ಕನ್ನಡಿಯ ಮುಂದೆ—ಅದೂ ಮುಖಕ್ಷೌರಕ್ಕಾಗಿ—ಕಳೆಯುತ್ತಾನೆಂದರೆ ನೀವು ನಂಬುತ್ತೀರಾ? ಆದರೆ ಇದು ಸಮಾಜಶಾಸ್ತ್ರ ಸಂಶೋಧಕನೊಬ್ಬನ ಉದ್ಗಾರ. ನುಣ್ಣನೆಯ ಮುಖಕ್ಷೌರಕ್ಕಾಗಿ ಹಾತೊರೆಯುವ ಜನರೆಲ್ಲಾ ಅದಕ್ಕಾಗಿ ಬಹಳಷ್ಟು ಶ್ರಮಿಸುತ್ತಾರೆ.

ಪ್ರಪಂಚದ ಪುರುಷರೆಲ್ಲಾ ಒಟ್ಟಾರೆ ಮುಖಕ್ಷೌರಕ್ಕಾಗಿ ಕನ್ನಡಿಯ ಮುಂದೆ ಕಳೆಯುವ ವೇಳೆ ಎಷ್ಟಾಗಬಹುದು ಎಂಬುದಾಗಲಿ ಮುಖದ ಉಬ್ಬು ತಗ್ಗು ತಿರುವುಗಳ ನಡುವೆ ರೇಜರ್ ಹಿಡಿದು ಕಸರತ್ತು ಮಾಡುವಾಗ ಹರಿಯಬಹುದಾದ ರಕ್ತದ ಪ್ರಮಾಣ ಎಷ್ಟಾಗಬಹುದು ಎಂಬುದನ್ನಾಗಲಿ ಸಮಾಜಶಾಸ್ತ್ರಜ್ಞರಿಗೇ ಬಿಟ್ಟು ಬಿಡೋಣ.

ನುಣ್ಣನೆಯ ಮುಖಕ್ಷೌರದ ಪ್ರಾಮುಖ್ಯವನ್ನು ಪ್ರತ್ಯೇಕವಾಗಿ ಒತ್ತಿ ಹೇಳುವ ಅವಶ್ಯಕತೆ ಇಲ್ಲ. ಚರಿತ್ರೆಯಲ್ಲಿ ಆಗಿ ಹೋದ ರಾಜ ಮಹಾರಾಜರುಗಳಾಗಲಿ ಇಂದಿನ ಕಥೆ—ಕಾದಂಬರಿಗಳ ಚಲನಚಿತ್ರಗಳ ನಾಯಕರೇ ಆಗಲಿ ಯಾವುದೇ ರಾಜಕಾರಣಿಯ ಕ್ರೀಡಾಪಟುಗಳ ಮುಖಗಳನ್ನೇ ಆಗಲಿ ಗಮನಿಸಿದರೆ ಒಂದು ವಿಷಯ ಸ್ಪಷ್ಟವಾಗುತ್ತದೆ—ಅದು ಶೇಕಡ-೯೦ರಷ್ಟು ಜನ ಮುಖಕ್ಷೌರ ಮಾಡಿಕೊಂಡಿರುವವರು ಎಂಬುದು. ಪತ್ರಿಕೆಗಳಲ್ಲಿನ ಜಾಹೀರಾತುಗಳಲ್ಲಿ ಸುಂದರ ತರುಣಿಯರು ನುಣ್ಣನೆಯ ಮುಖಕ್ಷೌರ ಮಾಡಿರುವ ತರುಣರೊಂದಿಗೆ ಇರುವ ವಿವಿಧ ಭಂಗಿಗಳನ್ನೇ ಕಾಣುತ್ತೇವೆ. ಕೆಲವು ಬ್ಲೇಡುಗಳು ಹಾಗೂ ಆಫ್ಟರ್—ಶೇವ್ ಲೋಷನ್‌ಗಳ ಜಾಹೀರಾತುಗಳು ಮುಖಕ್ಷೌರದ ಪ್ರಾಮುಖ್ಯ ಸಾರುವ ಚಿತ್ರಮಾಲಿಕೆಯನ್ನೇ ಪ್ರಕಟಿಸುತ್ತವೆ.

ಮುಖಕ್ಷೌರದ ಕಥೆ ಮನುಷ್ಯನ ಚರಿತ್ರೆಯಷ್ಟೇ ಹಳೆಯದು. ಚರಿತ್ರೆಯನ್ನೆಲ್ಲಾ ಕಾಡಿದುದು ಒಂದೇ ಪ್ರಶ್ನೆ—ಮುಖಕ್ಷೌರ ಮಾಡಬೇಕೆ ಅಥವಾ ಗಡ್ಡ ಮೀಸೆ ಬಿಡಬೇಕೆ ಎಂಬುದು. ನಿಜಕ್ಕೂ ಇದು ಇಂದಿಗೂ ಬಗೆಹರಿಯದ ಸಮಸ್ಯೆ. ಗಡ್ಡ ಮೀಸೆ ಬಿಡುವ ಪದ್ಧತಿಯನ್ನು ಬದ್ಧಿರುವ ಮನ್ನ ಆದರ ಪ್ರಯೋಜನವನ್ನು ನೋಡೋಣ:

೧. ಮೊದಲನೆಯದಾಗಿ ಇನ್ನೂ ೧೫—೨೦ ನಿಮಿಷಗಳ ಕಾಲ ಹಾಸಿಗೆಯಲ್ಲೇ ಮಲಗಿರಬಹುದು.

೨. ರೇಜರ್, ಬ್ಲೇಡು, ಸೋಪು, ಬ್ರಷ್, ಆಫ್ಟರ್ ಶೇವ್ ಲೋಷನ್ ಮತ್ತು ಇತರೇ ಸಾಮಗ್ರಿ



ಗಳಿಗಾಗಿ ಮಾಡುವ ಖರ್ಚಿನ ಉಳಿತಾಯ.

೩. ಮಿಕ್ಕೆಲ್ಲ ವಿಷಯಗಳೂ ಮುಗಿದಾಗ ಸಂಭಾಷಣೆಗೆ ಉಪಯುಕ್ತ ವಿಷಯವಾಗಬಹುದು.

೪. ಗಡ್ಡ ಬಿಟ್ಟವರು ಕೆಲವು ವೇಳೆ ಆರೋಗ್ಯವಿಲ್ಲದವರಂತೆ ಕಾಣುವುದರಿಂದ ನಾಲ್ಕು ಜನ ಅವರ ಆರೋಗ್ಯದ ಬಗ್ಗೆ ವಿಚಾರಿಸಬಹುದು ಇತ್ಯಾದಿ.

ಇಷ್ಟೆಲ್ಲಾ ಪ್ರಯೋಜನಗಳಿದ್ದರೂ ಬಹಳಷ್ಟು ಜನ ಗಡ್ಡ ಮೀಸೆಗಳನ್ನೇಕೆ ಬಿಡುವುದಿಲ್ಲ? ಉತ್ತರ ತುಂಬಾ ಸುಲಭ. ಅವರೆಲ್ಲಾ ಜೀವನದಲ್ಲಿ ಜಯಶೀಲರಾಗಬಯಸುತ್ತಾರೆ. ನೆಪೋಲಿಯನ್, ಎಡಿಸನ್, ಡಾನ್ ಬ್ರಾಡ್‌ಮನ್, ಅಷ್ಟೇಕೆ ಗಾಂಧೀ, ನೆಹರು, ರಾಧಾಕೃಷ್ಣನ್ ಇವರಲ್ಲಿ ಯಾರಾದರೂ ಗಡ್ಡ ಬಿಟ್ಟಿದ್ದಾರಾ? ಗಡ್ಡ ಬಿಟ್ಟಿರುವ ಜೇಮ್ಸ್ ಬಾಂಡನನ್ನು ಊಹಿಸಿಕೊಳ್ಳಬಲ್ಲಿರಾ? ಗಡ್ಡ ಮೀಸೆ ಬಿಟ್ಟಿರುವ ಪುರುಷ ಮಾಡೆಲ್ಲನ್ನು ಸುಂದರ ತರುಣಿಯರು ಸುತ್ತುವರಿದಿರುವ ಒಂದು ಕೇವಲ ಒಂದು ಜಾಹೀರಾತನ್ನಾದರೂ ತೋರಿಸಬಲ್ಲಿರಾ? ಒಬ್ಬ ಗಡ್ಡದವ ಮಾತ್ರ ಅದೂ ಟೈ ಮಾರಾಟ ಸಂಸ್ಥೆಗೋಸ್ಕರ ನೀಡಿರುವ ಜಾಹೀರಾತಿನಲ್ಲಿದ್ದಾನೆ. ಆದರೆ ಆ ಜಾಹೀರಾತಿನಲ್ಲಿ ಅವನ ಸುತ್ತ ಯಾವ ತರುಣಿಯೂ ಇಲ್ಲವಲ್ಲಾ! ಆದುದರಿಂದ ಜೀವನದಲ್ಲಿ ಜಯಶಾಲಿಗಳಾಗಬೇಕಾದರೆ ಮುಖಕ್ಷೌರ ಮಾಡಿಕೊಳ್ಳಲೇಬೇಕು.

ಮುಖಕ್ಷೌರ ಮಾಡಿಕೊಳ್ಳುವ ಪ್ರಮುಖ ನಿರ್ಧಾರ ಮಾಡಿದ ಮೇಲೆ ನೀವು ಮುಖವನ್ನು ನುಣ್ಣಗೆ ಮಾಡುವ ಈ ಮಹತ್ಕಾರ್ಯಕ್ಕೆ ಅಣಿಯಾಗುವ. ಮೊದಲನೆಯವಾಗಿ ಯಾವುದೇ ವೈಜ್ಞಾನಿಕ ಪ್ರಯೋಗಕ್ಕಾಗಿ ಮಾಡುವಂತೆ, ಇದಕ್ಕೆ ಸಹ ಎಲ್ಲ ಉಪಕರಣಗಳನ್ನೂ ಸಿದ್ಧಗೊಳಿಸಬೇಕು. ಇಲ್ಲೇ ನಿಮಗೆ ಎಲ್ಲ ಸಮಸ್ಯೆಗಳೂ ಎದುರಾಗುವುವು. ಯಾವ ರೇಜರ್ ಆರಿಸಬೇಕು? ಕತ್ತನ್ನು ಕೊಯ್ಯುವಷ್ಟು [illegible] ಕತ್ತಿಯನ್ನೇ? ಅಥವಾ ನಮ್ಮ ಜಾಹೀರಾತುಗಳು ಹೇಳಿಕೊಳ್ಳುವ ಸೇಫ್ಟಿ ರೇಜರನ್ನೋ? ಅಥವಾ ಎಲೆಕ್ಟ್ರಿಕ್ ಶೇವರನ್ನೋ? ಇವುಗಳಲ್ಲಿ ಪ್ರತಿಯೊಂದಕ್ಕೂ ಅವುಗಳದೇ ಆದ ಗುಣಾವಗುಣಗಳಿವೆ. ಕತ್ತಿ ಕತ್ತನ್ನೇ ಕೊಯ್ಯಬಹುದಾದ ಸಂದರ್ಭವಿರುವುದರಿಂದಲೂ ಎಲೆಕ್ಟ್ರಿಕ್ ಶೇವರ್‌ಗೆ ಸ್ಟಾರ್ಟಿಂಗ್ ಟ್ರಬಲ್ ಮತ್ತು ವಿದ್ಯುಚ್ಛಕ್ತಿಯ ಖೋತಾ ಇರುವುದರಿಂದಲೂ ನೀವು ಎಚ್ಚರಿಕೆಯಿಂದ ಸೇಫ್ಟಿ ರೇಜರಿಗೆ ಮೊರೆ ಹೋಗುತ್ತೀರಿ.

[illegible] ಯುದ್ಧಕ್ಕೆ [illegible] ಯೋಧನಂತೆ ಅದಕ್ಕೆ ತಕ್ಕ ಬ್ಲೇಡನ್ನು [illegible] ಕೊಳ್ಳಬೇಕು. ಪ್ಲಾಟಿನಂ, ಕ್ರೋಮಿಯಂ, ಟಂಗ್‌ಸ್ಟನ್, ಸ್ಟೇನ್‌ಲೆಸ್ ಸ್ಟೀಲ್ ಅಥವಾ ಹಳೆಯ ಕಾರ್ಬನ್‌ಸ್ಟೀಲಿನವು. ನಿಮಗೆ ಒಳ್ಳೆಯದೆಂದು ತೋರುವ ಯಾವುದೇ ಬ್ಲೇಡಾದರೂ ಆಗಬಹುದು. ಅವು ಫಾರಿನ್ನಿನವೇ [illegible] ಅಥವಾ ಇಂಡಿಯನ್ನೇ ಆಗಿರಬಹುದು.


ಮಿಕ್ಕ ಸಾಮಗ್ರಿಗಳ ಬಗ್ಗೆ ಅಷ್ಟು ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಒಂದು ಒಳ್ಳೆಯ ಷೇವಿಂಗ್ ಬ್ರಷ್, ಸೋಪು ಅಥವಾ ಕ್ರೀಮ್, ಆಫ್ಟರ್ ಶೇವ್ ಲೋಶನ್ (ಬೇಕಿದ್ದರೆ) ಮತ್ತು ಬಿಸಿ ನೀರಿನ ಮಗ್ ಈಗ ನೀವು ಯುದ್ಧಕ್ಕೆ ತಯಾರು. ಈ ಎಲ್ಲ ಸಾಮಗ್ರಿಗಳಿಂದ ಸಜ್ಜಾದ ನೀವು ವಿಧ್ಯುಕ್ತ ಕಾರ್ಯಾಚರಣೆಯನ್ನಾರಂಭಿಸಬಹುದು.

ನಿಮ್ಮ ಸಾಮಗ್ರಿಗಳಲ್ಲಿ ಯಾವುದಾದರೊಂದು ಸರಿಯಾಗಿಲ್ಲದಿದ್ದರೆ ಅಥವಾ ನೀವು ಕಾರ್ಯಾಚರಣೆಯಲ್ಲಿರುವಾಗ ನಿಮ್ಮ ಮನಸ್ಸು ಬೇರೇನೋ ಯೋಚನೆ ಮಾಡುತ್ತಿದ್ದರೆ ರಕ್ತಪಾತ ಕಟ್ಟಿಟ್ಟ



ಆಫ್ಟರ್ ಶೇವ್ ಒಮ್ಮೆ ಗಡ್ಡ ತಾಕುತ್ತಲೇ ಹಾ! ಎಂದು ಚೀರುತ್ತೀರಿ. ನೀರು ತಂದು ಕೊಟ್ಟವರಿಗೆ ಹಿಡಿ ಶಾಪ ಹಾಕುತ್ತೀರಿ. ನೆನೆದ ಗಡ್ಡಕ್ಕೆ ಸೋಪು ಹಚ್ಚಿ ರೇಜರನ್ನು ಕೈಗೆ ತೆಗೆದುಕೊಳ್ಳುವ ವೇಳೆಗೆ ಕರೆಗಂಟೆ ಕೇಳಿಸುತ್ತದೆ. ನೀವು ಗೊಣಗುತ್ತ ಬಾಗಿಲು ತೆಗೆದು ವಾರದ ಪೇಪರನ್ನು ತಂದುಕೊಂಡು ಬಂದ ವರನ್ನು ಸ್ವಾಗತಿಸುತ್ತೀರಿ. ಹಾಗೆ ಬಂದವರು ರಾಮನವಮಿ ಅಥವಾ ಗಣಪತಿ ಉತ್ಸವದ ಕಾಣಿಕೆಗೋ ಅಥವಾ ಬೇರಾವ ಸಹಾಯಕ್ಕೋ ಬಂದಿದ್ದರೆ ಅವರನ್ನು ಉಪಾಯವಾಗಿ ಸಾಗ ಹಾಕಿ ಒಳಕ್ಕೆ ಬರುತ್ತೀರಿ. ಈ ವೇಳೆಗೆ ಗಡ್ಡಕ್ಕೆ ಹಚ್ಚಿದ ಸೋಪು ಸಿಮೆಂಟಿನಂತೆ ಒಣಗಿರುತ್ತದೆ. ಪುನಃ ನೀರು ಸವರಿ ರೇಜರನ್ನು ಒಮ್ಮೆ ಕೆಳಗಿಳಿಸಿ ರುತ್ತೀರಿ. ಬ್ಲೇಡಿನ ಮಹತ್ವದ ಅರಿವು ನಿಮಗಾ ಗುವುದು. ಮುಖದ ಮೇಲಿನ ಗುಳ್ಳೆ ಒಡೆದು ಚರ್ಮ ಕತ್ತರಿಸಿ ರಕ್ತ ಸುರಿಯತೊಡಗಿದಾಗಲೇ ಈ ವೇಳೆಗೆ ಪುನಃ ಬಾಗಿಲು ತಟ್ಟುವ ಶಬ್ದ. ಬಂದವರನ್ನು ಕೈಯಲ್ಲಿರುವ ಆಯುಧದಿಂದಲೇ ಕೊಂದುಬಿಡುವಷ್ಟು ಕೋಪ ಬರುತ್ತದೆ. ಆದರೆ ಬಂದವ ನಿಮ್ಮ ಪಕ್ಕದ ಮನೆಯಾತನಿದ್ದು ನಿಮ್ಮಿಂದ ಹೋದ ವಾರ ತಾನೇ ಹತ್ತು ರೂಪಾಯಿ ಕೈಗಡ ತೆಗೆದುಕೊಂಡಿರುತ್ತಾನೆ. ಅದು ವಾಪಸ್ಸು ಬರುವವರೆಗೂ ಅವನ ಮುಂದಿನ ಸಂಬಳದವರೆ ಗಾದರೂ ಸುಮ್ಮನಿರಬೇಕೆಂಬ ಅರಿವಾಗಿ ತೆಪ್ಪ ಗಾಗುತ್ತೀರಿ. ಆತನನ್ನು ಹೇಗೆ ಹೊರಹಾಕುತ್ತೀರಿ ಎಂಬುದು ನಿಮ್ಮ ಬುದ್ಧಿಶಕ್ತಿಗೆ ಬಿಟ್ಟಿದ್ದು. ವಾಪಸ್ಸು ಬಂದು ರೇಜರನ್ನು ಬಹಳ ಎಚ್ಚರಿಕೆ ಯಿಂದ ಹಿಡಿದುಕೊಂಡು (ಸ್ಫೋಟಕ ವಸ್ತುವನ್ನು ಹಿಡಿಯುವಂತೆ) ನಿಮ್ಮ ಕಾರ್ಯಾಚರಣೆಯನ್ನು ಮುಂದುವರಿಸುತ್ತೀರಿ. ಈ ಅನಿವಾರ್ಯ ನಿತ್ಯ ಕರ್ಮದ ಬಗ್ಗೆ ದೀರ್ಘವಾಗಿ ಯೋಚಿಸತೊಡಗು ತ್ತೀರಿ. ನಿಮ್ಮ ಮುಖದ ಚರ್ಮ ಮತ್ತೊಮ್ಮೆ ಕತ್ತರಿಸಿ ರಕ್ತ ಸುರಿದಾಗಲೇ ನಿಮಗೆ ಅರಿವಾಗು ವುದು ನಿಮ್ಮ ಮನಸ್ಸು ಹುಲ್ಲು ಮೇಯಲು ಹೋಗಿತ್ತು ಎಂಬುದು. ಈ ವೇಳೆಗೆ ನಿಮ್ಮ ಸುತ್ತ ಮುಖಕ್ಷೌರದ ಉಪಕರಣಗಳು ಟವಲ್, ಬ್ಯಾಂಡೇಜ್, ಕತ್ತರಿ ವಗೈರೆ ಗುಂಪುಗೂಡಿ ನೀವು ಆಪರೇಷನ್ ಥಿಯೇಟರಿನಲ್ಲಿ ಇರುವಂತೆ ಭಾಸವಾಗುತ್ತದೆ. ಹೀಗೆ ಹರಿದುಹೋಗುವ ರಕ್ತವನ್ನೆಲ್ಲಾ ಯಾವುದಾದರೂ ರಕ್ತ ಬ್ಯಾಂಕಿಗೆ ದಾನ ಮಾಡಿದ್ದರೆ ಮೆಡಲ್ ಆದರೂ ಸಿಗು ತ್ತಿತ್ತು ಎಂದು ಉದ್ಗಾರವೆತ್ತುತ್ತೀರಿ.

ಕೊನೆಯ ಹಂತ ಮುಟ್ಟಿದಾಗ ನೀವು ಸಾಕಷ್ಟು ರಕ್ತವನ್ನು ಕಳೆದುಕೊಂಡುದರ ಜೊತೆಗೆ ತಾಳ್ಮೆ ಯನ್ನೂ ಕಳೆದುಕೊಂಡಿರುತ್ತೀರಿ. ಇಷ್ಟಾಗಿಯೂ ನಿಮಗೆ ನುಣ್ಣನೆಯ ಮುಖಕ್ಷೌರದ ಅನುಭವ ಆಗದಿದ್ದಾಗ ಕೂಗುತ್ತೀರಿ; "ಪ್ರಪಂಚದ ಮರು ಹರೇ ಬಂದಾಗ; ನೀವು ಕಳೆದುಕೊಳ್ಳುವುದು ಏನೂ ಇಲ್ಲ, ರಕ್ತವೊಂದನ್ನು ಬಿಟ್ಟು. ಆದ್ದರಿಂದ ಗಡ್ಡ ಬೋಳಿಸುವ ಕೆಲಸಕ್ಕೆ ತಡೆ ಹಾಕುವ." ನನ್ನ ಕರೆ ಗುರಿ ಮುಟ್ಟುವವರೆಗೆ ವಿಶ್ರಾಂತಿ ಕೂಡದು. ✡



ಆಲ್ಬರ್ಟ್ ಐನ್‌ಸ್ಟೈನ್

ಜಿ ಟಿ ನಾರಾಯಣರಾವ್

ಆಲ್ಬರ್ಟ್ ಐನ್‌ಸ್ಟೈನ್

(ಮಾರ್ಚ್ ೧೯೭೯ ಸಂಚಿಕೆಯಿಂದ ಮುಂದುವರಿದುದು)

ಡಾಕ್ಟರೇಟ್ ಪದವಿ

೧೯೦೧ರ ಉದ್ಯೋಗರಹಿತ ದುರ್ಭರ ದಿನಗಳಲ್ಲಿಯೂ ಐನ್‌ಸ್ಟೈನರ ಬುದ್ಧಿ ತೀವ್ರ ವಿಜ್ಞಾನ ಪಟುವಾಗಿತ್ತು. ಆಗ ಇವರೊಂದು ಸಂಶೋಧನ ಪ್ರಬಂಧ ಬರೆದು ಅದನ್ನು ತಮ್ಮ ಡಾಕ್ಟರೇಟ್ (Ph. D.) ಪ್ರಬಂಧವಾಗಿ ಝೂರಿಕ್ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದರು. ಆದರೆ ವಿಶ್ವವಿದ್ಯಾಲಯದ ಭೌತವಿಜ್ಞಾನದ ಪ್ರಾಧ್ಯಾಪಕ ಪ್ರೊಫೆಸರ್ ಕ್ಲೈನರ್ ಇದನ್ನು ಸ್ವೀಕರಿಸಲಿಲ್ಲ; ಐನ್‌ಸ್ಟೈನರಿಗೆ ಡಾಕ್ಟರೇಟ್ ಪದವಿ ಮಂಜೂರಾಗಲಿಲ್ಲ. ಮುಂದೆ ಅದೇ ಪ್ರಬಂಧವನ್ನು ಪ್ರತಿಷ್ಠಿತ ವಿಜ್ಞಾನ ಪತ್ರಿಕೆ Annalen der Physik ಪ್ರಕಟಿಸಿತು.

೧೯೦೫ರಲ್ಲಿ ಅರಳಿದ ಹಲವಾರು ಸಂಶೋಧನ ಪ್ರಬಂಧಗಳ ಪೈಕಿ ಒಂದನ್ನು ಐನ್‌ಸ್ಟೈನ್ ಪುನಃ ಅದೇ ವಿಶ್ವವಿದ್ಯಾಲಯಕ್ಕೆ ಹೊಸ ಡಾಕ್ಟರೇಟ್ ಪ್ರಬಂಧವಾಗಿ ಒಪ್ಪಿಸಿದರು. ಈ ಸಲವೂ ಪ್ರೊಫೆಸರ್ ಕ್ಲೈನರ್ ಅಡ್ಡಗಾಲಿಟ್ಟರು. ಪ್ರಬಂಧ ತೀರ ಸಂಕ್ಷೇಪವಾಗಿದ್ದುದೇ ಕಾರಣ. ಐನ್‌ಸ್ಟೈನ್ ಸೋಲೊಪ್ಪಲಿಲ್ಲ. ಆ ಪ್ರಬಂಧಕ್ಕೆ ಕೇವಲ ಒಂದೇ ಒಂದು ಹೆಚ್ಚಿನ ವಾಕ್ಯ ಸೇರಿಸಿ ಅದನ್ನು 'ವಿಸ್ತಾರ'ಗೊಳಿಸಿ ವಿಶ್ವವಿದ್ಯಾಲಯಕ್ಕೆ ಮರುಸಲ್ಲಿಸಿದರು. ವಿಶ್ವವಿದ್ಯಾಲಯ (ಅಂದರೆ ಪ್ರೊಫೆಸರ್ ಕ್ಲೈನರ್) 'ಹೊಸ' ಪ್ರಬಂಧವನ್ನು ಒಡನೆ ಸ್ವೀಕರಿಸಿ ಅಭ್ಯರ್ಥಿಗೆ ಡಾಕ್ಟರೇಟನ್ನು 'ಅನುಗ್ರಹಿಸಿತು.' ಏನಾದರೂ ವಿಶ್ವವಿದ್ಯಾಲಯದ ಮರ್ಯಾದೆ ಪ್ರಶ್ನೆ ಅಲ್ಲವೇ! ಹೀಗೆ ಐನ್‌ಸ್ಟೈನ್ ೧೯೦೫ರಲ್ಲಿ ಝೂರಿಕ್ ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವೀಧರರಾದರು.

ಅದೇ ವಿಶ್ವವಿದ್ಯಾಲಯದಲ್ಲಿ ತಾನೊಬ್ಬ ಅಧ್ಯಾಪಕನಾಗಬೇಕೆಂಬುದು ಇವರ ಹೆಬ್ಬಯಕೆ. ಆದರೆ ಇಪ್ಪತ್ತಾರರ ತರುಣ. ಶಿಕ್ಷಣಕ್ಷೇತ್ರದಲ್ಲಿ ಪೂರ್ವಾನುಭವವಿಲ್ಲದವ, ನೇರವಾಗಿ ಪ್ರಾಧ್ಯಾಪಕ ಗದ್ದುಗೆ ಏರುವಂತಿರಲಿಲ್ಲ. ತತ್ಪೂರ್ವ ಯಾವುದೇ ವಿಶ್ವವಿದ್ಯಾಲಯದಲ್ಲಿ ಅಭ್ಯಾಸಿಶಿಕ್ಷಕನಾಗಿ ಮುಫತ್ತು ಸೇವೆ ಸಲ್ಲಿಸಿ ಅರ್ಹತೆ ಗಳಿಸಬೇಕಾಗಿತ್ತು. ಇಂಥವನ ಉಪನ್ಯಾಸ ತರಗತಿಗಳಿಗೆ ಆಸಕ್ತ ವಿದ್ಯಾರ್ಥಿಗಳು ಹಾಜರಾಗಬಹುದು. ಹೀಗೆ ಬಂದವರು ಪಾವತಿಸುವ ಶುಲ್ಕವೊಂದೇ ಇವನ ವರಮಾನ. ಸಹಜವಾಗಿ ಇದು ಅತ್ಯಲ್ಪವಾಗಿರುತ್ತಿತ್ತು. ಆದ್ದರಿಂದ ಇತರ ಮೂಲಗಳಿಂದ ಆದಾಯವಿದ್ದ ತರುಣರು ಮಾತ್ರ ಅಭ್ಯಾಸಿಶಿಕ್ಷಕರಾಗುತ್ತಿದ್ದರು.

ಬರ್ನ್ ನಗರದ ಏಕಸ್ವ ಕಛೇರಿಯಲ್ಲಿ ಗುಮಾಸ್ತರಾಗಿದ್ದ ಐನ್‌ಸ್ಟೈನರಿಗೆ ಹೊಟ್ಟೆಪಾಡಿನ ಚಿಂತೆ ಇರಲಿಲ್ಲ. ಎಂದೇ ಇವರು ಸ್ಥಳೀಯ ಬರ್ನ್ ವಿಶ್ವವಿದ್ಯಾಲಯಕ್ಕೆ ಅಭ್ಯಾಸಿಶಿಕ್ಷಕ ಹುದ್ದೆಗೆ ಅರ್ಜಿ ಸಲ್ಲಿಸು[illegible] ತಾವು ಸಾಪೇಕ್ಷತಾ ಸಿದ್ಧಾಂತಕ್ಕೆ ಪೀಠಿಕೆಯಾಗಿ ಬರೆದಿದ್ದ ಪ್ರಬಂಧದ ನಕಲನ್ನು ಅರ್ಜಿಗೆ ಲಗತ್ತಿಸಿದ್ದರು. ಅರ್ಜಿ ಸ್ವೀಕೃತವಾಗಲಿಲ್ಲ. ಕಾರಣ? ಲಗತ್ತು ಪ್ರಬಂಧ ಅರ್ಥಾತೀತವಾಗಿತ್ತು. ಈ ಕಹಿ ಅನುಭವ ಇವರಿಗೆ ವಿಶ್ವವಿದ್ಯಾಲಯ

ಹುದ್ದೆಯ ಬಗೆಗೇ ಜುಗುಪ್ಸೆ ಹುಟ್ಟಿಸಿತು. ಯಾವುದಾದರೂ ಪಾಲಿಟೆಕ್ನಿಕ್ ಇಲ್ಲವೇ ಶಾಲೆಯನ್ನು ಉಪಾಧ್ಯಾಯನಾಗಿ ಸೇರಲೋಸುವೆಂದು ಬಗೆದು ಹಲವೆಡೆಗಳಿಗೆ ಅರ್ಜಿ ಗುಜರಾಯಿಸಿದರು. ಸಹಪಾಠಿ ಮಾರ್ಸೆಲ್ ಗ್ರಾಸ್‌ಮ್ಯಾನರಿಗೆ — ಇವರು ಈ ವೇಳೆಗೆ ಝೂರಿಕ್ಕಿನ ಪಾಲಿಟೆಕ್ನಿಕ್ಕಿನಲ್ಲಿ ಗಣಿತ ಪ್ರಾಧ್ಯಾಪಕರಾಗಿದ್ದರು — ಬರೆದ ಕಾಗದದಲ್ಲಿ (೩ ಜನವರಿ ೧೯೦೮) ಇಂಥ ಹುದ್ದೆ 'ಗಿಟ್ಟಿಸಲು' ತಾನು ಯಾರನ್ನು ಕಂಡು ಮಾತಾಡಬೇಕು ಎಂಬ 'ವ್ಯಾವಹಾರಿಕ' ಸಲಹೆಯನ್ನು ಯಾಚಿಸಿದ್ದರು. ಉಪಾಧ್ಯಾಯನಾಗಬೇಕೆಂದು ತಾನು ಬಯಸುವುದು ಅಧಿಕಾರಾಪೇಕ್ಷೆಯಿಂದಲ್ಲ, ಸ್ವಪ್ರತಿಷ್ಠೆ ಮೆರೆಸಬೇಕೆಂದೂ ಅಲ್ಲ, ಬದಲು ಆ ವೃತ್ತಿಯಲ್ಲಿ "ನನ್ನ ಖಾಸಗಿ ವೈಜ್ಞಾನಿಕ ಕಾರ್ಯವನ್ನು ಕಡಿಮೆ ಪ್ರತಿಕೂಲ ಸನ್ನಿವೇಶಗಳಲ್ಲಿ ಮುಂದುವರಿಸುವುದು ಸಾಧ್ಯವಾದೀತೆಂಬ ನಂಬಿಕೆಯಿಂದ" ಎಂಬುದಾಗಿ ವಿವರಣೆ ನೀಡಿದರು.

ಪ್ರತಿಭಾವಿಕಾಸ

ಮಾನವನ ಊಹನಾಪ್ರತಿಭೆ ಈ ತನಕ ಮೂರು ಸಲ ಮಾತ್ರ ಪರಮೋತ್ತುಂಗ ಶಿಖರವನ್ನೈದಿದೆ ಎಂದು ವಿಜ್ಞಾನೇತಿಹಾಸಕಾರರು ಹೇಳುತ್ತಾರೆ: ಶೂನ್ಯವನ್ನು ಸೃಷ್ಟಿಸಿದಾಗ ಒಮ್ಮೆ (ಯಾವಾಗ ಎಂದು ಯಾರಿಗೂ ಗೊತ್ತಿಲ್ಲ), ಕ್ರಿಸ್ತಶಕ ೧೬೬೬ರಲ್ಲಿ ಐಸಾಕ್ ನ್ಯೂಟನ್ (೧೬೪೨–೧೭೨೭) ವಿಶ್ವಗುರುತ್ವಾಕರ್ಷಣ ನಿಯಮವನ್ನು ಆವಿಷ್ಕರಿಸಿದಾಗ ಒಮ್ಮೆ, ೧೯೦೫ರಲ್ಲಿ ಆಲ್ಬರ್ಟ್ ಐನ್‌ಸ್ಟೈನ್ (೧೮೭೯–೧೯೫೫) ವಿಶೇಷ ಸಾಪೇಕ್ಷತಾ ಸಿದ್ಧಾಂತವನ್ನು ಪ್ರತಿಪಾದಿಸಿದಾಗ ಒಮ್ಮೆ.

ಐನ್‌ಸ್ಟೈನರ ಸಿದ್ಧಾಂತ ಸಮಕಾಲೀನ ವಿಜ್ಞಾನಿಗಳನ್ನು ದಿಙ್ಮೂಢಗೊಳಿಸಿತು — ಹಿಮಾಶ್ಮಪ್ರವಾಹ ಬಯಲುಸೀಮೆಯವರ ಮೇಲೆ ಹಠಾತ್ತನೆ ಆಕ್ರಮಣ ನಡೆಸಿದರೆ ಆಗುವಂತೆ. ಪ್ರೊಫೆಸರ್ ಕ್ಲೈನರ್ ವಿಶೇಷ ಸಾಪೇಕ್ಷತಾ ಸಿದ್ಧಾಂತವನ್ನು ಓದಿದರು. ಅರ್ಥವಾಯಿತೊ ಇಲ್ಲವೊ, ಆದರೂ ಆ ಪ್ರಬಂಧಗಳಲ್ಲಿ ಅಡಕವಾಗಿದ್ದ ಗಭೀರ ಚಿಂತನೆಯಿಂದ ಪ್ರಭಾವಿತರಾದರು. ಅವುಗಳ ತಳದಲ್ಲಿ ಮಹಾಪ್ರತಿಭೆ ಹುದುಗಿದೆ ಎಂದು ಇವರಿಗೆ ಮನವರಿಕೆ ಆಯಿತು. ಇಂಥ ಮಹಾಪುರುಷನನ್ನು ತಮ್ಮ ವಿಶ್ವವಿದ್ಯಾಲಯಕ್ಕೆ (ಝೂರಿಕ್) ಆಹ್ವಾನಿಸಬೇಕೆಂದು ಆಶಿಸಿದರು. ಆದರೆ ಪ್ರಚಲಿತ ಕಾನೂನು ಸ್ಪಷ್ಟವಾಗಿತ್ತು, ಕಠಿನವಾಗಿಯೂ ಇತ್ತು — ಅಭ್ಯಾಸಿಶಿಕ್ಷಕನಾಗಿ ಅಭ್ಯರ್ಥಿ ತನ್ನ ಅರ್ಹತೆಯನ್ನು ಸ್ಥಾಪಿಸಿದ ತರುವಾಯವೇ ಪ್ರಾಧ್ಯಾಪಕ ಅಂತಸ್ತಿಗೆ ಬಡ್ತಿ ಪಡೆಯಬಹುದಿತ್ತು.

ಕ್ಲೈನರ್ ಬರ್ನಿಗೆ ಹೋದರು. ಐನ್‌ಸ್ಟೈನರನ್ನು ಕಂಡರು. ವಿವರ ತಿಳಿದರು. ಇನ್ನೊಮ್ಮೆ ಬರ್ನ್ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸುವಂತೆ ಇವರ ಮನವೊಲಿಸಿದರು. ಹಿಂದಿನ ಸಲದ ಅರ್ಜಿ ಎಷ್ಟು ಸುಲಭವಾಗಿ ತಿರಸ್ಕೃತವಾಗಿತ್ತೊ, ಈ ಸಲದ ಅರ್ಜಿ ಅಷ್ಟೆ ಸುಲಭವಾಗಿ ಪುರಸ್ಕೃತವಾಯಿತು. ಹೀಗೆ ಐನ್‌ಸ್ಟೈನರಿಗೆ ಮುಂದೆ ಝೂರಿಕ್ ವಿಶ್ವವಿದ್ಯಾಲಯವನ್ನು ಪ್ರಾಧ್ಯಾಪಕರಾಗಿ ಪ್ರವೇಶಿಸಲು ರಾಜಮಾರ್ಗ ಸಿದ್ಧವಾಯಿತು.

ಪೇಟೆಂಟ್ ಕಛೇರಿಯಲ್ಲಿ ಐನ್‌ಸ್ಟೈನ್ ದಿನವೊಂದರ ಎಂಟು ತಾಸುಗಳ ಕಡ್ಡಾಯ ಬೈಠಕ್ಕು ಕೊಟ್ಟು ಉಳಿದ ವೇಳೆಯಲ್ಲಿ ಅಭ್ಯಾಸಿಶಿಕ್ಷಕರಾಗಿ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ನೀಡಬೇಕಾಗಿತ್ತು. ಹೊಸ ಹೊಸ ಭಾವನೆಗಳೂ ಸಾಧ್ಯತೆಗಳೂ ಇವರನ್ನು ಸತತವಾಗಿ ಕಾಡಿಸುತ್ತಿದ್ದ ದಿನಗಳವು. ಅವುಗಳ ಬೆಂಬತ್ತಿ ಸಂಶೋಧನೆಯ ಹೊಸ ಜಾಡು ಕಡಿಯುತ್ತ ಮುನ್ನಡೆಯುವುದು ಅನಿವಾರ್ಯವಾಗಿತ್ತು. ಪರಿಸ್ಥಿತಿ ಇವರ ಮೇಲೆ ಇಂಥ ಕಡ್ಡಾಯ ನಿರ್ಬಂಧ ಹೇರಿತ್ತು. ಹೀಗಾಗಿ ತರಗತಿಯ ಪ್ರವಚನಕ್ಕೆ ಅತ್ಯವಶ್ಯವಾದ ಟಿಪ್ಪಣಿ ತಯಾರಿಕೆ ಇವರಿಗೆ ಸಾಧ್ಯವಾಗುತ್ತಿರಲಿಲ್ಲ. ಕ್ರಮಬದ್ಧ ಉಪನ್ಯಾಸ ನೀಡಿಕೆಯಂತೂ ಈ ಅಂಕುಶಹೀನ ಮತಿಗೆ ಎಂದೂ ಕೈಗೂಡದು. ಇವರ ಉಡುಪು ವಿಶ್ವವಿದ್ಯಾಲಯದ ಅಧ್ಯಾಪಕನಿಗೆ ಉಚಿತ ಸಲ್ಲದ ಅನೌಪಚಾರಿಕ ಗವಸು! ದೊಗಲೆ ಸುರಾಲು. ಸಡಿಲ ಜುಬ್ಬ. ಕಾಲುಚೀಲ ಎಳೆದುಕೊಳ್ಳದೆ ಪಾದರಕ್ಷೆ ತೊಟ್ಟರೂ ತೊಟ್ಟರೇ. ಕಂಠಕೌಪೀನವಿದ್ದರೂ ಇತ್ತು, ಅಗಲೂ ಅಳ್ಳಕ. ಇಂಥ ಒಬ್ಬ ಅನ್ಯಮನಸ್ಕ ತರುಣ ಆ ಭವ್ಯ ಪರಿಸರದಲ್ಲಿ ಸುತರಾಂ ಹೊಂದು

ತ್ತಿರಲಿಲ್ಲ. ಉಡುಪು, ನಡವಳಿಕೆ ಮೊದಲಾದ ಬಾಹ್ಯ ಪ್ರದರ್ಶನಗಳನ್ನು ಕುರಿತಂತೆ ಐನ್‌ಸ್ಟೈನ್ ಎಂದೂ ಸುಧಾರಿಸಲೇ ಇಲ್ಲ. "ನನ್ನ ದೃಷ್ಟಿಯಲ್ಲಿ ಸೊತ್ತುಗಳು, ಬಾಹ್ಯ ಯಶಸ್ಸು, ಪ್ರಚಾರ, ಭೋಗ ಇವು ಸದಾ ತಿರಸ್ಕಾರಾರ್ಹವಾದವು. ಸರಳವೂ ಆಡಂಬರರಹಿತವೂ ಆದ ಜೀವನವಿಧಾನ ಪ್ರತಿಯೊಬ್ಬನಿಗೂ ಅತ್ಯುತ್ಕೃಷ್ಟವಾದದ್ದೆಂದು ನಾನು ನಂಬಿದ್ದೇನೆ – ದೇಹ, ಮನಸ್ಸು ಎರಡಕ್ಕೂ" ಇದು ಇವರ ಮತ.

ಆ ದಿನಗಳಂದು ಅನೇಕ ಬಡ ಯಹೂದ್ಯ ವಿದ್ಯಾರ್ಥಿಗಳು ರಶ್ಯ ದೇಶದಿಂದ ಬರ್ನ್ ವಿಶ್ವವಿದ್ಯಾಲಯಕ್ಕೆ ಓದಲು ಬರುತ್ತಿದ್ದರು. ಅಲ್ಲಿನ ಸೇವಕರ ದೃಷ್ಟಿಯಲ್ಲಿ ಐನ್‌ಸ್ಟೈನ್ ಕೂಡ ಈ ಬಡಪರ ಸಾಲಿಗೆ ಸೇರಿದವರೆಂದಿತ್ತು. ಅದೇ ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿನಿಯಾಗಿ ಬಂದು ಸೇರಿದ್ದ ಮಾಜಾ (ಐನ್‌ಸ್ಟೈನರ ತಂಗಿ) ತನ್ನ ಸುಪ್ರಸಿದ್ಧ ಅಣ್ಣನನ್ನು ಅವರ ತರಗತಿಗೇ ಹೋಗಿ ನೋಡಬಯಸಿದಳು. ಮಾಜಾ ದ್ವಾರಪಾಲಕನನ್ನು ಪ್ರಶ್ನಿಸುತ್ತಾಳೆ "ನನ್ನ ಅಣ್ಣ ಡಾಕ್ಟರ್ ಐನ್‌ಸ್ಟೈನ್ ಪಾಠ ಹೇಳುತ್ತಿರುವ ಕೊಠಡಿ ಯಾವುದು?"

ದ್ವಾರಪಾಲಕನಿಗೆ ಪರಮಾಶ್ಚರ್ಯ. ಶುಚಿಯಾಗಿ ಉಡುಗೆ ತೊಟ್ಟು ನಿಂತಿದ್ದ ಈ ತರುಣಿಯನ್ನು ನೋಡಿ ಉದ್ಗರಿಸುತ್ತಾನೆ " ಏನು, ಏನು? ಆ ರಸ್ಸ ನಿಮ್ಮ ಅಣ್ಣ!"

ಇಂಥ ಐನ್‌ಸ್ಟೈನರ ತರಗತಿಗಳು ವಿದ್ಯಾರ್ಥಿಗಳನ್ನು ಒಲಿಸದಿದ್ದುದು ಆಶ್ಚರ್ಯವಲ್ಲ. ಬರುತ್ತಿದ್ದ ಕೆಲವರಾದರೂ ಇವರ ಮಿತ್ರರು ಮಾತ್ರ. ವೈಯಕ್ತಿಕ ಸ್ನೇಹ ವಾತ್ಸಲ್ಯಗಳದ್ದೇ ಹೆಚ್ಚಿನ ಒತ್ತಾಯ.

ತಮ್ಮ 'ನಿಧಿ' ಹೇಗೆ ಹಿಗ್ಗುತ್ತಿದೆ ಎಂಬುದನ್ನು ತಿಳಿದು ಹಿಗ್ಗಲು ಒಂದು ದಿನ ಖುದ್ದು ಕ್ಲೈನರರೇ ಐನ್‌ಸ್ಟೈನರ ತರಗತಿಗೆ 'ಬಿಜಯಂಗೈದರು.' ಅವರಿಗೆ ಆದದ್ದು ತೀವ್ರ ಹತಾಶೆ, ಬಡಿದದ್ದು ಪ್ರಬಲಾಘಾತ. ಈ ತೆರನಾದ ಅರ್ಧ ಬಾಯಿ ತೆರೆದ ಗುಣುಗುಣುಕೆಗಳು ವಿದ್ಯಾರ್ಥಿಗಳಿಗೆ ಗ್ರಾಹ್ಯವಾಗವು, ಐನ್‌ಸ್ಟೈನ್ ಇನ್ನಷ್ಟು ಕ್ರಮಬದ್ಧ ಸಿದ್ಧತೆಯೊಡನೆ ತರಗತಿಗೆ ಹೋಗಬೇಕು, ಸಾಂದನೆಯ ಸೌಲಭ್ಯ ಗಳಿಸಿಕೊಳ್ಳಬೇಕು ಎಂಬ ಆತ್ಮೀಯ ಹಿತವಚನ ನುಡಿದರು.

"ನಾನು ಝೂರಿಕ್ಕಿನಲ್ಲಿ ಪ್ರಾಧ್ಯಾಪಕನಾಗಿ ನೇಮಕ ಪಡೆಯಬೇಕೆಂದು ಅಪೇಕ್ಷಿಸುವುದಿಲ್ಲ" ಎಂದರು ಐನ್‌ಸ್ಟೈನ್ — ಕೋಪಾವಿಷ್ಟರಾಗಿ ಅಲ್ಲ, ತನ್ನಿಂದ ಯಾವುದೇ ವಿಧವಾದ ಕಟ್ಟುಪಾಡಿಗೆ ಒಳಪಡುವುದೂ ಸಾಧ್ಯವಾಗದು ಎಂಬುದರ ಅರಿವಿನಿಂದ.

ಈ ವೇಳೆಗೆ ಝೂರಿಕ್ ವಿಶ್ವವಿದ್ಯಾಲಯ ಸೈದ್ಧಾಂತಿಕ ಭೌತವಿಜ್ಞಾನದ ಸಹಾಯಕ ಪ್ರಾಧ್ಯಾಪಕ ಹುದ್ದೆಯನ್ನು ಸೃಷ್ಟಿಸಿತು (೧೯೦೯). ಆಡಳಿತ ಹಿರಿಯರ ಆಸೆ ಇದ್ದದ್ದು ಫ್ರೀಡರಿಕ್ ಆ್ಯಡ್ಲರರನ್ನು (ಇವರು ಪಾಲಿಟೆಕ್ನಿಕ್ಕಿನಲ್ಲಿ ಐನ್‌ಸ್ಟೈನರ ಸಹಪಾಠಿಯಾಗಿದ್ದರು.) ಈ ಹುದ್ದೆಗೆ ಆಯಬೇಕೆಂದು. ಬೌದ್ಧಿಕವಾಗಿ ಆ್ಯಡ್ಲರ್ ಉತ್ತಮ ಪದವಿ ಗಳಿಸಿ ಅರ್ಹತೆ ಸಂಪಾದಿಸಿದ್ದರು. ರಾಜಕೀಯವಾಗಿ ಇವರಿಗೆ ಪ್ರಬಲ ಬೆಂಬಲವಿತ್ತು. ಸಚ್ಚಾರಿತ್ರ್ಯ ಮತ್ತು ಉನ್ನತಾದರ್ಶಗಳಿಗೆ ಪರ್ಯಾಯನಾಮದಂತಿದ್ದ ತರುಣ ಆ್ಯಡ್ಲರ್ ಬೇರೆ ತೆರನಾಗಿಯೇ ಯೋಚಿಸಿದರು. ಇವರ ಲಕ್ಷ್ಯವಿದ್ದದ್ದು ಐನ್‌ಸ್ಟೈನರತ್ತ. ಬುದ್ಧಿಮತ್ತೆ, ವಿಜ್ಞಾನಸಿದ್ಧಿ, ಸಂಶೋಧನಸಾಮರ್ಥ್ಯ ಒಂದೊಂದರಲ್ಲಿಯೂ ತನಗಿಂತ ಎಷ್ಟೆಷ್ಟೊ ಉಚ್ಚ ಮಟ್ಟದಲ್ಲಿದ್ದ ಐನ್‌ಸ್ಟೈನರನ್ನೇ ಈ ಹುದ್ದೆಗೆ ಆಮಂತ್ರಿಸಬೇಕೆಂದು ಹಠ ಹಿಡಿದರು. ಒತ್ತಾಯ ಹೇರಿದರು. ಸ್ವತಃ ಆಹ್ವಾನಿತ ಅಭ್ಯರ್ಥಿಯೇ ಗುಣೈಕಪಕ್ಷಪಾತಿಯಾಗಿ ಕಳದಿಂದ ಕೆಳಗಿಳಿದು ಅಧಿಕಾರ್ಹತೆ ಇದ್ದವನಿಗೆ ಎಡೆ ಮಾಡಿಕೊಟ್ಟದ್ದು ಆ್ಯಡ್ಲರರ ಪರಿಶುದ್ಧಾಂತಃಕರಣಕ್ಕೆ ಹೇಗೆ ಪರಮೋಚ್ಚ ನಿದರ್ಶನವೋ ಹಾಗೆ ಐನ್‌ಸ್ಟೈನರ ಸಾರಸ್ವತ ಶ್ರೀಮಂತಿಕೆಗೆ ಸಂದ ಅತಿಶ್ರೇಷ್ಠ ಗೌರವ ಕೂಡ.

ಝೂರಿಕ್ ವಿಶ್ವವಿದ್ಯಾಲಯದ ವರಿಷ್ಠರು ೧೯೦೯ರ ಮೇ ೭ ರಂದು ಡಾಕ್ಟರ್ ಆಲ್ಬರ್ಟ್ ಐನ್‌ಸ್ಟೈನರನ್ನು ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಆಯ್ಕೆ ಮಾಡಿದರು. ಪಕಸ್ವ ಗುಮಾಸ್ತ ಐನ್‌ಸ್ಟೈನ್ ರಾಜಿನಾಮೆ ಕಾಗದವನ್ನು ಕಛೇರಿಯ ಮುಖ್ಯಾಧಿಕಾರಿ ಹ್ಯಾಲರರಿಗೆ ಒಪ್ಪಿಸಿದರು.

"ಕಾರಣವೇನು?"

"ನನಗೆ ಝೂರಿಕ್ ವಿಶ್ವವಿದ್ಯಾಲಯದಿಂದ ಸಹಾಯಕ ಪ್ರಾಧ್ಯಾಪಕತ್ವದ ಆಹ್ವಾನ ಬಂದಿದೆ. ಅಲ್ಲಿಗೆ ಹೋಗಬೇಕೆಂದಿದ್ದೇನೆ."

"ಐನ್‌ಸ್ಟೈನ್! ಸುಮ್ಮನೆ ತಮಾಷೆ ಮಾಡಬೇಡಿ. ಯಾರೂ ಈ ಮಾತನ್ನು ವಿವರಣೆಯನ್ನು ಒಪ್ಪಲಾರರು."

ಈ ಸುಕುಮಾರ ಜೀವ, ತಮ್ಮ ಕಛೇರಿಯಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ಗುಮಾಸ್ತ, ಕೇವಲ ಕ್ಷಣಿಕ ಮಾನಸಿಕ ತುಮುಲಕ್ಕೆ ಈಡಾಗಿ ಹಾಳಾಗಿ ಹೋಗಬಾರದೆಂಬ ಸಾನುಕಂಪ ಭಾವದಿಂದ ಹ್ಯಾಲರ್ ಮಾತಾಡಿದ್ದರು. ತಮ್ಮ ವಶದಲ್ಲಿದ್ದ ಅನರ್ಘ್ಯ ರತ್ನದ ಬೆಲೆ ಹೇಗೆ ತಾನೇ ಅವರಿಗೆ ತಿಳಿದೀತು?

ಐನ್‌ಸ್ಟೈನ್ ೧೯೦೯ರ ಅಕ್ಟೋಬರ್ ೧೫ರಂದು ಏಕಸ್ವ ತಪಾಸಣೆಕಾರ ಹುದ್ದೆಯಿಂದ ಬಿಡುಗಡೆಗೊಂಡು ಝೂರಿಕ್ ವಿಶ್ವವಿದ್ಯಾಲಯವನ್ನು ಸೇರಿಕೊಂಡರು. ಜಾಣಾಕ್ಷ ಪ್ರತಿಭೆಗೆ ಸಮುಚಿತ ಸ್ಥಾನ ಒದಗಿತು.

ಏಕಸ್ವ ಕಛೇರಿಯಲ್ಲಿ ತಾವಿದ್ದ ಏಳು ಮಾಂತ್ರಿಕ ವರ್ಷಗಳನ್ನು ಕುರಿತು ತಮ್ಮ ಅಂದಿನ ಮಿತ್ರನಿಗೆ, ೧೯೧೯ರಲ್ಲಿ ಕಾಗದ ಬರೆಯುತ್ತ ಐನ್‌ಸ್ಟೈನ್ ಆ ಕಛೇರಿಯನ್ನು "ನನ್ನ ಅತ್ಯಂತ ಸುಂದರ ಭಾವನೆಗಳನ್ನು ರೂಪಿಸಿ ಕಾವು ಕೊಟ್ಟು ಮರಿ ಮಾಡಿದ ಹಾಗೂ ಬಿಟ್ಟಾರೆ ನಮಗೆ ಅತ್ಯಂತ ಸಂತೋಷದಾಯಕ ಕ್ಷಣಗಳನ್ನು ನೀಡಿದ ಲೌಕಿಕ ಏಕಾಂತ" ಎಂಬುದಾಗಿ ವರ್ಣಿಸಿದ್ದರು.

ಝೂರಿಕ್ ವಿಶ್ವವಿದ್ಯಾಲಯ

ಝೂರಿಕ್ ಪಾಲಿಟೆಕ್ನಿಕ್ಕಿನಲ್ಲಿ ಐನ್‌ಸ್ಟೈನ್ ವಿದ್ಯಾರ್ಥಿ ಆಗಿದ್ದಾಗ ವಿಖ್ಯಾತ ಗಣಿತವಿದ ಹರ್ಮನ್ ಮಿಂಕೊವ್ಸ್ಕೀ (೧೮೬೪-೧೯೦೯) ಗುರುವೃಂದದಲ್ಲಿದ್ದರೆಂದೂ ತಮ್ಮ ಭಾವೀ ಮಹಾ ಪ್ರತಿಭಾವಂತ ಶಿಷ್ಯನನ್ನು ಇವರು 'ಸೋಮಾರಿ ನಾಯಿ'ಯೆಂದು ಭಾವಿಸಿದ್ದರೆಂದೂ ಹಿಂದೆ ಹೇಳಿದೆ. ವಿಶೇಷ ಸಾಪೇಕ್ಷತಾಸಿದ್ಧಾಂತ ಪ್ರಕಟವಾದಾಗ ಮಿಂಕೊವ್ಸ್ಕೀ ಜರ್ಮನಿಯ ಅಂತಾರಾಷ್ಟ್ರೀಯ ಖ್ಯಾತಿವೆತ್ತ ಗಟಿಂಗೆನ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಇವರ ಅನ್ವೇಷಕ ನಿಶಿತಮತಿ ಗಾರು ನೆಲ ಮುಂಗಾರನ್ನು ಹೀರಿ ಪರಿಮಳಿಸಿ ಕೊನರುವಂತೆ ಆ ಸಿದ್ಧಾಂತವನ್ನು ಸ್ವೀಕರಿಸಿ ಅದರ ಸತ್ತ್ವಕ್ಕೆ ಆಧುನಿಕ ಗಣಿತ ನಿರೂಪಣೆಯಲ್ಲಿ ಮೆರುಗಿತ್ತು ಕೊಟ್ಟು ಪ್ರಕಟಿಸಿತು (೧೯೦೭). ಆನಂತರವೇ ಐನ್‌ಸ್ಟೈನರ 'ಕ್ರಾಂತಿಯನ್ನ ಪತ್ರಿಕೆ'ಗೆ ಲಭಿಸಿದ ಈ ವೈಜ್ಞಾನಿಕ ಹಾಗೂ ಗಣಿತೀಯ ಮನ್ನಣೆಯ ಪರಿಣಾಮವಾಗಿ ತಜ್ಞರ ತಂಡದಲ್ಲಿ ಅದು ಉಚ್ಚ ಅಂತಸ್ತು ಪಡೆದು ಗೌರವಾನ್ವಿತವಾಯಿತು.

೧೯೦೮ರಲ್ಲಿ ಸಮಾವೇಶಗೊಂಡ ಜರ್ಮನ್ ವಿಜ್ಞಾನಿಗಳ ಎಂಬತ್ತನೆಯ ಮಹಾಧಿವೇಶನದಲ್ಲಿ ಸಾಪೇಕ್ಷತಾಸಿದ್ಧಾಂತದ ಉತ್ಸಾಹಿ ಪ್ರತಿಪಾದಕರಾದ ಮಿಂಕೊವ್ಸ್ಕೀಯವರು ಆಕರ್ಷಣಕೇಂದ್ರವಾಗಿದ್ದರು. "ಇಂದಿನಿಂದ ಮುಂದಕ್ಕೆ ಸ್ವತಃ ಆಕಾಶವೂ ಸ್ವತಃ ಕಾಲವೂ ಪೂರ್ಣ ಛಾಯೆಗಳಾಗಿ ಕರಗಿ ಹೋಗಿ ಅವೆರಡರ ಒಂದು ಬಗೆಯ ಸಂಯೋಜನೆ ಮಾತ್ರ ಸ್ವತಂತ್ರ ಅಸ್ತಿತ್ವ ಪಡೆದಿರಲು ವಿಧಿತವಾಗಿವೆ" ಎಂಬುದಾಗಿ ಇವರು ಹುಮ್ಮಸ್ಸಿನಿಂದ ವಿವರಿಸಿದರು. ಆಕಾಶ–



"ನೀನು ಹೆದರಿಕೊಂಡು... ಕೈ ಬಿಟ್ಟುಬಿಡಬೇಡ... ಹಾಗೇ ಇರು... ನಾನು ನಿನ್ನ ನಿಧಾನವಾಗಿ ಕೆಳಗೆ ಇಳಿಸಿ ೀನಿ..."

ಕಾಲ ಸಾತತ್ಯವನ್ನು ಗಣಿತೀಯವಾಗಿ ತಿಳಿಯ ಹೇಳಿದ್ದು ಆ ವಿಜ್ಞಾನಿಗಳ ಮುಂದೆ ಹೊಸ ಪರ ವನ್ನು ತೆರೆದು ಬಿತ್ತರಿಸಿ ತೋರಿಸಿದಂತಾಯಿತು.

ಮಿಂಕೊವ್ಸ್ಕಿಯವರ ಗಣಿತಾತ್ಮಕ ಸಾಪೇಕ್ಷತಾ ಸಿದ್ಧಾಂತವನ್ನು ಕುರಿತು ಐನ್‌ಸ್ಟೈನರು ಒಮ್ಮೆ ಅರ್ಥ ಗಾಂಭೀರ್ಯದಿಂದ ಹೇಳಿದ್ದರು "ಇದ್ದು ನನಗೇ ಅರ್ಥವಾಗದಷ್ಟರ ಮಟ್ಟಿಗೆ ಗಣಿತವಿಂದು ಸಾಪೇಕ್ಷತಾಸಿದ್ಧಾಂತವನ್ನು ಆಕ್ರಮಿಸಿಬಿಟ್ಟಿದೆ."

ಗಣಿತವನ್ನು ಕುರಿತು ಐನ್‌ಸ್ಟೈನರಿಗಿದ್ದ ಪ್ರಾರಂಭಿಕ ಭಾವನೆಗಳು ತುಂಬ ಸರಳವಾಗಿದ್ದುವು. ಭೌತವಿಜ್ಞಾನರಂಗದಲ್ಲಿ ತಮ್ಮ ಸಂಶೋಧನೆಗ-ಳನ್ನು ಮುಂದುವರಿಸಲು ಪ್ರೌಢ ಗಣಿತವೇನೂ ಬೇಕಾಗದು ಎಂಬುದಾಗಿ ಭಾವಿಸಿದ್ದರು. ಆದರೆ, ಸಾಪೇಕ್ಷತಾಸಿದ್ಧಾಂತದ ನವುರು ಹಾದಿ ಬಲು ಬೇಗ ಇವರಿಗೆ ಸಂಕೀರ್ಣ ಗಣಿತದ ಆವಶ್ಯಕತೆಯನ್ನು ಸ್ಪಷ್ಟಪಡಿಸಿತು. ೧೯೧೨ರ ಅಕ್ಟೋಬರ್ ೨೯ರಂದು ಇವರು ಬರೆದ ಕಾಗದದಲ್ಲಿ ಈ ಅಂಶವನ್ನು ವಿಶ್ವಿ ವಿವರಿಸಿದ್ದಾರೆ: "ಗುರುತ್ವಾಕರ್ಷಣೆಯ ಸಮಸ್ಯೆ ಯೊಂದರಿಂದಲೇ ಪೂರ್ತಿ ಬಂಧಿತನಾಗಿದ್ದೇನೆ. ಇಲ್ಲಿರುವ ಸ್ನೇಹಪರ ಗಣಿತಜ್ಞರೊಬ್ಬರ ನೆರ ವಿನಿಂದ ಎಲ್ಲ ಅಡಚಣೆಗಳನ್ನೂ ಅದ್ದಹಾಯ ಬಲ್ಲೆ ಎಂಬ ಭರವಸೆ ಈಗ ಮೂಡಿದೆ. ಆದರೆ ಈ ಒಂದು ವಿಷಯವಂತೂ ಖಾತ್ರಿ: ನನ್ನ ಜೀವಮಾ ನವಿಡೀ ನಾನು ಈಗಿನಷ್ಟು ಕಠಿಣವಾಗಿ ಹಿಂದೆಂದೂ ಪರಿಶ್ರಮಿಸಿದ್ದಿಲ್ಲ: ನನ್ನ ಮುಗ್ಧತೆಯ ಕಾರಣವಾಗಿ ನಾನು ಗಣಿತದ ಸೂಕ್ಷ್ಮ ಕೋಮಲ ಮಗ್ಗು ಲುಗಳನ್ನು ಶುದ್ಧ ವಿಲಾಸ ಸಾಮಗ್ರಿಗಳೆಂದು ಭಾವಿಸಿದ್ದೆ. ಆದರೆ ಈಗ ನಾನು ಗಣಿತದ ಬಗ್ಗೆ ಅಪಾರ ಗೌರವ ತಳೆದಿದ್ದೇನೆ. ಈ ಸಮಸ್ಯೆಯೊಡನೆ ಹೋಲಿಸುವಾಗ ಸಾಪೇಕ್ಷತಾವಾದದ ಮೂಲ ಸಿದ್ಧಾಂತ ಮಕ್ಕಳಾಟಿಗೆ."

ಈ ಸ್ನೇಹಪರ ಗಣಿತಜ್ಞ ಬೇರೆ ಯಾರೂ ಅಲ್ಲ, ಐನ್‌ಸ್ಟೈನರ ಬಾಲ್ಯಮಿತ್ರ ಮಾರ್ಸೆಲ್ ಗ್ರಾಸ್ ಮ್ಯಾನ್.

೧೯೦೯ ಸೆಪ್ಟೆಂಬರ್ ೨೧ರಂದು ಸಮಾವೇಶ ಗೊಂಡ ಜರ್ಮನ್ ವಿಜ್ಞಾನಿಗಳ ಮಹಾಧಿವೇಶನಕ್ಕೆ ಐನ್‌ಸ್ಟೈನರನ್ನು ಆಹ್ವಾನಿಸಲಾಗಿತ್ತು. ಆ ವೇಳೆಗೆ ಇವರಿನ್ನೂ ಪೇಟೆಂಟ್ ಗುಮಾಸ್ತರಾಗಿಯೇ ಇದ್ದರು. ಇವರ ಭಾಷಣ ಅಣುಪರಮಾಣು ಪ್ರಪಂಚವನ್ನು ಕುರಿತ ಭಾಷ್ಯವಾದ ಶಕಲಸಿದ್ಧಾಂತವನ್ನೂ ನಕ್ಷತ್ರ ನೀಹಾರಿಕಾ ಪ್ರಪಂಚವನ್ನು ಕುರಿತ ಭಾಷ್ಯವಾದ ಸಾಪೇಕ್ಷತಾ ಸಿದ್ಧಾಂತವನ್ನೂ ಒಳಗೊಂಡ ವ್ಯಾಪಕ ಸಮೀಕ್ಷೆ ಆಗಿತ್ತು. ಲೋಕದ ಧೀಮಂತ ಚೇತನ ಗಳಾದ ವೃತ್ತಿ ವಿಜ್ಞಾನಿಗಳ — ಐನ್‌ಸ್ಟೈನ್ 'ವೃತ್ತಿ ವಿಜ್ಞಾನಿ' ಆಗಿರಲಿಲ್ಲ, 'ಹವ್ಯಾಸಿ ವಿಜ್ಞಾನಿ' ಆಗಿದ್ದರು — ಮಹಾಸಭೆ ಅದು. ಶಕಲ ಸಿದ್ಧಾಂತದ ನಿರ್ಮಾಪಕ ಮಾರ್ಕ್ಸ್ ಪ್ಲಾಂಕ್ (೧೮೫೮–೧೯೪೭) ಸಾಕ್ಷಾತ್ತಾಗಿ ಆ ಸಮ್ಮೇಳನದಲ್ಲಿ ಉಪಸ್ಥಿತರಿದ್ದರು. ಇಂಥ ಬ್ರಹ್ಮಸಭೆಯಲ್ಲಿ ಅಥವಾ ಶೃಂಗಸಭೆಯಲ್ಲಿ ಮೂವತ್ತರ ಗುಮಾಸ್ತನಿಗೇನು ಸ್ಥಾನವಿದ್ದೀತು? ಆದರೆ ಇವರ ಭಾಷಣವನ್ನು ಆಲಿಸಿದ ಬಳಿಕ ಅವರಿ ಗೆಲ್ಲ ಖಚಿತವಾಗಿ ಮನವರಿಕೆ ಆಯಿತು ಈತ ಸಾಮಾನ್ಯ ಅಲ್ಲ, ತನ್ನ ಭಾಷಣವಿಷಯದ ಮೇಲೆ ಪೂರ್ಣ ಪ್ರಭುತ್ವವಿರುವ ಸಮರ್ಥ ವಿಜ್ಞಾನಿ, ನವಯುಗವನ್ನು ಆವಾಹಿಸುತ್ತಿರುವ ವಿಶೇಷ ಚೇತನ ಎಂದು.

ಅಂದ ಮಾತ್ರಕ್ಕೆ ಐನ್‌ಸ್ಟೈನರ ವಾದಸರಣ ಆ ವಿಜ್ಞಾನಿಗಳಿಗೆ ತಿಳಿಯಿತೆಂದಾಗಲಿ ಅದನ್ನು ಅವರು ಅನುಮೋದಿಸಿದರೆಂದಾಗಲಿ ಅರ್ಥವಲ್ಲ. ಆದರೆ ಇಲ್ಲೊಂದು ಅಸಾಂಪ್ರದಾಯಿಕ ನೂತನ ದೃಷ್ಟಿ ತೀವ್ರ ಕ್ರಿಯೋದ್ಯುಕ್ತವಾಗಿದೆ ಎಂಬುದು ಅವರಿಗೆ ಮನದಟ್ಟಾಯಿತು. 'ಇದು ಬರಿ ಬೆಳಗಲ್ಲೊ ಅಣ್ಣಾ!'

ಮಾರ್ಕ್ಸ್ ಪ್ಲಾಂಕ್

ಮಾರ್ಕ್ಸ್ ಪ್ಲಾಂಕ್ ಮತ್ತು ಐನ್‌ಸ್ಟೈನ್ – ಇಪ್ಪತ್ತನೆಯ ಶತಮಾನದ ಜಗತ್ತಿನ ಮುಖವನ್ನೆ ಬದಲಾಯಿಸಿದ ಎರಡು ಮಹಾಚೇತನಗಳು – ಮೊದಲಿಗೆ ಭೇಟಿ ಆದದ್ದು ಈ ಸಭೆಯಲ್ಲಿ. ಪ್ಲಾಂ ರಿಗೆ ಆಗ ವಯಸ್ಸು ಐವತ್ತೊಂದು, ಐನ್‌ಸ್ಟೈನ ರಿಗೆ ಕೇವಲ ಮೂವತ್ತು. ಪ್ಲಾಂಕ್ ಮಹಾವಿಜ್ಞಾನಿ ಎಂಬುದಾಗಿ ಪ್ರಪಂಚವಿಖ್ಯಾತರಾಗಿದ್ದವರು. ಐನ್ ಸ್ಟೈನ್ ಆಗ ತಾನೇ ಉದಯಿಸಿದ

ಮಹೋಜ್ಜ್ವಲ ಆಕಾಶಕಾಯ. ಇದು ಗ್ರಹವೇ ನಕ್ಷತ್ರವೇ ನೋವಾವೆ ಎಂಬುದನ್ನು ನಿರ್ಧರಿಸುವ ಸ್ಥಿತಿಯಲ್ಲಿ ವಿಜ್ಞಾನಪ್ರಪಂಚ ಆಗ ಇರಲಿಲ್ಲ. ಪ್ಲಾಂಕ್ ಎಷ್ಟು ಹಿರಿಯ ವಿಜ್ಞಾನಿಯೊ ಅಷ್ಟೇ ಹಿರಿಯ ಸಹೃದಯ ಕೂಡ. ಮಾನವೀಯತೆಯಲ್ಲಿ, ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವುದರಲ್ಲಿ ಮತ್ತು ಯೋಗ್ಯ ಕಾರ್ಯವನ್ನು ಪುರಸ್ಕರಿಸುವುದರಲ್ಲಿ ಇವರದು ಎತ್ತಿದ ಕೈ. ಅನಾಮಧೇಯ ಅಪರಿಚಿತ ಅಪ್ರಸಿದ್ಧ ಐನ್‌ಸ್ಟೈನರ ಕ್ರಾಂತಿಕಾರಿ ಸಂಶೋಧನ ಪ್ರಬಂಧಗಳು Annalen der Physik ಪತ್ರಿಕೆಗೆ ಪ್ರಕಟಣೆಗಾಗಿ ತಲಪಿದಾಗ (೧೯೦೫) ಅವನ್ನು ಪರಿಶೀಲಿಸಿ ಸಮ್ಮತಿ ಮುದ್ರೆ ಒತ್ತಿದವರು ಸಾಕ್ಷಾತ್ ಪ್ಲಾಂಕ್ ಮಹಾಶಯರೇ. ಬೇರೆ ಯಾರಿಗೇ ಆಗಲಿ, ಆ ಪ್ರಬಂಧಗಳು ಪರಾಮರ್ಶನೆಗಾಗಿ ಹೋಗಿದ್ದುವಾದರೆ ಅವನ್ನು ಅವರು ಸಂಪ್ರದಾಯವಿರೋಧಿ ಆಟಾಟೋಪಗಳೆಂದು ತಿರಸ್ಕರಿಸಿಬಿಡುತ್ತಿದ್ದರು. ಸ್ವತಃ ಸಂಪ್ರದಾಯಶರಣರೂ ಜಾಗರೂಕ ವೃತ್ತಿವಿದರೂ ಆಗಿದ್ದ ಪ್ಲಾಂಕ್ ಆ ಪ್ರಬಂಧಗಳನ್ನು ಹೊಸನೋಟ ಮೈಗೂಡಿಸಿಕೊಂಡು ಓದಿದರು, ಅವುಗಳ ಸವಿಹೂರಣ ಮೆಲ್ಲುತ್ತ ಮೈಮರೆತರು. ನಿರೂಪಣೆಯ ಸುಸಾಂಗತ್ಯಕ್ಕೆ ಮಾರುಹೋದರು. ಹೆಚ್ಚ ಹೊಸತನವನ್ನು ಮೆಚ್ಚಿದರು, ಒಟ್ಟಿನಲ್ಲಿ ಜೀವಂತ ಪ್ರತಿಭೆಗೆ ಮಣಿದರು. ಆ ವೇಳೆಗಾಗಲೇ ಸುಪ್ರಸಿದ್ಧವಾಗಿದ್ದ ತಮ್ಮ ಹಲವಾರು ಭಾವನೆಗಳನ್ನೇ ಐನ್‌ಸ್ಟೈನ್ ಟೀಕಿಸಿದ್ದರೂ ಪ್ಲಾಂಕರ ಪರಿಶುಭ್ರ ಆಸಕ್ತಿ ಇನಿತೂ ಮಂಕಾಗಲಿಲ್ಲ.

ಸಹಜವಾಗಿ ಪ್ಲಾಂಕ್ ಐನ್‌ಸ್ಟೈನರನ್ನು ಆದರದಿಂದ ಬರಮಾಡಿಕೊಂಡರು. ಇತ್ತ ಐನ್‌ಸ್ಟೈನರಿಗಾದರೊ ಪ್ಲಾಂಕರೊಡನೆ ಒದಗಿದ ಆ ಮೊದಲ ಭೇಟಿ ವಿಶೇಷ ಉತ್ತೇಜನಕಾರಿ ಆಗಿತ್ತು, ಚೇತೋಹಾರಿ ಆಗಿತ್ತು. ಪ್ರಚಲಿತ ಭೌತವಿಜ್ಞಾನದ ಮುಂಚೂಣಿಯಲ್ಲಿದ್ದ ಜಟಿಲ ಸಮಸ್ಯೆಗಳನ್ನು ಇವರು ಖಾಸಗಿಯಾಗಿ ಚರ್ಚಿಸಿ ಅಭಿಪ್ರಾಯವಿನಿಮಯಿಸಿಕೊಂಡರು.

ಪ್ಲಾಂಕರನ್ನು ಕುರಿತಂತೆ ಐನ್‌ಸ್ಟೈನರಿಗೆ ಯಾವ ಮಟ್ಟದ ಗೌರವವಿತ್ತು ಎನ್ನುವುದನ್ನು ಒಂದು ಘಟನೆಯಿಂದ ನಿದರ್ಶಿಸಬಹುದು. ೧೯೨೮ರ ಸುಮಾರಿಗೆ. ಆ ವೇಳೆಗೆ ನೋಬೆಲ್ ಪ್ರಶಸ್ತಿ ವಿಜೇತರಾಗಿ ಜಗದ್ವಿಖ್ಯಾತರಾಗಿದ್ದ ಐನ್‌ಸ್ಟೈನರನ್ನು ಪ್ಲಾಂಕ್ ರಚಿಸಿದ್ದ ಒಂದು ಗ್ರಂಥಕ್ಕೆ ಮುನ್ನುಡಿ ಬರೆಯಬೇಕೆಂದು ಪ್ರಾರ್ಥಿಸಿಕೊಳ್ಳಲಾಯಿತು. ಐನ್‌ಸ್ಟೈನ್ ಬರೆದರು: "ಮಾಕ್ಸ್ ಪ್ಲಾಂಕರನ್ನು ನಾನು ಲೋಕಕ್ಕೆ ಪರಿಚಯಿಸುತ್ತೇನೆ ಎಂದು ಭಾವಿಸುವುದೇ ಧಾರ್ಷ್ಟ್ಯದ ನಿಲವಾದೀತು. ಶಕಲ ಸಿದ್ಧಾಂತದ ಆವಿಷ್ಕರ್ತೃವಾದ ಈ ನಕ್ಷತ್ರ ಸ್ವಯಂಪ್ರಭೆಯಿಂದಲೇ ಬೆಳಗಬಲ್ಲದು. ಅದು ಯಾವುದೇ ಕಡಿಮೆ ಪ್ರಭೆಯ ಕಾಯದ ಬೆಳಕನ್ನು ಪ್ರತಿಫಲಿಸಿ ಶೋಭಿಸಬೇಕಾಗಿಲ್ಲ."

೧೯೧೮ರಲ್ಲಿ ಮಾಕ್ಸ್ ಪ್ಲಾಂಕರ ಷಷ್ಟಿಪೂರ್ತಿ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಆಗ ಅಭಿನಂದನ ಭಾಷಣ ಮಾಡುತ್ತ ಐನ್‌ಸ್ಟೈನ್ ಹೇಳಿದರು: "ವಿಜ್ಞಾನದೇವಾಲಯ ಹಲವು ಭಾಗಗಳಿಂದ ನಿರ್ಮಾಣವಾಗಿರುವ ಸಂಕೀರ್ಣ ರಚನೆ. ಇದರ ನಿವಾಸಿಗಳು ವಿವಿಧ ಸ್ವಭಾವಗಳವರಾಗಿರುವುದೊಂದೇ ಅಲ್ಲ, ಇವರು ದೇವಾಲಯದ ಒಳಗೆ ಉತ್ಪಾದಿಸುವ ಬಲಗಳು ಕೂಡ ಹಾಗೆಯೇ. ಇವರ ಪೈಕಿ ಹೆಚ್ಚಿನ ಪ್ರತಿಯೊಬ್ಬನೂ ತನ್ನ ಬುದ್ಧಿಸಾಮರ್ಥ್ಯದ ಉತ್ಕೃಷ್ಟತೆಯ ಬಗ್ಗೆ ಸಂತೃಪ್ತಿ ತಳೆದವನಾಗಿದ್ದು ವಿಜ್ಞಾನ ಚಟುವಟಿಕೆಗಳಲ್ಲಿ ಉದ್ಯುಕ್ತನಾಗಿರುವನು. ತನ್ನ ಜೀವದ ಪ್ರಬಲ ಚಡಪಡಿಕೆಗಳು ಹೊರಹೊಮ್ಮಲು ಅವಕಾಶ ಒದಗಿಸಿ ಬಾಳಹಂಬಲಗಳನ್ನು ಈಡೇರಿಸಿಕೊಳ್ಳಲು ಚೆನ್ನಾಗಿ ಒಗ್ಗುವ ಕ್ರೀಡೆಯಾಗಿ ವಿಜ್ಞಾನವನ್ನು ಈತ ಕಂಡುಕೊಂಡಿದ್ದಾನೆ. ಉಪಯುಕ್ತ ಸಿದ್ಧಿಗಳನ್ನು ಗಳಿಸುವುದರತ್ತ ಮಾತ್ರ ತಮ್ಮ ಮಿದುಳ ಸಾಮಗ್ರಿಯನ್ನು ವ್ಯಯಿಸುವ ಹಲ ಮಂದಿಯೂ ಇದ್ದಾರೆ ನಿಜ. ಈಗ, ದೇವದೂತನೊಬ್ಬ ಧರೆಗಿಳಿದು ಬಂದು ಇವೆರಡು ವರ್ಗಗಳಿಗೂ ಸೇರಿದ ಎಲ್ಲರನ್ನೂ ದೇವಾಲಯದಿಂದ ಉಚ್ಚಾಟಿಸುವುದಾದ ಪಕ್ಷ ಗಮನಾರ್ಹ ಮಂದಿ ತೊಲಗಿ ಹೋಗುತ್ತಾರೆ. ಹಾಗಿದ್ದರೂ ದೇವಾಲಯದೊಳಗೆ ಈಗಿನ ಹಾಗೂ ಹಿಂದಿನ ಕೆಲವೊಂದು ಮಂದಿ ಉಳಿದೇ ಇರುತ್ತಾರೆ. ಇವರ

ಸಾಲಿನಲ್ಲಿ ನಾವು ನಮ್ಮ ಪ್ಲಾಂಕರನ್ನು ಎಣಿಸುತ್ತೇವೆ. ಎಂದೇ ಇವರಿಗೆ ನಮ್ಮ ತುಂಬುಹೃದಯದ ಅಭಿವಂದನೆ, ಪ್ರೀತಿ ಸಲ್ಲುತ್ತವೆ..." ತ್ಯಾಗರಾಜರ 'ಎಂದುರೋ ಮಹಾನುಭಾವುಲು' ಕೃತಿಯ ಗಂಭೀರಗತಿಯಲ್ಲಿ ಈ ಭಾಷಣ ಮುನ್ನಡೆಯುತ್ತದೆ.

ಪ್ರಾಧ್ಯಾಪಕತ್ವದ ಹೊಣೆ

ಝೂರಿಕ್ಕಿನ ಸಹಾಯಕ ಪ್ರಾಧ್ಯಾಪಕತ್ವ ಐನ್‌ಸ್ಟೈನರ ಬೌದ್ಧಿಕ ತೃಷೆಯನ್ನೇನೋ ಹಿಂಗಿಸಿದಂತೆ ತೋರಿತು. ಆದರೆ "ನನ್ನ ಖಾಸಗಿ ವೈಜ್ಞಾನಿಕ ಕಾರ್ಯವನ್ನು ಕಡಿಮೆ ಪ್ರತಿಕೂಲ ಸನ್ನಿವೇಶಗಳಲ್ಲಿ ಮುಂದುವರಿಸುವುದು" ಇಲ್ಲಿ ಅಷ್ಟೇನೂ ಯಶಸ್ವಿಯಾಗಿ ಕೈಗೂಡಲಿಲ್ಲ. ಪ್ರಾಧ್ಯಾಪಕರಾಗಿ ಇವರು ಆಡಳಿತೆಯಲ್ಲಿ ಸಾಕಷ್ಟು ಕಾಲವನ್ನು ವ್ಯಯಿಸಬೇಕಾಗಿತ್ತು. ಆಡಳಿತೆ ಎಂದರೆ ಅಧಿಕಾರ. ಅಧಿಕಾರಚಲಾವಣೆಯಿಂದ ಪ್ರತಿಷ್ಠೆ. ಪ್ರತಿಷ್ಠೆಯು ನಿಷ್ಟೇಕ ಎಂದರೆ ಯಶಸ್ಸು. ಇದು ಲೌಕಿಕ ಮಾರ್ಗ. ಆದರೆ ಐನ್‌ಸ್ಟೈನರ ಪಾರಲೌಕಿಕ ಪ್ರತಿಭೆಗೆ ಇದು ಹಿಡಿಸದು, ತಿಳಿಯದು ಕೂಡ. ಹೀಗಾಗಿ ಇವರು ವೃತ್ತಿಗೌರವ(?) ಕಾಪಾಡಿಕೊಳ್ಳಲಾರದ ಭೋಳೆ ಜನ ಎಂಬ 'ಗೌರವ' ಗಳಿಸಿದರು. ವಿದ್ಯಾರ್ಥಿಗಳಿಗೆ ನೀಡಬೇಕಾದ ಪಾಠಪ್ರವಚನಗಳು ಇವರ ವೃತ್ತಿಜೀವನದ ಮುಖ್ಯ ಕರ್ತವ್ಯವಾಗಿತ್ತು. ಆದರೆ ಇವರ ವಿಕಿರಣಪಟು ಮನಸ್ಸಿನಿಂದ ನಿರಂತರವಾಗಿಯೂ ಸ್ವಚ್ಛಂದವಾಗಿಯೂ ಸಿಡಿಯುತ್ತಿದ್ದ ಭಾವನೆಗಳನ್ನು ಪಳಗಿಸಿ ಅವರಿಗೆ ಅರ್ಥವಾಗುವ ರೀತಿಯಲ್ಲಿ ಊಡುವ ತಂತ್ರ ಇವರಿಗೆ ಒಲಿದಿರಲಿಲ್ಲ. ಇವರ ಉಪನ್ಯಾಸಗಳು ಸಾಧಾರಣ ವಿದ್ಯಾರ್ಥಿಗಳ ಅಳವಿಗೆ ಮೀರಿದ ಅಮೂರ್ತ ಚಿಂತನೆಗಳಾಗಿರುತ್ತಿದ್ದುವು. ಹೀಗಾಗಿ ಇವರು ಕನಸುಗಾರ, ಅನ್ಯಮನಸ್ಕ ಮುಂತಾದ 'ಬಿರುದು' ಗಳಿಗೆ ಪಾತ್ರರಾದರು. ಇವರ ವರ್ತನೆ ಎಲ್ಲರೊಡನೆಯೂ ಸಾಫ್‌ಸೀದಾ — ಕೆಲಸದಾಳಿನಿಂದ ತೊಡಗಿ ಪರಮಾಧಿಕಾರಿಯ ವರೆಗೆ ಎಲ್ಲಿಯೂ ದರ್ಪವಿಲ್ಲ, ಅಸಹಜ ವಿನಯವೂ ಇಲ್ಲ. ವಿಶ್ವವಿದ್ಯಾಲಯದ ಪ್ರಾಧ್ಯಾಪಕರಿಗೆ ಸಲ್ಲದ ಈ ವರ್ತನೆ ಇವರಿಗೆ 'ವಿಚಿತ್ರ ಪುರುಷ' ಎಂಬ ಅಭಿದಾನವನ್ನು ತಂದುಕೊಟ್ಟಿತು.

ಇತ್ತ ಐನ್‌ಸ್ಟೈನರ ಸಾಮಾಜಿಕ ಅಂತಸ್ತು ಗುಮಾಸ್ತಿಕೆಯ ಕೆಳಮಟ್ಟದಿಂದ ಪ್ರಾಧ್ಯಾಪಕತ್ವದ ಮೇಲುಪ್ಪರಿಗೆಗೆ ಬಡ್ತಿ ಪಡೆದಿದ್ದುದರಿಂದ ಇವರ ಮನೆ ವೆಚ್ಚವೇರಿತ್ತು. ಆದರೆ ಆದಾಯ ಹಿಂದಿನಷ್ಟೇ ಇತ್ತು. ಹೀಗಾಗಿ ಆಯವ್ಯಯ ಹೊಂದಾಣಿಕೆ ಒಂದು ಸಮಸ್ಯೆಯೇ ಆಯಿತು. ಐನ್‌ಸ್ಟೈನ್ ಎಂದೂ ವ್ಯವಹಾರಕುಶಲಿ ಆಗಿದ್ದಿಲ್ಲ. ಪತ್ನಿ ಮಿಲೇವಾ ಮನೆಯಲ್ಲಿ ವಿದ್ಯಾರ್ಥಿ ಜೋಡಿದಾರರುಗಳಿಗೆ ಆಸರೆ ನೀಡಿ ನಾಲ್ವರ ಕುಟುಂಬವನ್ನು ಸಮತೋಲನದಲ್ಲಿಡುತ್ತಿದ್ದರು. ಬಹುತೇಕ ಬಡತನದ ಬಾಳೇ.

"ನನ್ನ ಸಾಪೇಕ್ಷತಾ ಸಿದ್ಧಾಂತದಲ್ಲಿ ನಾನು ಆಕಾಶದ ಪ್ರತಿಯೊಂದು ಬಿಂದುವಿನಲ್ಲಿಯೂ ಒಂದೊಂದು ಗಡಿಯಾರವನ್ನು ಸ್ಥಾಪಿಸಿದ್ದೇನೆ. ವಾಸ್ತವತೆಯಲ್ಲಾದರೋ ನನ್ನ ಕೋಣೆಯಲ್ಲಿ ಕೂಡ ಒಂದು ಗಡಿಯಾರ ಇಡಲಾರದವನಾಗಿದ್ದೇನೆ" ಎಂದೊಮ್ಮೆ ಐನ್‌ಸ್ಟೈನ್ ಲಘುವಿನೋದ ಮಿಶ್ರಿತವಾಗಿ ಹೇಳಿದ್ದರು.

ಪ್ರಾಗಿಗೆ ವಲಸೆ

ಹಂಗರಿ, ಆಸ್ಟ್ರಿಯ, ಜರ್ಮನಿ, ಪೋಲೆಂಡ್ ಮತ್ತು ಸೋವಿಯೆತ್ ಒಕ್ಕೂಟ ಇವುಗಳಿಂದ ಆವೃತವಾಗಿರುವ ನೆಲದ್ವೀಪ ಚೆಕೊಸ್ಲೊವಾಕಿಯಾ. ಈ ದೇಶದ ಪ್ರಾಗ್ ನಗರದಲ್ಲಿದ್ದ ಪ್ರಾಗ್ ವಿಶ್ವವಿದ್ಯಾಲಯ ಮಧ್ಯ ಯೂರೋಪಿನಲ್ಲಿಯೆ ಅತ್ಯಂತ ಪ್ರಾಚೀನವಾದುದಾಗಿತ್ತು. ಇದರಲ್ಲಿದ್ದ ಜರ್ಮನ್ ಹಾಗೂ ಚೆಕ್ ಪ್ರಾಧ್ಯಾಪಕರು ಹಠಗಟ್ಟಿ ತಮ್ಮ ತಮ್ಮ ಮಾತೃಭಾಷೆಗಳಲ್ಲಿಯೆ ಉಪನ್ಯಾಸ ನೀಡುತ್ತಿದ್ದರು. ಸಹಜವಾಗಿ ಎರಡೂ ಭಾಷೆಗಳವರ ನಡುವೆ ವೈಮನಸ್ಯ ಬೆಳೆದು ಅದಕ್ಕೆ ಸಾಕಷ್ಟು ರಾಜಕೀಯವೂ ಬೆರೆತು ಪರಿಸ್ಥಿತಿ ಬಿಗಡಾಯಿಸುತ್ತಿತ್ತು. ಜರ್ಮನರ ದಾನಿ ನಾಮತನವೂ (superiority complex) ಚೆಕ್ಕರ ದೀನನಾನುತನವೂ (inferiority complex) [illegible]

ಕಾಪೇರುತ್ತಿತ್ತು. ವಿದ್ಯಾಮಂದಿರಕ್ಕೆ ಕಾಗಿದ್ದ ಈ ಒಳಗಿಚ್ಚನ್ನು ನಿವಾರಿಸಲು ಆಗ ಈ ವಿಶ್ವವಿದ್ಯಾಲಯದ ಮೇಲೆ ಪರಮಾಧಿಕಾರ ಹೊಂದಿದ್ದ ಆಸ್ಟ್ರಿಯಾ ಸರ್ಕಾರ, ೧೮೮೮ರಲ್ಲಿ, ಪ್ರಾಗ್ ವಿಶ್ವವಿದ್ಯಾಲಯವನ್ನು ಪ್ರಾಗಿನ ಜರ್ಮನ್ ವಿಶ್ವವಿದ್ಯಾಲಯ ಮತ್ತು ಪ್ರಾಗಿನ ಚೆಕ್ ವಿಶ್ವವಿದ್ಯಾಲಯ ಎಂಬ ಎರಡು ಸ್ವಾಯತ್ತ ಸಂಸ್ಥೆಗಳಾಗಿ ಒಡೆಯಿತು. ಇವೆರಡು 'ವೈರಿ ಬಣ'ಗಳ ನಡುವೆ ಸಾಮರಸ್ಯವಾಗಲಿ ಸಹಕಾರವಾಗಲಿ ಏರ್ಪಡಲಿಲ್ಲ. ಜ್ಞಾನಸಂಬಂಧ ಭಿತ್ತಿ ಮಾತ್ರ ಎದ್ದಿತು. ಪ್ರಾಗಿನಿಂದ ಹೊರಗೆ ಕೂಡುತ್ತಿದ್ದ ಅಂತಾರಾಷ್ಟ್ರೀಯ ಸಭೆ ಸಮ್ಮೇಳನಗಳಲ್ಲಿ ಈ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಅಪರೂಪಕ್ಕೆ ಆಕಸ್ಮಾತ್ತಾಗಿ ಭೇಟಿ ಆಗುವುದಿತ್ತು.

ಪ್ರಾಗಿನ ಜರ್ಮನ್ ವಿಶ್ವವಿದ್ಯಾಲಯದಲ್ಲಿ ಸೈದ್ಧಾಂತಿಕ ಭೌತವಿಜ್ಞಾನ ಪ್ರಾಧ್ಯಾಪಕಪೀಠ ೧೯೧೦ರ ವೇಳೆಗೆ ತೆರವಾಯಿತು. ಅದಕ್ಕೆ ಸಮರ್ಥ ವಿಜ್ಞಾನಿಯನ್ನು ನಾಮಕರಿಸುವ ಪರಮಾಧಿಕಾರ ಆಸ್ಟ್ರಿಯಾ ಚಕ್ರವರ್ತಿಯದಾಗಿತ್ತು. ಈ ಪ್ರತಿಷ್ಠಿತ ಪೀಠಕ್ಕೆ ಐನ್‌ಸ್ಟೈನರನ್ನು ಆಹ್ವಾನಿಸಬೇಕೆಂದು ಶಿಕ್ಷಣತಜ್ಞರು ಚಕ್ರವರ್ತಿಗೆ ಕಳಕಳಿಯ ವಿನಂತಿ ಸಲ್ಲಿಸಿದರು. ತಾನು ಆಮಂತ್ರಿಸುವ ವ್ಯಕ್ತಿ, ಮನ್ನಣೆ ಪಡೆದ ಯಾವುದೇ ಇಗರ್ಜಿಯೊಂದರ ಸದಸ್ಯನಾಗಿರತಕ್ಕದ್ದು, ಅರ್ಥಾತ್ ಆತ ಅಧಿಕೃತ ಮನ್ನಣೆ ಪಡೆದ ದೇವರಲ್ಲಿ ನಂಬಿಕೆ ಇರುವವನಾಗಿರತಕ್ಕದ್ದು ಎಂಬುದು ಚಕ್ರವರ್ತಿಯ ಷರತ್ತಾಗಿತ್ತು.

ಪ್ರಾಗ್ ದೃಷ್ಟಿಯಿಂದ ಐನ್‌ಸ್ಟೈನ್ ಪರದೇಶೀಯ (ಸ್ವಿಸ್ ಪ್ರಜೆ) ಮೇಲಾಗಿ ಯೆಹೂದ್ಯ. ಹೀಗೆ ಎರಡು ಸ್ಪಷ್ಟ ಅಡಚಣೆಗಳಿದ್ದರೂ ಇವರ ಮಹೋನ್ನತ ಸಿದ್ಧಿಯನ್ನು ಗಮನಿಸಿ ಇವರಿಗೆ ಪ್ರಾಧ್ಯಾಪಕ ಪೀಠಕ್ಕೆ ಬರಲು ಕರೆ ಕಳಿಸಲಾಯಿತು (೧೯೧೧). ತತ್ಸಂಬಂಧವಾದ ಪ್ರಶ್ನಾವಳಿಯಲ್ಲಿ ಐನ್‌ಸ್ಟೈನ್ ತಾವು ಯಾವುದೇ ದೇವರೊಡನೆ ಅಥವಾ ಇಗರ್ಜಿಯೊಡನೆ ಸಂಬಂಧ ಹೊಂದಿದವರಲ್ಲವೆಂದು ಬರೆದರು.

ಇವರು ಕೆಲಸ ಸೇರುವ ಮುನ್ನ ದಾಖಲೆ ತಪಾಸಣೆಗಾಗಿ ಜಾತಿ ದಾಖಲಿಸಬೇಕಾಗಿತ್ತು. ತಪಾಸಣೆಕಾರ ಕೇಳಿದ: "ಯಾವುದಕ್ಕೂ ಸೇರಿದವರಲ್ಲವೆಂದು ನಮೂದಿದ್ದೀರಿ. ಇದನ್ನು ಬದಲಾಯಿಸಬೇಕಲ್ಲ?"


"ಸರಿ. ಮೊಸಾಯಿಕ್ ಎಂದು ಬರೆದುಕೊಳ್ಳಿ" ಎಂದರು ಐನ್‌ಸ್ಟೈನ್ ಪೂರ್ತಿ ನಿರುದ್ವಿಗ್ನರಾಗಿ. (ಮೋಸೆಸ್ ಎಂಬಾತ ಕ್ರಿ. ಪೂ. ಸು. ೧೫-೧೪ ಶತಮಾನಗಳಲ್ಲಿ ಬಾಳಿದ್ದ ಹೀಬ್ರೂ ಪ್ರವಾದಿ ಹಾಗೂ ಧರ್ಮಪ್ರವರ್ತಕ. ಇಸ್ರೇಲಿಯರನ್ನು ಈಜಿಪ್ಟಿನ ಹಿಡಿತದಿಂದ ಬಿಡಿಸಿದಾತ. ಇವನು ಪ್ರತಿಪಾದಿಸಿದ ಧರ್ಮಾನುಯಾಯಿಯೇ ಮೊಸಾಯಿಕ್; ರೂಢಿಯಲ್ಲಿ ಯೆಹೂದ್ಯ.)

"ಹಾಗೆ ಬದಲಾಯಿಸಲು ಪುರಾವೆ ?"

"ಯಾವುದಕ್ಕೂ ಸೇರಿದವನಲ್ಲ ಎನ್ನುವುದಕ್ಕೇನು ಪುರಾವೆ ?"

"ನಿಮ್ಮ ಹೇಳಿಕೆಯೇ."

"ಸರಿ, ಅದೇ ನನ್ನ ಹೇಳಿಕೆ ಮೇರೆಗೆ ಈಗ ಅದನ್ನು ಮೊಸಾಯಿಕ್ ಎಂದು ಬದಲಾಯಿಸಿಕೊಳ್ಳಿ."



"ಸಕ್ಕರೆ ಬೆಲೆ ಯಾವಾಗ ಮತ್ತೆ ಜಾಸ್ತಿಯಾಗುತ್ತೋ ಏನೋ. ಅದಕ್ಕೇ ಇರಲೀ ಅಂತ... 'ಜೇವು ಸಕ್ಕರೆನೇ' ಮಾಡ್ಬಿಟ್ಟೆ ಈ ಸಾರಿ."

ಐನ್‌ಸ್ಟೈನರ ತರ್ಕದ ಮುಂದೆ ತಪಾಸಣೆಕಾರ ನಿರುತ್ತರನಾದ.

ಸೃಷ್ಟಿಯೇ ದೇವರು

ಐನ್‌ಸ್ಟೈನ್ ಶುದ್ಧ ಆಸ್ತಿಕರು. ಮೊಝಾಯಿಕ್ ಮತ ಮತ್ತು ಅದರ ಧರ್ಮಾಚರಣೆಗಳಲ್ಲಿ ಇವರಿಗೆ ಆಳವಾದ ಭಕ್ತಿ ಶ್ರದ್ಧೆ ಇದ್ದುವು. ಆದರೆ ಇವರು ನಂಬಿದ ದೇವರು ಯಾರು? ಇವರೇ ನೀಡಿರುವ (೧೯೨೯) ವಿವರಣೆ ಹೀಗಿದೆ: "ವಾಸ್ತವತೆಯ ಅಥವಾ ಅಸ್ತಿತ್ವದ (ಸೃಷ್ಟಿಯ) ಕ್ರಮಬದ್ಧ ಸುಸಾಂಗತ್ಯದಲ್ಲಿ ಪ್ರಕಾಶಿತನಾಗುತ್ತಿರುವ ಸ್ಪಿನೋಝಾನ ದೇವರನ್ನು ನಾನು ನಂಬುತ್ತೇನೆ; ಜನರ ಅದೃಷ್ಟದ ಬಗ್ಗೆ ಚಿಂತಿಸುವ ದೇವರನ್ನಲ್ಲ." (ಸ್ಪಿನೋಝಾ. ೧೬೩೨–೧೬೭೭, ಡಚ್ ತತ್ತ್ವಜ್ಞಾನಿ, ಐನ್‌ಸ್ಟೈನರ ಅಭಿಪ್ರಾಯದಲ್ಲಿ ಯೆಹೂದ್ಯ ಜನಾಂಗದಲ್ಲಿ ಅರಳಿದ ಅತ್ಯಂತ ಪರಿಶುದ್ಧ ಹಾಗೂ ಪ್ರಭಾವಶಾಲಿ ಪುರುಷ. ಆದರೆ ಯೆಹೂದ್ಯರು ಈತನನ್ನು ಧರ್ಮಬಾಹಿರನೆಂದು ಬಹಿಷ್ಕರಿಸಿದ್ದರು.)

೧೯೪೭ರಲ್ಲಿ ಐನ್‌ಸ್ಟೈನ್ ದೇವರನ್ನು ಹೀಗೆ ವರ್ಣಿಸಿದರು: "ವೈಯಕ್ತಿಕ ದೇವರ ಬಗೆಗಿನ ಭಾವನೆ ಮಾನವಶಾಸ್ತ್ರೀಯ ಪರಿಕಲ್ಪನೆ ಎಂದು ನನಗೆ ಅನ್ನಿಸುತ್ತದೆ. ನಾನೇನೂ ಇದನ್ನು ಗಂಭೀರವಾಗಿ ಸ್ವೀಕರಿಸಲಾರೆ. ಮಾನವಪ್ರಜ್ಞೆಯ ಹೊರಗೆ ಯಾವುದೊ ಮನಸ್ಸು ಅಥವಾ ಗುರಿ ಇದೆಯೆಂದು ಊಹಿಸುವುದು ಕೂಡ ನನಗೆ ಸಾಧ್ಯವಾಗದು. ನನ್ನ ಅಭಿಪ್ರಾಯ ಸ್ಪಿನೋಝಾನದರ ಹತ್ತಿರದ್ದು. ನಾವು ನಿವೇದಿತರಾಗಿ ಅಲ್ಲಿಯೂ ಅಪರಿಪೂರ್ಣವಾಗಿ ಮಾತ್ರ ಗ್ರಹಿಸಬಹುದಾದ ಕ್ರಮ ಮತ್ತು ಸುಸಾಂಗತ್ಯದಲ್ಲಿ ನಂಬಿಕೆ ಮತ್ತು ಇದರ ಸೌಂದರ್ಯದ ಬಗ್ಗೆ ಮೆಚ್ಚುಗೆ. ನಮ್ಮ ಅಪರಿಪೂರ್ಣ ಜ್ಞಾನ ಮತ್ತು ತಿಳಿವಳಿಕೆಯಿಂದಲೆ ನಾವು ತೃಪ್ತರಾಗಿದ್ದುಕೊಂಡು ಮೌಲ್ಯಗಳನ್ನೂ ನೈತಿಕ ಹೊಣೆಗಳನ್ನೂ ಕೇವಲ ಮಾನವಸಮಸ್ಯೆ ಎಂಬುದಾಗಿ ಪರಿಗಣಿಸಬೇಕೆಂದು ನಾನು ಭಾವಿಸಿದ್ದೇನೆ. ಈ ಸಮಸ್ಯೆ ಎಲ್ಲ ಮಾನವಸಮಸ್ಯೆಗಳ ಪೈಕಿ ಅತಿ ಮುಖ್ಯವಾದದ್ದು."

ಇನ್ನೊಂದು ಸಂದರ್ಭದಲ್ಲಿ ಹೀಗೆ ಹೇಳಿದರು: "ವಿಶ್ವದ ನಿಗೂಢತೆ ಒದಗಿಸುವ ರಸಾನುಭವವೆ ಅತ್ಯಂತ ಸುಂದರವಾದದ್ದು. ಇದೇ ನಿಜವಾದ ಎಲ್ಲ ಕಲೆ ಮತ್ತು ವಿಜ್ಞಾನಗಳ ಆಕರ. ಯಾರಿಗೆ ಈ ಅನುಭವ ಪರಕೀಯ ಎನ್ನಿಸುವುದೊ ಯಾರು ನಿಗೂಢತೆಯ ಎದುರು ಮೂಕವಿಸ್ಮಯದಿಂದ ಬೆಕ್ಕಸಬೆರಗಾಗಿ ನಿಂತು ಕಣ್ಣರಳಿಸಲಾರರೊ ಅವರು ಇದ್ದೂ ಸತ್ತಂತೆಯೇ. ಅವರ ಕಂಗಳು ಇಂಗಿ ಹೋಗಿರುತ್ತವೆ. ಅತ್ಯುತ್ಕೃಷ್ಟ ಜ್ಞಾನವಾಗಿಯೂ ಪರಮೋಜ್ವಲ ಸೌಂದರ್ಯವಾಗಿಯೂ ಪ್ರಕಟವಾಗುವ ಗಮ್ಯಾತೀತ ಪದಾರ್ಥವೊಂದುಂಟು. ನಮ್ಮ ಮಂದ ಸಂವೇದನೆಗಳು ಇದನ್ನು ಇದರ ಅತ್ಯಂತ ಅಧಿಮ ರೂಪಗಳಲ್ಲಿ ಮಾತ್ರ ಗ್ರಹಿಸಬಲ್ಲವು ಎಂಬುದನ್ನು ಅರಿಯುವುದೆ — ಈ ತಿಳುವಳಿಕೆ, ಈ ಭಾವನೆ — ನಿಜವಾದ ಧಾರ್ಮಿಕತೆಯ ತಿರುಳು. ಈ ಅರ್ಥದಲ್ಲಿ, ಈ ಅರ್ಥದಲ್ಲಿ ಮಾತ್ರ, ನಾನು ಶ್ರದ್ಧಾವಂತ ಧಾರ್ಮಿಕ ವ್ಯಕ್ತಿಗಳ ಸಾಲಿಗೆ ಸೇರಿದವನಾಗಿದ್ದೇನೆ."

ಪ್ರಾಗ್ ಸಮಸ್ಯೆಗಳು

ಪ್ರಾಗ್ ನಗರದಲ್ಲಿ ಐನ್‌ಸ್ಟೈನರ ನಡವಳಿಕೆ ಹಿಂದಿನಂತೆಯೇ ಇತ್ತು: ಔಪಚಾರಿಕತೆ, ಆಡಂಬರ, ಹಮ್ಮು, ಬಿಮ್ಮು, ಕುಲೀನತೆ ಮುಂತಾದ ಅಂತಸ್ತುಸೂಚಕ 'ಸದ್ಗುಣ'ಗಳಿಂದ ಎಂದೂ ಬಾಧಿತವಾಗದ ವರ್ತನೆ. ಅಲ್ಲೊಂದು ಸಂಪ್ರದಾಯವಿತ್ತು. ಅದರ ಪ್ರಕಾರ ಹೊಸದಾಗಿ ನೇಮಕಗೊಂಡು ಬಂದ ಪ್ರಾಧ್ಯಾಪಕ ತನ್ನ ಸಹೋದ್ಯೋಗಿಗಳ ಬಿಡಾರಗಳಿಗೆ ಸೌಹಾರ್ದ ಭೇಟಿ ಕೊಡಬೇಕಾಗಿತ್ತು. ಈ ಸಲಹೆಯನ್ನು ಉತ್ಸಾಹದಿಂದಲೇ ಸ್ವೀಕರಿಸಿದ ಐನ್‌ಸ್ಟೈನ್ ತಮ್ಮ ಮನೆಯಿಂದ ದೂರ ದೂರಗಳಲ್ಲಿದ್ದ ಪ್ರಾಧ್ಯಾಪಕರ ಮನೆಗಳಿಗೆ ಮೊದಲು ಹೋದರು. ಸಹಜವಾಗಿ ಆ ಪ್ರಾಧ್ಯಾಪಕರುಗಳಿಗೆ ಹೆಮ್ಮೆ ಎನ್ನಿಸಿತು. ಈ ನೆವದಿಂದಾದರೂ ಪ್ರಾಚೀನ ಸುಂದರ ನಗರ ಪ್ರಾಗಿನ ಬಹುಭಾಗವನ್ನು ನೋಡಬಹುದೆಂಬುದು ಐನ್‌ಸ್ಟೈನರ ನಿಜ ಅಭಿಲಾಷೆ. ಕುಲೀನ ಸಮಾಜದ

ಕೃತ್ರಿಮ ವರ್ತನೆ, ಅಳೆದು ಆಡುವ ಮಾತಿನ ಧಾಟಿ, ತಿರುಳಿಗಿಂತಲೂ ತೋರ್ಕೆಗೆ ಹೆಚ್ಚು ಬೆಲೆ ಕೊಡುವ 'ಸಭ್ಯತೆ' ಇವರಿಗೆ ಬಲು ಬೇಗ ಉಸಿರು ಕಟ್ಟಿಸಿದುವು. ಹೀಗಾಗಿ ಇವರು ಮುಂದಿನ ಭೇಟಿಗಳನ್ನು ಅನಾಮತ್ತಾಗಿ ರದ್ದುಗೊಳಿಸಿದರು. ಇವರ ಆಗಮನವನ್ನು ಪ್ರತೀಕ್ಷಿಸುತ್ತಿದ್ದು ಹತಾಶರಾದವರು ಐನ್‌ಸ್ಟೈನ್ ಗರ್ವಿಷ್ಠ, ಅಧಿಕಾರಪಿತ್ತ ತಲೆಗೇರಿದವ ಎಂದು ಮುಂತಾಗಿ ಗೊಣಗಿದ್ದಿತ್ತು.

ಪ್ರಾಗ್ ನಿವಾಸಿಗಳ ಪೈಕಿ ಜರ್ಮನರು ಶೇಕಡ ಐದು ಇದ್ದಿರಬಹುದು, ಅಷ್ಟೆ. ಉಳಿದವರೆಲ್ಲರೂ ಚೆಕ್ಕರು. ಈ ಅಲ್ಪಸಂಖ್ಯಾತ ಜರ್ಮನರಲ್ಲಿಯೂ ಬಹುಸಂಖ್ಯಾತರು ಯೆಹೂದ್ಯರೆ. ಇವರು ಸ್ಥಿತಿ ಸಂಪನ್ನರು ಕೂಡ. ಶುದ್ಧ ಜರ್ಮನರು ಯೆಹೂದ್ಯರನ್ನು ತೀವ್ರವಾಗಿ ದ್ವೇಷಿಸುತ್ತಿದ್ದರೂ ಪ್ರಾಗಿನಲ್ಲಿ ತಮ್ಮ ಉಳಿವಿಗಾಗಿ ಯೆಹೂದ್ಯರನ್ನೆ ಆಶ್ರಯಿಸುವುದು ಅನಿವಾರ್ಯವಾಗಿತ್ತು. ಹೀಗೆ ಪ್ರಾಗ್ [illegible] ಶುದ್ಧ ಜರ್ಮನರ ಮತ್ತು ಯೆಹೂದ್ಯರ ನಡುವೆ ಒಂದು ರೀತಿಯ ಅಸ್ವಾಭಾವಿಕ ಸಹವರ್ತನೆ, ಅಸಹಜ [illegible] ಮತ್ತು ಒತ್ತಾಯದ ಕೊಡುಕೊಳ್ಳು ನಿರ್ಬಂಧ ಏರ್ಪಟ್ಟಿತ್ತು.

ಶುದ್ಧ ಜರ್ಮನರಿಗೆ ತಮ್ಮ 'ಶ್ರೇಷ್ಠತೆ' [illegible] [illegible] 'ಸದ್ಗುಣ'ಗಳನ್ನು ಕುರಿತಂತೆ [illegible] ಇತ್ತು. ಭಗವಂತನ ನೇರ ಪ್ರತಿನಿಧಿಗಳಾದ ತಾವು ಮಾತ್ರ ಪ್ರಮುಖಧುರೀಣರಾಗಲು ಅರ್ಹತೆ ಪಡೆದಿರುವ ಏಕೈಕ ಜನಾಂಗವೆಂದು ನಂಬಿದ್ದರು. ಇಂಥ ಮದೋನ್ಮತ್ತರು ಚೆಕ್ಕರನ್ನು ನಿಕೃಷ್ಟವಾಗಿಯೂ ತಿರಸ್ಕಾರಯುತವಾಗಿಯೂ ನಡೆಸಿಕೊಳ್ಳುತ್ತಿದ್ದರು. ಚೆಕ್ಕರಾದರೂ ಜರ್ಮನರನ್ನು ಮನಸ್ಸೀ ಹಳಿಯುತ್ತಿದ್ದರು. ಅವರ ದೃಷ್ಟಿಯಲ್ಲಿ ಜರ್ಮನರೆಂದರೆ ಪಕ್ಕಾ ಆರ್ಥಿಕ ಹಾಗೂ ಸಾಮಾಜಿಕ ಸ್ಥಾನಮಾನ ಗಳಿಸಿದ್ದ ಯೆಹೂದ್ಯರು ಮಾತ್ರ. ಹೀಗೆ ಪ್ರಚ್ಛನ್ನವಾಗಿ ಯೆಹೂದ್ಯದ್ವೇಷ ಹೊಗೆಯಾಡುತ್ತಿದ್ದ ಪ್ರಾಗಿನಲ್ಲಿ ಐನ್‌ಸ್ಟೈನರಂಥ ಮಹಾಮತಿಗೂ ಅದರ ಕಾವು ತಟ್ಟದಿರಲಿಲ್ಲ. ಅನೇಕ ಮಂದಿ ಯೆಹೂದ್ಯ ವಿದ್ಯಾರ್ಥಿಗಳು ಇವರನ್ನು ಕಂಡು ಯೂರೋಪ್ ಖಂಡದ ವಿವಿಧ ಪ್ರದೇಶಗಳಲ್ಲಿ ಹರಡಿ ಹಂಚಿಹೋಗಿದ್ದ ತಮ್ಮ ಜನಾಂಗದವರು ಅನುಭವಿಸುತ್ತಿದ್ದ ಬವಣೆ, ಕೋಟಲೆಗಳನ್ನು ಯಥಾವತ್ತಾಗಿ ವಿವರಿಸುತ್ತಿದ್ದರು. ಇಂಥ ವರ್ಣನೆಗಳಲ್ಲಿ ಐನ್‌ಸ್ಟೈನರಿಗೆ ಕಂಡದ್ದು ಮಾನವ ಮನಸ್ಸಿನಲ್ಲಿಯೇ ಬೆಸೆದುಕೊಂಡಿದ್ದ ರಾಕ್ಷಸ ಪ್ರವೃತ್ತಿಯ ಪ್ರಕಟಿತ ರೂಪ. ಇಂದು ಅದರ ಪ್ರಕೋಪಕ್ಕೆ ಯೆಹೂದ್ಯರು ಎದುರಾಗಬಹುದು, ನಾಳೆ ಬೇರೊಂದು ಜನಾಂಗದವರು ಬಲಿ ಆಗಬಹುದು. ಇಂಥ ಯಾವುದೇ ದುಷ್ಟ ಪ್ರವೃತ್ತಿಯನ್ನು ಇವರು ಅನುಮೋದಿಸದಿದ್ದರೂ ಮಾನವ ಇದರಿಂದ ಪೂರ್ಣ ಮುಕ್ತನಾದಾನೆಂದೇನೂ ಭಾವಿಸಿರಲಿಲ್ಲ.

ಮರಳಿ ಮಾತೃಸಂಸ್ಥೆಗೆ

ಮಾರ್ಸೆಲ್ ಗ್ರಾಸ್‌ಮ್ಯಾನ್ ಆಗ (೧೮೭೮-೧೯೩೬) ಜ್ಯೂರಿಕ್ಕಿನ ಪಾಲಿಟೆಕ್ನಿಕ್ಕಿನಲ್ಲಿ ಗಣಿತ ಪ್ರಾಧ್ಯಾಪಕರಾಗಿದ್ದರು. ಏನಾದರೂ ಮಾಡಿ ಐನ್‌ಸ್ಟೈನರನ್ನು ತಮ್ಮ ಸಂಸ್ಥೆಗೆ ಸೇರಿಸಿಕೊಳ್ಳಬೇಕೆಂಬುದು ಇವರ ಹೆಬ್ಬಲಿ. ಪಾಲಿಟೆಕ್ನಿಕ್ಕಿನ ಆಡಳಿತೆಯವರು ಐನ್‌ಸ್ಟೈನರ [illegible] ಖಾತ್ರಿ ಮಾಡಿಕೊಳ್ಳ[illegible] ವಿಜ್ಞಾನಿಗಳಿಗೆ ಅವರ [illegible]

ಮೇರಿ ಕ್ಯೂರಿ (ಅಥವಾ ಮದಾಮ್ ಕ್ಯೂರಿ, ೧೮೬೭–೧೯೩೪. ಸುಪ್ರಸಿದ್ಧ ರಸಾಯನ ವಿಜ್ಞಾನಿ. ೧೯೧೧ರ ನೋಬೆಲ್ ಪ್ರಶಸ್ತಿವಿಜೇತೆ) ಸೊಗಸಾದ ಶಿಫಾರಸನ್ನು ಬರೆದರು "ಆಧುನಿಕ ಸೈದ್ಧಾಂತಿಕ ಭೌತವಿಜ್ಞಾನವನ್ನು ಕುರಿತು ಐನ್‌ಸ್ಟೈನರು ಪ್ರಕಟಿಸಿರುವ ಕೃತಿಗಳನ್ನು ನಾನು ಬಹಳ ಮೆಚ್ಚಿಕೊಂಡಿದ್ದೇನೆ. ಅಲ್ಲದೆ, ಗಣಿತೀಯ ಭೌತವಿಜ್ಞಾನಿಗಳೆಲ್ಲರೂ ಈ ಕೃತಿಗಳು ಅತ್ಯುನ್ನತ ದರ್ಜೆಯವಾಗಿವೆ ಎನ್ನುವುದರಲ್ಲಿ ಒಮ್ಮತದವರಾಗಿರುವರೆಂದು ತಿಳಿದೂ ಇದ್ದೇನೆ. ಬ್ರಸೆಲ್ಸಿನ ವಿಜ್ಞಾನಾಧಿವೇಶನಕ್ಕೆ ನಾನು ಹೋಗಿದ್ದೆ. ಐನ್‌ಸ್ಟೈನರೂ ಅದರಲ್ಲಿ ಪಾಲ್ಗೊಂಡಿದ್ದರು. ಅಲ್ಲಿ ನನಗೆ ಇವರ ಭಾವನೆಗಳ ಸ್ಪಷ್ಟತೆ, ಪುರಾವೆಗಳ ಹರವು ಮತ್ತು ವಿದ್ವತ್ತಿನ ಗಭೀರತೆ ಇವನ್ನು ಕಂಡುಕೊಳ್ಳುವುದು ಸಾಧ್ಯವಾಯಿತು. ಇವರಿನ್ನೂ ತರುಣರಾಗಿರುವರೆಂಬು

ದನ್ನು ಪರಿಗಣಿಸಿದ್ದಾದರೆ ಇವರ ಸುತ್ತ ಎಷ್ಟೊ ಆಶಯಗಳನ್ನು ಹಣೆಯಬಹುದು ಮತ್ತು ಇವರಲ್ಲಿ ಭವಿಷ್ಯದ ಅಗ್ರಮಾನ್ಯ ಸಿದ್ಧಾಂತಿಗಳ ಪೈಕಿ ಒಬ್ಬರನ್ನು ಗುರುತಿಸಬಹುದು."

ಆನ್ರೀ ಪ್ವಾನ್‌ಕ್ಯಾರೇ (೧೮೫೪–೧೯೧೨, ಶ್ರೇಷ್ಠ ಗಣಿತವಿದ, ಸಾಪೇಕ್ಷತಾಸಿದ್ಧಾಂತದ ಯೋಗ್ಯತೆಯನ್ನು ಗುರುತಿಸಿದ ಮೊದಲಿಗರ ಪೈಕಿ ಒಬ್ಬರು) ಮುಕ್ತ ಮನಸ್ಸಿನಿಂದ ಐನ್‌ಸ್ಟೈನರ ಹಿರಿಮೆಯನ್ನು ಹೊಗಳಿದರು: "ನಾನು ಎಂದೂ ಕಂಡಂಥ ಅತ್ಯಂತ ಸ್ವತಂತ್ರ ಚಿಂತನಶೀಲರ ಪೈಕಿ ಐನ್‌ಸ್ಟೈನ್ ಒಬ್ಬರು. ಇವರಿನ್ನೂ ಯುವಕರು. ಹಾಗಿದ್ದರೂ ತಮ್ಮ ಕಾಲದ ವಿಜ್ಞಾನಿಗಳ ಮುಂಚೂಣಿಯಲ್ಲಿ ಇವರೊಂದು ಪರಮ ಗೌರವಾನ್ವಿತ ಸ್ಥಾನವನ್ನು ಸ್ವಂತ ಯೋಗ್ಯತೆಯಿಂದ ಗಳಿಸಿಕೊಂಡಿದ್ದಾರೆ."

ಪಾಲಿಟೆಕ್ನಿಕ್ಕಿನಿಂದ ಅಧಿಕೃತ ಆಹ್ವಾನಪತ್ರ ಐನ್‌ಸ್ಟೈನರಿಗೆ ಹೋಯಿತು. ಆದರೆ ಆ ವೇಳೆಗಾಗಲೆ ಇವರ ಖ್ಯಾತಿ ವಿಜ್ಞಾನವಲಯದಲ್ಲಿ ಅಂತಾರಾಷ್ಟ್ರೀಯವಾಗಿತ್ತು, ಇವರ ಹೆಸರಿನ ಸುತ್ತ ನಿಗೂಢ ಪ್ರಭಾವಲಯ ಆವರಿಸಿತ್ತು. ಹೀಗಾಗಿ ಯೂರೋಪಿನ ಬೇರೆ ಬೇರೆ ವಿಶ್ವವಿದ್ಯಾಲಯಗಳು ಐನ್‌ಸ್ಟೈನರನ್ನು ತಮ್ಮಲ್ಲಿಗೆ ಸೆಳೆದುಕೊಳ್ಳಲು ತವಕಿಸುತ್ತಿದ್ದುವು. ಆದರೆ ಐನ್‌ಸ್ಟೈನ್ ದಂಪತಿಗಳ ಒಲವಿದ್ದುದು ಝೂರಿಕ್ಕಿನ ಪಾಲಿಟೆಕ್ನಿಕ್ಕನ್ನು ಸೇರುವುದರಲ್ಲಿಯೆ, ಅಲ್ಲಿ ಇವರು ಓದಿ ಬೆಳೆದು ದೊಡ್ಡವರಾಗಿದ್ದರು, ಅಲ್ಲಿನ ಜನ ಮತ್ತು ನಿಸರ್ಗ ಇವರಿಗೆ ಆತ್ಮೀಯವಾಗಿದ್ದುವು.



"ಅಪ್ಪಾ...ನಾನೂ ಪ್ರಣಾಳಿಕೆ ತಯಾರಿಸಿಬಿಟ್ಟೆ...?!"

೧೯೧೨ರ ಅಕ್ಟೋಬರಿನಲ್ಲಿ ಐನ್‌ಸ್ಟೈನ್ ಝೂರಿಕ್ ಪಾಲಿಟೆಕ್ನಿಕ್ಕನ್ನು ಪ್ರಾಧ್ಯಾಪಕರಾಗಿ ಸೇರಿದರು. ಒಮ್ಮೆ ವಿದ್ಯಾರ್ಥಿಯಾಗಿ ಪ್ರವೇಶ ದೊರೆಯದಿದ್ದ, ಮುಂದೆ ವಿದ್ಯಾರ್ಥಿಯಾಗಿದ್ದಾಗ ವಿಶೇಷ ಪೋಷಣೆ ಏನನ್ನೂ ಪಡೆಯದಿದ್ದ, ಬಳಿಕ ಅಲ್ಲಿಯೇ ಉದ್ಯೋಗಾರ್ಥಿಯಾಗಿ ಕೈಚಾಚಿದಾಗ ಅದು ಸಿಕ್ಕಿರದಿದ್ದ ಆ ಮಾತೃಸಂಸ್ಥೆಯಲ್ಲಿ ಈಗ ಇವರು ಹೆಮ್ಮೆಯ ಪುತ್ಥಳಿಯಾಗಿ ಶೋಭಿಸಿದರು.

ಆಸ್ಟ್ರಿಯಾ ಸರ್ಕಾರದ ಸೇವೆಯಿಂದ (ಅಂದರೆ ಪ್ರಾಗ್ ವಿಶ್ವವಿದ್ಯಾಲಯದಿಂದ) ಝೂರಿಕ್ಕಿಗೆ ನಿರ್ಗಮಿಸುವ ಮುನ್ನ ಐನ್‌ಸ್ಟೈನ್ ಕೆಲವೊಂದು ಕಾಗದ ದಾಖಲೆಗಳನ್ನು ಪೂರ್ತಿಗೊಳಿಸಬೇಕಾಗಿತ್ತು. ಇಂಥ ವಿಚಾರಗಳಲ್ಲಿ ತೀರ ಉದಾಸೀನ ಸ್ವಭಾವದವರಾಗಿದ್ದ ಇವರು ಈ ಅಗತ್ಯ ಪೂರೈಕೆಯನ್ನು ಈಡೇರಿಸಲೇ ಇಲ್ಲ. ಹೀಗಾಗಿ ಕಛೇರಿಯ ಕಡತದಲ್ಲಿ "ಐನ್‌ಸ್ಟೈನ್ — ಕೊನೆಗೊಳ್ಳಲಿಲ್ಲ" ಎಂಬ ಷರಾ ಉಳಿದಿತ್ತು. ಹಲವಾರು ವರ್ಷಗಳ ತರುವಾಯ ಜಗತ್ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೈನ್ ಪ್ರಾಗಿಗೆ ಆಗಮಿಸಿದಾಗ ಈ 'ತಪ್ಪಿ'ನ ಸುಳುಹು ಇವರಿಗೆ ತಿಳಿಯಿತು. ಒಡನೆ ಇವರು ಆ ಕಛೇರಿಗೆ ಹೋಗಿ ಸಂಬಂಧಿಸಿದ ಗುಮಾಸ್ತನಿಗೆ ತಪ್ಪೊಪ್ಪಿಗೆ ಸಲ್ಲಿಸಿ ದಾಖಲೆಕಾಗದಗಳತ್ತು ಪೂರ್ತಿಗೊಳಿಸಿದರು. ಕಡತದಲ್ಲಿ ಬದಲಾದ ಷರಾ ಹೀಗಿತ್ತು: "ಐನ್‌ಸ್ಟೈನ್ — ಕೊನೆಗೊಂಡರು."

ಝೂರಿಕ್ಕಿನ ಪಾಲಿಟೆಕ್ನಿಕ್ಕಿನಲ್ಲಿದ್ದಾಗ (೧೯೧೨–೧೪) ಐನ್‌ಸ್ಟೈನರ ಪ್ರತಿಭೆ ಪೂರ್ಣವಾಗಿ ವಿಕಾಸ

ಗೊಂಡಿತು. ೧೯೧೫ರಲ್ಲಿ ಪ್ರಕಟವಾದ ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತ ಅಂತಿಮ ರೂಪ ತಳೆದದ್ದು ಈ ಅವಧಿಯಲ್ಲೆ. ಈ ಹಿಂದೆ ಹೇಳಿದಂತೆ ಇವರಿಗಿಲ್ಲಿ ಗ್ರಾಸ್‌ಮ್ಯಾನರಿಂದ ಗಣಿತ ಸಹಾಯ ಒದಗಿತು. ಇದೊಂದು ಯೋಗಾಯೋಗ.

ಪ್ಲಾಂಕರಿಂದ ಬಂದ ಕರೆ


ಜರ್ಮನಿಯ ಸಾರ್ವಭೌಮ ಎರಡನೆಯ ಕೈಸರ್ ವಿಲ್‌ಹೆಲ್ಮ್ (೧೮೫೯–೧೯೪೧) ತನ್ನ ರಾಜ್ಯ ಬಲಿಷ್ಠವಾಗಬೇಕಾದರೆ ಅದರ ವಿಜ್ಞಾನ ತಳಹದಿ ಸುಭದ್ರವಾಗುವುದು ಅತ್ಯಗತ್ಯ, ಅನಿವಾರ್ಯ ಕೂಡ ಎಂದು ದೃಢವಾಗಿ ನಂಬಿದ್ದ. ಆ ರಾಷ್ಟ್ರದ ವಿಜ್ಞಾನಿಗಳ ನೇತಾರರೂ ಸ್ವತಃ ವಿಜ್ಞಾನಸೀಮಾಪುರುಷರೂ ಆಗಿದ್ದ ಮಾಕ್ಸ್ ಪ್ಲಾಂಕರಲ್ಲಿ ವಿಲ್‌ಹೆಲ್ಮನಿಗೆ ಅಪಾರ ವಿಶ್ವಾಸಾಭಿಮಾನಗಳಿದ್ದುವು. ಪ್ರಪಂಚದ ಶ್ರೇಷ್ಠ ವಿಜ್ಞಾನಿಗಳನ್ನು ಆಕರ್ಷಿಸಬಲ್ಲ ದೇಗುಲ ಬರ್ಲಿನ್ ಆಗುವಂತೆ ಯೋಜನೆಯನ್ನು ರೂಪಿಸಿ ನಿರ್ವಹಿಸಬೇಕೆಂದು ಅವರಿಗೆ ಪ್ರೋತ್ಸಾಹ ನೀಡಿದ.

ತರುಣ ವಿಜ್ಞಾನಿಗಳ ರಾಜ ಐನ್‌ಸ್ಟೈನರನ್ನು ಬರ್ಲಿನ್ನಿಗೆ ಕರೆತರಬೇಕೆಂದು ಪ್ಲಾಂಕರ ಮೊದಲ ಆಸೆ. ೧೯೧೩ರ ಬೇಸಿಗೆಯಲ್ಲಿ ಖುದ್ದು ಅವರೇ ಝೂರಿಕ್ಕಿಗೆ ಹೋಗಿ ಐನ್‌ಸ್ಟೈನರಿಗೆ ಮುಕ್ತಾಹ್ವಾನ ನೀಡಿದರು. ಅವರೊಡ್ಡಿದ ಆಕರ್ಷಣೆಗಳೇನೂ ಸಾಧಾರಣ ಮಟ್ಟದವಾಗಿರಲಿಲ್ಲ: ಸುಪ್ರಸಿದ್ಧ ರಾಯಲ್ ಪ್ರಶ್ಯನ್ ಆಕಾಡಮಿ ಆಫ್ ಸೈನ್ಸಿನಲ್ಲಿ ಚುನಾಯಿತ ಪ್ರಾತಿನಿಧ್ಯ, ಭರ್ಜರಿ ಗೌರವ ಸಂಭಾವನೆ, ಪ್ರಾಧ್ಯಾಪಕ ಅಂತಸ್ತು, ಶೀಘ್ರವೇ ಸ್ಥಾಪಿತವಾಗಲಿದ್ದ ಕೈಸರ್ ವಿಲ್‌ಹೆಲ್ಮ್ ಇನ್‌ಸ್ಟಿಟ್ಯೂಟಿನ ವಿಜ್ಞಾನಸಂಶೋಧನ ಶಾಖೆಯ ನಿರ್ದೇಶಕತ್ವ, ಜರ್ಮನಿಯ ವರಿಷ್ಠ ವಿಜ್ಞಾನಿಗಳೊಡನೆ ನಿಕಟ ಸಂಪರ್ಕ, ಇತ್ಯಾದಿ. ಇನ್ನು ಹೊಣೆಗಾರಿಕೆ? ಪಾಠ ಮಾಡಬಹುದು, ಮಾಡದಿರಬಹುದು, ಪೂರ್ಣ ಕಾಲವೂ ಇವರಿಗೆ ಪ್ರಿಯವಾದ ಸಂಶೋಧನಕಾರ್ಯದಲ್ಲಿಯೇ ಮಗ್ನರಾಗಿರಬಹುದು. ದೇವಾಲಯದಲ್ಲಿ ಪ್ರತಿಷ್ಠಿತ ಮೂರ್ತಿಯ ಹೊಣೆಗಾರಿಕೆ ಏನು? ನಿಷ್ಕ್ರಿಯವಾದಂತ ದೇವರನ್ನು ಮನಸಾರೆ ತಿರಸ್ಕರಿಸುತ್ತಿದ್ದ ಕ್ರಿಯಾಶೀಲ ಐನ್‌ಸ್ಟೈನರಿಗೆ ಬಂದ ಆಮಂತ್ರಣ ದೇವತ್ವದ ಸಿಂಹಾಸನ!

ಆತ್ಮೀಯ ನಗರ ಝೂರಿಕ್. ಇದು ಮುಕ್ತ ವಾತಾವರಣದ ಬೀಡು. ಪತ್ನಿ ಮಿಲೇವಾರಿಗೆ ಮೆಚ್ಚಿನ ನಾಡು. ಇಲ್ಲಿ ಉದ್ಯೋಗಸಂತೃಪ್ತಿ ಒದಗಿದೆ. ಬರ್ಲಿನ್ ಹೀಗಲ್ಲ. ಪರಕೀಯ ಪ್ರಜ್ಞೆಯ ನಗರ. ಮಿಲಿಟರಿವಾದಿಗಳ ನೆಲೆ. ಯೆಹೂದ್ಯದ್ವೇಷಿಗಳ ಗೂಡು. ಅಲ್ಲಿ ಉದ್ಯೋಗ ಸಂತೃಪ್ತಿ ಲಭಿಸೀತೆ? ಆಮಿಷಗಳೆಷ್ಟೇ ಆಕರ್ಷಕವಾಗಿದ್ದರೂ ತಾನು ಯಾವುದೇ ಬಂಧನಕ್ಕೆ ಯಾ ಅನುಜ್ಞೆಗೆ ಯಾ ಷರತ್ತಿಗೆ ಒಳಪಟ್ಟು ಸಂಶೋಧನೆ ಸಾಗಿಸಬಲ್ಲೆನೇ? "ಭಾವನೆಗಳು ದೇವರಿಂದ ಬರುತ್ತವೆ" ಎಂಬುದು ಐನ್‌ಸ್ಟೈನರ ಪ್ರಸಿದ್ಧ ಹೇಳಿಕೆ. ಅರಿಯದ ತಾಣದಲ್ಲಿ ಈ 'ದೇವರು' ವರ ಕರುಣಿಸಿಯಾನೆ?

ಇದೇ ವೇಳೆಗೆ ಐನ್‌ಸ್ಟೈನ್ [illegible] ದಾಂಪತ್ಯಸಂಬಂಧ [illegible]: ಜಗಳ ಮತ್ತು [illegible] ಒಂದು ವಿವ-[illegible] ಈ [illegible] ಸಮ್ಮತಿಯ [illegible]-ನ್ನು ಒದಗಿಸಲಿಲ್ಲ.

ಐನ್‌ಸ್ಟೈನರಿಗೆ ಬರ್ಲಿನ್ನಿನಲ್ಲಿ ಬೇರೊಂದು ವಿಧವಾದ ಪ್ರಲೋಭನೆ ಇತ್ತು. ಇವರ ತಂದೆಯ ಜ್ಞಾತಿ ರೂಡಾಲ್ಫ್ ಐನ್‌ಸ್ಟೈನ್ ಎಂಬ ವಾಣಿಜ್ಯೋದ್ಯಮಿ ಅಲ್ಲಿದ್ದರು. ಶ್ರೀಮತಿ ರೂಡಾಲ್ಫ್ ಪೌಲೀನರ ಸೋದರಿ. ಹೀಗೆ ಈ ಕುಟುಂಬ ಐನ್‌ಸ್ಟೈನರಿಗೆ ಉಭಯ ಪಕ್ಷಗಳಿಂದಲೂ ತೀರ ಸಮೀಪದ್ದಾಗಿತ್ತು. ರೂಡಾಲ್ಫರ ಮಗಳು ಎಲ್ಸಾ ಈಗ ವಿಧವೆಯಾಗಿ ತನ್ನಿಬ್ಬರು ಹೆಣ್ಣುಮಕ್ಕಳೊಂದಿಗೆ ತವರು ಸೇರಿದ್ದರು. ಈಕೆ ಹುಡುಗಿ ಆಗಿದ್ದಾಗ ಹಿರಿಯ ಐನ್‌ಸ್ಟೈನ್ ಕುಟುಂಬದ ಮ್ಯೂನಿಕ್ ಬಿಡಾರಕ್ಕೆ ಆಗಾಗ ಭೇಟಿ ಕೊಡುತ್ತಿದ್ದುದಿತ್ತು. ಆ ದಿನಗಳಂದು ಕಿರಿಯ ಆಲ್ಬರ್ಟ್ ಮತ್ತು ಎಲ್ಸಾ ಒಟ್ಟಿಗೆ ಆಡಿ ಓಡಿ ನಲಿದಿದ್ದರು. ಈಕೆಯ ಸೌಮ್ಯ ಹಾಗೂ ಸ್ನೇಹಶೀಲ ವರ್ತನೆ ಅಣುಗ ಆಲ್ಬರ್ಟನ ಮೇಲೆ ವಿಶೇಷ ಪ್ರಭಾವ ಬೀರಿತ್ತು. ಬರ್ಲಿನ್ನಿನಲ್ಲಿ ಈ ಸುಸಂಸ್ಕೃತ ಕುಟುಂಬದ ಒಡನಾಟ ತನಗೆ ಲಭಿಸೀತು, ಬಾಳ ಬೇಗುದಿಯಲ್ಲಿ ಬೆಂದ ತನಗೆ ಇದ



ನಿಂದ ಸಾಂತ್ವನ ದೊರೆತೀತು ಎಂಬುದಾಗಿ ಇವರಿಗೆ ಅನ್ನಿಸಿದ್ದರೆ ಆಶ್ಚರ್ಯವಿಲ್ಲ.

ಏಪ್ರಿಲ್ ೧೯೧೪ರಲ್ಲಿ ಐನ್‌ಸ್ಟೈನ್ ಕುಟುಂಬ ಸಮೇತ ಬರ್ಲಿನ್ ಸೇರಿ ಹೊಸ ಮನೆ ಹಿಡಿದು ಕೊಂಡರು. ವೃತ್ತಿಯಲ್ಲಿ ಇವರೀಗ ಶಿಖರಾಗ್ರ ತಲಪಿದ್ದರು. ವಿಜ್ಞಾನ ಪ್ರಪಂಚದಲ್ಲಿ ಇವರ ಖ್ಯಾತಿ ಅಂತಾರಾಷ್ಟ್ರೀಯವಾಗಿತ್ತು. ಆದರೆ ಸಾರ್ವಜನಿಕ ವಲಯದಲ್ಲಿ ಮಾತ್ರ ಇನ್ನೂ ಅಪರಿಚಿತರಾಗಿಯೇ ಇದ್ದರು.

ಐನ್‌ಸ್ಟೈನ್ ಕುಟುಂಬ ಬರ್ಲಿನ್ ಸೇರಿದ ತರುಣದಲ್ಲಿಯೇ ಇವರ ದಾಂಪತ್ಯ ಒಡೆಯಿತು. ಇಬ್ಬರು ಗಂಡು ಮಕ್ಕಳ ಜೊತೆ ಮಿಲೇವಾ ಝೂರಿಕ್ಕಿಗೆ ಹಿಂತಿರುಗಿದರು. (ಫೆಬ್ರುವರಿ ೧೯೧೯ರಲ್ಲಿ ಅಧಿಕೃತ ವಿವಾಹವಿಚ್ಛೇದನ ಮಂಜೂರಾಯಿತು.)

ಮಿಲಿಟರಿತನದ ಉತ್ಕರ್ಷ

ಬಿಸ್‌ಮಾರ್ಕನ ಆಳ್ವಿಕೆಯ ಕಾಲದಲ್ಲಿ ಪ್ರಶ್ಯನ್ ಮಿಲಿಟರಿತನದ ಕಬಂಧ ಬಾಹುಗಳು ಸರ್ವವ್ಯಾಪಿಯಾದುವು. ಒಂದಿಗೆ ಜರ್ಮನ್ ರಾಷ್ಟ್ರೀಯತೆಯ 'ಪುನರುಜ್ಜೀವನ' ಆರಂಭವಾಯಿತು. ೧೮೮೮ರಲ್ಲಿ ಚಕ್ರವರ್ತಿ ಗದ್ದುಗೆ ಏರಿದ ಎರಡನೆಯ ವಿಲ್‌ಹೆಲ್ಮನ ಆಡಳಿತೆಯಲ್ಲಿ ಈ ಉಗ್ರ ರಾಷ್ಟ್ರೀಯತೆಗೆ ನಂಜಿನ ಕೋರೆದಾಡೆಗಳೂ ಸೇರಿಕೊಂಡುವು. ಪ್ರಪಂಚದಲ್ಲಿ ಜರ್ಮನ್ ಜನಾಂಗದವರೇ, ತಮ್ಮ ಧಮನಿಗಳಲ್ಲಿ ಪರಿಶುದ್ಧ ಆರ್ಯರಕ್ತ ಪ್ರವಹಿಸುತ್ತಿರುವ ನಾರ್ಡಿಕ್ ವಂಶಸ್ಥರೇ ಪರಮೋತ್ಕೃಷ್ಟ ಮಾನವರು ಎಂಬ ಭಾವ ಪ್ರಚ್ಛನ್ನವಾಗಿ ರಾಷ್ಟ್ರಕರಲ್ಲಿ ಪಸರಿಸುತ್ತಿತ್ತು. ಶಿಕ್ಷಣ ದೇವಾಲಯಗಳ ಅರ್ಚಕರೂ ಸಾಧಾರಣವಾಗಿ ಈ ವಿಷಾನಿಲದಿಂದ ಕಲುಷಿತರಾಗದಿರಲಿಲ್ಲ.

ಉಗ್ರರಾಷ್ಟ್ರೀಯತೆ ಎಂಬುದೊಂದು ದಾನಿ-ಸಾನುತನ ನಿಲವು, ಇತರರೊಡನೆ ವ್ಯವಹರಿಸುವಾಗ ಸ್ವಯಂಚಾಲಿತವಾಗಿ ಪುಟನೆಗೆದು ಮುಂಚೂಣಿಯಲ್ಲಿ ನಿಲ್ಲುವ ಬೇಲಿ, ಇತರರು ಸರ್ವವಿಧದಲ್ಲಿಯೂ ತಮಗೆ ಅಡಿಯಾಳುಗಳಾಗಿ — ಎಂದೂ ಸಮಾನರಾಗಿ ಅಲ್ಲ, ಇನ್ನು ಮೇಲಿನವರಾಗುವುದು ಸಾಧ್ಯವೇ ಇಲ್ಲವಷ್ಟೆ — ಜೈಜೈಕಾರ ಘೋಷಿಸುತ್ತ ನಜರೊಪ್ಪಿಸುತ್ತಿರಬೇಕೆನ್ನುವ ಅಹಂಭಾವ.

ಸ್ವಿಸ್‌ಪ್ರಜೆ ಮತ್ತು ಯೆಹೂದ್ಯ ಮತಾವಲಂಬಿ ಐನ್‌ಸ್ಟೈನ್ ಇಂಥ ಹವೆಯಲ್ಲಿ ಸುಖಿಯಾಗಿದ್ದರೆ? ತಮ್ಮ ಸಂಶೋಧನೆ ಸಿದ್ಧಿಗಳಿಂದಲೂ ಒಲವು ನಿಲವುಗಳಿಂದಲೂ ಇವರಿಗೀಗ ಪೂರ್ಣ ಆತ್ಮವಿಶ್ವಾಸ ಪ್ರಾಪ್ತವಾಗಿತ್ತು. ಆದರೆ ಎಂದೂ ಎಲ್ಲಿಯೂ ಇವರು ತಮ್ಮ ವಿಜ್ಞಾನಸಾಮರ್ಥ್ಯವನ್ನು ಸಮರ್ಥಿಸಿಕೊಳ್ಳಬೇಕಾದ ಸನ್ನಿವೇಶ ಎದುರಾಗಲಿಲ್ಲ. ಪ್ರಾಧ್ಯಾಪಕರಾಗಿ ಇವರೆಂದೂ ತಮ್ಮ ಅಂತಸ್ತನ್ನು ಮೆರೆಸಲಿಲ್ಲ. ಎಲ್ಲರಿಗೂ ಎಲ್ಲ ವೇಳೆಗಳಲ್ಲಿಯೂ ಸುಲಭವಾಗಿ ಕಾಣಸಿಗುತ್ತಿದ್ದರು. ಅವರ ಸಮಸ್ಯೆಗಳನ್ನು, ಅವು ಗಹನವೇ ಇರಲಿ, ಸರಳವೇ ಇರಲಿ, ಶ್ರದ್ಧೆಯಿಂದ ಆಲಿಸಿ ಪರಿಹಾರ ಸೂಚಿಸುತ್ತಿದ್ದರು. ವಿಶೇಷೀಕರಣ (specialization) ಇವರ ದೃಷ್ಟಿಯನ್ನು ಮುಬ್ಬುಗೊಳಿಸಿರಲಿಲ್ಲ. ಬದುಕಿನ ಎಲ್ಲ ಚಟುವಟಿಕೆಗಳೂ ಇವರಿಗೆ ಪ್ರಿಯವಾಗಿದ್ದುವು.—ಸಾಹಿತ್ಯ, ಸಂಗೀತ, ಕಲೆ, ಸಾಮಾಜಿಕ ಸಮಸ್ಯೆಗಳು, ಮತ, ಧರ್ಮ ಯಾವುದೂ ಇವರ ಆಸಕ್ತಿಯ ಪರಿಧಿಯಿಂದ ದೂರವಿರಲಿಲ್ಲ. ಆದರೂ ಕ್ರಮೇಣ ಪರಕೀಯ ಪ್ರಜ್ಞೆ ಇವರನ್ನು ಆವರಿಸಿತು. ಇದಕ್ಕೆ ಮೂರು ಮುಖ್ಯ ಕಾರಣಗಳಿದ್ದುವು.

ಮೊದಲನೆಯದು, ಇವರ ವ್ಯಕ್ತಿತ್ವದ ಸಂರಚನೆಯೇ ಆಗಿತ್ತು– 'ನಿಮ್ಮೊಡನಿದ್ದೂ ನಿಮ್ಮಂತಾಗದ' ಸ್ವಭಾವ. ಆ ದಿನಗಳಂದು ಐನ್‌ಸ್ಟೈನರ ಸಂಶೋಧನ ಸಂಗಾತಿಯಾಗಿದ್ದ ಭೌತವಿಜ್ಞಾನಿ ಲ್ಯಾಡೆನ್‌ಬರ್ಗ್ ಹೀಗೆ ವಿವರಿಸಿದ್ದಾರೆ "ಅಂದು ಬರ್ಲಿನ್ನಿನಲ್ಲಿ ಎರಡು ಬಗೆಯ ಭೌತವಿಜ್ಞಾನಿಗಳಿದ್ದರು. ಒಂದು ಕಡೆ ಐನ್‌ಸ್ಟೈನ್, ಇನ್ನೊಂದು ಕಡೆ ಉಳಿದೆಲ್ಲರೂ." ಸ್ವತಃ ಐನ್‌ಸ್ಟೈನರೇ ತಮ್ಮ ಪದ್ಮಪತ್ರಮಿವಾಂಭಸತ್ವವನ್ನು ಈ ತೆರನಾಗಿ ವರ್ಣಿಸಿದ್ದಾರೆ "ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಜವಾಬ್ದಾರಿಕೆ ಇವುಗಳ ಬಗ್ಗೆ ನನಗಿರುವ ತೀವ್ರ ಕಳಕಳಿಗೂ ಇತರ ಮಾನವರೊಡನೆ ಆಗಲಿ, ಮಾನವ ಕುಟುಂಬಗಳ ಜೊತೆ ಆಗಲಿ, ನೇರ ಸಂಪರ್ಕ ಗಳಿಸುವುದರ ಆವಶ್ಯಕತೆ

ಬಗ್ಗೆ ನನಗಿರುವ ಸ್ಪಷ್ಟ ಅನಾಸ್ಥೆಗೂ ನಡುವೆ ಎದ್ದು ಕಾಣುವ ವೈದೃಶ್ಯ ವಿಚಿತ್ರವಾಗಿದೆ. ನಿಜವಾಗಿಯೂ ನಾನು 'ಒಂಟಿ ಹಾದಿಗ.' ನನ್ನ ದೇಶಕ್ಕಾಗಲಿ, ನನ್ನ ಮನೆಗಾಗಲಿ, ನನ್ನ ಸ್ನೇಹಿತರುಗಳಿಗಾಗಲಿ, ಕೊನೆಗೆ, ನನ್ನ ಸಮೀಪ ಕುಟುಂಬಸ್ಥರಿಗೇ ಆಗಲಿ ನಾನೆಂದೂ ಪೂರ್ಣ ಹೃದಯದಿಂದ ಸೇರಿದವನಾಗಲಿಲ್ಲ. ಇವೆಲ್ಲ ಬಂಧಸಂಬಂಧಗಳ ನಡುವೆಯೂ ನಾನು ದೂರತ್ವದ ಪ್ರಜ್ಞೆಯನ್ನು ಮತ್ತು ಏಕಾಂತತ್ವದ ಆವಶ್ಯಕತೆಯನ್ನು ಎಂದೂ ಕಳೆದುಕೊಳ್ಳಲಿಲ್ಲ."

ಎರಡನೆಯದು, ಸಾಂಸಾರಿಕ ಜೀವನದ ಗೈರು ಹಾಜರಿ. ಮನೆಯಲ್ಲಿ ಮಕ್ಕಳಿಲ್ಲ, ಮಡದಿಯೂ ಇಲ್ಲ. ಇವರ ಯೋಗಕ್ಷೇಮದ ಗೊಡವೆ ಗಮನಿಸುವ ಜನರಿಲ್ಲ.

ಮೂರನೆಯದು, ದೇಶದ ರಾಜಕೀಯ ಹವೆ. ಐನ್ ಜರ್ಮನರೆಲ್ಲರೂ, ವಿಜ್ಞಾನಿಗಳನ್ನೂ ಒಳಗೊಂಡಂತೆ, ಉಗ್ರರಾಷ್ಟ್ರಪ್ರೇಮಿಗಳು. ಎಂದರೆ ವಿಜ್ಞಾನ, ತರ್ಕ, ಅಂತಾರಾಷ್ಟ್ರೀಯ ದೃಷ್ಟಿಕೋನ ಯಾವುದು ಏನೇ ಹೇಳಲಿ ಅದು ಗೌಣ, ಜರ್ಮನ್ ರಾಷ್ಟ್ರೀಯತೆಯೇ ಪ್ರಧಾನವಾಗಿರುವ ಗುಣ. ಖುದ್ದು ಮಾಕ್ಸ್ ಪ್ಲಾಂಕ್ ಕೂಡ ಈ ಗುಣದಿಂದ ಹೊರಗಿರಲಿಲ್ಲ. ಈ ರಾಷ್ಟ್ರೀಯತೆಯ ಲಕ್ಷಣಗಳೇನು? ಮಿಲಿಟರಿ ಶಿಸ್ತು, ಎಲ್ಲದರಲ್ಲಿಯೂ ಬಲು ಅಚ್ಚುಕಟ್ಟುತನ, ಜರ್ಮನ್ ಸರ್ವಶ್ರೇಷ್ಠತೆಯ ಬಗ್ಗೆ ಅಪಾರ ವಿಶ್ವಾಸ, ಶೀತಲ ದಕ್ಷತೆ, ಇತ್ಯಾದಿ. ಐನ್‌ಸ್ಟೈನರ ಮಾತಿನಲ್ಲಿ "ಈ ತಣ್ಣಗಿನ ನಯಸಾಣೆ ಮಂದಿ ನನ್ನಲ್ಲಿ ಕಿರಿಕಿರಿ ಉಂಟುಮಾಡುತ್ತಿದ್ದಾರೆ. ಇತರರ ಮನಸ್ಸಿನ ಆಳ ಹರವುಗಳನ್ನು ಇವರು ಗ್ರಹಿಸಲಾರರು. ಪ್ರತಿಯೊಂದನ್ನೂ ಇವರಿಗೆ ಕರಾರುವಾಕ್ಕಾಗಿ ವಿವರಿಸಲೇಬೇಕು." ಗಳ ಹಿಸುಕುವ ಇಂಥ ವಾತಾವರಣದಲ್ಲಿ ಮುಕ್ತಜೀವಿ ವಿಶ್ವಮಾನವ ಐನ್‌ಸ್ಟೈನ್ ಏನನ್ನೋ ಕಳೆದುಕೊಂಡವರಂತೆ ಚಡಪಡಿಸುತ್ತಿದ್ದುದು ನಿರೀಕ್ಷಿತವೇ.

ಒಂದನೆಯ ಮಹಾಯುದ್ಧ

೧೯೧೪ ರ ಆಗಸ್ಟ್ ತಿಂಗಳಿನಲ್ಲಿ ಒಂದನೆಯ ಮಹಾಯುದ್ಧದ ಕಿಡಿ ಸಿಡಿಯಿತು. ಸಾಮ್ರಾಜ್ಯ ವಿಸ್ತರಣೆಗಾಗಿ ತಹತಹಿಸುತ್ತಿದ್ದ ಮತ್ತು ಶೌರ್ಯ ಪ್ರದರ್ಶನಕ್ಕಾಗಿ ಸಿಡಿಮಿಡಿಯುತ್ತಿದ್ದ ಚಕ್ರವರ್ತಿ ವಿಲ್‌ಹೆಲ್ಮ್ ನೆರೆರಾಜ್ಯ ಬೆಲ್ಜಿಯಮ್ಮಿನ ತಾಟಸ್ಥ್ಯವನ್ನು ಉದ್ದೇಶಪೂರ್ವಕವಾಗಿ ಭಂಗಗೊಳಿಸಿದ. ಕ್ಷಿಪ್ರಾಕ್ರಮಣದಿಂದ ಗಿಟ್ಟುವ ಅತಿ ಲಾಭದ ಹೊಂಗನಸು ಕಾಣುತ್ತಿದ್ದ ಜರ್ಮನಿ ಕಾಲಿಟ್ಟದ್ದು ಮಾತ್ರ ಕಾಣದ ಕಂಪದ ತಿಳಿಯದ ಆಳಕ್ಕಾಗಿತ್ತು. ಈ ಮದೋನ್ಮತ್ತ ಪಾಶವೀವರ್ತನೆ ಯೂರೋಪ್ ರಾಷ್ಟ್ರಗಳನ್ನು (ಇಂಗ್ಲೆಂಡನ್ನೂ ಒಳಗೊಂಡಂತೆ) ನವಂಬರ್ ೧೯೧೮ರ ತನಕ ಯುದ್ಧಾಗ್ನಿಗೆ ಆಜ್ಯಾಹುತಿಯಾಗಿ ಸುರಿದು ಸರ್ವನಾಶದ ಬರೆಯಂಚಿಗೆ ಕೊಂಡೊಯ್ದಿತು. ಫಲಿತಾಂಶ? ಖಳನಾಯಕ ವಿಲ್‌ಹೆಲ್ಮ್ ದೊರೆ ಸ್ಥಾನಚ್ಯುತನಾದ: 'ಪವಿತ್ರ' ಜರ್ಮನಿ ಹಾಳಾಯಿತು, ಅಪಮಾನ ಕಳಂಕ ಲೇಪಿತವಾಯಿತು.


ಕೊಳುಗುಳದ ಕಾವು ಏರುತ್ತಿರುವಾಗ ಆಂತರಿಕ ಧೃತಿಯನ್ನು ಉನ್ನತಮಟ್ಟದಲ್ಲಿ ಕಾಯ್ದಿರಿಸಲು ಸರ್ಕಾರಗಳು ಸ್ವಾಭಿಮಾನ, ದೇಶಪ್ರೇಮ, ಸಂಸ್ಕೃತಿ, ಶತ್ರುದೌಷ್ಟ್ಯ, ಅಂತಾರಾಷ್ಟ್ರೀಯ ಪಿತೂರಿ ಮುಂತಾದ ಅಮೂರ್ತಗುಣಗಳತ್ತ ಜನ ಲಕ್ಷ್ಯವನ್ನು ತಿರುಗಿಸುವುದು ಸಾಧಾರಣ ನೀತಿ. ಪ್ರತಿಯೊಂದು ರಾಷ್ಟ್ರವೂ ಶತ್ರುರಾಷ್ಟ್ರದ ಪ್ರತಿಯೊಂದು ವರ್ಗವನ್ನೂ ತನ್ನ ಅದೇ ವರ್ಗದ ವೈಯಕ್ತಿಕ ವೈರಿ ಎಂಬುದನ್ನು ಇಡಿ ಇಡಿಯಾಗಿಯೂ ಬಿಡಿಬಿಡಿಯಾಗಿಯೂ ಜನಗಣಮನಕ್ಕೆ ಗಿಡಿಯುತ್ತದೆ. ಹೀಗೆ ಒಂದು ರಾಷ್ಟ್ರದ ವಿಜ್ಞಾನಿಗಳು ಶತ್ರುರಾಷ್ಟ್ರದ ವಿಜ್ಞಾನಿಗಳ ಖಾಸಾ ಎದುರಾಳಿಗಳಾಗುತ್ತಾರೆ. ಹೀಗಾಗಿ ಜರ್ಮನಿಗೂ ಯೂರೋಪಿನ ಇತರ ರಾಷ್ಟ್ರಗಳಿಗೂ ನಡುವೆ ವಿಜ್ಞಾನ ದಿಗ್ಬಂಧವೇರ್ಪಟ್ಟಿತ್ತು.

ದಾಳಿಕೋರದೇಶ ಜರ್ಮನಿ ತನ್ನ 'ಸತ್ಯನಿಷ್ಠ' ನೀತಿಯನ್ನು ಎಂದಿನ ಶೀತಲ ದಕ್ಷತೆಯಿಂದ ಅನುಸರಿಸಿತು. "ನಾಗರಿಕ ಪ್ರಪಂಚಕ್ಕೆ ಪ್ರಣಾಳಿಕೆ" ಯನ್ನು ಪ್ರಕಟಿಸಿ ಜರ್ಮನಿ ಹೇಗೆ ನಿರಪರಾಧಿ ರಾಷ್ಟ್ರ. ಜರ್ಮನ್ ಸಂಸ್ಕೃತಿಯ ರಕ್ಷಣೆಗೋಸ್ಕರ ಶಸ್ತ್ರಧಾರಣೆ ಮಾಡಿ ಯುದ್ಧಭಾಗಿಯಾಗುವುದು

ಹೇಗೆ ಅನಿವಾರ್ಯವಾಯಿತು ಮುಂತಾದವನ್ನು ವಿವರಿಸಿತು. ಜರ್ಮನಿಯ ಸಂಸ್ಕೃತಿಯೂ ಮಿಲಿಟರಿತನವೂ ಒಂದೇ, ಬೇರೆ ಬೇರೆ ಅಲ್ಲ ಎಂದು ಇದು ಒತ್ತಿ ಹೇಳಿತು. ಮಹಾವರಿಷ್ಠರ ಈ ಪ್ರಣಾಳಿಕೆಗೆ ತೊಂಬತ್ತೆರಡು ಜರ್ಮನ್ ಬುದ್ಧಿವಂತರು ರುಜುವಿಕ್ಕಿದ್ದರು. ಮಾಕ್ಸ್ ಪ್ಲಾಂಕ್ ಇವರಲ್ಲೊಬ್ಬರು. ಐನ್‌ಸ್ಟೈನ್ ಹೇಗೂ ಇವರ ಸಾಲಿನಲ್ಲಿರಲಿಲ್ಲ. ಇವರನ್ನು ರುಜು ಹಾಕಿ ಎಂದು ಯಾರೂ ಕೋರಿರಲಿಲ್ಲ. ಕೋರಿದ್ದರೆ ಅದು ದೊರೆಯುತ್ತಲೂ ಇರಲಿಲ್ಲ. ತಾಂತ್ರಿಕವಾಗಿ ಇವರು ಸ್ವಿಸ್ ಪ್ರಜೆಯಾಗಿದ್ದರಷ್ಟೆ.

ಜರ್ಮನಿಯ ಸಂಗೀತವನ್ನೂ ಸಾಹಿತ್ಯವನ್ನೂ ಅಪಾರವಾಗಿ ಮೆಚ್ಚಿ ಪ್ರೀತಿಸುತ್ತಿದ್ದ ಯೂರೋಪಿಯನ್ನರಿಗೆ ತೊಂಬತ್ತೆರಡು ಬುದ್ಧಿವಂತರ ಪ್ರಣಾಳಿಕೆ ಅರ್ಥವಾಗದ ಒಗಟಾಯಿತು. ಜರ್ಮನರು ಹೂಡಿದ ದಾಳಿ ನುಂಗಲಾರದ ಕಾದ ಸಬಳವಾಯಿತು. ಬಿಸ್‌ಮಾರ್ಕನ (ವಿಲ್‌ಹೆಲ್ಮನ) ಜರ್ಮನಿ ಬೇರೆ ಗ್ಯೋಥೇಯ (Goethe) ಜರ್ಮನಿ ಬೇರೆ ಎಂಬುದು ಅವರಿಗೆ ತಿಳಿದದ್ದು ತೀರ ತಡವಾಗಿ.

"ಶಾಂತಿಕಾಲದಲ್ಲಿ ವಿಜ್ಞಾನಿಗಳು ಪ್ರಪಂಚ ವ್ಯಕ್ತಿಗಳು, ಯುದ್ಧಕಾಲದಲ್ಲಿ ರಾಷ್ಟ್ರವ್ಯಕ್ತಿಗಳು" ಎಂಬ ಪ್ರಚಲಿತ ನಿಲವು ಐನ್‌ಸ್ಟೈನರಿಗೆ ಅಸಹ್ಯವಾಗಿತ್ತು. ಇಂಥ ಸಂಕುಚಿತ ಭಾವ ಸಲ್ಲ. ಇದು ವಿಜ್ಞಾನದ ವ್ಯಭಿಚಾರವೆಂದು ಇವರ ಭಾವನೆ. ಆದರೆ ವಸ್ತುಸ್ಥಿತಿ ಏನೆಂದರೆ ಪ್ರಾಚೀನ ಕಾಲದಿಂದಲೂ ಪ್ರಸಿದ್ಧ ವಿಜ್ಞಾನಿಗಳು ಒಂದಲ್ಲ ಒಂದು ರೀತಿಯಲ್ಲಿ ಯುದ್ಧೋದ್ಯಮದೊಡನೆ ಸಹಕರಿಸುತ್ತಲೇ ಬಂದಿದ್ದಾರೆ. ಆರ್ಕಿಮಿಡೀಸ್, ನ್ಯೂಟನ್, ಫ್ಯಾರಡೇ, ನೊಬೆಲ್ ಮೊದಲಾದವರು ಕೂಡ. ಒಂದನೆಯ ಮಹಾಯುದ್ಧದ ವೇಳೆ ಸಾಕ್ಷಾತ್ ಮದಾಮ್ ಕ್ಯೂರಿ, ರುದರ್ಫರ್ಡ್ ಇವರಂಥ ಅಗ್ರಗಣ್ಯರೂ ತಮ್ಮ ಚಿಂತನೆಗಳನ್ನು ಯುದ್ಧೋಪಯುಕ್ತ ಸಂಶೋಧನೆಗಳತ್ತ ಹರಿಸಿದ್ದರು. ವಾಸ್ತವವಾಗಿ ವಿಜ್ಞಾನೇತಿಹಾಸವೂ ಯುದ್ಧೇತಿಹಾಸವೂ ಸನ್ನಿಕಟವಾಗಿ ಹೆಣೆದುಕೊಂಡಿವೆ. ಯಾವುದು ಯಾವುದರ ಕಾರಣ ಮತ್ತು ಪರಿಣಾಮವೆಂಬುದೊಂದು ಬೀಜವೃಕ್ಷನ್ಯಾಯ..





ತೊಂಬತ್ತೆರಡರ ಎದುರು ನಾಲ್ಕು

ಇಂಥ ದುರ್ಭರ ಸನ್ನಿವೇಶದಲ್ಲಿ ಐನ್‌ಸ್ಟೈನ್ ಏಕಾಂಗಿಯಾಗಿ ನಿಂತರು. ಪ್ರಪಂಚದ ಮೂಕ ಮನಸ್ಸಾಕ್ಷಿಯ ಶೋಕಮೂರ್ತಿಯಾಗಿ ನಡೆದರು. ಕಗ್ಗಡಲಿನ ನಡುವಿನ ದೀಪಸ್ತಂಭದಂತೆ ನೆಲೆದೀವಿಗೆಯಾದರು. ಜರ್ಮನಿಯ ಆಕ್ರಮಣಶೀಲ ಪಡೆಗಳನ್ನು ಮನಸಾರೆ ಖಂಡಿಸಿದ್ದು ಇವರು ಈ ರಾಷ್ಟ್ರದ ಸಾಮರಿಕವಾದವನ್ನು ಪ್ರಶ್ನಿಸಿದರು. "ನಾಗರಿಕ ಪ್ರಪಂಚಕ್ಕೆ ಪ್ರಣಾಳಿಕೆ"ಗೆ ಎದುರಾಗಿ ಮುಂದಿನ ಕೆಲವೇ ದಿನಗಳಲ್ಲಿ "ಯೂರೋಪಿಯನ್ನರಿಗೆ ಪ್ರಣಾಳಿಕೆ"ಯನ್ನು ಪ್ರಕಟಿಸಿದರು. ಇದರ ರುಜುಗಾರರು ಮಾತ್ರ ನಾಲ್ಕೇ ನಾಲ್ಕು ಋಜುಪ್ರಾಣರು: ಐನ್‌ಸ್ಟೈನ್, ಇವರ ಸಹೋದ್ಯೋಗಿ ಜಾರ್ಜ್ ನಿಕೊಲಾಯ್, ಬರ್ಲಿನ್ ವೀಕ್ಷಣಾಲಯದ ಮುಖ್ಯಸ್ಥ ಎಂಬತ್ತು ವರ್ಷ ವಯಸ್ಸಿನ ವಿಲ್‌ಹೆಲ್ಮ್ ಫಾರ್ಸ್ಟರ್ (ಇವರು ತೊಂಬತ್ತೆರಡು ಬುದ್ಧಿವಂತರ ಸಾಲಿನಲ್ಲಿಯೂ ಇದ್ದರು — ಎಂಬತ್ತನೇ ನಮೂನೆ?) ಮತ್ತು ಒಟ್ಟೊ ಬುಕ್ಸೆಕ್.


"ವಾದ್ಯ ಬಜಾವಣೆಗೆ ಅನುಗುಣವಾಗಿ ಅಚ್ಚುಕಟ್ಟು ಸಾಲುಗಳಲ್ಲಿ ಹೆಜ್ಜೆ ಹಾಕುವುದನ್ನು ಮೆಚ್ಚುವಾತ ನನ್ನ ತಿರಸ್ಕಾರಕ್ಕೆ ಅರ್ಹನಾದ: ಅವನ ಮಹಾಮಸ್ತಿಷ್ಕ ತಪ್ಪಾಗಿ ಸೇರಿಕೊಂಡಿದೆ, ಅವನಿಗೆ ಕಶೇರುರಜ್ಜುವೊಂದೇ ಧಾರಾಳವಾಗಿ ಸಾಕಾಗಿತ್ತು" ಎಂದ ಐನ್‌ಸ್ಟೈನರು ತಮ್ಮ ಪ್ರಣಾಳಿಕೆಯಲ್ಲಿ ಮಾನವನ ಅಥವಾ ರಾಷ್ಟ್ರದ ಸಮಸ್ಯೆಗಳನ್ನು ಯುದ್ಧ ಪರಿಹರಿಸಬಲ್ಲದು ಎಂಬ ವಾದವನ್ನು ಪೂರ್ಣವಾಗಿ ತಳ್ಳಿಹಾಕಿದರು. ಪ್ರಣಾಳಿಕೆಯ ಉದ್ಧೃತಾಂಶಗಳನ್ನು ನೋಡಿ.

"ಯುದ್ಧ ಈಗಿನಂತೆ ಹಿಂದೆಂದೂ ಇಷ್ಟೊಂದು ಪೂರ್ತಿಯಾಗಿ ಸಾಂಸ್ಕೃತಿಕ ಸಹಕಾರವನ್ನು ಬುಡಮೇಲು ಮಾಡಿದ್ದಿಲ್ಲ. ಇದು ಘಟಿಸಿರುವುದಾದರೂ ಯಾವಾಗ? ತಂತ್ರವಿದ್ಯೆ ಮತ್ತು ಸಂಸ್ಕೃತಿಗಳಲ್ಲಿ ಸಾಧಿಸಿರುವ ಪ್ರಗತಿ, ನಾವು ಸಾರ್ವತ್ರಿಕ ಪ್ರಪಂಚವ್ಯಾಪಿ ನಾಗರಿಕತೆಯ ದಿಶೆಯತ್ತ ಅವಶ್ಯವಾಗಿ ಸಾಗಬಲ್ಲ ಅಂತಾರಾಷ್ಟ್ರೀಯ ಸಂಬಂಧಗಳ ಅಗತ್ಯವನ್ನು ಮನಗಾಣಿಸಬೇಕು ಎಂಬುದನ್ನು ಸಾರಿ ಹೇಳುತ್ತಿರುವ ಇದೇ ದಿನಗಳಂದು. ಈ ಮೊದಲು ಇಷ್ಟೊಂದು ಅಂತಾರಾಷ್ಟ್ರೀಯ ಬಂಧಗಳು ಬೆಸೆದುಕೊಂಡಿದ್ದುದು ಎಂಬ ಕಾರಣಕ್ಕಾಗಿಯೇ ಪ್ರಾಯಶಃ ಈ ಭೇದನ ನಮಗೆ ಇನ್ನಷ್ಟು ದಾರುಣವಾದ ವೇದನೆ ಉಂಟುಮಾಡಿದೆ.

"ನಮಗೇನೂ ಅಚ್ಚರಿ ಆಗಬೇಕಾಗಿಲ್ಲ. ಸರ್ವಮಾನ್ಯ ಪ್ರಪಂಚ ಸಂಸ್ಕೃತಿಯನ್ನು ಕೊಂಚವಾದರೂ ಲೆಕ್ಕಿಸುವ ಯಾರೇ ಆಗಲಿ, ಅದು ನಿಂತಿರಲೇಬೇಕಾದ ತತ್ತ್ವಗಳ ಕಾಪಾಡಿಕೆಗಾಗಿ ಈಗ ಎರಡು ತೆರದಲ್ಲಿ ಬದ್ಧನಾಗಿದ್ದಾನೆ. ಹೀಗಿದ್ದಾಗ್ಯೂ ಯಾರಿಂದ ಇಂಥ ಭಾವನೆಗಳನ್ನು ನಿರೀಕ್ಷಿಸಬಹುದಾಗಿತ್ತೋ — ಪ್ರಧಾನತಃ ವಿಜ್ಞಾನಿಗಳು ಮತ್ತು ಕಲಾವಿದರು — ಅಂಥವರು ಈ ತನಕ ಹೆಚ್ಚು ಕಡಿಮೆ ಪ್ರತಿಯೊಬ್ಬನೂ ಎನ್ನುವಂತೆ ಅಂತಾರಾಷ್ಟ್ರೀಯ ಸಂಬಂಧಗಳ ಮುಂದುವರಿಸಿಕೆಗೆ ಯಾವುದೇ ಬಗೆಯ ಅಡೆತಡೆಯನ್ನು ಒಡ್ಡದೇ ಸಹಕಾರಯುತ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಅವರು ಪ್ರತೀಕಾರ ಭಾವನೆಯಿಂದ ಮುಕ್ತರಾಗಿದ್ದಾರೆ ಮತ್ತು ಶಾಂತಿಯನ್ನು ಬಯಸುವುದರಲ್ಲಿ ಒಗ್ಗಟ್ಟಾಗಿದ್ದಾರೆ.

"ಪ್ರಪಂಚ ಈ ತನಕ ಸಂಸ್ಕೃತಿ ಎಂದು ಯಾವುದನ್ನು ಹೇಳಿಕೊಂಡು ಬಂದಿದೆಯೊ ಅದಕ್ಕೆ ಸಲ್ಲದ ಈ ನಿಲವನ್ನು ಉಗ್ರರಾಷ್ಟ್ರಪ್ರೇಮದ ಹೆಸರಿನಲ್ಲಿ ಕ್ಷಮಿಸಲು ಬಾರದು. ಹೀಗಲ್ಲದೆ, ಅದನ್ನು ಕ್ಷಮಿಸುವುದೆಂದು ಭಾವ ಬುದ್ಧಿವಂತರಲ್ಲಿ ನಾಸ್ತಿಕತೆ ಜನಾಂಗಕ್ಕೆ ಗಣನಾರ್ಹ ಅಡಚಣೆ, ಘೋರ ದುರದೃಷ್ಟ. ಅದು ಸ್ವತಃ ಸಂಸ್ಕೃತಿಗೆ ಮುಳಿವಾಗುವುದು ಮಾತ್ರವಲ್ಲ. ಯಾವ ರಾಷ್ಟ್ರಗಳ ರಕ್ಷಣೆಗೋಸ್ಕರ ಈ ಮಹಾಯೋಜನೆಯನ್ನು(ಯುದ್ಧ) ವನ್ನು ಹೂಡಲಾಗಿದೆಯೊ ಖುದ್ದು ಅವುಗಳ ಅಸ್ತಿತ್ವವನ್ನೇ ಅದು ಅಪಾಯಕ್ಕೆ ಈಡು ಮಾಡದಿರದು ಎಂಬುದರ ಬಗ್ಗೆ ನಮಗೆ ಇನಿತೂ ಸಂದೇಹವಿಲ್ಲ."

ಪ್ರಣಾಳಿಕೆ ಮುಂದುವರಿಯುತ್ತ, ಹೇಗೆ ತಂತ್ರವಿದ್ಯೆ ಪ್ರಪಂಚವನ್ನು ಸಂಕೋಚಿಸಿದೆ, ಸಂಪರ್ಕಜಾಲ ಸಮಸ್ತ ನಗರಗಳನ್ನೂ ಬೆಸೆದಿದೆ ಎಂಬುದನ್ನು ವಿವರಿಸುತ್ತದೆ. ಇಡೀ ಪ್ರಪಂಚವೇ ಈಗ ಒಂದು ಘಟಕವಾಗಿದೆ. ಪರಿ


ನಿಮ್ಮ ಮಗುವಿಗೆ ಹೆಚ್ಚು ಶಕ್ತಿಯನ್ನು ಕೊಡುತ್ತದೆ,
ಅವನನ್ನು ಮುಂದಿಡುತ್ತದೆ...
ಕೋಕೋ-ಸ್ವಾದಿಷ್ಟ ಬೋರ್ನ್‌ವಿಟಾ.
ಬೋರ್ನ್‌ವಿಟಾದಲ್ಲಿ ಈಗ ಅಧಿಕ ಕೋಕೋ ಇರುವುದರಿಂದ ಅದು ಅಧಿಕ ರುಚಿಕರ ಹಾಗೂ ಅಧಿಕ ಆರೋಗ್ಯಪೂರ್ಣವಾಗಿದೆ. ಮಾತ್ರವಲ್ಲ, ಬೋರ್ನ್‌ವಿಟಾ ಮಾಲ್ಟ್, ಹಾಲು ಮತ್ತು ಸಕ್ಕರೆಗಳ ಎಲ್ಲಾ ಪೌಷ್ಟಿಕ ಉತ್ತಮಿಕೆಯಿಂದ ತುಂಬಿದೆ.
ಎರಡು ಚಾ ಚಮಚ ಬೋರ್ನ್‌ವಿಟಾವನ್ನು ಒಂದು ಕಪ್ ಬಿಸಿ ಹಾಲಿಗೆ ಸೇರಿಸಿದಾಗ ಅದು ಅತ್ಯಂತ ರುಚಿಕರವಾದ, ಶಕ್ತಿದಾಯಕ ಪೇಯವಾಗುತ್ತದೆ. ನಿಮ್ಮ ಮಕ್ಕಳಿಗೆ ಬೋರ್ನ್‌ವಿಟಾವನ್ನು ಪ್ರತಿದಿನ ಎರಡಾವರ್ತಿ ಕೊಡಿರಿ. ಅದು ಅವರ ಶಾರೀರಿಕ ಬೆಳವಣಿಗೆಗೆ ಅವಶ್ಯವಿರುವ ಹೆಚ್ಚಿನ ಶಕ್ತಿಯನ್ನು ಒದಗಿಸಲು ನೆರವಾಗುತ್ತದೆ. ಮತ್ತು ನಿಮಗೂ, ಅದು ಬೇಕು...ಅವರೊಂದಿಗೆ ಅವರಂತೆ ಇರುವುದಕ್ಕಾಗಿ!
ಕ್ಯಾಡ್‌ಬರೀಸ್
ಬೋರ್ನ್‌ವಿಟಾ
ಅಧಿಕ ಕೋಕೋ ಯುಕ್ತ: ಅಧಿಕ ರುಚಿಕರ, ಅಧಿಕ ಆರೋಗ್ಯಪೂರ್ಣ!
Cadbury's
Bournvita
The ideal health drink for strength, vigour and taste
500 g net
75
ಹಣ ಉಳಿಸುವ 500 ಗ್ರಾಮ್‌ನ ರಿಫಿಲ್ ಪ್ಯಾಕ್ ಕೊಳ್ಳಿರಿ.
ಮುಖ್ಯ ಸಂಗತಿ:
ಈ ಪ್ಯಾಕನ್ನು ತೆರೆದ ಕೂಡಲೇ ಅದರಲ್ಲಿರುವ ಪುಡಿಯನ್ನು ಬೋರ್ನ್‌ವಿಟಾದ ಡಬ್ಬಿಯಲ್ಲಿ ಹಾಕಿಇಡಿರಿ. ಅದರಿಂದ ಅದರ ತಾಜಾ ಗುಣ ಉಳಿಯುತ್ತದೆ
OBM·8376 B K

ಸ್ಥಿತಿ ಹೀಗಿರುವಾಗ ಅಂತಃಕಲಹಗಳಿಂದ ಯೂರೋಪ್ ವಿನಾಶಮಾರ್ಗ ಹಿಡಿಯುವುದು ಸಲ್ಲ. ಇಂದಿನ ಯುದ್ಧಗಳಲ್ಲಿ ಭಾಗಗಳೆಲ್ಲರೂ ಸೋತು ಸುಣ್ಣಾಗುವುದರಿಂದ ನಿಜವಾದ ವಿಜಯಿಗಳ ಇತ್ಯರ್ಥವೆಂದೂ ಆಗದು. ಆದ್ದರಿಂದ ಶಾಸ್ತ್ರಜ್ಞರು ಎಲ್ಲೇ ಇದ್ದರೂ ಯುದ್ಧನಿವಾರಣೆಗಾಗಿ ಪೂರ್ಣ ಪ್ರಯತ್ನ ಮಾಡುವುದು ಅವರ ಕರ್ತವ್ಯ. ಯೂರೋಪಿನ ಅಳಿಯುವ ಸಂಸ್ಕೃತಿಯನ್ನು ಕಾಪಾಡುವತ್ತ ಮೊದಲ ಹೆಜ್ಜೆ ಇಡಬೇಕು. ಎಲ್ಲ ಯೂರೋಪಿಯನ್ನರೂ ಒಂದಾಗಿ ಯೂರೋಪಿನ ಐಕ್ಯತೆ ಸ್ಥಾಪಿಸುವುದರತ್ತ ಉದ್ಯುಕ್ತರಾಗಬೇಕು. "ನಾವೇ ಮೊದಲ ಹೆಜ್ಜೆ ಇಡಲು — ಸಾಹಸಿಸಲು — ನಿರ್ಧರಿಸಿದ್ದೇವೆ. ನೀವು ನಮ್ಮ ರೀತಿಯಲ್ಲಿಯೇ ಯೋಚಿಸುವವರಾಗಿದ್ದರೆ, ಯೂರೋಪಿಯನ್ ಐಕ್ಯಕ್ಕಾಗಿ ವ್ಯಾಪಕಾಂದೋಲನ ಪ್ರಾರಂಭಿಸಲು ನಿಜವಾಗಿ ಅಪೇಕ್ಷಿಸುವವರಾಗಿದ್ದರೆ, ನಿಮ್ಮ ರುಜುವನ್ನು ಅಂಕಿತಗೊಳಿಸುವುದರ ಮೂಲಕ ಹಾಗೆ ತೋರಿಸಬೇಕೆಂದು ಕೋರುತ್ತೇವೆ."

ವಿನಾಶಪಥಗಾಮಿಗೆ ವಿವೇಕವೆಲ್ಲಿಂದ ಮೂಡಬೇಕು? ಮದ್ದುಗುಂಡು ಹಿಡಿದವನಿಗೆ ಯಾವ ಗಂಡು ತಾನೇ ಮದ್ದು ಮಾಡೀತು? ಸುರುಸುರು ಬತ್ತಿಯ ಖಾಲಿ ಕೊನೆಗೆ ಕಿಡಿ ತಾಗಿಸಿ ಆಗಿತ್ತು. ಮದ್ದಿನ ಉಗ್ರಾಣ ಹೊಟ್ಟಿಯೇ ಹೋಯ್ತು. ಯುದ್ಧಾಗ್ನಿಯಿಂದ ಯೂರೋಪ್ ಉರಿದೇ ಉರಿಯಿತು. ತೊಂಬತ್ತೆರಡರ ಮುಂದೆ ನಾಲ್ವರು, ರೋಷಾವಿಷ್ಟ ಸಿಂಹದ ಮುಂದಿನ ಕಾಮಧೇನು ವಿನಂತಾದರು.

ಜಗದ್ವಿಖ್ಯಾತ ವಿಜ್ಞಾನಿ ಐನ್‌ಸ್ಟೈನ್ ತಮ್ಮ ಖಾಸಾ ಸೊತ್ತು, ತಮ್ಮ ರಾಷ್ಟ್ರದ ಬೌದ್ಧಿಕ ಅಂತಸ್ತಿಗೆ ವಿಶೇಷ ಬೆಳ್ಳಿ ಮತ್ತು ಮೆರುಗು ನೀಡಿರುವ ಬೃಹಸ್ಪತಿ ಎಂದು ಮುಂತಾಗಿ ಅಭಿಮಾನ ಪರವಶರಾಗಿದ್ದ ಜರ್ಮನ್ ಪ್ರಭುಗಳಿಗೆ. ಯುದ್ಧಾರಂಭದ ದಿನಗಳು ಒದಗಿಸಿದ ಸುಖೋಷ್ಣದಿಂದ ಅಂತೆಯೇ ಪ್ರಾರಂಭಿಕ ಕ್ಷಿಪ್ರ ಯಶಸ್ಸು ನೀಡಿದ ಕುಮ್ಮಕ್ಕಿನಿಂದ ಹಿಗ್ಗಿದ್ದ ಆ ಉನ್ಮತ್ತ ರಾಷ್ಟ್ರೀಯರಿಗೆ ನಾಲ್ವರ ಪ್ರಣಾಳಿಕೆ ಬೆನ್ನಿಗಿರಿದ ಕಠಾರಿಯಂತೆ ತಿವಿಯಿತು. ಐನ್‌ಸ್ಟೈನ್ ರಾಷ್ಟ್ರದ್ರೋಹಿ, ಹುಟ್ಟಾ ಜರ್ಮನಿಗನಾಗಿದ್ದರೂ ಸ್ವಿಸ್ ಪೌರತ್ವ ಸ್ವೀಕರಿಸಿರುವ ಅಭಿಮಾನಶೂನ್ಯ, ಅನ್ನವಿಕ್ಕಿದ ಕೈಯನ್ನೇ ಕಡಿಯುವ ಕೃತಘ್ನ ಶೈಲಾಕ್, ಜರ್ಮನಿ ಒದಗಿಸಿದ ಆರ್ಥಿಕ ಸವಲತ್ತು ಮತ್ತು ಸ್ಥಾನಿಕ ದವಲತ್ತು ಬೇಕಾಗಿದ್ದರೂ ಈ ದೇಶಕ್ಕೆ ನಿಷ್ಠೆ ಮಾತ್ರ ಸಲ್ಲಿಸಲೊಲ್ಲದ ಅಲೆಮಾರಿ ವಣಿಕ ಮುಂತಾದ ಅವೈಜ್ಞಾನಿಕ ವಿಶೇಷಣಗಳಿಗೆ ಇವರು ಪಾತ್ರರಾಗಬೇಕಾಯಿತು. ಉದ್ವೇಗದ ಮಾತುಗಳನ್ನು ಕಠಿಣ ಇಟ್ಟಿಗೆಗಳಿಂದ ಕಟ್ಟಲ್ಲವಷ್ಟೆ. ಐನ್‌ಸ್ಟೈನರ ಹಿರಿಮೆಯೂ ಸ್ವಿಸ್ ಪೌರತ್ವವೂ ಇವರ ವ್ಯಕ್ತಿತ್ವಕ್ಕೆ ಅಪಾಯವೊದಗದಂಥ ಅಮೂರ್ತ ಭಿತ್ತಿಯನ್ನು ಇವರ ಸುತ್ತ ನಿರ್ಮಿಸಿದ್ದುವು. ಆದರೆ ಎಷ್ಟು ದಿನ?

ಮರುಮದುವೆ

ಕಾಳಗದ ದಿನಗಳಂದು ಬರ್ಲಿನ್ನಿನಲ್ಲಿ ನಾಗರಿಕ ಜೀವನ ಅಸ್ತವ್ಯಸ್ತವಾಯಿತು. ಆಹಾರ, ನೀರು, ಪ್ರಾಥಮಿಕ ಸೌಲಭ್ಯಗಳು ಎಲ್ಲದರಲ್ಲೂ ಕಡು ಹಸುಗೆ ಜಾರಿಗೆ ಬಂದಿತು. ಏಕಾಂಗಿಯಾಗಿದ್ದ ಐನ್‌ಸ್ಟೈನರಿಗೆ ಇಂಥ ಪರಿಸರದಲ್ಲಿ ಯುಕ್ತಾಹಾರ ವಿಹಾರ ವಿಶ್ರಾಂತಿ ದೊರೆಯುತ್ತಿರಲಿಲ್ಲ. ಸಂಶೋಧನೆ ಮತ್ತು ಲೋಕಶಾಂತಿ ಎಂಬ ಎರಡು ಬಗೆಯ ಬೆಂಕಿಗಳಿಂದ ಇವರು ಬೇಯುತ್ತಿದ್ದರು. ರೂಡಾಲ್ಫರ ಮನೆಗೆ ಆಗ ಈಗ ಹೋಗುವುದು, ಅಲ್ಲಿ ಎಲ್ಸಾ ಅಕ್ಕರೆಯಿಂದ ಅಟ್ಟು ಬಡಿಸುತ್ತಿದ್ದ ತಿಂಡಿ ತಿನಿಸುಗಳನ್ನು ಮೆಲ್ಲುವುದು, ವಾದಸಂವಾದಗಳಲ್ಲಿ ಲೀನರಾಗುವುದು, ಪಿಟೀಲು ವಾದನದಲ್ಲಿ ಮೈಮರೆಯುವುದು ಇವು ಐನ್‌ಸ್ಟೈನರ ಮನದ ಬೆಂಗಾಡಿಗೆ ತಂಪೆರೆಯುತ್ತಿದ್ದ ತನಿರಸಗಳಾಗಿದ್ದುವು. ಅನೇಕ ಸಂದರ್ಭಗಳಲ್ಲಿ ಇವರು ಅಲ್ಲಿಯೇ ತಂಗುವುದೂ ಇತ್ತು.

೧೯೧೭ರಲ್ಲಿ ಇವರು ಉಲ್ಬಣ ಉದರವ್ಯಾಧಿಗೆ ತುತ್ತಾದರು. ಪರಿಸ್ಥಿತಿ ವಿಷಮವಾಗಿತ್ತು. ಆಗ ಇವರ ಆರೈಕೆಯ ಪೂರ್ತಿ ಹೊಣೆಯನ್ನು ಎಲ್ಸಾ ವಹಿಸಿಕೊಂಡರು. ಈ 'ಪಾರಲೌಕಿಕ ಜೀವಿ' ಮರ್ತ್ಯಲೋಕಕ್ಕೆ ದೃಢಾರೋಗ್ಯಸಮೇತ ಇಳಿದುಬರುವಂತೆ ಶ್ರಮಿಸಿದ ಸಾವಿತ್ರಿ ಈಕೆ. ಎಲ್ಸಾರ ನಲ್ಮೆ

ಯ ಶುಶ್ರೂಷೆ ಒದಗಿರದಿದ್ದರೆ ಐನ್‌ಸ್ಟೈನ್ ಕತೆ ಅಲ್ಲಿಗೇ ಮುಗಿಯುತ್ತಿತ್ತು.

ಜೂನ್ ೧೯೧೯ರಲ್ಲಿ ಐನ್‌ಸ್ಟೈನರು ಎಲ್ಸಾ ರನ್ನು ಮದುವೆ ಆದರು ಮತ್ತು ಅವರ ಇಬ್ಬರು ಹೆಣ್ಣುಮಕ್ಕಳನ್ನು ದತ್ತು ಸ್ವೀಕರಿಸಿದರು. ಆರ್ಥಿಕ ವಾಗಿ ಈಗ ಎರಡು ಸಂಸಾರ ನಿರ್ವಹಿಸುವ ಹೊಣೆ ಅವರದಾಯಿತು: ಮಿಲೇವಾ ಮತ್ತು ಇಬ್ಬರು ಗಂಡುಮಕ್ಕಳಿಗೆ ಹಣ ಒದಗಿಸುವುದು. ಸ್ವಂತ ಕುಟುಂಬವನ್ನು ಪೋಷಿಸುವುದು.

ಎಲ್ಸಾ, ಮುಂದೆ ೧೯೩೬ರಲ್ಲಿ ಸಾಯುವ ತನಕ ತನ್ನ ಪತಿಯನ್ನು ಜತನದಿಂದ ಕಾಪಾಡಿಕೊಂಡು ಬಂದರು. ಭೌತವಿಜ್ಞಾನದಲ್ಲಿ, ಅಷ್ಟೇಕೆ ಯಾವುದೇ ವಿಜ್ಞಾನವಿಭಾಗದಲ್ಲಿ, ಈ ಮಹಾರಾಯಿತಿಗೆ ಏನೂ ಪ್ರವೇಶವಿರಲಿಲ್ಲ. ಆದರೆ ಉತ್ತಮ ಗೃಹಿಣಿಯಾಗಿ ಸಮರ್ಥ ಮಹಾಪ್ರತಿಭಾವ್ಯಕ್ತಿ ಪತಿಗೆ ಬೇಕಾದ ಜೀವನ ಸುಭದ್ರ ಮತ್ತು ಆದರ್ಶ ಗೃಹಪರಿಸರ ವನ್ನು ಒದಗಿಸುವುದರಲ್ಲಿ ಇವರು ಪರಮ ಕೃತಾರ್ಥರಾದರು. ಪತ್ನಿ ಮಾತೃಪ್ರಧಾನ ಈ ಗೃಹಸ್ತ್ರೀ ಐನ್‌ಸ್ಟೈನರಿಗೆ ಬೆನ್ನ ರಕ್ಷೆಯಾಗಿ ನಿಂತಿಲ್ಲವಾಗಿದ್ದರೆ ಅವರ ಭವಿಷ್ಯ ಹೇಗೆ ರೂಪುಗೊಳ್ಳುತ್ತಿತ್ತೋ ಊಹಿಸುವುದೂ ಸಾಧ್ಯವಾಗದು.

"ನನ್ನ ಹೆಂಡತಿಗೆ ಏನೂ ವಿಜ್ಞಾನ ತಿಳಿಯದಿಲ್ಲ ವೆಂಬುದು ಸಂತಸದ ಸಂಗತಿ. ಮೊದಲ ಹೆಂಡತಿಗೆ ತಿಳಿದಿತ್ತು" ಎಂಬುದಾಗಿ ಐನ್‌ಸ್ಟೈನ್ ಮಿತ್ರ ನೊಡನೆ ಹೇಳಿದ್ದುಂಟು.

ಒಂದನೆಯ ಮಹಾಯುದ್ಧದ ಕೊನೆಯ ದಿನಗಳಂದು ಎಲ್ಸಾ ಒಮ್ಮೆ ಅರ್ಥ ಗಾಂಭೀರ್ಯ ದಿಂದ ತಮ್ಮ ಪತಿರಾಯರ ಭೌತವಿಜ್ಞಾನ ಜೋಳಿ ಯನ್ನು ವರ್ಣಿಸಿದ್ದರು: "ನಮ್ಮ ಆಲ್ಬರ್ಟ್ ಮಹಾ ಜಾಣ ಭೌತವಿಜ್ಞಾನಿ ಎಂಬುದು ನನಗೆ ಚೆನ್ನಾಗಿ ಗೊತ್ತು. ಇಂದು ಆಹಾರ ಪದಾರ್ಥಗಳು ಸಿಕ್ಕು ವುದು ಬಲು ಕಷ್ಟವಾಗಿದೆ. ಸಿಕ್ಕ ಡಬ್ಬಿಗಳಲ್ಲಿ ಅವನ್ನು ಕೂಡಬೇಕಾಗಿದೆ. ಆದ್ರೆ ಆ ಡಬ್ಬಿ ಗಳೋ! ತುಕ್ಕು ಹಿಡಿದವು, ತಿರುಟಿಕೊಂಡವು, ವಿಕಾರ ಮಾದರಿಯವು. ವಿದೇಶಿ ತಯಾರಿಕೆಗಳೂ ಸಾಕಷ್ಟಿವೆ. ಇವನ್ನು ಬಿಚ್ಚಿ ತೆರೆಯುವುದು ಹೇಗೆಂ ಬುದು ಯಾರಿಗೂ ತಿಳಿಯದು. ತೆರೆಸೂತ್ರ ಈ ಡಬ್ಬಿಗಳಿಗೆ ಲಗತ್ತಾಗಿ ದೊರೆಯುವುದೂ ಇಲ್ಲ. ಆದರೆ ನಮ್ಮ ಆಲ್ಬರ್ಟ್‌ನಿಗೆ ತೆರೆಯಲಾಗದ ಒಂದೇ ಒಂದು ಡಬ್ಬಿ ಕೂಡ ಈ ತನಕ ಎದುರಾ ಗಿಲ್ಲ!"

ಯಶಸ್ವೀ ಏಕಸ್ವ ಗುಮಾಸ್ತ, ಬುಧ ಕಕ್ಷೆಯ ಜಟಿಲ ಸೇಯ್ಗೆಗಳನ್ನು ಎಳೆ ಎಳೆಯಾಗಿ ಬಿಡಿ ಸಿದವ, ಪರಮಾಣುರಹಸ್ಯವನ್ನು ಭೇದಿಸಿದವ, ವಿಶ್ವದರ್ಶನಕ್ಕೆ ಹೊಸ ಕಿಟಕಿ ತೆರೆದವ ಇಂಥವ ನೆದುರು ಡಬ್ಬಿಯ ಸಿಸೇಮೆ ತೆರೆಯದಿದ್ದೀತೇ?

ತಾಯಿಯ ಕೊನೆಗಳಿಗೆ

ಮನೆ ನೆಮ್ಮದಿ ಆಯಿತು. ಆದರೆ ಮನವರಳ ಲಿಲ್ಲ. ಏಡಿಗಂತಿ ಬೇನೆಯಿಂದ ನವೆಯುತ್ತಿದ್ದ ತಾಯಿ ಮಗನೆದುರೇ ಗಳಿಗೆ ಎಣಿಸುತ್ತಿದ್ದರು.

ಮಿತ್ರ ಮ್ಯಾಕ್ಸ್ ಬಾರ್ನ್ ಅವರಿಗೆ (೧೮೮೨–೧೯೭೦, ಜರ್ಮನ್–ಬ್ರಿಟಿಷ್ ಭೌತವಿಜ್ಞಾನಿ, ಶಕಲಸಿದ್ಧಾಂತದ ಗಣಿತ ತಳಹದಿಯನ್ನು ಭದ್ರ ಪಡಿಸುವುದರಲ್ಲಿ ಪ್ರಮುಖ ಪಾತ್ರಧಾರಿ, ೧೯೫೪ರ ನೋಬೆಲ್ ಪಾರಿತೋಷಕ ವಿಜೇತ) ಮಾರ್ಚ್ ೧೯೨೦ರಲ್ಲಿ ಒಂದು ಕಾಗದ ಬರೆದರು. ತಾವು ಯಾವ ಊರು ಸೇರಬೇಕು ಎಂಬುದರ ಬಗ್ಗೆ ಬಾರ್ನ್ ಅ ಮೊದಲು ಐನ್‌ಸ್ಟೈನರ ಸಲಹೆ ಕೋರಿದ್ದರು. ಇವರನ್ನು ಕೊರೆಯುತ್ತಿದ್ದ ಮನದಳಲು ಈ ಕಾಗ ದದಲ್ಲಿ ಪಡಿಮೂಡಿದೆ."...ವ್ಯಕ್ತಿ ಎಲ್ಲಿ ನೆಲಸು ತ್ತಾನೆ ಎಂಬುದು ಮುಖ್ಯವಲ್ಲ. ಅತಿಯಾಗಿ ವಿಚಾರ ಮಾಡುವುದನ್ನು ಬಿಟ್ಟು ಸಹಜ ಪ್ರವೃ ತ್ತಿಯನ್ನು ಅನುಸರಿಸುವುದೇ ಉತ್ತಮ ಮಾರ್ಗ. ಅಲ್ಲದೆ ಎಲ್ಲಿಯೂ ಬೇರುಗಳಿಲ್ಲದ ವ್ಯಕ್ತಿಯಾದ ನಾನು ನಿಮಗೆ ಯುಕ್ತ ಸಲಹೆ ನೀಡಲು ಸಮ ರ್ಥನೆಂದು ಭಾವಿಸಿಲ್ಲ. ನನ್ನ ತಂದೆಯವರ ದೇಹ ಶೇಷಗಳು ಮಿಲಾನಿನಲ್ಲಿ ಹುದುಗಿವೆ. ಇದೇ ಕೆಲವು ದಿನಗಳ ಹಿಂದೆ ನನ್ನ ತಾಯಿಯವರನ್ನು ಇಲ್ಲಿ ಮಣ್ಣುಗೂಡಿಸಿದ್ದೇನೆ. ಸ್ವತಃ ನಾನೇ ಹಿಂದೆ ಮುಂದೆ ನೆಲೆ ಬದಲಾಯಿಸುತ್ತ ಬಂದಿದ್ದೇನೆ, ಪ್ರತಿಯೊಂದು ಕಡೆಯೂ ಹೊರಗಿನವನೇ ಆಗಿದ್ದೇನೆ. ನನ್ನ ಮಕ್ಕಳು ಸ್ವಿಟ್ಜರ್ಲೆಂಡಿನಲ್ಲಿದ್ದಾರೆ. ಅವರನ್ನು ನೋಡಬೇಕೆಂದು ಬಯಸಿದಾಗ ಸಾಕಷ್ಟು

ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ತನಗೆ ಸಮೀಪ ಮತ್ತು ಪ್ರಿಯರಾದವರ ಜೊತೆ ತಾನಿದ್ದಲ್ಲೇ ಮನೆ ಎಂಬುದು ನನ್ನಂಥ ಒಬ್ಬ ವ್ಯಕ್ತಿಯ [illegible] ನೀಡಲು - ಅಧಿಕಾರ ಪಡೆದಿಲ್ಲ."

ನ್ಯೂಟನ್ ಸೋತನೇ ?

೧೯೧೯ ನವಂಬರ್ ತಿಂಗಳು. ವೈರಿರಾಷ್ಟ್ರ ಜರ್ಮನಿ ಯುದ್ಧದಲ್ಲಿ ಸೋತು ಶರಣಾಗತವಾದ [illegible] ಭರ್ಜರಿ ಶೀರ್ಷಿಕೆಯಲ್ಲಿ ಮಿಂಚಿಸಿದೆ "ಧನ್ಯ ಹುತಾತ್ಮರು. ಶಸ್ತ್ರ ವಿರಾಮ ದಿನಾಚರಣೆ. ದೇಶಾದ್ಯಂತ ರೇಲು ಸಂಚಾರದ ನಿಲುಗಡೆ."

ಈ ಅತ್ಯಾನಂದಕರ ಸುವಾರ್ತೆ ಪ್ರಕಟವಾಗಿದ್ದ [illegible] ಒಂದು 'ಬಿಸಿಸುದ್ದಿ' ಇಷ್ಟೆ ಗಣ್ಯಸ್ಥಾನ ಪಡೆದಿತ್ತು "[illegible] ಧೂಳಿ ಧೂಸರಿತ."

[illegible] ಧಾವಿಸುವುದೆಂದು ಭಾವಿಸಲಾಗಿದ್ದ ಬೆಳಕನ್ನು ಐನ್‌ಸ್ಟೈನ್ 'ಬಗ್ಗಿಸಿ'ದ್ದರು.


[illegible] ದಾಗಿ ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತ ಕಣಿ [illegible] ಕ್ಷೇತ್ರ 'ಹಿಡಿದು' ತನ್ನೆಡೆಗೆ [illegible] ಮಾನವಿದು — ಸಾಗರೋತ್ತರ[illegible] ಸುತ ಹನುಮಂತನನ್ನು ಸಿಂಹಿಕೆ ಸೆಳೆದಂತೆ, ಸಿದ್ಧಾಂತ ಬಾಗುಕೋನವನ್ನು ಕೂಡ ಗಣಿಸಿತ್ತು.

ವಿಜ್ಞಾನದಲ್ಲಿ ಪ್ರಯೋಗಪ್ರೊಂದೆ ಊಹನೆಯ ನಿಕಷ. ಭೂಮಿಯಲ್ಲಿ ಒದಗುವ ಯಾವ ನೈಸರ್ಗಿಕ [illegible] ಹಿಮಾಲಯ ಪಂಕ್ತಿಯಂಥ ಬೆಟ್ಟಗಳ ಹಿರಿದಂಡು [illegible] ಲಗಾಮು ಜಗ್ಗುವುದರಲ್ಲಿ ಯಶಸ್ವಿ ಆಗದು. ಮನುಷ್ಯನಿರ್ಮಿತ ಕೃತಕ ಕ್ಷೇತ್ರವಂತೂ ಅತಿ [illegible] ಆದಾವು ಅಷ್ಟೆ. ಆದರೆ ಸೂರ್ಯಸಾಮೀಪ್ಯದಲ್ಲಿ ಒಂಟಿ ಕಿರಣದ ಬಾಗನ್ನು ಅರಸುವುದೂ ಉಪ್ಪಿನ ಮೊಳದಿಂದ ಕಡಲಾಳವನ್ನು ಅಳೆಯುವುದೂ ಒಂದೇ.

[illegible] ಎಣಿಕೆಗೆ ನಿಲುಕದ ನಕ್ಷತ್ರಗಳ ಬೆಳಕಿನ ಹುಡಿಗಳು ಒಟ್ಟಾಗಿ ನಮ್ಮಲ್ಲಿ ಬಗೆ ಬಗೆಯ ರಂಗವಲ್ಲಿಗಳನ್ನು ಬಿಂಬಿಸುತ್ತವೆ. ಇವು ದೀರ್ಘಕಾಲ ಬದಲಾಗವು. ಹೀಗಾಗಿ ಸಮೀಪಕಾಯಗಳಾದ ಚಂದ್ರ, ಗ್ರಹ, ಸೂರ್ಯ ಮುಂತಾದವು ನಕ್ಷತ್ರರಂಗವಲ್ಲಿಯುತ ಆಕಾಶತೆರೆಯ ಮೇಲೆ ಸರಿಯುತ್ತಿರುವಂತೆ ಭಾಸವಾಗುತ್ತದೆ. [illegible] ವೀಕ್ಷಣೆಯಿಂದ ಗಣನೆಯ ಸತ್ಯತೆಯನ್ನು ರುಜುಪಡಿಸಬಹುದು. ಪೂರ್ಣ ಸೂರ್ಯಗ್ರಹಣ ಮುಹೂರ್ತದಲ್ಲಿ ಸೂರ್ಯನ ಒತ್ತಿಗೆ ಹಿನ್ನೆಲೆಯಲ್ಲಿರುವ ನಕ್ಷತ್ರ ಚಿತ್ರಗಳನ್ನು ಛಾಯಾಚಿತ್ರೀಕರಿಸುವುದು ಸಾಧ್ಯ. ಈ ಚಿತ್ರಗಳಿಂದ, ಆ ಮುಹೂರ್ತದಲ್ಲಿ ಭೂಮಿಗೆ ಕಾಣುವಂತೆ, ನಕ್ಷತ್ರಸ್ಥಾನಗಳನ್ನು ನಿಷ್ಕೃಷ್ಟವಾಗಿ ನಿರ್ಧರಿಸಬಹುದು. ಇವನ್ನು ಅವೇ ನಕ್ಷತ್ರಗಳ ನಿಜಸ್ಥಾನಗಳೊಂದಿಗೆ ಹೋಲಿಸಿದಾಗ ಎರಡರ ನಡುವೆ ತುಸುವಾದರೂ ವ್ಯತ್ಯಾಸ ಕಂಡು [illegible] ಈ ಸ್ಥಾನಪಲ್ಲಟದ ಕಾರಣ ಸೂರ್ಯನ [illegible] ಸೂರ್ಯನ ಗುರುತ್ವಾಕರ್ಷಣ ಕ್ಷೇತ್ರದ ಕಾರಣವಾಗಿ [illegible] ಬಗ್ಗುತ್ತವೆ [illegible] ದೃಢಪಡುತ್ತದೆ.

[illegible] ತೆರವು ಮಾಡಿದ ಸ್ಥಾನಕ್ಕೆ [illegible] ಗೊಂಡರು) ಹೇಳುತ್ತಾರೆ "ಐನ್‌ಸ್ಟೈನರು [illegible]

ಒಸಡುಗಳ ತೊಂದರೆಯ ಮೊದಲ ಗುರುತುಗಳು



ಪ್ಲೇಕ್ (Plaque)
ಹಲ್ಲು ಮತ್ತು ಒಸಡುಗಳ ಸುತ್ತಲೂ, ಯಾವಾಗಲೂ ಕಂಡುಬರುವ, ಅದೃಶ್ಯವಾದ ಬ್ಯಾಕ್ಟೀರಿಯಾ-ಪೊರೆ. ಅಲಕ್ಷ್ಯ ಮಾಡಿದರೆ ಇದೇ ದಂತಮಲ (ಟಾರ್ಟರ್) ಆಗುತ್ತದೆ.

ಟಾರ್ಟರ್
ಹಲ್ಲುಗಳ ತಳದಲ್ಲಿ ಸೇರಿಕೊಂಡ ದಂತ ಮಲ. ಇದು ನಿಮ್ಮ ಒಸಡುಗಳನ್ನು ಕೆರಳಿಸಿ ಬಾಧಿಸುವಂತೆ ಮಾಡುತ್ತದೆ. ನಂತರ ಒಸಡು ಮತ್ತು ಎಲುಬು ಹಿಂದೆ ಸರಿದಾಗ, ಹಲ್ಲು ಬೀಳಲೂಬಹುದು.

ಒಸಡುಗಳಿಂದ ರಕ್ತ ಬರುವುದು
ಹಲ್ಲು ಉಜ್ಜುವಾಗ ದುರ್ಬಲವಾದ ಮತ್ತು ಸ್ಪಂಜಿನಂತಹ ಒಸಡುಗಳಿಂದ ರಕ್ತವು ಸ್ರವಿಸಬಹುದು. ಇದರಿಂದ ನೋವಾಗುವುದಿಲ್ಲವಾದರೂ, ರಕ್ತಸ್ರಾವವಾಗುವ ಒಸಡುಗಳು ಗಂಭೀರ ಸಮಸ್ಯೆಗಳನ್ನು ತಂದೊಡ್ಡಬಹುದು.

ಆಕರ್ಷಕ ಚಿತ್ರಗಳ ಬಣ್ಣದ ಪ್ಯಾಕಿನಲ್ಲಿ

ದಂತವೈದ್ಯರು ಹೇಳುತ್ತಾರೆ:

ನಿಯಮಿತವಾಗಿ ಬ್ರಶ್‌ನಿಂದ ಹಲ್ಲುಗಳನ್ನು ಸ್ವಚ್ಛಗೊಳಿಸಿರಿ, ಮತ್ತು ಒಸಡುಗಳನ್ನು ಮಸಾಜು ಮಾಡಿರಿ; ಒಸಡುಗಳ ತೊಂದರೆ ಹಾಗೂ ದಂತಕ್ಷಯದಿಂದ ದೂರ ಇರಿ.

ಹಲ್ಲುಗಳ ಆರೋಗ್ಯ ಸಂರಕ್ಷಣೆಗಾಗಿ, ಪ್ರತಿದಿನ ರಾತ್ರಿ ಮತ್ತು ಮುಂಜಾನೆ ನಿಮ್ಮ ಹಲ್ಲುಗಳನ್ನು ಸರಿಯಾದ ರೀತಿಯಲ್ಲಿ ಸ್ವಚ್ಛಗೊಳಿಸಲು, ಮತ್ತು ಒಸಡುಗಳನ್ನು ಮಸಾಜು ಮಾಡಲು ಫೋರ್‌ಹನ್ಸ್ ಟೂಥ್‌ಪೇಸ್ಟ್ ಉಪಯೋಗಿಸಿರಿ. ಜೊತೆಗೆ ಫೋರ್‌ಹನ್ಸ್ ಡಬಲ್ ಆಕ್ಷನ್ ಟೂಥ್‌ಬ್ರಶ್ ಉಪಯೋಗಿಸಿರಿ. ಯಾಕೆಂದರೆ ಹಲ್ಲುಗಳನ್ನು ಸ್ವಚ್ಛಗೊಳಿಸಲು ಮತ್ತು ಒಸಡುಗಳನ್ನು ಮಸಾಜು ಮಾಡಲು, ಇದನ್ನು ವಿಶೇಷವಾಗಿ ತಯಾರಿಸಲಾಗಿದೆ.



ಒಸಡುಗಳು ಕೆಟ್ಟರೆ, ದೇಹಾರೋಗ್ಯ ಕೆಡುವುದು



ಉಚಿತ! "ನಿಮ್ಮ ಹಲ್ಲುಗಳ ಮತ್ತು ಒಸಡುಗಳ ರಕ್ಷಣೆ." ದಂತ-ಸಂರಕ್ಷಣೆಯ ಬಗ್ಗೆ ಒಂದು ವರ್ಣರಂಜಿತ, ಬೋಧಪ್ರದ ಪುಸ್ತಿಕೆ. ಅಂಚೆ ವೆಚ್ಚಕ್ಕಾಗಿ 20 ಪೈಸೆಯ ಸ್ಟ್ಯಾಂಪನ್ನು ಜೊತೆಗಿಟ್ಟು, ಈ ವಿಳಾಸಕ್ಕೆ ಬರೆಯಿರಿ : ಫೋರ್‌ಹನ್ಸ್ ಡೆಂಟಲ್ ಎಡ್ಯುಕೇಶನ್ ಬ್ಯೂರೋ, ಪೋಸ್ಟ್ ಬ್ಯಾಗ್ ನಂ. 11469, ಡಿಪಾರ್ಟ್‌ಮೆಂಟ್ P-14/156, ಬೊಂಬಾಯಿ 400 020 ಬೇಕಾದ ಭಾಷೆಯನ್ನು ನಮೂದಿಸಿ.

ಫೋರ್‌ಹೆನ್ಸ್
ದಂತವೈದ್ಯರಿಂದ ಸೃಷ್ಟಿಸಲ್ಪಟ್ಟ ಟೂಥ್‌ಪೇಸ್ಟ್

ದಿಂದ ಬಳಸುವ ಉಪಮೆಯು ಮಾತಿನಲ್ಲಿ ಹೇಳುವು ದಾದರೆ ನವಸಿದ್ಧಾಂತಗಳನ್ನು ಅಂದದ ಉಡುಪು ಗಳಿಗೆ ಹೋಲಿಸಬಹುದು. ಇವು ಉಡುಪು ತಯಾರಕರ ಗಾಜಿನ ತೆರೆಕಪಾಟುಗಳಲ್ಲಿ ಪ್ರದರ್ಶಿತ ವಾಗಿ ಎಲ್ಲ ಮಹಿಳೆಯರ ಕಣ್ಣುಗಳನ್ನೂ ಸೆಳೆಯು ತ್ತವೆ. ಸುರಸುಂದರಿಯೊಬ್ಬಳು ಇಂಥ ಪೋಷಾ ಕನ್ನು ಕೊಳ್ಳಲು ಬಯಸುತ್ತಾಳೆ. ಆದರೆ ಇದು ಅವಳಿಗೆ ಒಪ್ಪವಾದೀತೇ? ಅವಳ ಸೌಂದರ್ಯವನ್ನು ಮೆರುಗಿಸೀತೇ ? ಇಲ್ಲ ಮಸುಳಿಸೀತೇ? ಇದನ್ನ ವಳು ತೊಟ್ಟು ಉಜ್ಜ್ವಲ ದೀಪಗಳ ಪ್ರಕಾಶದಲ್ಲಿ ಮೆರೆವ ತನಕ ಇತ್ಯರ್ಥವಾಗದು. ಐನ್‌ಸ್ಟೈನರ ಸಿದ್ಧಾಂತ (ಬೆಳಕಿನ ಬಗ್ಗುವಿಕೆ) ಅಂಗಡಿಯ ತೆರೆ ಕಪಾಟಿನಲ್ಲಿ ಇರಿಸಲಾದ ತೊಡದಿದ್ದ ಪೋಷಾಕು. ಸೂರ್ಯಗ್ರಹಣವೇ ಇದನ್ನು ತೊಡಲು ಒದಗಿ ಬಂದ ಮೊದಲ ಅವಕಾಶ."

ಗಗನ ಬಯಲಾಟ

ಇಂಗ್ಲೆಂಡಿನ ವಿಜ್ಞಾನಿಗಳು ಪ್ರಯೋಗ ಪರಿಣ ತಮತಿಗಳು. ಅಡಚಣೆ ಕಡಿದಾದಷ್ಟೂ ಹಿಗ್ಗುವ ಹುಮ್ಮಸಿಗರು. ಬೆಳಕಿನ ಬಗ್ಗುವಿಕೆಯ ಪರೀಕ್ಷೆ ಇವರಿಗೆದುರಾದ ಇಂಥ ಒಂದು ಹಿರಿಸವಾಲು. ವಿಖ್ಯಾತ ಇಂಗ್ಲಿಷ್ ಖಗೋಳಜ್ಞಾನಿ ಸರ್ ಆರ್ಥರ್ ಎಡಿಂಗ್ಟನ್ (೧೮೮೨–೧೯೪೪) ಇವರ ಹಿರಿತನದಲ್ಲಿ ತಜ್ಞರ ಒಂದು ಸಮಿತಿ ಮೈದಳೆ ಯಿತು. ಉದ್ದೇಶ: ೧೯೧೯ ಮಾರ್ಚ್ ೨೯ರಂದು ಸಂಭವಿಸಲಿದ್ದ ಪೂರ್ಣಸೂರ್ಯಗ್ರಹಣದ ಛಾಯಾಚಿತ್ರೀಕರಣ, ಅಧ್ಯಯನ ಮತ್ತು ಐನ್‌ಸ್ಟೈನ್‌ಸಿದ್ಧಾಂತದ ತಪಾಸಣೆ. ೧೯೧೮ರ ನವೆಂಬರ್ ೧೧ ರಂದು ಯುದ್ಧವಿರಾಮಕ್ಕೆ ರುಜು ಬಿದ್ದೊ ಡನೆಯೇ ಸಮಿತಿ ಕ್ಷಿಪ್ರ ಕಾರ್ಯೋದ್ಯುಕ್ತವಾಗಿ ತನ್ನ ಯೋಜನೆಯ ವಿವರಗಳನ್ನು ಪ್ರಕಟಿಸಿತು. ವೈರಿ ಜನಾಂಗದ (ಜರ್ಮನಿ) ವಿಜ್ಞಾನಸಿದ್ಧಾಂತ ವನ್ನು ಪರೀಕ್ಷಿಸಲು ಇವರಿಗೇನು ಮಾರಿಹೊಕ್ಕಿದೆ ಎಂದು ಸ್ವಜನಾಂಗದವರು (ಇಂಗ್ಲೆಂಡ್) ಟೀಕಿ ಸಿದ್ದುಂಟು. ಆದರೆ ಸ್ವತಃ ಕ್ವೇಕರ್ ಪಂಥದ (ಯುದ್ಧವನ್ನು ವಿರೋಧಿಸುವ, ಶಾಂತಿಯನ್ನು ಪ್ರತಿಪಾದಿಸುವ, ಸರಳ ಜೀವನವನ್ನೂ ಗಭೀರ ಚಿಂತನೆಯನ್ನೂ ಬೆಂಬಲಿಸುವ ಕ್ರಿಶ್ಚಿಯನ್ ಸ್ನೇಹಿತರ ಕೂಟ) ಎಡಿಂಗ್ಟನ್ ಈ ಕುಹಕಿಗಳ ಅಂಬೋಣಗಳಿಗೆ ಸೊಪ್ಪು ಹಾಕಲಿಲ್ಲ. ಅಂತಾ ರಾಷ್ಟ್ರೀಯವೂ ಸ್ನೇಹಶೀಲವೂ ಆದ ವಿಜ್ಞಾನ ಸಿದ್ಧಾಂತಗಳು, ಹೇಗೆ ಸೂರ್ಯರಶ್ಮಿ ವಾಯು ಮಂಡಲ ಮುಂತಾದವೋ ಹಾಗೆ, ಮಾನವ ಪರಂಪ ರೆಯ ಸೊತ್ತು, ಇಲ್ಲಿ ಮಿತ್ರ ಅಥವಾ ಸ್ವಕೀಯ ವಿಜ್ಞಾನ, ವೈರಿ ಅಥವಾ ಪರಕೀಯ ವಿಜ್ಞಾನ ಎಂಬ ವಿಭೇದೀಕರಣ ಸಲ್ಲದೆಂಬುದಾಗಿ ಇವರು ನಂಬಿದ್ದರು.

ಪೂರ್ಣ ಸೂರ್ಯಗ್ರಹಣ ಘಟಿಸುವಾಗಲೂ ಅದು ಗೋಚರಿಸುವುದು ಭೂಮಿಯ ಅತಿ ಸೀಮಿತ ಸ್ಥಳಗಳಲ್ಲಿ ಮಾತ್ರ. ಅಲ್ಲಿಯೂ ಪೂರ್ಣ ತೆಯ ಅವಧಿ ಕಿರಿದು ಮಾತ್ರ. ಆಗಲೂ ಹವೆ ಕೈಗೊಟ್ಟರೆ ಭೂಮಿಬಂಧಿತ ವಿಜ್ಞಾನಿ ಥೇಟ್ ಧೃತರಾಷ್ಟ್ರನೇ.

ಇಂಗ್ಲೆಂಡಿನ ಅನ್ವೇಷಕರು ಪೂರ್ಣ ಗ್ರಹಣ ಗೋಚರಿಸುವ ಎರಡು ದೂರ ದೂರದ ನೆಲೆಗಳಿಗೆ ವಲಸೆ ಹೋದರು. ಮೊದಲನೆಯ ತಂಡದವರು ಬ್ರೆಜಿಲ್ಲಿಗೆ, ಎರಡನೆಯ ತಂಡದವರು ಪಶ್ಚಿ ಮಾಫ್ರಿಕದ ಗಿನೀ ಕಡಲ್ಗಾಲುವೆಯಲ್ಲಿನ ಪ್ರಿನ್ಸಿಪೀ ನಡುಗುಡ್ಡೆಗೆ. ಎರಡನೆಯದರ ನಾಯಕತ್ವ ವನ್ನು ಎಡಿಂಗ್ಟನ್ನರೇ ವಹಿಸಿಕೊಂಡಿದ್ದರು.

ಪ್ರಿನ್ಸಿಪೀ ತಂಡ ಯೋಗ್ಯ ಸ್ಥಳದಲ್ಲಿ ಒಂದು ತಿಂಗಳ ಮೊದಲೇ ಠಾಣೆ ಹೂಡಿತು, ಸಲಕರಣೆ ಗಳನ್ನು ಸಜ್ಜುಗೊಳಿಸಿತು, ಗಗನ ಮಾಯಾಲಾಂದ್ರದ ನೆರಳು ಬೆಳಕಿನಾಟ ನೋಡಿ ಛಾಯಾಚಿತ್ರೀಕರಿ ಸಲು ಸಿದ್ಧವಾಯಿತು. ಕೊನೆಗೂ ಗಳಿಗೆ ಬಟ್ಟಲು ತುಂಬಿತು. ವೃಷಭರಾಶಿಯಲ್ಲಿ ಹೈಯೆಡೀಸ್ಸ್ ನಕ್ಷತ್ರಗಳ (ಕೃತ್ತಿಕಾ–ರೋಹಿಣಿ ರೇಖೆಯ ಮೇಲೆ ರೋಹಿಣಿಗೆ ಹತ್ತಿರದಲ್ಲಿವೆ) ಹಿನ್ನೆಲೆ ಯಲ್ಲಿ ಸೂರ್ಯನಿದ್ದಾಗ ಗ್ರಹಣಾರಂಭ ವಾಯಿತು. ಆದರೆ ದುರ್ದೈವ. ಹವೆ ರಾಯ ಸಹಕರಿಸಲಿಲ್ಲ. ಈಗ ಮೋಡಗಳ ತೆಳುಬುರುಕಿ ಮುಸುಕಿತು. ದಟ್ಟವಾಯಿತು, ಹಠಾ ತ್ತನೆ ಅವಕುಂಠನ ಹರಿಯಿತು, ಬಾನಬಯಲಾಟದ ಪೂರ್ಣದರ್ಶನವಾಯಿತು. ಮತ್ತೆ ಬಂದಿತು ಆನೆಗಳ ದಂಡು. ಪೂರ್ಣತೆಯ ಅವಧಿ ೩೦೨



ಕಾಲುಗಂಟಿನ
ಉಳುಕೇ?
ಅಯೊಡೆಕ್ಸ್
ಗುಣಪಡಿಸುವ
ಮುಲಾಮು ತಿಕ್ಕಿರಿ.
ಬೇರೆ ಮುಲಾಮುಗಳು ನೋವನ್ನು ಉಪಶಮನ ಗೊಳಿಸಬಹುದು. ಆದರೆ ಅಯೊಡೆಕ್ಸ್ ಉಪಶಮನ ಗೊಳಿಸುತ್ತಲೇ ನೋವನ್ನು ಗುಣಪಡಿಸುತ್ತದೆ. ಏಕೆಂದರೆ ಅದರಲ್ಲಿ ಅಯೋಡಿನ್ ಇದೆ.
ಸ್ನಾಯು ಮತ್ತು ಸಂದು ನೋವುಗಳಿಗೆ ಏಕಮಾತ್ರ ಮುಲಾಮು—ಅಯೊಡೆಕ್ಸ್.
IODEX
Methyl Salicylate
ಅಯೊಡೆಕ್ಸ್ ಹಚ್ಚಿರಿ, ಮತ್ತೆ ಓಡಾಡಿರಿ.
ಲಿಂಟಾಸ್•IODEX.3-75 KN

ಸೆಕೆಂಡುಗಳು ಮಾತ್ರ. ೨ರಿಂದ ೨೦ ಸೆಕೆಂಡುಗಳ ತನಕದ ಒಟ್ಟು ಹದಿನಾರು ಛಾಯಾಚಿತ್ರಗಳನ್ನು ಒಡ್ಡಲಾಯಿತು. ಎಡಿಂಗ್ಟನ್ನರು ಈ ರೋಮಾಂಚಾನುಭವವನ್ನು ಒಂದು ಕಗ್ಗದಲ್ಲಿ ಹೆಪ್ಪುಗಟ್ಟಿಸಿದ್ದಾರೆ:

ಮೇಲೂ ಕೆಳಗೂ ಒಳಗೂ ಹೊರಗೂ
ನೋಡೋ! ನಡೆದಿದೆ ಜಂಜಾಟ –
ಇದು ಅಲ್ಲೋ ಬರಿದೇ ಸೆರಳಾಟ:
ಪೆಟ್ಟಿಗೆಯೊಳಗಡೆ ನೇಸರೆ ದೀವಿಗೆ
ಉಡುಪತಿ ತೆರೆಯನು ಪಿಡಿದಿಹ ತಾರೆಗೆ
ಕಾಣೋ! ಮಾಂತ್ರಿಕರಾಟೋಟ!

ಉಭಯ ಅನ್ವೇಷಕ ತಂಡಗಳಿಂದಲೂ ಲಭಿಸಿದ ಛಾಯಾಚಿತ್ರಗಳ ಕೂಲಂಕಷಾಧ್ಯಯನ ಸಾಕಷ್ಟು ದೀರ್ಘಕಾಲವನ್ನೆ ತೆಗೆದುಕೊಂಡಿತು. ಸನ್ನಿವೇಶ ಹಾಗಿತ್ತು: ಕೋನಸೆಕೆಂಡಿನೊಡನೆ (ಕೋನದ ಒಂದು ಡಿಗ್ರಿಯ ೩೬೦೦ನೆಯ ಅಂಶ) ವ್ಯವಹಾರ; ಗಣಕವಾಗಲಿ (computer) ಎಲೆಕ್ಟ್ರಾನಿಕ್ ಗುಣನಕಾರಿಯಾಗಲಿ (electronic calculator) ಎಲೆಕ್ಟ್ರಾನ್ ಸೂಕ್ಷ್ಮದರ್ಶಕವಾಗಲಿ (electron microscope) ಇರದಿದ್ದ ದಿನಗಳು; ಯುಗಪ್ರವರ್ತಕ ನೂತನ ಸಿದ್ಧಾಂತದ ಭವಿಷ್ಯ ಈ ಪ್ರಯೋಗ ಫಲಿತಾಂಶದಿಂದ ನಿರ್ಧರಿತವಾಗಲಿತ್ತು. ಆದರೆ ಸ್ವತಃ ಐನ್‌ಸ್ಟೈನರಿಗೆ ತಮ್ಮ ಊಹನೆಯ ಖಚಿತತೆಯ ಬಗ್ಗೆ ಲೇಶವೂ ಸಂದೇಹವಿರಲಿಲ್ಲ.

ಬೆಳಕು ಬಗ್ಗಿತು

ಮಾನವಮನಸ್ಸಿನ ಪರಮಾದ್ಭುತ ಸೃಷ್ಟಿಶೀಲತೆಯನ್ನು ಕೊನೆಗೂ ವೀಕ್ಷಣೆಗಳು ದೃಢೀಕರಿಸಿದುವು. ಊಹನೆ ಹೇಳಿದ್ದು ೧.೭೫ ಕೋನಸೆಕೆಂಡುಗಳಾದರೆ ವೀಕ್ಷಣೆ ಕಂಡದ್ದು ೧.೬೪ ಕೋನ ಸೆಕೆಂಡುಗಳು. ಈ ಅಸಂತಾಲ್ಪ ವ್ಯತ್ಯಾಸ ಪ್ರಯೋಗಸಹಜ ದೋಷವೇ ವಿನಾ ಊಹನೆಯದಲ್ಲ.

ಇಂಗ್ಲೆಂಡಿನ ಪ್ರತಿಷ್ಠಿತ ವಿಜ್ಞಾನ ಸಂಸ್ಥೆಗಳಾದ ರಾಯಲ್ ಸೊಸೈಟಿ ಮತ್ತು ರಾಯಲ್ ಆಸ್ಟ್ರಾನಾಮಿಕಲ್ ಸೊಸೈಟಿ ನವಂಬರ್ ೬ರಂದು ಸಂಯುಕ್ತಾಧಿವೇಶನ ಕೂಡಿ ಐನ್‌ಸ್ಟೈನ್ ಸಿದ್ಧಾಂತದ ಪ್ರಾಯೋಗಿಕ ಯಶಸ್ಸನ್ನು ಘೋಷಿಸಿದುವು. ರಾಯಲ್ ಸೊಸೈಟಿಯ ಅಧ್ಯಕ್ಷ ಸರ್ ಜೆ.ಜೆ. ತಾಮ್ಸನ್ (೧೮೫೬–೧೯೪೦): ಇಂಗ್ಲೆಂಡಿನ ಭೌತವಿಜ್ಞಾನಿ, ಉಪಪರಮಾಣವಿಕ ಕಣವಾದ ಎಲೆಕ್ಟ್ರಾನನ್ನು ಆವಿಷ್ಕರಿಸಿ ತನ್ಮೂಲಕ ಪರಮಾಣುಲೋಕವನ್ನು ಅನಾವರಣಗೊಳಿಸಿದಾತ, (೧೯೦೬ರ ನೊಬೆಲ್ ಪ್ರಶಸ್ತಿವಿಜೇತ) ಅಧಿವೇಶನವನ್ನು ಉದ್ಘಾಟಿಸಿದರು "ಮಾನವ ಚಿಂತನೆಯ ಇತಿಹಾಸದಲ್ಲಿನ ಪರಮಶ್ರೇಷ್ಠ ಸಿದ್ಧಿಗಳ ಪೈಕಿ ಐನ್‌ಸ್ಟೈನರ ಸಿದ್ಧಾಂತ ಒಂದು. ಪ್ರತ್ಯೇಕವಾಗಿ ನಿಂತಿರುವ ಒಂದು ದ್ವೀಪದ ಆವಿಷ್ಕಾರ ಇದಲ್ಲ: ನವನೈಜ್ಞಾನಿಕ ಭಾವನೆಗಳ ಅಖಂಡ ಖಂಡವೇ ಇದು. ಗುರುತ್ವಾಕರ್ಷಣೆಯನ್ನು ಕುರಿತು ನ್ಯೂಟನ್ ತನ್ನ ತತ್ತ್ವಗಳನ್ನು ಪ್ರತಿಪಾದಿಸಿದ ತರುವಾಯ ಮೂಡಿರುವ ಅತ್ಯಂತ ಮಹತ್ತ್ವಪೂರ್ಣ ಆವಿಷ್ಕಾರವಿದು!"

ಐನ್‌ಸ್ಟೈನ್ ಬೆಳಕನ್ನು "ಬಗ್ಗಿಸಿದ್ದರು; ಇಂಗ್ಲೆಂಡಿನ ಆಸ್ತಿ ಮತ್ತು ಅಭಿಮಾನದ ಮೂರ್ತಿ ನ್ಯೂಟನ್ನರನ್ನು 'ಸೋಲಿಸಿದ್ದರು." ಆದರೂ ಉದಾರಿಗಳಾದ ಆಂಗ್ಲರು ಮನುಕುಲಕ್ಕೆ ಒಂದೇ. ವಿಜ್ಞಾನಿಗಳು ಸ್ವಾಭಾವಿಕವಾಗಿ ಮಾನವಕೃತ ಸೀಮೆಗಳನ್ನು ಮೀರುವವರು ... ...

ನ್ಯೂಟನ್ ಮಹಾಶಯ

ಐನ್‌ಸ್ಟೈನ್ ಒಬ್ಬ ಮಹಾ ... ... ಮುಂದಿಗೆ ಇವರ ಸಾಧನೆ ... ಇತ್ತು? ಲಂಡನಿನ ... ... ವಿವರಣೆಯನ್ನು ಬರೆದುಕೊಡಬೇಕೆಂದು ಇವರನ್ನೇ ಪ್ರಾರ್ಥಿಸಿತು. ೧೯೧೯ರ ನವಂಬರ್ ೨೮ರ ಸಂಚಿಕೆಯಲ್ಲಿ ಐನ್‌ಸ್ಟೈನರ ಲೇಖನ ಪ್ರಕಟವಾಯಿತು. ಅದೇ ಲೇಖನದಲ್ಲಿ ಇವರು ತಮ್ಮ ಅಭಿಮಾನಮೂರ್ತಿಯೂ ವಿಜ್ಞಾನ ಸೀಮಾಪುರುಷನೂ ಆದ ನ್ಯೂಟನ್ನನಿಗೆ ಗೌರವ ಸಮರ್ಪಿಸಿದ್ದಾರೆ "ಜ್ಞಾನಾನ್ವೇಷಕರ ನಡುವಿನ ಅಭಿಪ್ರಾಯ ವಿನಿಮಯ ಯುದ್ಧ ಕಾರಣದಿಂದ ಶೋಚನೀಯವಾಗಿ ಮುರಿದು ಬಿದ್ದ ಬಳಿಕ ಈಗ ಒದಗಿ ಬಂದಿ

ರುವ ಅವಕಾಶವನ್ನು ನಾನು ಸ್ವಾಗತಿಸುತ್ತ ಇಂಗ್ಲೆಂಡಿನ ಖಗೋಳವಿಜ್ಞಾನಿಗಳಿಗೂ ಭೌತ ವಿಜ್ಞಾನಿಗಳಿಗೂ ನನ್ನ ಸಂತೋಷದ ಮತ್ತು ಕೃತಜ್ಞತೆಯ ಭಾವಗಳನ್ನು ನಿವೇದಿಸುತ್ತೇನೆ. ಯುದ್ಧ ದಿನಗಳಂದು ನಿಮ್ಮ ಶತ್ರುಗಳ ನಾಡಿನಲ್ಲಿ ಪರಿಪೂರ್ಣಗೊಳಿಸಲ್ಪಟ್ಟು ಪ್ರಕಟಿಸಲಾದ ಸಿದ್ಧಾಂತದ ಪರಿಣಾಮಗಳನ್ನು ಪರೀಕ್ಷಿಸಲು ನಿಮ್ಮ ಅಗ್ರಗಣ್ಯ ವಿಜ್ಞಾನಿಗಳು ಕಾಲ ಮತ್ತು ಶ್ರಮ ವ್ಯಯಿಸಿದ್ದಾರೆ. ಅಲ್ಲದೆ ನಿಮ್ಮ ವಿಜ್ಞಾನ ಸಂಸ್ಥೆಗಳು ಈ ಪರೀಕ್ಷೆಗಾಗಿ ಹಣ ಹೂಡಲು ಒಮ್ಮತದಿಂದ ಮುಂಬರಿದಿವೆ. ವೈಜ್ಞಾನಿಕ ಕಾರ್ಯವನ್ನು ಕುರಿತಂತೆ ನಿಮ್ಮ ದೇಶದ ಉನ್ನತ ಹಾಗೂ ಭವ್ಯ ಪರಂಪರೆಗಳಿಗೆ ಅನುಗುಣವಾಗಿಯೇ ಈ ಕೆಲಸಗಳು ನಡೆದಿವೆ ಎಂಬುದನ್ನು ನಾನು ಬಲ್ಲವನಾಗಿದ್ದೇನೆ… ಒಂದು ವಿಚಾರ. ನ್ಯೂಟನ್ ಮಹಾಶಯನ ಮೇರು ಕೃತಿಯನ್ನು ಸಾಪೇಕ್ಷತಾ ಸಿದ್ಧಾಂತವಾಗಲಿ ಬೇರಾವುದೇ ಸಿದ್ಧಾಂತವಾಗಲಿ ಪ್ರತಿಸ್ಥಾಪಿಸಬಹುದೆಂದು ಯಾರೂ ಭಾವಿಸದಿರಲಿ. ನೈಸರ್ಗಿಕ ತತ್ತ್ವಶಾಸ್ತ್ರದ ವಲಯದಲ್ಲಿ ಆ ಮಹಾಶಯರ ಗಂಭೀರ ಹಾಗೂ ಪರಿಶುಭ್ರ ಭಾವನೆಗಳು ನಮ್ಮ ಸಮಸ್ತ ಆಧುನಿಕ ಪರಿಕಲ್ಪನಾತ್ಮಕ ಸಂರಚನೆಯ ಭದ್ರ ಬುನಾದಿಯಾಗಿ ಸದಾಕಾಲ ತಮ್ಮ ವಿಶಿಷ್ಟ ಮಹತ್ವವನ್ನು ಉಳಿಸಿಕೊಂಡೇ ಕೊಳ್ಳುತ್ತವೆ."

ಇದೇ ಲೇಖನದ ಕೊನೆಯಲ್ಲಿ ಇವರು ಸ್ವಂತ ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆ ಒಂದು ವಿಚಿತ್ರ ಟಿಪ್ಪಣಿಯನ್ನು ಕೂಡ ಸೇರಿಸಿದ್ದರು "ನನ್ನ ಬದುಕು ಮತ್ತು ವ್ಯಕ್ತಿ ಇವನ್ನು ಕುರಿತಂತೆ ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನದಲ್ಲಿನ ಕೆಲವು ಹೇಳಿಕೆಗಳು ಆ ಲೇಖಕರ ಕಲ್ಪನಾವಿಲಾಸದ ಕೊಡುಗೆಗಳು. ಓದುಗನ ಮನೋರಂಜನೆಗೋಸ್ಕರ ಸಾಪೇಕ್ಷತಾತತ್ತ್ವದ ಅನ್ವಯ ಹೇಗಾಗಿದೆ ಎಂಬುದಕ್ಕೆ ಆ ಲೇಖನವೂ ಒಂದು ನಿದರ್ಶನ. ಇಂದು ನನ್ನನ್ನು ಜರ್ಮನಿಯಲ್ಲಿ 'ಜರ್ಮನ್ ಪ್ರಭೃತಿ' ಮತ್ತು ಇಂಗ್ಲೆಂಡಿನಲ್ಲಿ 'ಸ್ವಿಸ್ ಯೆಹೂದ್ಯ' ಎಂಬುದಾಗಿ ವರ್ಣಿಸಲಾಗುತ್ತಿದೆ. ಎಂದಾದರೂ ನಾನು ಅನಿಷ್ಟ ವ್ಯಕ್ತಿ ಎಂಬ 'ಖ್ಯಾತಿ' ಪಡೆದು ಪರಿಸ್ಥಿತಿ ತಿರುಗಾಮುರುಗಾ ಆದರೆ ಆಗ ತದ್ವಿಪರೀತವಾಗಿ ನಾನು ಜರ್ಮನರಿಗೆ 'ಸ್ವಿಸ್ ಯೆಹೂದ್ಯ'ನೂ ಇಂಗ್ಲಿಷರಿಗೆ 'ಜರ್ಮನ್ ಪ್ರಭೃತಿ'ಯೂ ಆಗಿರುತ್ತೇನೆ." ಇದು ಪ್ರವಾದಿ ವಾಣಿ ಆಯಿತು.

ಖುದ್ದು ಐನ್‌ಸ್ಟೈನರನ್ನು ಸೋಲು ಗೆಲುವುಗಳಾಗಲಿ ಆಳಲು ಉಮೇದುಗಳಾಗಲಿ ಇನಿತೂ ಬಾಧಿಸಿರಲಿಲ್ಲ. ವಿಜ್ಞಾನದ ನಡೆಯನ್ನು ಕುರಿತಂತೆ ನ್ಯೂಟನ್ನನ ಮಾತೇ ಇವರ ಉಸಿರಾಗಿತ್ತು "ಹಿರಿಯರ ಹೆಗಲ ಮೇಲೆ ನಿಂತಿರುವ ನಾನು ಅವರಿಗಿಂತ ಕೊಂಚ ಆಚೆಗೆ ಕಾಣಬಲ್ಲೆ ಅಷ್ಟೆ." ಇಷ್ಟೆ ಅಲ್ಲ. "ಪ್ರಪಂಚಕ್ಕೆ ನಾನು ಹೇಗೆ ಕಾಣುವೆನೊ ಅರಿಯೆ. ನನ್ನ ಮಟ್ಟಿಗೆ ಹೇಳುವುದಾದರೆ ನಾನೊಬ್ಬ ಕಡಲಕಿನಾರೆಯಲ್ಲಿ ಆಡುತ್ತಿರುವ ಕಿರಿಹೈದ ಮಾತ್ರ. ನನ್ನ ಆಟ್ಪಾಟಗಳ ವೇಳೆ ಒಮ್ಮೊಮ್ಮೆ ನುಣುಪಾದ ಹರಳನ್ನೊ ಚೆಲುವಾದ ಚಿಪ್ಪನ್ನೊ ನಾನು ಹೆಕ್ಕುವುದುಂಟು. ಆದರೆ ಸತ್ಯದ ಹೆಗ್ಗಡಲೇ ನನ್ನೆದುರು (ಅನನ್ವೇಷಿತವಾಗಿ) ಚೆಲ್ಲಿಕೊಂಡಿದೆ."

ನ್ಯೂಟನ್ ಮಹಾಶಯನ ಮುನ್ನೂರನೆಯ ಹುಟ್ಟು ಹಬ್ಬವನ್ನು ಪ್ರಪಂಚಾದ್ಯಂತ ವಿಜೃಂಭಣೆಯಿಂದ ಆಚರಿಸಿದಾಗ (೧೯೪೨) ಐನ್‌ಸ್ಟೈನ್ ತಮ್ಮ ಖಾಸಗಿ ಟಿಪ್ಪಣಿ ಪುಸ್ತಕದಲ್ಲಿ ಆ ಮಹಾತ್ಮನಿಗೆ ತಮ್ಮ ನಮನ ಸಲ್ಲಿಸಿದ್ದರು. (ಪ್ರಕಟಣೆ ಇದರ ಉದ್ದೇಶವಲ್ಲ; ಪದ್ಯ ಜರ್ಮನ್ ಭಾಷೆಯಲ್ಲಿದೆ.)

ಗಗನವಂ ನೋಡಿ ಕಲಿಯೋ ಆ ಮಹಾತ್ಮಂಗೆ
ಗೌರವವ ಸಲ್ಲಿಸುವ ಬಗೆಯು ನೀ — ತಾರೆಗಳ-
ನಂತ ಮೂಕತ್ವದಲಿ ಪಥ ಬೆಳಗಿ ಎತ್ತಿ ಪಿಡಿ
ದಿಹವು ನ್ಯೂಟನ್ನನ ಚಿರಂಜೀವಿ ತತ್ತ್ವಗಳ

ಬರ್ಲಿನ್ನಿನಲ್ಲಿ ರಂಗು ಬದಲಾವಣೆ

ಯುದ್ಧ ವಿರಾಮವನ್ನು ಇಂಗ್ಲೆಂಡ್ ಮುಕ್ತ ಮನದಿಂದ ಸಂಭ್ರಮಯುತವಾಗಿ ಆಚರಿಸುತ್ತಿದ್ದಾಗ ಐನ್‌ಸ್ಟೈನರ ಬರ್ಲಿನ್ನಿನಲ್ಲಿ ಮಾತ್ರ ರಂಗು ಕ್ಷಣ ಕ್ಷಣ ಬೇರೆ ಬೇರೆ ಛಾಯೆ ತಳೆಯುತ್ತಿತ್ತು.

೧೯೧೮ ರ ನವಂಬರ್ ೯ರಂದು ಕೈಸರ್ ಸಿಂಹಾಸನತ್ಯಾಗ ಮಾಡಿದ. ಜರ್ಮನ್ ಚಕ್ರಾಧಿಪತ್ಯ



M.K. Publicity

ಕೊನೆಗೊಂಡು ಜರ್ಮನ್ ಗಣರಾಜ್ಯ ತಲೆಯೆತ್ತಿತು. ಕಾರ್ಲ್ ಈಬರ್ಟ್ ಇವರ ಛಾನ್ಸಲರ್. ವಾಮಪಂಥದತ್ತ ಒಲವಿದ್ದ ಮತ್ತು ಮಿಲಿಟರಿತನದ ಕಟ್ಟಾ ವಿರೋಧಿ ಆಗಿದ್ದ ಐನ್‌ಸ್ಟೈನರಿಗೆ ಈ ಘಟನೆ ಅತಿ ಸಂತೋಷ ನೀಡಿತು. ಜರ್ಮನಿಯ ಸಕಲ ಶಾಂತಿವಾದಿಗಳಿಗೂ [illegible] ಮತ್ತು ಗಣರಾಜ್ಯ ಸ್ಥಾಪನೆ ಹೊಂಬೆಳಗನ್ನು ಕಾರಂಜಿಸುವ [illegible]. ಅದೇ ದಿನದ ತರಗತಿ ಪಾಠಕ್ಕೆ ಸಂಬಂಧಿಸಿದ ಟಿಪ್ಪಣಿ ಪುಸ್ತಕದಲ್ಲಿ ಐನ್‌ಸ್ಟೈನ್ ಹೀಗೆ ಬರೆದಿದ್ದರು: fiel aus wegen Revolution (ಕ್ರಾಂತಿಯ ಕಾರಣವಾಗಿ ರದ್ದುಗೊಳಿಸಲಾಯಿತು.)

ಬರ್ಲಿನ್ನಿನಲ್ಲಿ ಕ್ರಾಂತಿಯ ಕಾಳ್ಗಿಚ್ಚು ದಟ್ಟವಾಗಿ ಹಬ್ಬಿತು. ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಆಡಳಿತ ಕಛೇರಿಗೆ ಮುತ್ತಿಗೆ ಹಾಕಿ ರೆಕ್ಟರರನ್ನೂ ಅವರ ಸಹವರ್ತಿಗಳನ್ನೂ ಘೇರಾಯಿಸಿದರು; ರೆಕ್ಟರರನ್ನು ಪದಚ್ಯುತಿಗೊಳಿಸಲಾಗಿದೆಯೆಂದು ಘೋಷಿಸಿದರು. ರೆಕ್ಟರ್ ತಂಡದವರಿಂದ ಸಹಾಯಯಾಚನೆಯ ಮೊರೆ ಐನ್‌ಸ್ಟೈನರಿಗೆ ಹೋಯಿತು. ಒಡನೆ ಐನ್‌ಸ್ಟೈನ್ ಹೊರಟರು. ಜೊತೆಗಿಬ್ಬರು ವಾಮಪಂಥೀಯ ಸಹೋದ್ಯೋಗಿಗಳು. ಕಾರಣಪುರುಷ (ಕಾಲಪುರುಷ ಕೂಡ) ವಿದ್ಯಾರ್ಥಿ ಪರಿಷತ್ತಿಗೆ ನಡೆದುಹೋದರು. ಯಾವ ಅಡೆತಡೆಯೂ ಇವರಿಗೆದುರಾಗಲಿಲ್ಲ. [illegible]. ವಿದ್ಯಾರ್ಥಿ ಮುಖಂಡರು [illegible]. ಐನ್‌ಸ್ಟೈನ್ [illegible] "[illegible]."

"ಗೌರವಾನ್ವಿತ ಪ್ರಾಧ್ಯಾಪಕರೇ! ವಿಶ್ವವಿದ್ಯಾಲಯದ [illegible] ವಿದ್ಯಾರ್ಥಿಗಳು ಕೈ ಹಾಕುವುದನ್ನು ಕುರಿತು ನಿಮ್ಮ ಮತವೇನು?"

"[illegible]. ವಿದ್ಯಾರ್ಥಿಗಳ [illegible] ಸ್ವಾತಂತ್ರ್ಯಕ್ಕೆ [illegible] ಅನಪೇಕ್ಷಣೀಯ."

ಅನಿರೀಕ್ಷಿತ [illegible] ಉತ್ತರದಿಂದ ದಂಗುಬಡಿದ ವಿದ್ಯಾರ್ಥಿ ಮುಖಂಡರು ಸಾವರಿಸಿಕೊಂಡು "ಮಾನ್ಯರೇ! ಈ ಸಮಸ್ಯೆಯು ಪರಿಹಾರ ನಮ್ಮ ಅಳವಿಗೆ ಮೀರಿದ್ದು. ದಯಮಾಡಿ ಛಾನ್ಸಲರರನ್ನೇ ನೋಡುವಿರಾ?" ಎಂಬುದಾಗಿ ನಿವೇದಿಸಿದರು.

ಸರಿ, ತ್ರಿಮೂರ್ತಿಗಳ ಕಾಲ್ನಡಿಗೆಯ ಜಂಬೂ ಸವಾರಿ ಗಣರಾಜ್ಯದ (ಇದು ಘೋಷಣೆಯಾಗಿ ಕೆಲವು ಗಂಟೆಗಳೂ ಸಂದಿರಲಿಲ್ಲ) ವರಿಷ್ಠರಾದ ಛಾನ್ಸಲರರ ಸಮ್ಮುಖಕ್ಕೆ ಚಿತ್ತೈಸಿತು. ಇಲ್ಲೂ ಅಷ್ಟೆ: ಹಾದಿಗುಂಟ ಎಲ್ಲ ಬೇಲಿಗಳೂ ತಂತಾವೆ ಕಳಚಿಕೊಂಡು ಛಾನ್ಸಲರ್ ದರ್ಶನ ಒಡನೆ ಲಭಿಸಿತು.

ಕಾರ್ಲ್ ಈಬರ್ಟ್ ಇವರ ಅಹವಾಲೆಯನ್ನು ಆಲಿಸಿ ಒಡನೆ ಸಂಬಂಧಿಸಿದ ಅಧಿಕಾರಿಗೆ ಯುಕ್ತ ಅನುಜ್ಞೆ ನೀಡಿದರು. ರೆಕ್ಟರ್ ಮತ್ತು ಸಹವರ್ತಿಗಳು ದಿಗ್ಬಂಧನವಿಮೋಚಿತರಾದರು.

ಈ ತುರ್ತು ಸನ್ನಿವೇಶದಲ್ಲಿ ತಾವು ಪ್ರದರ್ಶಿಸಿದ ನೇರ ವರ್ತನೆಯನ್ನು ಐನ್‌ಸ್ಟೈನ್ ಕಾಲು ಶ[illegible] ಮಾನದ ತರುವಾಯ ಒಮ್ಮೆ ನೆನಪಿಸಿಕೊಂಡದ್ದು "ನಮಗೆ ಆಗ ನಲವತ್ತು ವರ್ಷವಯಸ್ಸಾಗಿದ್ದರೂ ನಾವೆಂಥ ಹುಂಬರಾಗಿದ್ದೆವು! ಚಕ್ರವ[illegible]ತದ ಕಣ್ಣಿಗೇ ಧುಮುಕಿದೆವಲ್ಲ! ಅದೊಂದ[illegible] ಮುಗ್ಧ ಸಾಹಸ. ಮಾನವರಲ್ಲಿ ಬುದ್ಧಿಗಿಂ[illegible] ಪ್ರವೃತ್ತಿ ಅದೆಷ್ಟು ಬಲಿಷ್ಠವಾಗಿರುವುದೆಂಬುದ[illegible] ಅರಿವು ನಮಗೆ ಯಾರಿಗೂ ಇರಲಿಲ್ಲ."

ಕಲ್ಪನಾವಿಲಾಸಿಗಳ ಕಲ್ಪವೃಕ್ಷ

ವಿಧಿ ಐನ್‌ಸ್ಟೈನರ ಜೀವನದಲ್ಲಿ ಅನಿರೀಕ್ಷಿ[illegible]ಗರಗಳನ್ನು ಎಸೆದೇಬಿಟ್ಟಿತು. ಬೆಳಕಿನ ಕಿರಣ[illegible] ವಿಚಲನೆ, ಇದರ ಪ್ರತ್ಯಕ್ಷ ವೀಕ್ಷಣೆ ಮತ್ತು ಪ್ರಸಿದ್ಧ ವಿಜ್ಞಾನಿಗಳಿಂದ ಇದಕ್ಕೆ ದೊರೆತ ಮನ್ನಣೆ ಈ ಸುದ್ದಿಗಳು ಬೆಳಕಿನ ವೇಗದಿಂದ ಪ್ರಪಂಚವಿಡೀ ವ್ಯಾಪಿಸಿದುವು. ವಿಜ್ಞಾನಿಗಳ ಮಾತು ಒತ್ತಟ್ಟಿಗಿರಲಿ, ಈಗ ಜನಸಾಮಾನ್ಯರೂ ತಮ[illegible] ಹೊಸತೇನೊ ಗಳಿಕೆಯಾಗಿದೆ ಎಂಬ ಭಾವದಿಂ[illegible] ಹರ್ಷಪುಳಕಿತರಾಗಿ ನಲಿದಾಡಿದರು. ಇವರ ದೃಷ್ಟಿಯಲ್ಲಿ ನ್ಯೂಟನ್ ಗತಕಾಲದ ಇತಿಹಾಸದ ಮೊಡಕು ಮೂಲೆಯಲ್ಲಿ ಮಾಯವಾಗಿದ್ದ ನಾಮವಿಶೇ[illegible]

ಮಾತ್ರ. ಆತನ ಸುಗ್ರೀವಾಜ್ಞಾನುಸಾರ ಗ್ರಹೋಪಗ್ರಹಗಳೂ ಬೆಳಕಿನ ಕಿರಣಗಳೂ ವರ್ತಿಸುತ್ತವೆ ಎಂದೂ ಆ ಕಾರಣವಾಗಿ ಹಗಲಿರುಳು ಮತ್ತು ಋತುಭೇದಗಳು ಶಿಸ್ತಿನಿಂದ ಸಾಗುತ್ತಿವೆ ಎಂದೂ ಅಸ್ಪಷ್ಟವಾಗಿ ಇವರಿಗೆ ತಿಳಿದಿತ್ತು. ಈಗ ಅಂಥ ಮಹಾಕೀರ್ತಿಶಾಲಿಯನ್ನು ಸಿಂಹಾಸನದಿಂದ ಕೆಳಗಿಳಿಸಿದ ಪರಮ ಪ್ರತಾಪಶಾಲಿ ತಮ್ಮ ನಡುವೆ ತಮ್ಮಂತೆಯೇ [illegible]ವಾರೆಂಬ ಸಂಗತಿ ಇವರ ಅನಿರ್ವಚನೀಯಾನಂದವನ್ನು [illegible]. [illegible]ಯಲ್ಲಿ ಐನ್‌ಸ್ಟೈನ್ ಜಗದೇಕವೀರ, ಜಗದೇಕರಕ್ಷಕ. ಎಷ್ಟೊ ನವಜಾತ ಶಿಶುಗಳಿಗೆ ಆಲ್ಬರ್ಟ್ ಐನ್‌ಸ್ಟೈನ್ ಎಂದೇ ಹೆಸರು ಬಿತ್ತು. ರಿಲೆಟಿವಿಟಿ ಎಂಬ ಹೆಸರು ವ್ಯಾಪಾರಲಾಂಛನವಾಗಿ ಬಳಕೆಗೆ ಬಂದಿತು. "ರಿಲೆಟಿವಿಟಿ ಗುರುತಿನ ಸಿಗಾರನ್ನೇ ಸೇದುತ್ತ ಬೆಳಕಿನೊಡನೆ ವಿಶ್ವಪರ್ಯಟನೆ ಮಾಡಿ" ಎಂಬ ಜಾಹೀರಾತು ಕೂಡ ಪ್ರಕಟವಾಯಿತು.

ಇನ್ನು ವೈಜ್ಞಾನಿಕ ಕಲ್ಪನಾವಿಲಾಸಿಗಳು ಸುಮ್ಮನೆ ತಣ್ಣಗೆ ಕುಳಿತಾರೇ? ಅವರ ಕಲ್ಪನೆಗೆ ಹೊಸ ರೆಕ್ಕೆ ಚಿಗುರೊಡೆಯಿತು. ವಿಶ್ವದಲ್ಲಿ ಬೆಳಕಿನ ವೇಗವೇ ಗರಿಷ್ಠವಾದದ್ದು, ಯಾವ ವಸ್ತುವೂ ಬೆಳಕಿನ ವೇಗವನ್ನು [illegible]. ಯಾವುದೇ ವಸ್ತು ಬೆಳಕಿನ ವೇಗವನ್ನು ಸಮೀಪಿಸಿದಂತೆ ಅದರ ಗಾತ್ರ ಶೂನ್ಯದತ್ತ ಕುಸಿಯುತ್ತದೆ, ಬೆಳಕಿನ ವೇಗದಿಂದ ಸಂಚರಿಸಬಲ್ಲವನಿಗೆ ಕಾಲ ಸ್ಥಗಿತವಾಗಿರುತ್ತದೆ ಎಂಬವು ಸಾಪೇಕ್ಷತಾವಾದದಿಂದ ಅನುಗತವಾಗಿದುವು.

ಸರಿ, ಈಗ ನಿಮ್ಮ ಮಾಲಿ ನಾಯರ್ ತೋಟದ ಸುತ್ತ ಬೇಲಿ ಹಾಕಲು ತೊಡಗುತ್ತಾನೆ. ಅವನು ಬೆಳಕಿನ ವೇಗದಿಂದ ಈ ಕೆಲಸ ಮಾಡುತ್ತಾನೆಂದರೆ ಬೇಲಿಯ ಅವಸ್ಥೆ ಏನು?

ಬೆಳಕಿನ ವೇಗದಿ ಬೇಲಿಯ ಹಾಕಲು
ಹೊರಟನು ನಾಯರ್ ತೋಟಕ್ಕೆ
ಆದರೆ ನೋಡೋ ವೈಚಿತ್ರ್ಯ
ಐನ್‌ಸ್ಟೈನ್ ತತ್ತ್ವದ ವೈಶಿಷ್ಟ್ಯ:
ಕಂಬಗಳೆಲ್ಲವು ತಂತಿಗಳೆಲ್ಲವು
ಸಂಕೋಚಿಸಿದುವು ಶೂನ್ಯಕ್ಕೆ!

ಮಹಾಶ್ವಾನ ನಕ್ಷತ್ರಪುಂಜದಲ್ಲಿರುವ (Canis major) ಲುಬ್ಧಕ (Sirius) ದೃಗ್ಗೋಚರ ನಕ್ಷತ್ರಗಳ ಪೈಕಿ ಸೂರ್ಯನಾದ ಬಳಿಕ ಪರಮೋಜ್ಜ್ವಲವಾದದ್ದು. ಡಿಸೆಂಬರ್, ಜನವರಿ ತಿಂಗಳುಗಳ ಸಂಜೆ ಇದನ್ನು ಆಕಾಶದ ಪೂರ್ವ–ದಕ್ಷಿಣ ವಲಯದಲ್ಲಿ ಸುಲಭವಾಗಿ ಗುರುತಿಸಬಹುದು. ಭೂಮಿ[illegible] ಕೊಂಚವೇ ಕಡಿಮೆ ವೇಗದಲ್ಲಿ ಲುಬ್ಧಕಕ್ಕೆ ಹೋಗಿ ಮರಳುವಿರಾದರೆ ಒಟ್ಟು ಪ್ರಯಾಣ ನಿಮ್ಮ ಗಡಿಯಾರದ ಹಾಗೂ ದೇಹಕ್ರಿಯೆಗಳ ಅನುಭವದ ಪ್ರಕಾರ ಕೆಲವೇ ಗಂಟೆಗಳಲ್ಲಿ ಮುಗಿದಿರುತ್ತದೆ. ಮುಂಜಾನೆಯ ನಾಷ್ಟಾ ಮುಗಿಸಿ ಹೊರಟಿರೆಂದಾದರೆ ಸಂಜೆ ಚಹಾಪಾನಕ್ಕೆ ಹಿಂತಿರುಗುವಿರಿ — ಅಷ್ಟು ಬೇಗ, ಅಷ್ಟು ಸಲೀಸು. ಆದರೆ ಭೂಮಿಯಲ್ಲಿ ಉಳಿದಿದ್ದ ನಿಮ್ಮ ನತದೃಷ್ಟ ಬಾಂಧವರ ಅನುಭವವೇ ಬೇರೆ — ಅದೇ ಅವಧಿಯಲ್ಲಿ ಅವರಿಗೆ ಹದಿನೆಂಟು ವರ್ಷಗಳಷ್ಟು ವಯಸ್ಸು ಜಾಸ್ತಿ ಆಗಿರುತ್ತದೆ.

[illegible] ರಾಯ ನಿಮಗೆ ಮಣಿಯುವುದು ಖರೆ. ನೀವು [illegible] ಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಪಾಂಚಜನ್ಯ ಮೊಳಗುವುದನ್ನು [illegible] ಕಾಯನಾಗುತ್ತಾನೆ; 'ಎಂದೂ ತೀರದ ತೀರವು ದೊರೆಯದ' ಕಾಲಾಕ್ಷದ ಋಣದಿಶೆಯಲ್ಲಿ ಹೋಗುತ್ತಲೇ ಇರುತ್ತಾನೆ. ಉಷಾ ಈ ತೆರನಾಗಿ ಜಿಗಿಯುತ್ತಾಳೆ. ಆಗೇನಾಯಿತು ಗೊತ್ತೇ?

ಬೆಳಕಿನ ವೇಗಕ್ಕಿಂತಲು ರಭಸದಿ
ಓಡುವ ಪೋಕರಿ ಹುಡುಗಿ ಉಷಾ

ಐನ್‌ಸ್ಟೈನರ ರಿಲೆಟಿವಿಟಿ ಕ್ರಮದಲಿ
ಜಗಿಯುತ್ತಿಳಿದಳು ಕಳೆದ ನಿಶಾ!

ಅಪೂರ್ವ ತೇಜದ ಮಾಂತ್ರಿಕ

ಮುಗ್ಧ ಐನ್‌ಸ್ಟೈನರು ತಾವೆಂಥೆಂಥ ಘೋರಾ ಪರಾಧಗಳಿಗೆ (ಕವಿಗಳಿಗೆ ವಿಪುಲ ಗ್ರಾಸ ಒದಗಿಸಿದಾದ ಅಕ್ಷಮ್ಯಾಪರಾಧವೂ ಇವುಗಳಲ್ಲಿ ಸೇರಿದೆ) ಕಾರಣರಾದೆವೆಂಬುದನ್ನು ತಿಳಿಯದೆ ಪ್ರಪಂಚದ ಪ್ರಚಾರ ಮಾಧ್ಯಮಕ್ಕೆ ಸುಲಭಲಭ್ಯ 'ಯಜ್ಞ ಪಶು'ವಾದರು. ಪರಿಣಾಮವೇನು ಗೊತ್ತೆ? ಇವರ ಪಾವನ ಏಕಾಂತತೆ ಶಾಶ್ವತವಾಗಿ ನಷ್ಟ ವಾಗಿ ಹೋಯಿತು. ಇವರಿಗಿಂತ ಹೆಚ್ಚು ಪ್ರಚಾರ ವನ್ನು ಉಪೇಕ್ಷಿಸಿದ, ಪ್ರಸಿದ್ಧಿಯನ್ನು ಕಡೆಗಣಿಸಿದ, ಒಂಟಿತನವನ್ನು ಬಯಸಿದ ಮತ್ತು ಸರಳತೆಯನ್ನು ಆಶಿಸಿದ ವಿಜ್ಞಾನಿ ಇನ್ನೊಬ್ಬನಿರಲಿಲ್ಲ. ಆದರೆ ಸನ್ನಿವೇಶಗಳ ಪಿತೂರಿ. ಇವರಿಗೆ ದೊರೆತ ಪ್ರಚಾರ, ಇವರು ಗಳಿಸಿದ ಪ್ರಸಿದ್ಧಿ, ಇವರನ್ನು ಮುತ್ತಿದ ಜನಜಂಗುಳಿ ಮತ್ತು ಇವರ ಬಗ್ಗೆ ಜನತೆ ತಳೆದ ಆರಾಧನೆಭಾವ ಎಲ್ಲವೂ ಅತಿಯಾಗಿದ್ದುವು, ಉಸಿರು ಕಟ್ಟಿಸುವಂತಿದ್ದುವು, ಪವಾಡಪುರುಷನ ದೈವಿಕ ಅಂತಸ್ತಿಗೆ ಇವರನ್ನು ಏರಿಸಿಬಿಟ್ಟಿದ್ದುವು. ರುಜು ಕೇಳಿ ಕಾಗದ ಬರೆಯುವವರು, ಸಂದರ್ಶನ ಬೇಡಿ ಬರುವವರು, ಅ ದಿಂದ ಳ ದವರೆಗೆ ಪ್ರಶ್ನೆ ಕೇಳುವ ಪತ್ರಿಕಾಸರ್ವಜ್ಞರು, ಅಸಂಖ್ಯಾತ ಪತ್ರಮಿತ್ರರು, ಉಡುಗೊರೆ ಕಳಿಸುವವರು ಇಂಥ ಹಲಬಗೆಯ ದಂಡುಗಳನ್ನು ಇವರು ಎದುರಿಸಿ ಸ್ವಾಗತಿಸುವುದರ ಜೊತೆಗೆ ವಿಜ್ಞಾನ ವೃತ್ತಿ ಬಾಂಧವರೊಡನೆ ಮತ್ತು ಆಸಕ್ತರೊಡನೆ ತಾಂತ್ರಿಕ ವಿಷಯಗಳನ್ನು ಕುರಿತು ಸಲ್ಲಾಪ ಕೂಡ ಇಟ್ಟು ಕೊಳ್ಳಬೇಕಾಗಿತ್ತು.

ಸಾಹಿತ್ಯೋಪಾಸಕನೊಬ್ಬನಿಗೆ ಐನ್‌ಸ್ಟೈನರ ಹಿರಿಮೆ ಪತ್ರಿಕಾವರದಿಗಳ ಮೂಲಕ ತಿಳಿ-ಯಿತು. ರಿಲೆಟಿವಿಟಿ ಎಂಬ ಪದದಲ್ಲಿ ಏನೊ ಮಾಂತ್ರಿಕತೆ ಇದೆ, ಇದನ್ನು ತಾನು ಚೆನ್ನಾಗಿ ಗ್ರಹಿಸಿ ಈ ಪದವನ್ನು ಚಲಾವಣೆಗೆ ತರಬೇಕೆಂಬುದಾಗಿ ನಿರ್ಧರಿಸಿದ. ವಿಜ್ಞಾನ ವಿಷಯಗಳಲ್ಲಿ ಈತ ಮುಗ್ಧಶಿಶು. ಹಾಗಿದ್ದರೂ ಐನ್‌ಸ್ಟೈನ್ ಮತ್ತು ರಿಲೆಟಿವಿಟಿ ಕುರಿತ ಎಲ್ಲ ವರದಿಗಳನ್ನೂ ಕಲೆಹಾಕಿ ಅಚ್ಚುಕಟ್ಟಾಗಿ ದಫ್ತರಿಸಿ ಕಡತ ತಯಾರಿಸಿದ. ಇದು ಇವನ ಅಮೂಲ್ಯ ಆಸ್ತಿ, ಘನಭವಿನೀತ ರಿಲೆಟಿವಿಟಿ! ಐನ್‌ಸ್ಟೈನ ರೊಡನೆ ಭೇಟಿ ಸಂಪಾದಿಸಿಕೊಂಡ.

"ಪ್ರಾಧ್ಯಾಪಕ ಮಹೋದಯರೇ! ನಾನು ತಮ್ಮ ಅಮೂಲ್ಯ ಕೊಡುಗೆ ರಿಲೆಟಿವಿಟಿಯಿಂದ ಬಹಳ ಪ್ರಭಾವಿತನಾಗಿದ್ದೇನೆ. ನೋಡಿ, ನಿಮ್ಮ ಸಂಗ್ರಹವಿದು."

ಐನ್‌ಸ್ಟೈನ್ ಸಹಜವಾಗಿದ್ದರು.

ಆತನೆ ಮುಂದುವರಿಸಿದ "ತಮ್ಮ ಪ್ರಗಲ್ಭ ಪ್ರಬಂಧಗಳಲ್ಲಿ ಬಂದಿರುವ ವಿಶೇಷ ಪದಗಳಾದ potential, invariant, covariant, energy-tensor, scalar, relativity postulate, hyper-Euclidean, internal system ಇವುಗಳ ಅರ್ಥ ಹೇಳು ವಿರಾ? ಇವನ್ನು ಕೆಲವೇ ಪದಗಳಲ್ಲಿ ನೀವು ನನಗೆ ವಿವರಿಸಬಲ್ಲಿರಾ?"

"ಖಂಡಿತವಾಗಿಯೂ ಅವು ಕೇವಲ ತಾಂತ್ರಿಕ ಪದಗಳು ಅಷ್ಟೆ."

ಮನೋವಿಜ್ಞಾನಿಯೊಬ್ಬ ಬಂದ. ಇವರ ಜೀನಿಯಸನ್ನು (ಮಹಾಪ್ರತಿಭೆ) ಪೃಥಕ್ಕರಿಸಿ ವಿಶ್ಲೇಷಿಸುವುದು ಅವನ ಉದ್ದೇಶ. ಮಹಾಪ್ರತಿಭೆ ಆನುವಂಶಿಕವೇ, ಅಲ್ಲವೇ? ಅವನೇ ಹೇಳುತ್ತಾನೆ "ಬುದ್ಧಿ ಸಾಮರ್ಥ್ಯ ಅಥವಾ ಪ್ರತಿಭೆ ಒಂದೇ ಕುಟುಂಬದಲ್ಲಿ ತಲೆಮಾರಿನಿಂದ ತಲೆಮಾರಿಗೆ ಅನೂಚಾನಾಗಿ ಹರಿಯುವುದರಲ್ಲಿ ನಿಸರ್ಗದ ಉದ್ದೇಶಿತ ಹಸ್ತಕ್ಷೇಪವೇನೂ ಇದ್ದಂತಿಲ್ಲ. ಅಂಥಾದ್ದರಲ್ಲೂ ಎರಡು ಮೂರು ನಾಲ್ಕು ತಲೆಗಳ ವರೆಗೆ ಒಂದೇ ಕುಟುಂಬದಲ್ಲಿ ಪ್ರತಿಭಾವಂತರು ಜನಿಸಿದರೆ ಇಂಥ ಜನನದ ಕಾರಣ ಕೇವಲ ಆಕಸ್ಮಿಕ."

ಐನ್‌ಸ್ಟೈನ್ ಉತ್ತರಿಸುತ್ತಾರೆ "ನಿಮ್ಮ ಹೇಳಿಕೆ ಸರಿಯಾಗಿಲ್ಲ. ಆನುವಂಶಿಕ ಪ್ರತಿಭೆ ಖಂಡಿತವಾಗಿಯೂ ಅನೇಕ ಸಂದರ್ಭಗಳಲ್ಲಿ ಇದ್ದೇ ಇರುವುದು. ಆದರೆ ನಾವದನ್ನು ಗಮನಿಸಿರುವುದಿಲ್ಲ. ಏಕೆಂದರೆ ತನ್ನಷ್ಟಕ್ಕೆ ತಾನಿರುವ ಪ್ರತಿಭೆ ಅಂದರೆ ಸುಪ್ತ ಪ್ರತಿಭೆ ಮತ್ತು ಗುರುತಿಸಲ್ಪಡುವ ಸಾಧ್ಯತೆಗೆ

ಒಳಪಟ್ಟು ಪ್ರಕಟವಾಗುವ ಪ್ರತಿಭೆ ಅಂದರೆ ಪ್ರಕಟಿತ ಪ್ರತಿಭೆಗೆ ಎರಡೂ ಒಟ್ಟಿಗೆ ಇರುವುದು ಅತಿ ವಿರಳ. ಸುಪ್ತ ಪ್ರತಿಭೆಗೂ ಗಮನಾರ್ಹ ಸಿದ್ಧಿಗಳಲ್ಲಿ ಪ್ರಕಾಶಕ್ಕೆ ಬರುವ ಪ್ರಕಟಿತ ಪ್ರತಿ-ಭೆಗೂ ನಡುವೆ ಇರುವ ವ್ಯತ್ಯಾಸಗಳು ತೀರ ಕ್ಷುಲ್ಲಕವಾದವು. ಯಾವುದೋ ಒಂದು ಅನುಕೂಲ ಕ್ಷಣದಲ್ಲಿ, ಪ್ರಾಯಶಃ ಏನೋ ಒಂದು ಒತ್ತಡ ಅಥವಾ ಆವೇಗ ಅಥವಾ ಕ್ಷೋಭೆಯ ಕಾರಣ ಸಾಕು ಆ ಸುಪ್ತ ಪ್ರತಿಭೆ ಉಜ್ವಲ ಪ್ರಕಾಶ ದಿಂದಲೂ ವರ್ಣವೈಭವದಿಂದಲೂ ಚಿಮ್ಮೊಡೆದು ಹೊರಬರಲು. ಅಥವಾ ಬಹುಶಃ ಅದಕ್ಕೆ ವಿಜ್ಞಾನದ ಅಭಿವರ್ಧನೆಯಲ್ಲಿನ ಯಾವುದೋ ಒಂದು ಅಸಾಧಾರಣ ಸನ್ನಿವೇಶ ಅವಶ್ಯವಾಗಿರಬಹುದು. ಇದು ಒದಗಿರದಿದ್ದ ಪಕ್ಷದಲ್ಲಿ ಅದು ನಿದ್ರಾ ಸ್ಥಿತಿಯಲ್ಲಿಯೇ ಇರುತ್ತಿತ್ತು. ಇಂಥ ಸುಪ್ತ ಪ್ರತಿಭೆಯನ್ನು ಇಲ್ಲವೆಂದು ತೀರ್ಮಾನಿಸಲು ನಮಗೇನು ಹಕ್ಕುಂಟು?"

"ಭಾವನೆಗಳು ದೇವರಿಂದ(ನಿಸರ್ಗದಿಂದ) ಬರುತ್ತವೆ" ಎಂದು ಪದೇ ಪದೇ ಉದ್ಗರಿಸುತ್ತಿದ್ದ ಐನ್‌ಸ್ಟೈನ್ ತಾವು ಜೀನಿಯಸ್ ಎಂಬುದನ್ನು ಎಂದೂ ಒಪ್ಪಲಿಲ್ಲ.

ಸಮಕಾಲೀನ ವಿಜ್ಞಾನಪರಿಸರದ ಕೂಸುಗಳಾಗಿ ವಿವಿಧ ಭಾವನೆಗಳು ತೇಲುತ್ತಿರುತ್ತವೆ. ಇವು ಆ ಸಂದರ್ಭದಲ್ಲಿ ಕಾರ್ಯೋದ್ಯುಕ್ತರಾಗಿರುವ ಪ್ರತಿಭಾವಂತ ವಿಜ್ಞಾನಿಗಳನ್ನು ಮಾಧ್ಯಮಗಳಾಗಿ ಬಳಸಿಕೊಂಡು ಪ್ರಕಟವಾಗುತ್ತವೆ. ಕೊಪರ್ನಿಕಸನ ಸೂರ್ಯಕೇಂದ್ರವಾದ (ಹದಿನಾರನೆಯ ಶತಮಾನ), ನ್ಯೂಟನ್ನನ ವಿಶ್ವಗುರುತ್ವಾಕರ್ಷಣನಿಯಮ (ಹದಿನೇಳನೇಯ ಶತಮಾನ) ಡಾರ್ವಿನ್ನನ ವಿಕಾಸವಾದ (ಹತ್ತೊಂಬತ್ತನೆಯ ಶತಮಾನ) ಉದಾಹರಣೆಗಳು. ಅಂದ ಮಾತ್ರಕ್ಕೆ ಈ ಮಹಾ ವಿಜ್ಞಾನಿಗಳ ಸಾಧನೆ ಕಡಿಮೆ ಎಂದು ಈ ಮಾತಿನ ಅರ್ಥವಲ್ಲ. ಇವರು ಜನಿಸಿರದಿದ್ದರೂ ಸರಿಸುಮಾರಾಗಿ ಆಯಾ ಅವಧಿಯಲ್ಲಿ ಬೇರೆಯವರು ಈ ಆವಿಷ್ಕಾರಗಳನ್ನು ಮಾಡಿರುತ್ತಿದ್ದರು. "ಆದರೆ ಸಮಗ್ರ ಸಾಪೇಕ್ಷತಾಸಿದ್ಧಾಂತದ ಸಂರಚನೆಯನ್ನು ಕುರಿತಂತೆ ಇದೇ ಮಾತನ್ನು ಅಂದರೆ ಇದು ಹತ್ತೊಂಬತ್ತನೆಯ ಅಥವಾ ಇಪ್ಪತ್ತನೆಯ ಶತಮಾನದ ವಿಜ್ಞಾನಪರಿಸರದ ಶಿಶು ಎಂಬ ಮಾತನ್ನು ಹೇಳಲಾಗುವುದಿಲ್ಲ. ಐನ್‌ಸ್ಟೈನ್ ಎಂಬ ವಿಶಿಷ್ಟ ವ್ಯಕ್ತಿ ಜನಿಸಿರದಿದ್ದರೆ ಪ್ರಾಯಶಃ ಇನ್ನೂ ಇನ್ನೂರು ವರ್ಷಗಳ ಕಾಲ ಮಾನವ ಸಾಪೇಕ್ಷತಾಸಿದ್ಧಾಂತದ ಆಗಮನಕ್ಕಾಗಿ ಕಾದಿರಬೇಕಾಗಿತ್ತು" ಎಂಬುದಾಗಿ ಐನ್‌ಸ್ಟೈನರ ಸಂದರ್ಶನಕಾರ ಅಲೆಕ್ಸಾಂಡರ್ ಮಾರ್ಷ್ಕೊವಿಸ್ಕೀ ಬರೆದಿದ್ದಾರೆ. ✡

(ಸೂಚನೆ: ಮೈಸೂರಿನ ಶ್ರೀ ಡಿ. ವಿ. ಕೆ. ಮೂರ್ತಿಯವರು ಪ್ರಕಟಿಸಲಿರುವ ಪುಸ್ತಕದಿಂದ ಉದ್ಧೃತವಾದ ಅಂಶಗಳನ್ನು ಮಾರ್ಚ್ ಮತ್ತು ಏಪ್ರಿಲ್ ಸಂಚಿಕೆಗಳಲ್ಲಿ ಪ್ರಕಟಿಸಲಾಯಿತು. ಉಳಿದ ಅಂಶಗಳನ್ನು ಓದಬಯಸುವವರು ಮೂಲ ಪುಸ್ತಕವನ್ನೇ ನೋಡಬೇಕು.)



Printed & published by P. S. Bhat for the Jayakarnataka News Printer, Ltd., at the Samyukta Karnataka Press, Koppikar Road, Hubli-580 020. Rep: Bombay: V. Satyamurthy Phone: 522412; Calcutta: H. Muzamdar 46-4233; Madras: A. K. Subramanian Phone: 842201; New Delhi. P. R. Chopra Phone: 224130.

Registered with the Registrar of Newspapers for In .a under No. 3533/57

